*MOTION OF THANKS OF THE GOVERNORS ADDRESS

(Debate continued)

Mr. SPAEKER.—Sri Lakappa is the next speaker. Before he begins, I must say this : Yesterday I allowed members to speak for as much time as possible. The hon. Member Sri C. S. Hulkoti took about an hour and Sri Sivappa also took about an hour. So the members appear to be the impression that everybody will be allowed to speak for an hour. In that Case only ten people can speak leaving little time for reply. I have, therefore, to say that today it may not be possible for me to give everybody as much time as he asks I am making this request because I was able to hear whispers from my room. If Sri Lakkappa took half-an-hour yesterday, he might be under the impression that he is entitled to another half-an-hour today. I must be fair and equitable to everybody. I can only give fifteen minutes to Sri Lakkappa today and not more.

ಶ್ರೀ ಕೆ. ಲಕ್ಕಪ್ಪ (ಹೆಬ್ಬೂರು).—ಸ್ವಾಮಿ, ನಿನ್ನೆಯ ದಿವಸ ರಾಜ್ಯಪಾಲರ ಭಾಷಣದ ಬಗ್ಗೆ ಹೇಳುತ್ತಾ ರಾಜ್ಯಪಾಲರ ಭಾಷಣದ ಕೊನೆಯ ಪ್ಯಾರಾದಲ್ಲಿ ನಮ್ಮಲ್ಲಿ ಎಷ್ಟು ಭಿನ್ನಾಭಿಪ್ರಾಯಗಳಿದ್ದಾಗ್ಯೂ ಅವುಗಳನ್ನು ಒತ್ತಟ್ಟಿಗಿಟ್ಟು ಈಗಿನ ತುರ್ತು ಪರಿಸ್ಥಿತಿಯಲ್ಲಿ ಎಲ್ಲರೂ ಒಗ್ಗಟ್ಟಿನಿಂದ ಹೋಗಬೇಕು ಎನ್ನುವ ವಿಷಯವನ್ನು ಹೇಳಿದ್ದಾರೆ. ಎಂದರೆ ಸರಕಾರ ನಿಜವಾಗಿಯೂ ಕೂಡ ಈ ತುರ್ತಿನ ಪರಿಸ್ಥಿತಿಯಲ್ಲಿ ಆಡಳಿತವ ಬಗ್ಗೆ ಹಾಗೂ ನಮ್ಮ ಒಂದು ಒಗ್ಗಟ್ಟಿನ ಬಗ್ಗೆ ಯಾವ ಒಂದು ಅಭಿಪ್ರಾಯವನ್ನು ಹೇಳದೆ ಕೆಲಸವನ್ನು ಮಾಡುತ್ತಿರಲಿಲ್ಲ ಎನ್ನುವ ಒಂದು ವಿಚಾರವನ್ನು ಈ ಸಭೆಯ ಗಮನಕ್ಕೆ ತರಬಯಸುತ್ತೇನೆ.

ನಿಜಲಿಂಗಪ್ಪ ಸರಕಾರ ಬಂದಮೇಲೆ ಆಡಳಿತದಲ್ಲಿಯ ಲೋಪದೋಷಗಳನ್ನು ಸರಿಪಡಿಸುತ್ತಾರೆ, ದೇಶವನ್ನು ಸುಖೀರಾಜ್ಯದಕಡೆ ಒಯ್ಯುತ್ತಾರೆಂದು ನಾವು ತಿಳಿದುಕೊಂಡಿದ್ದೆವು. ಆದರೆ ಅವರ ಈ ಒಂದು ವರ್ಷದ ಅಧಿಕಾರಾವಧಿಯಲ್ಲಿ ಪಕ್ಷದ ಆಡಳಿತ ನಡೆಸಿ ದೇಶ ಸುಖೀರಾಜ್ಯ ಮಾಡುವುದರ ಬದಲು ಇವತ್ತಿನ ದಿವಸ ದುಃಖಭರಿತ ರಾಜ್ಯಮಾಡುವ ಸಂದರ್ಭ ಬಂದಿದೆ. ಮಂತ್ರಿ ಮಂಡಳದಲ್ಲಿರುವ ಮಂತ್ರಿಗಳಲ್ಲಿ ಸಾಮರಸ್ಯ ಭಾವನೆಯಿಲ್ಲ. ಒಗ್ಗಟ್ಟು ಇಲ್ಲ. ಇದು ರಾಜ್ಯಪಾಲರ ಭಾಷಣದಿಂದ ಗೊತ್ತಾಗುತ್ತದೆ. ವಿದ್ಯಾಮಂತ್ರಿಗಳು ಪೇಪರಿನಲ್ಲಿ ಒಂದು ರೀತಿಯ ಹೇಳಿಕೆ ಕೊಟ್ಟರು. ಅದಕ್ಕೆ ತದ್ವಿರುದ್ಧವಾದ ಪ್ರತಿಕ್ರಿಯೆ ಉಂಟುಮಾಡುವ ಹೇಳಿಕೆಯನ್ನು ಬಿ. ರಾಚಯ್ಯನವರು ಕೊಟ್ಟಿದ್ದಾರೆ. ಇವೆರಡು ಪ್ರತಿಕ್ರಿಯೆಗಳನ್ನು ನೋಡಿದರೆ ನಿಜವಾಗಿಯೂ ಕೂಡ ನಾವು ಈ ತುರ್ತು ಪರಿಸ್ಥಿತಿಯಲ್ಲಿ ದೇಶದ ಆಡಳಿತ ಸುಭದ್ರವಾಗಿದೆಯೇ ? ಸರಕಾರದ ನೀತಿ ಧೋರಣೆಯಲ್ಲಿ ಏಕಭಾವನೆಯಿರಬೇಕಾಗಿತ್ತು. ಸಾಮರಸ್ಯ ಆಡಳಿತ ಪಕ್ಷದಲ್ಲಿಲ್ಲ ಎಂದು ಪುನಃ ವಿಷಾದ ಪಡಬೇಕಾಗಿದೆ. ಆಡಳಿತದಲ್ಲಿ ಸಂಪೂರ್ಣವಾಗಿ ಸರಕಾರದ ಬಿಗಿ ಮುಷ್ಟಿಯಿರುವಬಗ್ಗೆ ರಾಜ್ಯಪಾಲರು ಭಾಷಣದಲ್ಲಿ ಪ್ರಸ್ತಾಪ ಮಾಡಿಲ್ಲವೆಂದು ಹೇಳಬಯಸುತ್ತೇನೆ. ಈ ಒಂದು ವರ್ಷದ ಅವಧಿಯಲ್ಲಿ ಆಡಳಿತ ನಡೆಸತಕ್ಕ ಅಧಿಕಾರಿಗಳು ಕಾಂಗ್ರೆಸ್ ಪಕ್ಷಕ್ಕೋಸ್ಕರ ಕೆಲಸ ಮಾಡುತ್ತಿದ್ದಾರೆ. ಪಕ್ಷ ಬೆಳೆಸುತ್ತಿದ್ದಾರೆಯೇ ಹೊರತು ರಾಜ್ಯಕ್ಕೋಸ್ಕರ ಆಡಳಿತ ನಡೆಯುತ್ತಿಲ್ಲ. ಸಣ್ಣಪುಟ್ಟ ಕೆಲಸಗಳಲ್ಲಿ ಸರಕಾರ ಪ್ರವೇಶಮಾಡಿ ಏಕಪಕ್ಷೀಯರಾಜ್ಯ ಆಡಳಿತಮಾಡುತ್ತಿದ್ದಾರೆಂದು ನನಗೆ ಅನ್ನಿಸುತ್ತದೆ. ಕಾಂಗ್ರೆಸ್ ಪಕ್ಷಕ್ಕೋಸ್ಕರ ಸರಕಾರವಿರುವುದು ತಪ್ಪು. ಈಗಿನ ಸರಕಾರ ಪಕ್ಷದಲ್ಲಿ ನಂಬಿಕೆಯಿಟ್ಟಿದ್ದಾರೆ. ಪಕ್ಷದ ನಲುವಾಗಿ ಆಡಳಿತ ಮಾಡುತ್ತಿದ್ದಾರೆ. ದೇಶಕ್ಕೋಸ್ಕರ ಮಾಡುತ್ತಿಲ್ಲ, ಈ ಕೈವಾಡ ನಡೆಯುತ್ತಿದೆ. ಒಂದು ಉದಾಹರಣೆ ಹೇಳುತ್ತೇನೆ. ಗ್ರಾಮಾಂತರ ಪ್ರದೇಶದಲ್ಲಿ ಪರಿಹಾರದ ಯೋಜನೆ ಸರಕಾರ ಮಾಡಲಿಲ್ಲ, ಪಂಚಾಯಿತಿ ರಾಜ್ಯ ಸ್ಥಾಪನೆ ಮಾಡಿದ್ದೇವೆ ತಾಲ್ಲೂಕುಬೋರ್ಡ್ ರಚನೆ ಮಾಡಿದ್ದೇವೆಂದು ಹೇಳಿದರು. ಆದರೆ ತಾಲ್ಲೂಕ್‌ಬೋರ್ಡುಗಳಲ್ಲಿ ಆಡಳಿತಪಕ್ಷದ ಕೈವಾಡ ನೋಡಿದರೆ ರಾಷ್ಟ್ರವನ್ನು ಎಲ್ಲಿಗೆ ಒಯ್ಯುತ್ತಾರೋ ಎಂದು ಅನುಮಾನ ಬರುತ್ತದೆ. ಹರಿಜನ ಗಿರಿಜನರಿಗೋಸ್ಕರ ಒಂದು ಗ್ರಾಂಟ್ ಕೊಡಬೇಕೆಂದಿದ್ದಿತು. ತಮ್ಮ ಪಕ್ಷದವರಿಗೆ ಗ್ರಾಂಟ್ ಹಂಚಬೇಕೆಂದು ಆದೇಶ ನೀಡಿದರು. ಇಂತಿಂಥವರಿಗೆ ಕೊಡಬೇಕೆಂದು ಮಂತ್ರಿಗಳು ಅರ್ಜಿ ಕಳಿಸಿದರು. ಪ್ರತಿಯೊಂದು ಹೆಜ್ಜೆ ಹೆಜ್ಜೆಗೂ ತಮ್ಮ ಜನ, ತಮ್ಮ ಪಕ್ಷದಹಿತ ಮಾಡುವ ಪಕ್ಷಪಾತ ನಡೆದಿದೆ. ಹೀಗಾದರೆ ಪ್ರಜಾಪ್ರಭುತ್ವ ರಕ್ಷಣೆ ಮಾಡುತ್ತಾರೆಯೇ ಎಂದು ಅನುಮಾನ ಬರುತ್ತದೆ. ಆಡಳಿತ ಬಿಗಿಮಾಡತಕ್ಕಂಥ ಅಂಶ ರಾಜ್ಯಪಾಲರ ಭಾಷಣದಲ್ಲಿಲ್ಲ.

ಇನ್ನು ಭಾಷೆಯ ಪ್ರಶ್ನೆ. ಈ ಬಗ್ಗೆ ನಾನು ಒಂದು ತಿದ್ದುಪಡಿ ತಂದಿದ್ದೇನೆ. ಶ್ರೀ ಗೋಪಾಲ ಗೌಡರು ಈ ವಿಚಾರ ಹೇಳಿದ್ದಾರೆ. ಕರ್ನಾಟಕದ ಅಧಿಪತಿಗಳಾದ ಶ್ರೀಮಾನ್ ನಿಜಲಿಂಗಪ್ಪನವರು ಕನ್ನಡ ರಾಜ್ಯಸ್ಥಾಪನೆಮಾಡಿದ್ದಾರೆ.

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯ ಮಂತ್ರಿಗಳು).—ನಾನು ಅಧಿಪತಿಯಲ್ಲ.

ಶ್ರೀ ಕೆ. ಲಕ್ಕಪ್ಪ.—ಹಿಂದೆ ಅಧಿಪತಿಯಾಗಿದ್ದಿರಿ ಈಗ ಮುಖ್ಯ ಮಂತ್ರಿಗಳಾಗಿದ್ದೀರಿ. ನಮ್ಮ ರಾಜ್ಯದ ಭಾಷೆ ಕನ್ನಡವೆಂದು ಅಧಿಕೃತವಾಗಿ ನಿರ್ದಿಷ್ಟವಾಗಿ ಇರಬೇಕು. ಆದರೆ ಹಾಗೆ ಇರದೆ ಇರುವುದು ವಿಷಾದಕರ. ಇದು ಕನ್ನಡರಾಜ್ಯದಲ್ಲಿಯ ಕನ್ನಡಿಗರ ದೌರ್ಭಾಗ್ಯ. ಸರಕಾರದ ಕುಟಿಲನೀತಿಯಿಂದ ರಾಜಕೀಯ ಜಂಜಾಟದಲ್ಲಿ ಸಿಲುಕಿ ಕನ್ನಡವನ್ನು ಅಧಿಕೃತ ಭಾಷೆ ಎಂದು ಸ್ಪಷ್ಟವಾಗಿ ಮಾಡದೇ ಇರುವುದು ನಮಗೆ ಬಹಳ ವಿಷಾದವಾಗುತ್ತದೆ.

ಇನ್ನು ಪ್ರೊಹಿಬಿಷನ್ ಪಾನನಿರೋಧ ವಿಚಾರ. ಪಾನನಿರೋಧ ನೀತಿಯ ಬಗ್ಗೆ ಈ ಸಭೆಯಲ್ಲಿ ಸರಕಾರ ಅನೇಕ ಸಾರಿ ಹೇಳಿದ್ದಾರೆ. ಮಾನ್ಯ ಸದಸ್ಯರೆಲ್ಲರೂ ಕೂಡ ಹೇಳಿದರು. ಪಾನನಿರೋಧ ಪ್ರಶ್ನೆ ಬಂದಾಗ್ಗೆ ಇದು ಆಲ್ ಇಂಡಿಯಾ ಪಾಲಿಸಿ ಎಂದು ಶ್ರೀ ಜತ್ತಿಯವರು ಹೇಳಿದರು. ಆದರೆ ಪಂಡಿತ ನೆಹರು ಅವರು ಹೇಳಿದರು. ಇದು ಅವರವರ ರಾಜ್ಯದ ಪ್ರಶ್ನೆ.

ಶ್ರೀ ಬಿ. ಡಿ. ಜತ್ತಿ (ಹಣಕಾಸಿನ ಶಾಖೆಯ ಮಂತ್ರಿಗಳು).—ಯಾವಾಗ ಈ ರೀತಿ ಹೇಳಿದರು ನನಗೆ ಗೊತ್ತಿಲ್ಲ. ಅವರು ಹೇಳಿದ್ದು ಯಾವಾಗ ಯಾವ ಪೇಪರಿನಲ್ಲಿ ಬಂದಿದೆ ?

ಶ್ರೀ ಕೆ. ಲಕ್ಕಪ್ಪ.—ಪೇಪರ್ ಓದಿದರೆ ಗೊತ್ತಾಗುತ್ತದೆ. ಈಗ ಏನಾಗಿದೆ ಎಂದರೆ ರಾಜ್ಯ ಸರಕಾರವೇ ಆಗಲಿ ಕೇಂದ್ರ ಸರಕಾರವೇ ಆಗಲಿ ಒಂದು ನಿರ್ದಿಷ್ಟವಾದ ನೀತಿ ಧೋರಣೆ ಸರಕಾರದಲ್ಲಿಲ್ಲ. ನಿಜವಾಗಿಯೂ ಇದು ಬಹಳ ಶೋಚನೀಯವಾಗಿದೆ. ಒಂದು ಯುನಿಫಾರ್ಮ್ ಆಕ್ಟ್ ತರುತ್ತೇವೆಂದು ಹೇಳಿದರು. ಇದು ರಾಜ್ಯದ ಪ್ರಶ್ನೆಯಾಗಿದೆಯೆಂದು ಉತ್ತರ ಪ್ರದೇಶದಲ್ಲಿ ಪಾನನಿರೋಧವನ್ನು ತೆಗೆದು ಹಾಕಿದರು.

ಶ್ರೀ ಆರ್. ಎಂ. ಪಾಟೀಲ್ (ಒಳಾಡಳಿತ ಶಾಖೆಯ ಮಂತ್ರಿಗಳು).—ನೀವು ಪೇಪರ್ ತಪ್ಪು ಆಗಿ ಓದುತ್ತೀರಿ ಎಂದು ಕಾಣುತ್ತದೆ. ಯಾವಾಗ ಆ ರೀತಿ ಹೇಳಿದೆ ? ಯಾರು ಹೇಳಿದ್ದಾರೆ ? ಯುನಿಫಾರ್ಮ್ ಬಿಲ್ ಬರುತ್ತದೆಂದು ಎಲ್ಲಿ ಹೇಳಿದೆ ? ಮಿಸ್‌ಕನ್‌ಸ್ಟ್ರೂ ಮಾಡಿ ಈ ರೀತಿ ಹೇಳಿದರೆ ಹೇಗೆ ?

ಶ್ರೀ ಕೆ. ಲಕ್ಕಪ್ಪ.—ಆಗ್ಗೆ ಈ ಸಭೆಯಲ್ಲಿ ಗೃಹ ಮಂತ್ರಿಗಳು ಇರಲಿಲ್ಲ. ಶ್ರೀಮಾನ್ ಜತ್ತಿಯವರು ಇದು ಆಲ್ ಇಂಡಿಯಾ ಪಾಲಿಸಿ ಎಂದು ಹೇಳಿದರು.

ಶ್ರೀ ಬಿ. ಡಿ. ಜತ್ತಿ.—ನಿಮ್ಮ ಕನ್ನಡ ನಮಗೆ ಅರ್ಥವಾಗುವುದಿಲ್ಲ. Sir may I make the point clear ? Whether it is an All India Policy or not nobody has said on the floor of this House that we are going to bring a uniform Bill; there is no question of bringing a uniform bill.

ಶ್ರೀ ಕೆ. ಲಕ್ಕಪ್ಪ.—ಯುನಿಫಾರ್ಮ್ ಬಿಲ್ ಎಂದು ಹೇಳಲಿಲ್ಲ. ಯುನಿಫಾರ್ಮ್ ಪಾಲಿಸಿ ಇಲ್ಲ ಎಂದು ಹೇಳಿದೆ.

ರಾಜ್ಯಪಾಲರ ಭಾಷಣದಲ್ಲಿ ಈ ಬಗ್ಗೆ ಅಥವ ಕುಡಿಯತಕ್ಕಂಥ ಅಭ್ಯಾಸದ ಬಗ್ಗೆ, ಅದರಿಂದ ಆಗತಕ್ಕಂಥ ಹಾನಿ ಬಗ್ಗೆ ಏನೂ ಇಲ್ಲ. ಸರ್ಕಾರಕ್ಕೆ ಗೊತ್ತಿದ್ದರೂ ಸಹ, ಅದನ್ನು ಯೂನಿಫಾರಮ್ಮಾಗಿ ಇಂಟ್ರೊಡ್ಯೂಸ್ ಮಾಡುವುದಿಲ್ಲ. ತೆಗೆಯಬೇಕೋ ಬೇಡವೋ ಎಂಬ ಒಂದು ನಿರ್ದಿಷ್ಟವಾದ ನಿಲುವು ಇವತ್ತಿನ ದಿವಸ ರಾಜ್ಯಪಾಲರ ಭಾಷಣದಲ್ಲಿಲ್ಲ.

ಅಧಿಕಾರವರ್ಗದ ದಕ್ಷತೆ ವಿಷಯದಲ್ಲಿ ತಮಗೆ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನಮ್ಮ ತುಮಕೂರು ಡಿಸ್ಟ್ರಿಕ್ಟಿನಲ್ಲಿ ಅಧಿಕಾರಿಗಳನ್ನು ನೇಮಿಸಿರುವುದನ್ನು ನೋಡಿದರೆ, ಅವರಲ್ಲಿ ದಕ್ಷತೆ ಇದೆಯೇ, ಅವರು ಸತ್ಯದಿಂದ ಕೆಲಸ ಮಾಡುತ್ತಾರೆಯೇ ಅನ್ನತಕ್ಕಂಥ ಸಂಶಯ ಇವತ್ತಿನ ದಿವಸ ಉದ್ಭವವಾಗುತ್ತದೆ. ಕಾರಣ ಇಷ್ಟೇ: ಇನ್ನೂ ಕೂಡ ಕರ್ಣಾಟಕ ದೇಶದಲ್ಲಿ ಕನ್ನಡ ಉಪಯೋಗಿಸುವ, ಕನ್ನಡ ಮಾತನಾಡುವ ಅಧಿಕಾರಿಗಳನ್ನು ಇಟ್ಟಿಲ್ಲವಲ್ಲಾ ಎಂದು ವಿಷಾದದಿಂದ ಹೇಳಬೇಕಾಗಿದೆ. ರೈತನಿಗೆ ನಾವು ನೇರವಾಗಿ ಎಲ್ಲ ಸಹಕಾರವನ್ನೂ, ಸೌಕರ್ಯವನ್ನೂ, ಎಲ್ಲಾ ಸೌಲಭ್ಯಗಳನ್ನೂ, ಕನ್ನಡ ವ್ಯವಹಾರದ ಮೂಲಕ ತಲುಪಿಸಬಹುದು. ಸರ್ಕಾರದವರು ಸಮಾಜವಾದವನ್ನು ಅನುಷ್ಠಾನಕ್ಕೆ ತರುತ್ತೇವೆಂದು ಹೇಳುತ್ತಾರೆ. ಸಮಾಜವಾದದ ಸೊಗಸು ಎಷ್ಟರಮಟ್ಟಿಗೆ ಹಳ್ಳಿ ನಾಡಿನ ಜನರಿಗೆ ಅರಿವಾಗಿದೆ ಎನ್ನತಕ್ಕಂಥ ವಿಚಾರ ನಾವು ತಿಳಿಯಬೇಕಾಗಿದೆ. ಯಾವ ಅಧಿಕಾರಿಗಳಲ್ಲಿ ಹೋದರೂ ಕೂಡ, ಯಾವ ಆಫೀಸಿಗೆ ಹೋದರೂ ಕೂಡ, ಸರ್ಕಾರದಿಂದ ದೊರೆಯುತಕ್ಕಂಥ ಸೌಲಭ್ಯ, ಸೌಖ್ಯಗಳು ಹಳ್ಳಿಗಾಡಿನ ಜನಗಳಿಗೆ ನೇರವಾಗಿ ದೊರೆಯುವುದಕ್ಕೆ ಸಾಧ್ಯವಿಲ್ಲ. ಒಂದು

(ಶ್ರೀ ಕೆ. ಲಕ್ಕಪ್ಪ)

ಅರ್ಜಿ ಹಾಕಿದರೆ 12-18 ವರ್ಷವಾದರೂ ಫೈನಲ್ ಆಗುವುದಿಲ್ಲ. Land acquisition records finalise ಆಗುವುದೇ ಇಲ್ಲ. Acquire ಮಾಡಿ, ಕೆರೆ ಕಟ್ಟಿದ್ದರೂ, ಇವತ್ತಿನವರೆಗೂ ಮೂರು ಕಾಸು compensation ರೈತರಿಗೆ ಕೊಟ್ಟಿಲ್ಲ. ಇಂಥ ನಿದರ್ಶನಗಳು ನಮ್ಮ ಡಿಸ್ಟ್ರಿಕ್ಟಿನಲ್ಲಿ ನೂರಾರಿವೆ.

ಶ್ರೀ ಬಿ. ಡಿ. ಜತ್ತಿ.—ಒಂದೆರಡು instances ಹೇಳುತ್ತೀರ?

ಶ್ರೀ ಕೆ. ಲಕ್ಕಪ್ಪ.—ಗೂಳೂರು ಕೆರೆ Land acquisition records ಎಂಟು ವರ್ಷಗಳಿಂದ ಪೆಂಡಿಂಗ್ ಇದೆ. ಇಂಟರ್‌ಪೆಲೇಷನ್ ಇಲ್ಲಿ ಹಾಕಿದಮೇಲೆ ಆಕ್ಷನ್ ತೆಗೆದುಕೊಳ್ಳುತ್ತೇವೆಂದು ಹೇಳಿದರು. ಮೊನ್ನೆ ಇನ್ನೊಂದು ಇಂಟರ್‌ಪೆಲೇಷನ್ ಹಾಕಿದಮೇಲೆ, 3 ವರ್ಷದ ರೆಕಾರ್ಡ್ಸ್ ಕಳೆದು ಹೋಗಿದೆ ಎಂದು ಹೇಳಿದ್ದು ಸಿಕ್ಕಿತು.

Sri B. D. JATTI.—If we know the cases, then it will be possible for us to clarify.

ಶ್ರೀ ಕೆ. ಲಕ್ಕಪ್ಪ.—ಅನೇಕ ಸಂದರ್ಭಗಳಲ್ಲಿ ಸಹಕಾರ ಸಂಘಗಳ ವಿಷಯ ಹೇಳಿದ್ದೇವೆ. ಹೋದಸಾರಿ ನಾವು ಅಸೆಂಬ್ಲಿಗೆ ಹೊಸದಾಗಿ ಬಂದಿದ್ದೆವು. ಸಹಕಾರ ಖಾತೆಯ ಮಂತ್ರಿಗಳು ನೀವು ಹೇಳುವುದನ್ನೆಲ್ಲಾ ಹೇಳಬಹುದು, ಆಕ್ಷನ್ ತೆಗೆದುಕೊಳ್ಳುತ್ತೇವೆಂದು ಹೇಳಿದರು. ಅವರು ಕೊಟ್ಟ ಆಶ್ವಾಸನೆಯನ್ನು ಉಳಿಸಿಕೊಳ್ಳುತ್ತಾರೆಂದು ಬಹಳ ಆಸೆಯಿಂದ ಇದ್ದೆವು. ನಿಜಲಿಂಗಪ್ಪ ಸರ್ಕಾರ ಬಹಳ ಬಲಿಷ್ಠ ಸರ್ಕಾರ, ಬಹಳ ದರ್ಪದಿಂದ ಕೆಲಸ ಮಾಡುತ್ತದೆಂಬ ನಿರೀಕ್ಷೆ ಇಟ್ಟುಕೊಂಡಿದ್ದೆವು.

Mr. SPEAKER.—What time will be required for the Government to reply?

Sri S. NIJALINGAPPA.—Just an hour.

Sri G. V. GOWDA.—I would like to know if the reply may be postponed to to-morrow.

Mr. SPEAKER.—The original programme was for 10½ hours. Now we are giving 12 hours. Even after that, do you want 2 hours more?

Sri G. V. GOWDA.—It will accommodate as many members as possible.

Mr. SPEAKER.—I propose to do so, but if it is a question of members simply repeating and repeating, what is the use? And again in the budget discussion, the same thing will happen. Anyhow, we will see.

†ಶ್ರೀ ಎ. ಪಿ. ಅಪ್ಪಣ್ಣ (ವಿರಾಜಪೇಟೆ).—ಮಾನ್ಯ ಸಭಾಪತಿಗಳೇ, ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣೆಯನ್ನು ಕೊಡುವ ನಿರ್ಣಯವನ್ನು ಸಮರ್ಥಿಸಿ, ನಾಲ್ಕು ಮಾತುಗಳನ್ನಾಡಲು ಇಚ್ಛಿಸುತ್ತೇನೆ.

ನಮ್ಮ ದೇಶದಲ್ಲಿ ತುರ್ತು ಪರಿಸ್ಥಿತಿ ಸಾರಿದ ಮೇಲೆ, ಮೈಸೂರು ರಾಜ್ಯದಲ್ಲಿ ಸರ್ಕಾರ ಆದಷ್ಟು ಕ್ರಮಗಳನ್ನು ತೆಗೆದುಕೊಂಡಿದೆ. ನಮ್ಮಲ್ಲಿ ಶೇಖರಣೆಯಾಗುವಂಥ ಹಣ, ಚಿನ್ನ ಮತ್ತು ರಾಷ್ಟ್ರದ ಸೈನ್ಯಕ್ಕೆ ಆದಷ್ಟು ಜನರನ್ನು ಕಳುಹಿಸುವ ಕಾರ್ಯಕ್ರಮದಲ್ಲಿ ಸರ್ಕಾರ ಹೆಚ್ಚು ಕಾರ್ಯವನ್ನು ಕೈಗೊಂಡಿದೆ. ಅದಕ್ಕಾಗಿ ಸರ್ಕಾರವನ್ನು ಪ್ರಶಂಸಿಸಬೇಕಾದ್ದು ನಮ್ಮ ಕರ್ತವ್ಯ. ಆದರೆ ಈ ಸಂದರ್ಭದಲ್ಲಿ ನಮ್ಮಲ್ಲಿ ತುರ್ತು ಪರಿಸ್ಥಿತಿಯಲ್ಲಿ ಯಾವ ರೀತಿಯ ಒಂದು ಹುರುಪು, ಹುಮ್ಮಸ್ಸು ಇತ್ತೋ ಅದು ಕಡಿಮೆಯಾಗುತ್ತಾ ಬರುವ ಸ್ಥಿತಿ ನಮ್ಮಲ್ಲಿ ಕಂಡುಬರುತ್ತಿದೆ. ತುರ್ತು ಪರಿಸ್ಥಿತಿ ಸಾರಿದೊಡನೆ, ಒಂದು ವಾರದೊಳಗೆ ನಮ್ಮ ದೇಶದ ಜನತೆ ತಮ್ಮಲ್ಲಿರುವ ಸರ್ವಸ್ವವನ್ನೂ ಕೊಡಲಿಕ್ಕೆ ತಯಾರಿದ್ದಾರೆ ಎಂಬ ಒಂದು ಧೋರಣೆ ಜನತೆಯಲ್ಲಿ ಕಂಡಿತು. ಆದರೆ ಈಗ ಯುದ್ಧ ನಿಂತಿದೆ, ಇನ್ನು ಮುಂದಕ್ಕೆ ಯಾವ ಭಯವೂ ಇಲ್ಲ. ನಮ್ಮ ದೇಶದ ಮೇಲೆ ಪುನಃ ಆಕ್ರಮಣ ನಡೆಯುವುದಿಲ್ಲ ಎಂಬ ಭಾವನೆ ಜನತೆಗೆ ಬಂದಿದೆ. ಆದರೆ ಜನತೆ ಈ ಸಂದರ್ಭದಲ್ಲಿ ಈ ತುರ್ತು ಪರಿಸ್ಥಿತಿಯ ಒಂದು ಸಮಯದಲ್ಲಿ ಇನ್ನಷ್ಟು ನಾವು ಹಣದ ರೂಪದಲ್ಲಿ, ಚಿನ್ನದ ರೂಪದಲ್ಲಿ ಮತ್ತು ಸೈನ್ಯಕ್ಕೆ ಸೈನಿಕರನ್ನು ಕಳುಹಿಸುವ ವಿಚಾರದಲ್ಲಿ ಹುರುಪಿನಿಂದ ಕೆಲಸ ಮಾಡದಿದ್ದರೆ ಬಹುಶಃ ನಾವು ಕಲಿತಂಥ ಪಾಠದಿಂದ ಪ್ರಯೋಜನ ಪೊಂದಿದಂತೆ ಆಗುವುದಿಲ್ಲ.

ಇವತ್ತು ಮೊದಲನೆಯದಾಗಿ ರಕ್ಷಣಾಬಲಕ್ಕೆ ಆಗುವಷ್ಟು ಯುವಕರನ್ನು ಕಳುಹಿಸುವಂಥ ಕ್ರಮವನ್ನು ಕೈಗೊಳ್ಳಬೇಕು. ಈ ದೃಷ್ಟಿಯಿಂದ ಶಾಲಾ ಕಾಲೇಜುಗಳಲ್ಲಿ N.C.C. ತರುತ್ತೇವೆ, ಮತ್ತು ಅಲ್ಲಲ್ಲಿ Rifle Training Club ಮತ್ತು Rifle club ಗಳನ್ನು ಮಾಡುತ್ತಾ ಇದ್ದೇವೆಂದು ಸರ್ಕಾರ ಹೇಳುವುದು ಉಚಿತ. ಆದರೆ ಅದನ್ನು ಇನ್ನಷ್ಟು ಬಲಪಡಿಸುವುದು ಅಗತ್ಯ. ನಮ್ಮ ರಾಜ್ಯದಲ್ಲಿ ಅನೇಕ ಕಡೆಗಳಲ್ಲಿ ಸೈನ್ಯಕ್ಕೆ ರಿಕ್ರೂಟ್ ಮಾಡುವ ಸಂದರ್ಭಗಳಲ್ಲಿ Recruiting Officer ಒಂದೊಂದು ಸ್ಥಳಕ್ಕೆ ಹೋಗುವುದೇ ಹಳ್ಳಿಗಾಡಿನ ಜನರಿಗೆ ಗೊತ್ತಿರುವುದಿಲ್ಲ. ಇಂಥ ರಿಕ್ರೂಟಿಂಗ್ ಆಫೀಸರು, ಇಂಥಿಂಥ ಸ್ಥಳಕ್ಕೆ, ಇಂಥಿಂಥ ತಾರೀಖು ಹೋಗುತ್ತಾರೆ. ಅವರಿಗೆ ಇಂಥಿಂಥ ಯುವಕರು ಬೇಕಾಗಿದೆ ಎಂಬಂಥ ವಿಷಯದ ತಿಳುವಳಿಕೆಯನ್ನು ಜನತೆಗೆ ಕೊಡಬೇಕು ; ಇದನ್ನು Propaganda and Publicity Committee ಯವರು ತೆಗೆದುಕೊಳ್ಳಬೇಕಾಗಿದೆ. ನಮ್ಮ ಜಿಲ್ಲೆಯಲ್ಲಿಯೂ ಸಹ ಈ ಸಂದರ್ಭದಲ್ಲಿ ರಿಕ್ರೂಟಿಂಗ್ ಆಫೀಸರು ಸೈನ್ಯಕ್ಕೆ ಯುವಕರನ್ನು ಸೇರಿಸುವ ಸಂದರ್ಭದಲ್ಲಿ ಬಂದಾಗ, ಅವರು ಬಂದು ಹೋದಮೇಲೆ ಈಗಾಗಲೇ ಬಂದಿದ್ದರು ಎಂಬ ವರ್ತಮಾನ ಹಳ್ಳಿಯವರಿಗೆ ಸಿಕ್ಕಿತು. ಈ ದೃಷ್ಟಿಯಲ್ಲಿ ಪಬ್ಲಿಸಿಟಿ ಬೇಕಾಗಿದೆ. ಈ ಕಾರ್ಯವನ್ನು ನಮ್ಮ ರಾಜ್ಯದಲ್ಲಿರುವ Publicity Committee ಯವರು ಹೊತ್ತುಕೊಳ್ಳಬೇಕಾಗಿದೆ.

ರೈಫಲ್ ಕ್ಲಬ್ಬುಗಳನ್ನು ಆಗುವಷ್ಟು ಸ್ಥಾಪನೆ ಮಾಡಬೇಕು. ಅವುಗಳಿಗೆ ಉತ್ತೇಜನ ಕೊಡಬೇಕು. ಏತನ್ಮಧ್ಯೆ ಈ ಸಂದರ್ಭದಲ್ಲಿ ಒಂದು ಮಾತನ್ನು ನಾನು ರಾಜ್ಯಸರ್ಕಾರದ ಮುಂದೆ ಇಡಬೇಕಾಗಿದೆ. ಉದಾಹರಣೆಗೆ ನಮ್ಮ ಕೊಡಗಿನಲ್ಲಿ ಕೋವಿಯನ್ನು ಲೈಸನ್ಸಿಲ್ಲದೆ ಉಪಯೋಗಿಸುವಂಥ ಒಂದು ವಿನಾಯಿತಿ Indian Arms Act ನಲ್ಲಿತ್ತು. ಈ ವಿನಾಯಿತಿ ಪ್ರಕಾರ ಕೊಡಗಿನಲ್ಲಿ ಎಲ್ಲರೂ ಕೊಡಗರು ಮತ್ತು ಜಮ್ಮಿ ಹಿಡುವಳಿದಾರರು, ಲೈಸನ್ಸ್ ಇಲ್ಲದೆ ಕೋವಿ ಉಪಯೋಗಿಸುವ ಒಂದು ಸುಯೋಗವಿತ್ತು. ಇದರ ಪರಿಣಾಮ ಏನಾಗಿದೆಯೆಂದರೆ, ಇವತ್ತು ಸೈನ್ಯದಲ್ಲಿ ನಮ್ಮ ದೇಶದಲ್ಲಿ ಮೊದಲಾಗಿ ಇಬ್ಬರು ದಂಡನಾಯಕರನ್ನು ಕೊಡಗು ಕೊಟ್ಟಿತು ; ಅನೇಕ ವೀರಯೋಧರನ್ನು ದೇಶಕ್ಕೆ ಕೊಟ್ಟಿತು. ಕೊಡಗಿನಲ್ಲಿ Indian Arms Act ಇತ್ತು, ಇದು ಅದಕ್ಕೆ ಒಂದು ಕಾರಣ ಅಂತ ಹೇಳಬಲ್ಲೆ. ಈ ಒಂದು ವಿನಾಯಿತಿಯನ್ನು ಕೇಂದ್ರ ಸರ್ಕಾರದವರು ರದ್ದು ಮಾಡಿದ್ದಾರೆ.

MR. SPEAKER.—The Houses will now rise and meet again half an hour late.

The House adjourned for recess at Ten of the Clock and re-assembled at Thirty Minutes past Ten of the Clock.

[MR. DEPUTY SPEAKER in the Chair.]

ಶ್ರೀ ಎ. ಪಿ. ಅಪ್ಪಣ್ಣ.—ಮಾನ್ಯ ಸಭಾಪತಿಗಳೇ, ನಾನು ಈ ದೇಶದಲ್ಲಿರುವಂಥ ಪರಿಸ್ಥಿತಿ ಸಂಬಂಧದಲ್ಲಿ ನಮ್ಮಲ್ಲಿ ಜನರು ಬಂದೂಕುಗಳನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸುವಂಥದನ್ನು ಕಲಿಯಬೇಕು, ಸಿವಿಲ್ ಡಿಫೆನ್ಸ್ ಜಾಸ್ತಿಯಾಗಬೇಕು, ರೈಫಲ್ ಕ್ಲಬ್ಸ್ ಸ್ಥಾಪನೆಯಾಗಬೇಕು. ಈ ರೀತಿ ಒಂದು ಧೋರಣೆ ಹೊಂದಿರುವಂಥ ಸಂದರ್ಭದಲ್ಲಿ ಕೊಡಗಿನಲ್ಲಿ ಮೊದಲು ಇಂಡಿಯನ್ ಆರಮ್ಸ್ ಆಕ್ಟಿನ ಕಾನೂನಿಗೆ ವಿನಾಯಿತಿ ಇದ್ದುದನ್ನು ರದ್ದುಮಾಡಿರುವ ವಿಚಾರವಾಗಿ ಮಾತನಾಡುತ್ತಾ ಇದ್ದೆ. ಈ ವಿನಾಯಿತಿ ಮೊದಲು ಕೊಟ್ಟಂಥ ಸಂದರ್ಭದಲ್ಲಿ ನಮ್ಮ ಜಿಲ್ಲೆಯಲ್ಲಿ ಕೋವಿಯಿಂದ ಆದಂಥ ಕ್ರೈಮ್ಸ್ ಎಷ್ಟು ಎಂಬುದನ್ನೂ ನೋಡಿದ್ದೇನೆ ಆದರೆ ಯಾವ ಜಿಲ್ಲೆಯಲ್ಲಿ ಕೋವಿಯಿಂದ ಎಷ್ಟು ಕ್ರೈಮ್ಸ್ ಆಗಿದೆಯೋ ಅದಕ್ಕಿಂತ ಕಡಿಮೆ ಕ್ರೈಮ್ಸ್ ಆಗಿವೆ. ಆದ್ದರಿಂದ ಆ ಜಿಲ್ಲೆಯಲ್ಲಿ ಇದ್ದಂಥ ವಿನಾಯಿತಿಯನ್ನು ಜನತೆ ದುರುಪಯೋಗಪಡಿಸಿಲ್ಲ ಎಂಬುದು ಖಚಿತ. ಬದಲಾಗಿ ಅದರ ವಿನಾಯಿತಿಯಿಂದ ಅಲ್ಲಿಯ ಜನರು ಪ್ರಯೋಜನ ಹೊಂದಿದ್ದಾರೆ, ಆ ಪ್ರಯೋಜನವನ್ನೂ ರಾಷ್ಟ್ರಕ್ಕೂ ಕೊಟ್ಟಿದ್ದಾರೆ ಎಂಬುದು ಎಲ್ಲರಿಗೂ ತಿಳಿದಂಥ ಸಂಗತಿ. ಇಂದಿನ

(ಶ್ರೀ ಎ. ಪಿ. ಅಪ್ಪಣ್ಣ)

ಕಾಲದಲ್ಲಿ ಅದರಲ್ಲೂ ಈ ತುರ್ತು ಪರಿಸ್ಥಿತಿಯಲ್ಲಿ ಇಂದು ವಿನಾಯಿತಿ ಇಡೀ ರಾಜ್ಯಕ್ಕೆ ಕೊಡುವುದರ ಬದಲು ಕೊಟ್ಟದ್ದನ್ನು ರದ್ದುಮಾಡುವ ಪದ್ಧತಿ ಸರಿಯಲ್ಲ. ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಒತ್ತಾಯಪಡಿಸಿ ಆ ವಿನಾಯಿತಿಯನ್ನು ಪುನಃ ಕೊಡುವಂತೆ ಮಾಡಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಈ ವಿನಾಯಿತಿ ಬರೀ ಕಾರಣವಿಲ್ಲದೇ ಕೊಟ್ಟಂಥ ವಿನಾಯಿತಿ ಅಲ್ಲ. ಒಂದನೆಯದಾಗಿ ಕೊಡಗಿನ ಜನತೆಯಲ್ಲಿ ಬೆಳೆದುಬಂದಂಥಾ ಸಂಸ್ಕೃತಿಗೆ ಇದು ಹೊಂದಿಕೊಂಡಿದೆ ಎಂದು ಹೇಳ ಬಯಸುತ್ತೇನೆ. ಒಂದು ಮಗು ಹುಟ್ಟಿದ್ರೇ ಆದರೆ ಒಂದು ಗುಂಡು ಹಾರಿಸಬೇಕೆಂಬ ಪದ್ಧತಿ ಇದೆ. ಒಂದು ಮನೆಯಲ್ಲಿ ಒಂದು ಸಾವು ಆದರೆ ಎರಡು ಗುಂಡು ಹಾರಿಸಬೇಕೆಂಬ ಪದ್ಧತಿ ಇದೆ. ಒಂದು ಮಗು ಹುಟ್ಟಿದರೆ ನೇಫಾ ಬಾರ್ಡರ್‌ನಲ್ಲಿ ಹೋರಾಡುವ ಒಬ್ಬ ಯೋಧ ಹುಟ್ಟಿದ ಹಾಗೆ, ಚಳಿಗೆ ಬೆಂಕಿ ಕಾಸುತ್ತಾ ಕೂಡುತ್ತಾನೆ ಅಂತ ಅಲ್ಲ. ಆದ್ದರಿಂದ ಕೊಡಗಿನಲ್ಲಿ ಈ ವಿನಾಯಿತಿ ಇರಬೇಕು, ಅದರ ದುರುಪಯೋಗ ಮಾಡಿಲ್ಲ, ಸದುಪಯೋಗ ಮಾಡಿ ರಾಷ್ಟ್ರಕ್ಕೆ ನೆರವು ಕೊಟ್ಟಿದ್ದಾರೆ. ಆದ್ದರಿಂದಲೇ ಇವತ್ತು ಹಿಂದೂಸ್ಥಾನದಲ್ಲಿ ಎರಡು ದಂಡನಾಯಕರನ್ನು ಕೊಡಗು ಜಿಲ್ಲೆಯವರು ಕೊಟ್ಟಿದ್ದಾರೆ. ಈ ದೃಷ್ಟಿಯಿಂದ ಈ ವಿನಾಯಿತಿಯನ್ನು ರದ್ದು ಮಾಡದೇ ಪುನಃ ಕೊಡುವಂತೆ......

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಬಂದೂಕು ಹಿಡಿಯುವುದು ಕೊಡಗಿನವರಿಗೆ ಮಾತ್ರ ಇರಬೇಕೇ ಎಲ್ಲ ಜನರಿಗೂ ಇರಬೇಕೆ ?

ಶ್ರೀ ಎ. ಪಿ. ಅಪ್ಪಣ್ಣ.—ಆಗಲೇ ಹೇಳಿದೆ. ಈ ವಿನಾಯಿತಿಯನ್ನು ನಮಗೇ ಕೊಡಬೇಕೆಂದು ಹೇಳುವುದಿಲ್ಲ. ರಾಜ್ಯದಲ್ಲಿ ಎಲ್ಲರಿಗೂ ಕೊಟ್ಟರೂ ಅಭ್ಯಂತರವಿಲ್ಲ. ಆದರೆ ಇದ್ದಂಥ ವಿನಾಯಿತಿಯನ್ನು ರದ್ದುಮಾಡಬೇಡಿ. ಅದನ್ನು ದುರುಪಯೋಗಪಡಿಸಿಲ್ಲ ಅದರಿಂದ ರಾಷ್ಟ್ರಕ್ಕೆ ಸಹಾಯವಾಗಿದೆ, ಎಂಬ ದೃಷ್ಟಿಯಿಂದ ಹೇಳುತ್ತಾ ಇದ್ದೇನೆ. ಎರಡನೆಯದಾಗಿ ಇದು ನಮ್ಮ ಸಂಸ್ಕೃತಿಯಲ್ಲಿ ಬೆಳೆದುಬಂದಿದೆ, ನಮ್ಮ ಪದ್ಧತಿಯಲ್ಲಿ ಅಡಕವಾಗಿದೆ. ಇವತ್ತು ಸಿಖ್ಖರಿಗೆ ಒಂದು ಕತ್ತಿಯನ್ನು ಇಟ್ಟುಕೊಳ್ಳುವುದಕ್ಕೆ ವಿನಾಯಿತಿ ಕೊಟ್ಟಿದ್ದಾರೆ. ಆ ವಿನಾಯಿತಿ ನಮಗೂ ಸಿಕ್ಕಬೇಕು ಎಂಬ ದೃಷ್ಟಿಯಿಂದ ಮಾನ್ಯ ಮುಖ್ಯಮಂತ್ರಿಗಳವರನ್ನು ಮತ್ತು ಸರ್ಕಾರದವರನ್ನು ವಿನಂತಿಸಿಕೊಳ್ಳುವುದೇನೆಂದರೆ ಇದ್ದ ವಿನಾಯಿತಿ ರದ್ದು ಮಾಡಿದ್ದನ್ನು ಪುನಃ ತೆಗೆದುಹಾಕಬೇಕೆಂಬ ಒತ್ತಾಯ ಈ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಬರಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ನಿಜಲಿಂಗಪ್ಪ.—ಶಿಫಾರಸು ಮಾಡಿದ್ದೇವೆ.

ಶ್ರೀ ಎ. ಪಿ. ಅಪ್ಪಣ್ಣ. ಹಾಗಾದರೆ ಕೊಡಗು ಜಿಲ್ಲೆಯ ಜನರ ಪರವಾಗಿ ಅವರಿಗೆ ಬಹಳ ಋಣಿಯಾಗಿದ್ದೇನೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಶಿಫಾರಸು ಮಾಡುವಾಗ ಕೊಡಗಿಗೆ ಮಾತ್ರ ಮಾಡಿದ್ದೀರೋ; ದೇಶಕ್ಕೆಲ್ಲಾ ಶಿಫಾರಸು ಮಾಡಿದ್ದೀರೋ ?

ಶ್ರೀ ಎಸ್. ನಿಜಲಿಂಗಪ್ಪ.—ಆ ಪ್ರಶ್ನೆ ಬಂದಾಗ ವಿಚಾರಮಾಡುತ್ತೇವೆ.

ಶ್ರೀ ಎ. ಪಿ. ಅಪ್ಪಣ್ಣ.—ಮಾನ್ಯ ಮುಖ್ಯಮಂತ್ರಿಗಳು ಶಿಫಾರಸು ಮಾಡಿದ್ದೇವೆ ಎಂದು ಹೇಳಿದ್ದರಿಂದ ನಾನು ಹೆಚ್ಚು ಹೇಳುವುದಿಲ್ಲ.

ರಾಜ್ಯಪಾಲರ ಭಾಷಣದಲ್ಲಿ ಬಿಜಾಪುರದಲ್ಲಿ ಒಂದು ಸೈನಿಕ ಸ್ಕೂಲು ಸ್ಥಾಪನೆ ಮಾಡಬೇಕೆಂಬ ಸೂಚನೆಯನ್ನು ಕೊಟ್ಟಿದ್ದಾರೆ. ಅದಕ್ಕೆ ಕಾರ್ಯಕ್ರಮ ಕೈಗೊಂಡಿದ್ದಾರೆ. ಸೈನಿಕ ಸ್ಕೂಲಿನ ಉಪಯೋಗವನ್ನು ನಮ್ಮ ರಾಜ್ಯದ ಜನತೆ ಬಹಳವಾಗಿ ಹೊಂದಿಲ್ಲ ಅಥವಾ ತಿಳಿದುಕೊಂಡಿಲ್ಲ ಎಂದು ನನ್ನ ಭಾವನೆ. ನಮ್ಮ ಈ ರಾಜ್ಯದಲ್ಲಿ ಸೈನಿಕ ಸ್ಕೂಲಿನ ಕ್ರಮಕ್ಕೆ ಒಳಪಟ್ಟಂಥ ಇನ್ನೂ ಎರಡು ಶಾಲೆಗಳು ಇವೆ. ಬೆಂಗಳೂರಿನಲ್ಲಿ ಕಿಂಗ್‌ಜಾರ್ಜ್ ಸ್ಕೂಲ್ ಅನ್ನುವುದು ಒಂದು ಇದೆ. ಇನ್ನೊಂದು ಬೆಳಗಾಂನಲ್ಲಿ ಇದೆ. ಅಲ್ಲಿ ನೋಡಿದಂತೆ ಮೈಸೂರು ರಾಜ್ಯದ ವಿದ್ಯಾರ್ಥಿಗಳು ಬಹಳ ಕಡಿಮೆ, ಉತ್ತರ ಹಿಂದೂಸ್ಥಾನದಿಂದ ಅನೇಕ ವಿದ್ಯಾರ್ಥಿಗಳು ಬಂದು ವಿದ್ಯಾಭ್ಯಾಸ ಮಾಡುತ್ತಾ ಇದ್ದಾರೆ. ಆದ್ದರಿಂದ ಅಂಥಾ ಸೈನಿಕ ಸ್ಕೂಲುಗಳನ್ನು ನಮ್ಮ ರಾಜ್ಯದಲ್ಲಿ ಹೆಚ್ಚಾಗಿ ಸ್ಥಾಪನೆ ಮಾಡಬೇಕು ಮತ್ತು ಯುವಕರು ಶಿಸ್ತಿನಿಂದ ಯೋಧರಾಗಿ ಬೆಳೆಯುವಂತಾಗಬೇಕು. ರಕ್ಷಣೆಯ ಹೊರೆ ಅಧಿಕವಾಗಿ ಯುವಕರಿಗೆ ಸೇರುವಂತಾಗಬೇಕು. ಇದರ ಪ್ರಯೋಜನವನ್ನು ಜನತೆ ಸರಿಯಾದ ರೀತಿಯಲ್ಲಿ ಅರಿತುಕೊಳ್ಳುವಂತಾಗಬೇಕು. ಇದರ ಪ್ರಯೋಜನವನ್ನು ನಮ್ಮ ರಾಜ್ಯದ ವಿದ್ಯಾರ್ಥಿಗಳು ಜನತೆಗೆ ತಿಳಿಸುವಂತಾಗಬೇಕು. ಅಲ್ಲದೆ ಇಲ್ಲಿ ಸೈನಿಕರ ಸ್ಕೂಲುಗಳನ್ನು

ತೆರೆದು ಯಾವುದೋ ಪ್ರಾಂತಗಳಿಂದ ಬಂದು ಅವರು ಇಲ್ಲಿ ವಿದ್ಯಾಭ್ಯಾಸ ಮಾಡುವುದಾದರೆ ನಮ್ಮ ಜನತೆ ಮತ್ತು ಯುವಕರು ಅವರಿಂದ ಪ್ರಯೋಜನ ಹೊಂದಿದಂತಾಗುವುದಿಲ್ಲ. ಆದ್ದರಿಂದ ಬಿಜಾಪುರದಲ್ಲಿ ತೆರೆಯುವ ರೀತಿಯಲ್ಲೇ ನಮ್ಮ ರಾಜ್ಯದಲ್ಲಿ ಇನ್ನೂ 2-3 ಸೈನಿಕ ಶಾಲೆಗಳನ್ನು ತೆರೆಯುವಂಥಾ ಅವಕಾಶವನ್ನು ಸರ್ಕಾರ ಮಾಡಿಕೊಡಬೇಕು. ಅದಕ್ಕೆ ಪ್ರೋತ್ಸಾಹ ಕೊಡ ಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ರಾಜ್ಯಪಾಲರು ತಮ್ಮ ಭಾಷಣದಲ್ಲಿ ಅವಶ್ಯಕವಾದಂಥ ಸಾಮಾನುಗಳ ಬೆಲೆ ಏರದಂತೆ ಸರ್ಕಾರದವರು ನೋಡಿಕೊಂಡಿದ್ದಾರೆಂದು ಹೇಳಿದ್ದಾರೆ. ಅದರಲ್ಲಿ ಅಕ್ಕಿಯನ್ನೂ ಸೇರಿಸಿದ್ದಾರೆ. ಜನತೆಗೆ ಅವಶ್ಯಕವಿರುವಂಥ ಸಾಮಾನುಗಳ ಬೆಲೆ ಏರಿಕೆಯನ್ನು ತಡೆ ಹಿಡಿಯುವುದು ಸರ್ಕಾರ ದವರ ಕರ್ತವ್ಯವಾಗಿದೆ. ಇವತ್ತಿನ ಪರಿಸ್ಥಿತಿ ಏನಾಗಿದೆಯೆಂದರೆ ರೈತರು ಆಹಾರದ ಬೆಳೆಯನ್ನು ಬೆಳೆಯುತ್ತಿಲ್ಲ. ರೈತರ ಸ್ಥಿತಿ ಎಷ್ಟರಮಟ್ಟಿಗೆ ಆಗಿದೆ ಎಂದು ಹೇಳುವುದಾದರೆ ಅವರು ಬೆಳೆಯು ವಂಥ ಬತ್ತದ ಬೆಳೆಗೆ ಬೆಲೆ ಇಳಿದು ಅವರು ಕೊಂಡುಕೊಳ್ಳುವಂಥ ಸಾಮಾನುಗಳ ಬೆಲೆ ಏರಿದೆ. ಇವತ್ತು ರೈತ ಯಾವ ಸ್ಥಿತಿಗೆ ಬಂದಿದ್ದಾನೆ ಎಂಬುದನ್ನು ಸ್ವಲ್ಪ ಯೋಚನೆ ಮಾಡಬೇಕು. ಇವತ್ತು ನಮ್ಮ ದೇಶದ ಆಹಾರ ಉತ್ಪನ್ನ ಆಗಬೇಕಾದರೆ ಕೋ-ಆಪರೇಟಿವ್ ಸೊಸೈಟಿಯಿಂದ ಸಾಲಕೊಟ್ಟರೆ ಜಾಸ್ತಿಯಾಗುತ್ತದೆ ಅಥವಾ ತಕಾವಿ ಸಾಲಕೊಟ್ಟರೆ ಜಾಸ್ತಿಯಾಗುತ್ತದೆ ಎಂದು ತಿಳಿದುಕೊಂಡರೆ ತಪ್ಪುಭಾವನೆಯಾಗುತ್ತದೆ. ಬೆಳೆಯುವಂಥ ಆಹಾರ ಪದಾರ್ಥಕ್ಕೆ ಸರಿಯಾದ ಬೆಲೆ ದೊರೆಯುವಂಥ ಒಂದು ಕಾರ್ಯ ಆಗಬೇಕು. ನಿಜವಾಗಿಯೂ ನಮ್ಮ ರಾಜ್ಯದಲ್ಲಿ ಅಕ್ಕಿ, ಬತ್ತ ಕೊಂಡು ತಿನ್ನುವವರು ಜಾಸ್ತಿ ಇರಬಹುದು. ಆದರೆ ಅವನು ಬೆಳೆಯುವ ಆಹಾರ ಸಾಮಗ್ರಿಗಳನ್ನು ಮಾರಿ ಅದಕ್ಕಿಂತ ಅತ್ಯಧಿಕವಾದ ಬೆಲೆಯನ್ನು ಅವಶ್ಯಕವಾದ ಪದಾರ್ಥಗಳಿಗೆ ಕೊಟ್ಟು ಕೊಂಡುಕೊಳ್ಳುವುದಾದರೆ ಆಹಾರ ಧಾನ್ಯ ಬೆಳೆಸುವಂಥವನಿಗೆ ಉತ್ತೇಜನ ಕೊಟ್ಟಂತಾಗುವುದಿಲ್ಲ. ಆ ದೃಷ್ಟಿಯಿಂದ ರೈತನು ಬೆಳೆದ ಬತ್ತಕ್ಕೂ, ಅವನು ಕೊಂಡುಕೊಳ್ಳತಕ್ಕ ಇತರ ಸಾಮಾನುಗಳ ಬೆಲೆಗೂ ತಾರತಮ್ಯ ಇದ್ದ ಪಕ್ಷದಲ್ಲಿ ಅವನಿಗೆ ಯಾವರೀತಿಯ ಸಲಕರಣೆ ಗಳನ್ನು ರೈತರಿಗೆ ಕೊಟ್ಟರೂ ಸಹ ಅದು ಆ ಬೆಲೆಯ ಒಂದು ಕಾರಣದಿಂದ ಅತ್ಯಧಿಕ. ಜನರು ಆಹಾರ ಉತ್ಪನ್ನವನ್ನು ಬಿಟ್ಟು ಬೇರೆ ರೀತಿಯ ಕಮರ್ಷಿಯಲ್ ಕ್ರಾಪ್ಸ್ ಬೆಳೆಯುವ ಕಾರ್ಯಕ್ಕೆ ತೊಡಗುತ್ತಾರೆ. ಇವತ್ತು ದೊಡ್ಡ ರೈತರ ಸ್ಥಿತಿ ಏನಾಗಿದೆ ಎಂದರೆ ಕೋ-ಆಪರೇಟಿವ್ ಸೊಸೈಟಿ ಯಲ್ಲಿ ಷಾರ್ಟ್‌ಟರ್ಮ್ ಲೋನ್, ತೆಗೆದುಕೊಂಡಿದ್ದಾರೆ, ಲಾಂಗ್‌ಟರ್ಮ್ ಲೋನ್ ತೆಗೆದುಕೊಂಡಿ ದ್ದಾರೆ, ತಕಾವಿ ಲೋನ್ ತೆಗೆದುಕೊಂಡಿದ್ದಾರೆ. ಇದನ್ನೆಲ್ಲಾ ಸೇರಿಸಿ ಒಂದು ಕಡೆ ಇಟ್ಟಿದ್ದೇ ಆದರೆ ಆ ಸಾಲದ ಮೊತ್ತ ನೋಡಿದರೆ ಭೂಮಿಯ ಕ್ರಯಕ್ಕಿಂತ ಸಾಲವೇ ಜಾಸ್ತಿ ಆಗುತ್ತದೆ.

ನಮ್ಮ ರಾಜ್ಯದಲ್ಲಿ ಕೆಲವು ರೈತರ ಪರಿಸ್ಥಿತಿ ಹೀಗಾಗಿದೆ. ಈಗಾಗಲೇ ರೈತನಮೇಲೆ ಕಂದಾಯದ ಹೊರೆ ಬಹಳ ಜಾಸ್ತಿಯಾಗಿದೆ. ಆದ ಕಾರಣ ಅವನು ಬೆಳೆಯತಕ್ಕ ಆಹಾರ ಸಾಮಗ್ರಿ ಗಳಿಗೆ ಒಂದು ಸರಿಯಾದ ಬೆಲೆ ದೊರೆಯಲೇಬೇಕು. ಹಾಗೊಂದು ವೇಳೆ ಆ ರೈತನು ಬೆಳೆಯುವ ಧಾನ್ಯಗಳ ಬೆಲೆ ಕಡಮೆಯಾಗುವುದಾದರೆ ಅದೇ ಪ್ರಮಾಣದಲ್ಲಿ ಆ ರೈತನು ಕೊಳ್ಳತಕ್ಕ ಸಾಮಗ್ರಿ ಗಳ ಬೆಲೆಯೂ ಕೂಡ ಕಡಮೆಯಾಗಲೇಬೇಕು. ಈ ಒಂದು ಅಂಶವನ್ನು ಗಮನಕ್ಕೆ ತೆಗೆದುಕೊಳ್ಳದೆ ರೈತನಿಗೆ ಸರ್ಕಾರ ಏನೇ ಉತ್ತೇಜನ ಸೌಲಭ್ಯಗಳನ್ನು ಒದಗಿಸಿಕೊಟ್ಟರೂ ಆತನಿಂದ ಹೆಚ್ಚು ಆಹಾರ ಸಾಮಗ್ರಿಗಳನ್ನು ಬೆಳೆಯುವುದಕ್ಕೆ ಸಾಧ್ಯವೇ ಇರುವುದಿಲ್ಲ. ಇಷ್ಟು ಹೇಳಿ ಕಡೆಯದಾಗಿ ನಮ್ಮ ರಕ್ಷಣಾ ಬಲಕ್ಕೆ ಹೋಗತಕ್ಕ ನಮ್ಮ ಯುವಕರಿಗೆ ಇಂದು ಸರಿಯಾದ ರೀತಿಯಲ್ಲಿ ಶಿಕ್ಷಣ-ರಕ್ಷಣೆಯ ಬಲವನ್ನು ಕೊಟ್ಟು ಅವರ ಕಾರ್ಯಕ್ಕೆ ಹಿಂಬಾಲಕರಾಗಿರುವ ರೈತರಿಗೂ ಕೂಡ ಸರ್ಕಾರ ಸಾಕಷ್ಟು ಬೆಂಬಲನೀಡತಕ್ಕ ಕಾರ್ಯಗಳಿಗೆ ಪ್ರಾಮುಖ್ಯತೆಯನ್ನು ಕೊಟ್ಟು ಕೆಲಸಕಾರ್ಯಗಳನ್ನು ನಡೆಸುತ್ತಾ ರೆಂದು ನಂಬಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಸ್. ಎಂ. ಕೃಷ್ಣ (ಮದ್ದೂರು).—ಸ್ವಾಮಿ, ನಮ್ಮ ರಾಜ್ಯದ ವಾಸ್ತವಿಕ ಪರಿಸ್ಥಿತಿ ಯನ್ನು ಮೈಸೂರು ಸರ್ಕಾರದ ರಾಜ್ಯಪಾಲರು ತಮ್ಮ ಭಾಷಣದ ಮೂಲಕ ಜನತೆಯ ಮುಂದಿಡ ತಕ್ಕ ಕಾರ್ಯದಲ್ಲಿ ಅವರು ವಿಫಲರಾಗಿದ್ದಾರೆಂಬ ವಿಚಾರ ಈಗಾಗಲೇ ತಮ್ಮೆಲ್ಲರಿಗೂ ಮನವರಿಕೆ ಯಾಗಿದೆ. ಹಲವಾರು ಪ್ರಾಮುಖ್ಯವಾದ ಅಂಶಗಳ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಯಾವ ವಿಧವಾದ ನಮೂದೂ ಇಲ್ಲದಂತಾಗಿ ಈ ಒಂದು ಕಾರ್ಯದಲ್ಲಿ ಸರ್ಕಾರ ತನ್ನ ಕರ್ತವ್ಯದಲ್ಲಿ ಒಂದು ದೊಡ್ಡ ಲೋಪವನ್ನು ಮಾಡಿದಂತಾಗಿದೆಯೆಂಬ ಅಂಶವನ್ನು ಈ ಮಾನ್ಯ ಸಭೆಯ ಗಮನಕ್ಕೆ ತರಲು ಇಚ್ಛೆಪಡುತ್ತೇನೆ.

ಮೈಸೂರು ಸಂಸ್ಥಾನದ ಭವಿಷ್ಯ ಮುಂದೆ ಯಾವ ರೀತಿಯಿರಬೇಕು ಎನ್ನತಕ್ಕ ವಿಚಾರದಲ್ಲಾ ಗಲ್ಲೀ ಅಥವಾ 1962ನೇ ಇಸವಿಯಲ್ಲಿ ಅವರು ಸಾಧಿಸಿದ ಕಾರ್ಯಗಳೇನು, ಆಡಳಿತ ಜವಾಬ್ದಾರಿ

(ಶ್ರೀ ಎಸ್. ಎಂ. ಕೃಷ್ಣ)

ಯನ್ನು ಹೊತ್ತಿದ್ದಂಥ ಸರ್ಕಾರ ಕಳೆದ ಒಂದು ವರ್ಷದಲ್ಲಿ ಜನತೆಗೆ ಕಲ್ಯಾಣವನ್ನುಂಟುಮಾಡತಕ್ಕ ಕಾರ್ಯ ಸಾಧನೆಯ ಪಟ್ಟಿಯಲ್ಲಿ ಏನನ್ನೂ ಸಾಧಿಸದಿರುವುದರಿಂದ ಈ ಆಡಳಿತದ ಬಗ್ಗೆ ಜನತೆಗೆ ಯಾವ ಒಂದು ವಿಧವಾದ ಧೈರ್ಯವೂ ಬರುವಂತಿಲ್ಲ. ದೇಶದಲ್ಲಿರತಕ್ಕ ಜನಗಳಿಗೆ ಸಾರ್ವತ್ರಿಕವಾಗಿ ಒಂದು ನಂಬಿಕೆಯನ್ನುಂಟುಮಾಡತಕ್ಕಂಥ ಯಾವ ಒಂದು ಕಾರ್ಯವನ್ನು ನಮ್ಮ ಸರ್ಕಾರ ಸಾಧಿಸಿರುತ್ತೆಂಬ ಬಗ್ಗೆ ನಮ್ಮ ರಾಜ್ಯಪಾಲರ ಭಾಷಣದಲ್ಲಿ ಎಲ್ಲೂ ಕಂಡು ಬರುತ್ತಿಲ್ಲ. ಇತ್ತೀಚಿನ ಘಟನೆಗಳಿಗನುಗುಣವಾಗಿ ನಮ್ಮ ಮುಂದಿನ ಭವಿಷ್ಯ ಹೇಗಿದೆಯೆಂಬತಕ್ಕ ವಿಚಾರದಲ್ಲಿ ನಮ್ಮ ಈ ಸಭೆಯೊಳಗೂ ಹೊರಗೂ ಒಂದು ಸಂಶಯ ಉಂಟಾಗಿದೆ. ಈ ದಿವಸ ನಮ್ಮ ರಾಜ್ಯಕ್ಕೆ ಸಂಬಂಧಪಟ್ಟಂಥ ಒಂದು ಬಹು ಮುಖ್ಯವಾದ ಪ್ರಶ್ನೆಯೆಂದರೆ-ಅದು ನಮ್ಮ ರಾಜ್ಯಕ್ಕೆ ಸಂಬಂಧಪಟ್ಟ ನೀರಾವರಿ ಯೋಜನೆಯೇ ಆಗಿದೆ. ಆ ಯೋಜನೆಗೆ ಸಂಬಂಧಿಸಿದಂತೆ ಈಗ ಉಂಟಾಗಿರತಕ್ಕ ಅಂತರ್ನದಿಗಳ ಬಿಕ್ಕಟ್ಟು ಏನಾಗಿದೆ ಎನ್ನತಕ್ಕ ಬಗ್ಗೆ ಅತ್ತಕಡೆಗೆ ಈಗ ಸ್ವಲ್ಪ ಮಟ್ಟಿಗೆ ನಮ್ಮೆಲ್ಲರ ಗಮನವನ್ನೂ ಹರಿಸಬೇಕಾಗಿದೆ. ಇದು ಈ ದಿವಸ ಈ ಶಾಸನ ಸಭಾ ಸದಸ್ಯರ ಕರ್ತವ್ಯ ಹಾಗೂ ಹೊಣೆಯಾಗಿದ. ಆದರೆ ಈ ಅಂತರರಾಜ್ಯ ನದಿಗಳ ನೀರಿನ ಹಂಚಿಕೆ ಪ್ರಶ್ನೆಯಾದರೋ ಅಷ್ಟು ಸುಲಭವಾದುದಲ್ಲ, ಇದು ಬಹಳ ಕಷ್ಟತರದ ಕ್ಲಿಷ್ಟ ಪ್ರಶ್ನೆಯೂ ಆಗಿದೆ. ಆದರೆ ಈ ವಿಚಾರದಲ್ಲಿ ಈಗಾಗಲೇ ನಮ್ಮ ನೆರೆ ರಾಜ್ಯಗಳಾದ ಆಂಧ್ರ ಮತ್ತು ಮದ್ರಾಸ್ ಸರ್ಕಾರಗಳು ಈ ನದಿಗಳ ನೀರಿನ ಹಂಚಿಕೆ ವ್ಯವಸ್ಥೆಗಳ ವಿಚಾರಕ್ಕೆ ಹೆಚ್ಚಿನ ಗಮನ ಕೊಟ್ಟು, ಅವರ ಒಂದು ರಾಜಕೀಯ ಒತ್ತಡವೂ ಸಹ ಕೇಂದ್ರ ಸರ್ಕಾರದಮೇಲೆ ಅಧಿಕಾರ ಬಿದ್ದಿದೆ. ಈ ಒಂದು ಕಾರಣದಿಂದ ಈ ದಿವಸ ಈ ಶಾಸನ ಸಭಾ ಸದಸ್ಯರುಗಳಾದ ನಾವು ಈ ಎಲ್ಲ ಪ್ರಯತ್ನಗಳನ್ನೂ ಸರ್ಕಾರವೇ ಮಾಡುತ್ತದೆ ಎಂದು ನಂಬಿಕೊಂಡಿರದೆ, ಆ ಹೊಣಗಾರಿಕೆ ನಮ್ಮೆಲ್ಲರಿಗೂ ಬಿದ್ದಿರುತ್ತೆಂದು ಭಾವಿಸಿ ನಾವೂ ಸಹ ನಮ್ಮ ಕರ್ತವ್ಯ ಪರಿಪಾಲನೆ ಮಾಡಬೇಕೆಂಬ ದೃಷ್ಟಿಯಿಂದ ನಾವೀಗ ಈ ಕೃಷ್ಣಾ ಗೋದಾವರಿ ನದಿಗಳ ನೀರಿನ ಹಂಚಿಕೆ ವಿಚಾರವನ್ನು ವಿಮರ್ಶೆ ಮಾಡಬೇಕಾಗಿದೆ. ಈ ಸಂದರ್ಭದಲ್ಲಿ ನಾನು ಸರ್ಕಾರದವರನ್ನು ಬಹಳ ಕಳಕಳಿಯಿಂದ ಕೇಳಿಕೊಳ್ಳತಕ್ಕ ಒಂದೇ ಒಂದು ಪ್ರಶ್ನೆಯೆಂದರೆ 1951ನೆಯ ಇಸವಿಯಲ್ಲಿ ಈ ವಿಚಾರದಲ್ಲಿ ಒಂದು ಕರಾರಾಯಿತು. ಆ ಕರಾರು ಕೃಷ್ಣಾ-ಗೋದಾವರಿ ನದಿಗಳ ನೀರಿನ ಹಂಚಿಕೆಗೆ ಸಂಬಂಧಪಟ್ಟದ್ದು. ಆದರೆ ಆ ಕರಾರನ್ನು ನಮ್ಮ ಸರ್ಕಾರ ಒಪ್ಪಿಕೊಂಡಿಲ್ಲ ಎಂಬುದಾಗಿ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಆದರೆ ಸುಮಾರು ಇಲ್ಲಿಗೆ ಎರಡು ತಿಂಗಳ ಕೆಳಗೆ ಇದೇ ಶಾಸನ ಸಭೆಯಲ್ಲಿ ನಾನು ಆ ಆಂಧ್ರದ ಮುಖ್ಯಮಂತ್ರಿಗಳ ಒಂದು ಸಭೆಯನ್ನು ಕರೆದು ಆ ಸಭೆಯಲ್ಲಿ ಈ ಕೃಷ್ಣ-ಗೋದಾವರಿ ನದಿಗಳ ನೀರಿನ ಹಂಚಿಕೆ ವಿಚಾರದಲ್ಲಿ ಹೀಗೆ ಹೇಳಿದ್ದಾರೆಂದು ಇಲ್ಲಿ ಪ್ರಶ್ನಿಸಿದ ಕಾಲಕ್ಕೆ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಆ 1951ನೆಯ ಒಪ್ಪಂದಕ್ಕೆ ಮೈಸೂರು ಸರ್ಕಾರ ಭಾಗಿಯಾಗಿಲ್ಲ, ಅದಕ್ಕೆ ನಮ್ಮ ಸರ್ಕಾರದ ಪರವಾಗಿ ಯಾರೂ ರುಜುವೂ ಸಹ ಹಾಕಿಲ್ಲ ಎಂತ ಹೇಳಿದರು. ಆದರೆ ಈ ದಿವಸ ನನ್ನಲ್ಲಿ ಆ ಒಪ್ಪಂದದ ಒಂದು ಪ್ರತಿಯಿದೆ. ಆ ದಿವಸ ಈ ಕರಾರಾಗತಕ್ಕ ಸಮ್ಮೇಳನದಲ್ಲಿ ಪ್ಲಾನಿಂಗ್ ಕಮಿಷನ್ನಿನ ಅಧಿಕಾರಿಗಳೂ, ಬೊಂಬಾಯಿ ರಾಜ್ಯದ ಮುಖ್ಯಮಂತ್ರಿಗಳೂ ಹಾಗೂ ಅಧಿಕಾರಿಗಳೂ ಮದ್ರಾಸ್ ಸರ್ಕಾರದ ಮುಖ್ಯ ಮಂತ್ರಿಗಳೂ ಹಾಗೂ ಅವರ ಅಧಿಕಾರಿಗಳೂ ಅದರಲ್ಲಿ ಇವರೆಲ್ಲ ಸೇರಿದ್ದರು. ಆದರೆ ನಮ್ಮ ದುರದೃಷ್ಟಕ್ಕೆ ನಮ್ಮ ಮೈಸೂರಿನ ಮುಖ್ಯ ಮಂತ್ರಿಗಳು ಒಬ್ಬರನ್ನು ಮಾತ್ರ ಅಲ್ಲಿಗೆ ಕಳುಹಿಸಿದ್ದರು. ಅವರು ಕೇವಲ ಒಂದು ದಿವಸ ಮಾತ್ರ ಆ ಸಮ್ಮೇಳನದಲ್ಲಿ ಭಾಗವಹಿಸಿದ್ದು ಮತ್ತೆ ಅದರಲ್ಲಿ ಭಾಗವಹಿಸದೆ ಸಮ್ಮನೆ ಹೊರಟು ಹೋಗಿ ಬಿಟ್ಟಿದ್ದಾರೆ. ಈ ದಿವಸ ನಮ್ಮ ಸರ್ಕಾರ ನಮಗೆ ಈ ನದೀ ನೀರಿನ ವಿಚಾರದಲ್ಲಿ ಅನ್ಯಾಯವಾಗಿದೆ, ನಮಗೆ ನ್ಯಾಯ ದೊರಕಿಸಿ ಕೊಡಬೇಕೆಂದು ಇವರು ವಾದ ಮಾಡುತ್ತಿದ್ದರೆ ಆ ನಮ್ಮ ನೆರೆ ರಾಜ್ಯದವರು ಈ ಹಿಂದೆ ಆಗಿರತಕ್ಕ ಒಪ್ಪಂದ ಸರಿಯಾಗಿದೆ-ಬದಲು ಮಾಡಬಾರದು ಎಂತ ಅವರು ವಾದಿಸುತ್ತಿದ್ದಾರೆ. ಇದೆಲ್ಲವೂ ಮೊದಲನೆಯ ಘಟ್ಟಕ್ಕೆ ಸೇರಿದ ವಿಚಾರ. ಆದರೆ ಇದು ನ್ಯಾಯವಾಗಿ ಒಪ್ಪಂದವೇ ಅಲ್ಲ ಎಂತ ನಾನು ಹೇಳುತ್ತೇನೆ.

ಇನ್ನು ಎರಡನೇ ಘಟ್ಟಕ್ಕೆ ಬಂದರೆ-ಭಾಷಾವಾರು ಆಧಾರದಮೇಲೆ ಇತ್ತೀಚೆಗೆ ರಾಜ್ಯಗಳ ಪುನರ್ವಿಂಗಡಣೆಯಾದಮೇಲೆ ಈ ಮೈಸೂರು ರಾಜ್ಯಕೆ ಈ ಕೃಷ್ಣಾ ಗೋದಾವರಿ ನದಿಗಳ ನೀರಿನ ಅವಶ್ಯಕತೆ ಹೆಚ್ಚಾಗಿ ಬೇಕಾಯಿತು, ಎಂಬುದಾಗಿ ನಾವೆಲ್ಲರೂ ಅರ್ಥಮಾಡಿಕೊಂಡಿದ್ದೇವೆ. ಆದರೆ ಈಗಿನ ಮೈಸೂರು ಸರ್ಕಾರ ಎಷ್ಟರ ಮಟ್ಟಿಗೆ ಕೃಷ್ಣಾ ಗೋದಾವರಿ ನದಿಗಳ ನೀರನ್ನು ಪಡೆಯಲು ಈ ವ್ಯವಹಾರದಲ್ಲಿ ಎಷ್ಟರ ಮಟ್ಟಿಗೆ ಕೇಂದ್ರ ಸರ್ಕಾರದಮೇಲೆ ತನ್ನ ಪ್ರಭಾವ ಬೀರಿದೆ ಎಂಬುದನ್ನು ನಾವೀಗ ಸ್ವಲ್ಪ ಆಲೋಚನೆ ಮಾಡಿ ನೋಡಬೇಕಾಗಿದೆ. ಈ ದಿವಸ ಹಳೇ ಮೈಸೂರು ಭಾಗದಿಂದ

ಬರತಕ್ಕ ಕೆಲವು ಸದಸ್ಯರುಗಳಿಗೆ ಆ ಕೃಷ್ಣಾನದಿ ಎಲ್ಲಿದೆಯೋ ಗೊತ್ತಿಲ್ಲ; ಆ ಗೋದಾವರಿ ನದಿ ಎಲ್ಲಿ ಹರಿಯುತ್ತಿದೆಯೋ ಗೊತ್ತಿಲ್ಲ. ಆ ನದಿಗಳ ಒಂದು ಪೂರ್ಣ ಚಿತ್ರ ಇನ್ನೂ ಅನೇಕರ ಮನಸ್ಸಿಗೆ ಸರಿಯಾಗಿ ತಿಳಿದು ಬಂದಿಲ್ಲ. ಆದಾಗ್ಯೂ ನಾವೀದಿವಸ ಈ ನದಿಗಳ ನೀರಿನ ವಿಚಾರವಾಗಿ ಸರ್ಕಾರಕ್ಕೆ ಹೆಚ್ಚು ಒತ್ತಾಯ ಮಾಡುತ್ತಿದ್ದೇವೆ. ಆದರೆ ಆ ನದೀ ನೀರಿನ ಉಪಯೋಗ ಪಡೆಯತಕ್ಕ ಹಾಗೂ ಆ ಬಿಜಾಪುರ ಇತ್ಯಾದಿ ಜಿಲ್ಲೆಗಳಿಂದ ಬಂದಿರತಕ್ಕ ಆ ಶಾಸನ ಸಭಾ ಸದಸ್ಯರು ಏನು ಕೆಲಸ ಮಾಡಿದ್ದಾರೆಂದು ನಾನೊಂದು ಪ್ರಶ್ನೆ ಹಾಕಬೇಕಾಗಿದೆ.

ಶ್ರೀ ಆರ್. ಎಂ. ಪಾಟೀಲ್ (ಒಳಾಡಳಿತ ಸಚಿವರು).—ನಿಮಗೆ ತಿಳಿಯದಿರಬಹುದು. ಆದರೆ ಅವರು ನೀವು ಮಾಡತಕ್ಕ ಸಾಹಸಗಳಿಗಿಂತಲೂ ಹೆಚ್ಚಿನ ಕೆಲಸಗಳನ್ನು ಅವರು ಮಾಡುತ್ತಿದ್ದಾರೆ ಆ ವಿಚಾರ ನನಗೆ ಗೊತ್ತಿದೆ.

ಶ್ರೀ ಎಸ್. ಎಂ. ಕೃಷ್ಣ.—ಮಾನ್ಯ ಗೃಹ ಸಚಿವರು ಕೊಟ್ಟಂಥ ಆಶ್ವಾಸನವನ್ನು ನಾನು ಒಪ್ಪಿಕೊಳ್ಳುತ್ತೇನೆ.

ಕೃಷ್ಣಾನದಿಗೆ ಸಂಬಂಧಪಟ್ಟ ಹಾಗೆ ನಮ್ಮ ಮೈಸೂರು ಸರ್ಕಾರದವರು ಮಾಡಿರತಕ್ಕ ಯೋಜನೆಗಳೆಲ್ಲವನ್ನೂ ಕಾರ್ಯಗತ ಮಾಡಿದರೆ ಸುಮಾರು 43½ಲಕ್ಷ ಎಕರೆ ಭೂಮಿಯನ್ನು ನಾವು ತರೀ ವ್ಯವಸಾಯ (wet cultivation)ಕ್ಕೆ ತರುವುದಕ್ಕೆ ಸಾಧ್ಯವಾಗುತ್ತದೆ. ಮೈಸೂರು ಸರ್ಕಾರದವರು ಪಾರ್ಲಿಮೆಂಟ್ ಸದಸ್ಯರಿಗೆ ಕೊಟ್ಟಿರತಕ್ಕ ಮೆಮೊರಾಂಡಂನಲ್ಲಿ ವ್ಯಕ್ತಮಾಡಿದ್ದಾರೆ. ಒಂದು ಕಡೆ ಆಂಧ್ರದವರು ನಮ್ಮ ಮೇಲೆ ದಬ್ಬಾಳಿಕೆ ಇನ್ನೊಂದು ಕಡೆ ಮದ್ರಾಸ್ ರಾಜ್ಯದವರ ಒಂದು ರೀತಿಯ ಕೋರಿಕೆ, ಇವೆರಡರ ಮಧ್ಯೆ ನಮ್ಮ ಸ್ಥಿತಿ ಏನಾಗಿದೆ ಎಂದರೆ "ಮನೆಗೆ ಮಾರಿ ಪರರಿಗೆ ಉಪಕಾರಿ" ಎನ್ನುವ ನಾಣ್ಣುಡಿಯ ಹಾಗೆ ನಮ್ಮ ಸರ್ಕಾರ ವರ್ತನೆಮಾಡುತ್ತಿದೆಯೋ ಏನೋ ಎನ್ನುವ ಅನುಮಾನ ನಮ್ಮಲ್ಲಿ ಕೆಲವರಿಗೆ ಬಂದಿದೆ. ಮದ್ರಾಸ್ ನಗರಕ್ಕೆ ಕೃಷ್ಣಾನದಿಯ ನೀರನ್ನು ಕೊಡಬೇಕು ಎಂದು ಮಾನವೀಯತೆಯದೃಷ್ಟಿಯಿಂದ ನಮ್ಮ ಮುಖ್ಯಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಇವೊತ್ತು ಬೆಳಿಗ್ಗೆ ಕೂಡ ಒಂದು ಪ್ರಶ್ನೆಗೆ ಉತ್ತರವಾಗಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು; ಕೃಷ್ಣಾನದಿಯಿಂದ 15T.M. cft. ನೀರನ್ನೂ ಕೊಡುತ್ತೇವೆಂದು ಒಪ್ಪಿರುವುದಾಗಿ ಹೇಳಿದರು. ಪೆನ್ನಾರ್ ನದಿಯಿಂದ ಮದ್ರಾಸ್ ನಗರಕ್ಕೆ ನೀರನ್ನು ತೆಗೆದುಕೊಂಡು ಹೋಗುವುದಕ್ಕೆ ಏನು ಅಡ್ಡಿ ಇದೆ? 1924ನೇ ಇಸವಿಯಲ್ಲಿ ಶ್ರೀಮಾನ್ ರಾಜಗೋಪಾಲಚಾರಿಯವರು ಏನೊಂದು ಯೋಜನೆಯನ್ನು ಮಾಡಿದ್ದರೋ ಅದನ್ನು ಶ್ರೀಮಾನ್ ನಿಜಲಿಂಗಪ್ಪನವರು ಕಾರ್ಯಗತಮಾಡುವುದಕ್ಕೆ ಅನುಕೂಲ ಮಾಡಿಕೊಡುತ್ತಿದ್ದಾರೆಯೋ ಎನ್ನುವ ಪ್ರಶ್ನೆಯನ್ನೂ ಶ್ರೀಮಾನ್ ನಿಜಲಿಂಗಪ್ಪನವರಿಗೆ ಹಾಕುತ್ತೇನೆ. ಆವೊತ್ತಿನ ದಿವಸ ಪೆನ್ನಾರ್ ನದಿ ಮತ್ತು ಕೃಷ್ಣನದಿಯ ನೀರನ್ನು ತೆಗೆದುಕೊಂಡುಹೋಗಿ ಮದ್ರಾಸಿಗೆ ಕೊಡಬೇಕು ಎಂದು ಹೇಳಿದಾಗ ಆಂಧ್ರದ ಎಲ್ಲ ಶಾಸನಕಾರರೂ ಕೂಡ ರಾಜಗೋಪಾಲಚಾರಿಯವರಿಗೆ ವಿರೋಧವಾದರು. ಅವರ ಸರ್ಕಾರ ಮುಗ್ಗುರಿಸಿ ಬೀಳುವುದಕ್ಕೆ ಅದೂ ಕೂಡ ಒಂದು ವಾದವಾಗಿತ್ತು. ಇದು ರಾಜಕೀಯವೋ ಅಥವಾ ಸಣ್ಣದೃಷ್ಟಿಯೋ ಏನೋ ನನಗೆ ಅರ್ಥವಾಗುವುದಿಲ್ಲ. ಮೈಸೂರು ಸರ್ಕಾರದವರು ಇವೊತ್ತು ಒಂದು ನಿಲುವನ್ನೂ ತಳೆದಿದ್ದಾರೆ. ಆ ನಿಲುವು ಏನೆಂದರೆ ಕೃಷ್ಣಾನದಿಯ ನೀರನ್ನೂ ಮದ್ರಾಸ್ ಜನತೆಗೆ ಕುಡಿಸುತ್ತೇವೆಂದು. ನಾನು ನಮ್ಮ ಸರ್ಕಾರವನ್ನು ಕೇಳುತ್ತೇನೆ ಮೊದಲು ಕೃಷ್ಣಾನದಿಯ ನೀರಿನಿಂದ ಮೈಸೂರಿನ ಜನತೆಗೆ ಏನು ಉಪಕಾರವಾಗುತ್ತದೆಂದು ನೋಡಿಕೊಂಡು ಅನಂತರ ನಾವು ಮದ್ರಾಸಿನ ಜನರಿಗೆ ಅನುಕೂಲ ಮಾಡಿಕೊಡತಕ್ಕ ನಿಲುವನ್ನು ತಾಳಬಹುದಾಗಿತ್ತು. ಆದರೆ ಇದಕ್ಕೆ ಇಷ್ಟು ಅವಸರ ಮಾಡಿದ್ದು ಏಕೆ? ಅವಸರವಸರವಾಗಿ ಕೃಷ್ಣನದಿಯ ನೀರನ್ನು ಪರರ ಪಾಲು ಮಾಡತಕ್ಕ ನೀತಿ ನಮ್ಮ ಒಳಿತಕ್ಕೋಸ್ಕರವೇ ಅಥವಾ ಅವರ ಒಳಿತಕ್ಕೋಸ್ಕರವೇ ಎನ್ನುವುದನ್ನೂ ನಾವು ವಿಮರ್ಶೆ ಮಾಡಬೇಕು.

1951ನೇ ಇಸವಿಯ ಒಪ್ಪಂದವನ್ನು ತೆಗೆದುಕೊಂಡರೂ ಕೂಡ ಕೃಷ್ಣಾನದಿಯ ನೀರು ಕೃಷ್ಣಾ ಬೇಸಿನ್‌ನಿಂದ ಹೊರಗಡೆ ಹೋಗುವುದಕ್ಕೆ ಯಾವ ಕಾರಣವೂ ಇಲ್ಲ. ಇವೊತ್ತು ನಮ್ಮ ಪರಿಸ್ಥಿತಿ ಏನಾಗಿದೆ ಎಂದರೆ ಬೆಳಗಾಂ, ಬಿಜಾಪುರ, ಗುಲ್ಬರ್ಗ, ರಾಯಚೂರು, ಧಾರವಾಡ ಜಿಲ್ಲೆಗಳೆಲ್ಲಕ್ಕೂ ಕೂಡ ನೀರಾವರಿ ಸೌಲಭ್ಯಗಳು ಜಾಸ್ತಿಯಾಗಿ ಒದಗಿಲ್ಲ. ಬೆಳಗಾಂ ಜಿಲ್ಲೆಯಲ್ಲಿ ಸೇಕಡ 6.1 ಮಾತ್ರ ನೀರಾವರಿ ಪ್ರದೇಶವಾಗಿದೆ. ಬಿಜಾಪುರ ಜಿಲ್ಲೆಯಲ್ಲಿ ಸೇಕಡ 1.9 ಮಾತ್ರ ನೀರಾವರಿ ಪ್ರದೇಶವಾಗಿದೆ. ಗುಲ್ಬರ್ಗ ಜಿಲ್ಲೆಯಲ್ಲಿ ಸೇಕಡ 1.4 ರಾಯಚೂರು ಜಿಲ್ಲೆಯಲ್ಲಿ ಸೇಕಡ 1.2 ಮತ್ತು ಧಾರವಾಡ ಜಿಲ್ಲೆಯಲ್ಲಿ ಸೇಕಡ 2.4ರಷ್ಟು ನೀರಾವರಿ ಪ್ರದೇಶಗಳಾಗಿವೆ. ಇದಕ್ಕೆ ಪ್ರತಿಯಾಗಿ ಆಂಧ್ರಪ್ರದೇಶದ ನೆಲ್ಲೂರಿನಲ್ಲಿ 39.9 ನೀರಾವರಿ ಪ್ರದೇಶವಾಗಿದೆ.

If the Nagarjunasagar were to be completed in Andhra, in Andhra Pradesh about 87 per cent of the land will come under wet cultivation.

(ಶ್ರೀ ಎಸ್. ಎಂ. ಕೃಷ್ಣ)

Just think of the enormous difference between Mysore State and Andhra Pradesh. According to the stand of the Government of Mysore, our rightful share in Krishna water is 48 per cent. With the completion of the first phase of Nagarjunasagar Project, Andhra Pradesh will have exceeded its limit and what is the Mysore going to do about it ?

ಇವೊತ್ತು ಬೆಳಿಗ್ಗೆ ಒಂದು ಪ್ರಶ್ನೆಯನ್ನು ಮುಖ್ಯಮಂತ್ರಿಗಳಿಗೆ ಕೇಳಿದೆ. ಅವರು ನಾಗಾರ್ಜುನ ಸಾಗರವನ್ನು ಮಾಡಲಿ, ನಾವು ಮಾಡುವುದನ್ನು ಮಾಡುತ್ತೇವೆಂದು ಹೇಳಿದರು. ಏನನ್ನು ಮಾಡುತ್ತಾರೆಂದು ಕೇಳಿದೆ, ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕೃಷ್ಣನದಿಗೆ ಸಂಬಂಧಪಟ್ಟಹಾಗೆ ಕೇವಲ ಒಂದೇ ಒಂದು ಸಣ್ಣ ಯೋಜನೆಯನ್ನು ನಾವು ಹಾಕಿಕೊಂಡಿದ್ದೇವೆ. ಅದು ಮಲಪ್ರಬ ಯೋಜನೆ. ಅದರ ಕೆಲಸ ಇನ್ನೂ ಶುರುವಾಗಿಲ್ಲ. ಮೂರನೆಯ ಪಂಚವಾರ್ಷಿಕ ಯೋಜನೆಯ ಮೂರನೇ ವರ್ಷದ ಆರಂಭದಲ್ಲಿ ನಾವಿದ್ದೇವೆ. ಮಲಪ್ರಭ ಯೋಜನೆಯನ್ನು ಕಾರ್ಯರೂಪಕ್ಕೆ ತಂದರೆ ಕೇವಲ ಎರಡುಲಕ್ಷ ನಲವತ್ತು ಸಾವಿರ ಎಕರೆ ಭೂಮಿಯನ್ನು ನಾವು wet cultivationಗೆ ತರಬಹುದು. ಇನ್ನೂ upper Krishna Project ಮೂರನೇ ಯೋಜನೆಯಲ್ಲಿ ಸೇರಿಲ್ಲ. ಅದು ಯಾವಾಗ ಸೇರುತ್ತದೆಯೋ ಗೊತ್ತಿಲ್ಲ. ಮುಖ್ಯಮಂತ್ರಿಗಳು ಒಂದು ಭಾಷಣದಲ್ಲಿ ಹೇಳಿದ್ದಾರೆ, ಕೆಲವು ದೊಡ್ಡ ದೊಡ್ಡ ನೀರಾವರಿ ಯೋಜನೆಗಳಿಗೆ ಕೂಡ ಜನರಿಂದ ಹಣವನ್ನು ವಸೂಲ್ಮಾಡಿ ನಾವು ಅವುಗಳನ್ನು ಪೂರೈಸುತ್ತೇವೆ ಎಂದು ......

Mr. DEPUTY SPEAKER.—Your time is up.

Sri S.M. KRISHNA.—Yesterday the Leader of the Opposition could not complete his speech because of some differences in timiags. So, I request you, if you please give me that time, I can make a few more points on this. I want about 15 minutes.

Mr. DEPUTY SPEAKER.—Please try to finish in 5 to 8 minutes.

ಶ್ರೀ ಎಸ್. ಎಂ. ಕೃಷ್ಣ.—ಕೃಷ್ಣ ನದಿಯ ಪಾತ್ರದಲ್ಲಿ ದೊಡ್ಡ ದೊಡ್ಡ ಯೋಜನೆಗಳನ್ನು ಪೂರೈಕೆ ಮಾಡಬೇಕಾದರೆ ಜನಗಳಿಂದ ದುಡ್ಡನ್ನು ಎತ್ತಿ ಪೂರೈಸುತ್ತೇವೆನ್ನುವ ಧೋರಣೆ ಏನಿದೆ ಅದು impracticable.

To speak pragmatically, the Government of Mysore will do well to impress on the Central Government the urgency of the Upper Krishna Project and I am sure the Chief Minister has repeatedly assured this House that he is going to do something about this.

ಕೃಷ್ಣ ನದಿಯ ವ್ಯವಹಾರದ ಬಗ್ಗೆ ನಮ್ಮ ಮೈಸೂರು ಸರ್ಕಾರದವರು ಕೇಂದ್ರ ಸರ್ಕಾರಕ್ಕೆ ಒಂದುಮೆಮೊರಾಡಂ ಕೊಡುತ್ತೇವೆಂದು ಹೇಳಿದರು. ಗುಲ್ಹಾಟಿ ಕಮಿಷನವರು—It was a fact finding body—ಯಾವ ಯಾವ ಸರ್ಕಾರಕ್ಕೆ ಯಾವ ಯಾವ ರಾಜ್ಯಕ್ಕೆ ಎಷ್ಟೆಷ್ಟರಮಟ್ಟಿಗೆ ನೀರಿನ ಅನುಕೂಲವನ್ನು ಒದಗಿಸಿ ಕೊಡಬೇಕು, ಅವರ ಹಕ್ಕುಗಳೇನು, ಎಂಬ ಎಲ್ಲ ವಿಚಾರಗಳನ್ನೂ ಕೂಡ ಗುಲ್ಹಾಟಿ ಕಮಿಷನವರು ಅವರ ವರದಿಯಲ್ಲಿ ನಿರೂಪಣೆ ಮಾಡಿದ್ದಾರೆ. ಇವೊತ್ತು ನಮ್ಮ ಸರ್ಕಾರ ಕೇಂದ್ರಸರ್ಕಾರವನ್ನು ಕೇಳಬೇಕಾಗಿದ್ದರೂ ಕೂಡ ಗುಲ್ಹಾಟಿ ಕಮಿಷನವರು ಏನೇನು ಶಿಫಾರಸುಗಳನ್ನು ಮಾಡಿದ್ದಾರೆಯೋ ಅವುಗಳೆಲ್ಲವನ್ನೂ ಕೂಡ ಸಂಬಂಧಪಟ್ಟ ಸರ್ಕಾರದವರೊಡನೆ ಆಲೋಚನೆಮಾಡಿ, ನಮ್ಮ ರಾಜ್ಯದಲ್ಲಿರುವ ತಜ್ಞರನ್ನು ಕೂಡ ಈ ರಾಜಕೀಯ ನಾಯಕರು ತಮ್ಮ ನಂಬಿಕೆಗೆ ತೆಗೆದುಕೊಳ್ಳಬೇಕಾಗಿದೆ. ಇವೊತ್ತು ನಮ್ಮ ಸರ್ಕಾರದವರು ತಾಂತ್ರಿಕ ನಿಪುಣರು ಯಾರಿದ್ದಾರೆ ಅವರನ್ನು ತಮ್ಮ ನಂಬಿಕೆಗೆ ತೆಗೆದುಕೊಳ್ಳಲಿಲ್ಲವೆನ್ನತಕ್ಕ ಭಾವನೆ ನಮಗೆ ತಾನೇ ತಾನಾಗಿ ಬರುತ್ತಿದೆ.

ಕಾವೇರಿನದಿ ನೀರಿನ ವಿಚಾರ. 1924ನೇ ಇಸವಿಯಿಂದೀಚೆಗೆ ನಮ್ಮ ಸಂಸ್ಥಾನದಲ್ಲಿ ಕೃಷ್ಣರಾಜಸಾಗರದಿಂದ ಎಷ್ಟು ನೀರನ್ನು ತೆಗೆದುಕೊಳ್ಳುತ್ತಿದ್ದೇವೆಯೋ ಅದಕ್ಕಿಂತ ಜಾಸ್ತಿ ನೀರನ್ನು ತೆಗೆದುಕೊಳ್ಳಲಿಲ್ಲ. ನಾವು ಏನೊಂದು ಒಪ್ಪಂದವನ್ನು ಮದ್ರಾಸ್ ಸರ್ಕಾರದ ಜೊತೆಯಲ್ಲಿ ಮಾಡಿಕೊಂಡೆವೋ ಅದು ಇನ್ನು ಹಲವಾರು ವರ್ಷಗಳು force ನಲ್ಲಿರುತ್ತದೆ. ಹಾರಂಗಿ, ಕಂಬದಕಡ,

ಹೇಮಾವತಿ ಪ್ರಾಜೆಕ್ಟ್‌ಗಳು ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿವೆ. ಹಾರಂಗಿ ಮತ್ತು ಕಂಬದಕಡ ಈ ಪ್ರಾಜೆಕ್ಟ್‌ಗಳ ಪ್ರಶ್ನೆ ಕೇವಲ technical question ಆಗದೆ ಅದು ರಾಜಕೀಯ ಪ್ರಶ್ನೆಯಾಗಿದೆ ಎನ್ನುವುದನ್ನೂ ಕಳೆದ ವರ್ಷವೇ ಈ ಸಭೆಯಲ್ಲಿ ಸಭಾಸದರ ಗಮನವನ್ನು ಸೆಳೆದೆವು. ಈ ಹೊತ್ತು ಏನಾಗಿದೆ ಎಂದರೆ The policy of indecision, the policy of changing the location of every project with the change of every Ministry is cutting at the root of the project ; what is the true of Krishna is also true of the Cauvery waters.

ಒಂದು ಪ್ರಶ್ನೆ........

The Policy of indecision, the policy of trying to change the location of some of these projects with the change of the Ministries, is hitting at the very root........

11.00 A.M.

ಒಂದು ಪ್ರಶ್ನೆ ನಮ್ಮಲ್ಲಿ ಉಂಟಾಗಿದೆ ಅದೇನೆಂದರೆ, ನಮ್ಮ ರಾಜ್ಯದಲ್ಲಿ ಕೇಂದ್ರ ಸರಕಾರದ ಕರ್ತವ್ಯವನ್ನು ಮತ್ತು ಗಮನವನ್ನು ಸೆಳೆಯತಕ್ಕ ರಾಷ್ಟ್ರೀಯ ನಾಯಕರ ಅಭಾವವೋ ಏನೋ? ಕೇಂದ್ರ ಸರಕಾರ ನಮ್ಮ ಬಗ್ಗೆ ತಳೆದಿರುವ ಜಡಮನೋಭಾವಕ್ಕೆ ಕಾರಣವೋ ಏನೋ, ನನಗೆ ತಿಳಿಯದು. ಕೇಂದ್ರ ಸರಕಾರದವರು ಮಾತ್ರ ನಮ್ಮ ರಾಜ್ಯದ ಬಗ್ಗೆ ಮಲತಾಯಿಯ ಭಾವನೆಯನ್ನವಲಂಬಿಸಿದ್ದಾರೆ. ಉದಾಹರಣೆಯಾಗಿ ನಮ್ಮ ದೇಶದ ಇಂಡಸ್ಟ್ರಿಯಲ್ ಕನ್‌ಸರ್ನ್ಸ್‌ಗಳನ್ನು ನೋಡಿದರೆ ಗೊತ್ತಾಗುತ್ತದೆ. ಕಳೆದ ಹತ್ತು ವರ್ಷಗಳಿಂದ ಮೈಸೂರು ರಾಜ್ಯಕ್ಕೆ ಸೇರಿದವರೆ ಆದ ಒಬ್ಬರು ಕೇಂದ್ರ ಸರಕಾರದಲ್ಲಿ ಇಂಡಸ್ಟ್ರೀಸ್‌ಗೆ ಸೇರಿದ ಮಂತ್ರಿಗಳಾಗಿದ್ದಾರೆ. ಹಾಗಿದ್ದರೂ ಕೂಡ Large Scale Industries ಗಳ ಪ್ರಶ್ನೆ ಹಾಗಿರಲಿ; ಬೇರೆ ಯಾವ ಇಂಡಸ್ಟ್ರಿಗಳೂ ಹೊಸದಾಗಿ ಇಲ್ಲಿ ಆಗಲಿಲ್ಲ. ಫರ್ಟಿಲೈಸರ್ಸ್ ಫ್ಯಾಕ್ಟರಿಯಾಗುತ್ತಲೇ ಇದೆ. ಅಲ್ಯೂಮಿನಿಯಂ ಫ್ಯಾಕ್ಟರಿ ಆಗುತ್ತೆ. ಅದಕ್ಕಾಗಿ ಲೈಸೆನ್ಸು ಬರುತ್ತಿದೆ ಎಂದು ಹೀಗೆ ಮುಂದೆ ಹೋಗುತ್ತಲೇ ಇದೆ. ನಾನು ಚಿಕ್ಕ ಹುಡುಗನಾಗಿದ್ದಾಗ ಜಾತ್ರೆಗಳಿಗೆ ಹೋಗುತ್ತಿದ್ದೆ. ಆಗ ಅಲ್ಲಿ ಕೆಲವರು ಒಂದು ಪೆಟ್ಟಿಗೆಯಂತಿರುವ (ಇದರ ಹೆಸರು ಗೊತ್ತಿಲ್ಲ) ಒಂದು ಪೆಟ್ಟಿಗೆಯಲ್ಲಿ ಕಂಡಿಯನ್ನು ಮಾಡಿ ಜನಕ್ಕೆ ಕಂಡಿಯಲ್ಲಿ ನೋಡಿ ಇಲ್ಲಿ ಅಮೆರಿಕಾ ಕಾಣುತ್ತೆ, ಇಲ್ಲಿ ಕಲ್ಕತ್ತಾ ಕಾಣುತ್ತದೆ, ಇಲ್ಲಿ ಇನ್ನೊಂದೂರು ಕಾಣುತ್ತಿದೆ ಎಂದು ತೋರಿಸುತ್ತಿದ್ದರು. ಹಾಗೆ ನಮ್ಮ ಮೈಸೂರು ರಾಜ್ಯ ಏನಾಗಿದೆ ಎಂದರೆ ಕಳೆದೆಷ್ಟೋ ವರ್ಷಗಳಿಂದ ಮಂಗಳೂರು ಬಂದರಾಗುತ್ತದೆ ಎಂದಿದ್ದುದು ಈಗ ಕಾರವಾರಕ್ಕೆ ಬಂದಿದೆ. ಅಲ್ಯೂಮಿನಿಯಂ ಫ್ಯಾಕ್ಟರಿಗಾಗಿ ಸ್ಯಾಂಕ್ಷನ್ನು ಬಂದು ಇನ್ನೂ ಲೈಸೆನ್ಸು ಸಿಗುತ್ತಿದೆ. ಇದೇ ರೀತಿ ಎಲ್ಲ ವ್ಯವಹಾರದಲ್ಲಿಯೂ ನಮ್ಮ ಸರಕಾರದ ನೀತಿ ದುರ್ಬಲವಾಗಿದೆ. ಇದನ್ನು ನೋಡಿದರ ಸಾಕಾದಷ್ಟು ಶಕ್ತಿ ನಮ್ಮ ಸರಕಾರಕ್ಕಿಲ್ಲವೇನೋ ಎನ್ನುವುದು ಇದರಿಂದ ವಿದಿತವಾಗುತ್ತದೆ.

ಆಮೇಲೆ ನಿನ್ನೆ ತಾನೆ ನಮ್ಮ ಮಾನ್ಯ ಕೈಗಾರಿಕಾ ಸಚಿವರು ಮೇಲ್ಮನೆಯಲ್ಲಿ ಸಿಮೆಂಟಿನ ಬಗ್ಗೆ ಒಂದು ವಿಚಾರವನ್ನು ಹೇಳಿದರು. ನಮ್ಮ ದೇಶಕ್ಕಾಗಿ ಸಿಮೆಂಟು ಕೋಟಾ ಸುಮಾರು 65,000 ಟನ್ನುಗಳಷ್ಟು ಎಂದಿದ್ದುದನ್ನು ತಾತ್ಕಾಲಿಕ ಪರಿಸ್ಥಿತಿಗಾಗಿ ಈ ಸಿಮೆಂಟಿನ ಕೋಟಾವನ್ನು 45,000 ಟನ್ನುಗಳಷ್ಟಕ್ಕೆ ಇಳಿಸಿದ್ದಾರೆಂದು ತಿಳಿಸಿದ್ದಾರೆ. ಆದರೆ ಮದರಾಸು ಸ್ಟೇಟಿಗೆ ಕೊಟ್ಟಿರುವ ಸಿಮೆಂಟಿನ ಕೋಟಾ ಎಷ್ಟಿದೆ ಎಂದರೆ 1,20,000 ಟನ್ನುಗಳಷ್ಟು ಕೊಟ್ಟಿದ್ದರೆ ಮೈಸೂರು ರಾಜ್ಯಕ್ಕೆಲ್ಲಾ 45,000 ಟನ್ನುಗಳಷ್ಟು ಮಾತ್ರ ಇದೆ ಎಂದರೆ ಕೇಂದ್ರ ಸರಕಾರದ ಮೇಲೆ ಪ್ರಭಾವ ಬೀರಲು ಮೈಸೂರು ರಾಜ್ಯ ಎಷ್ಟು ದುರ್ಬಲವಾಗಿದೆ, ಎಷ್ಟು ಶಕ್ತಿ ಹೀನವಾಗಿದೆ ಎನ್ನುವುದನ್ನು ಅರ್ಥಮಾಡಿಕೊಳ್ಳಬಹುದು.

ಇನ್ನು ನಮ್ಮ ಮೈಸೂರು ಸರಕಾರದ ವಿದ್ಯಾಸಚಿವರ ಶಾಖೆಯಲ್ಲಿ ನಡೆಯುತಕ್ಕ ವೈಪರೀತ್ಯಗಳ ಬಗ್ಗೆ ಹೇಳಲು ಈಗ ಕಾಲಾವಕಾಶವಿಲ್ಲದುದರಿಂದ ಆ ವಿಷಯದ ಬಗ್ಗೆ ಚರ್ಚೆ ಮಾಡುವಾಗ ಇದನ್ನು ಅಲ್ಲಿ ಹೇಳಬಹುದಾಗಿದೆ.

ಆದರೆ ಈಗ ಮಾನ್ಯ ಮುಖ್ಯಮಂತ್ರಿಗಳು ಇಲ್ಲದ್ದಾರೆ. ನಾನು ಅವರನ್ನು ಕಳಕಳಿಯಿಂದ ಪ್ರಾರ್ಥನೆ ಮಾಡುವುದು, ಯಾವ ವಿಷಯದಲ್ಲೇ ಆಗಲಿ ಸರಕಾರದ ಪರವಾಗಿ ಮಂತ್ರಿಗಳು ಹೇಳಿಕೆ ಕೊಡತಕ್ಕ ರೀತಿನೀತಿಗಳ ಬಗ್ಗೆ ಸ್ವಲ್ಪ ತೀವ್ರತರವಾದ ದರ್ಪದ ದೃಷ್ಟಿಯಿಂದ ನಡೆಯಬೇಕಾದುದು

(ಶ್ರೀ ಎಸ್ ಎಂ. ಕೃಷ್ಣ)

ಅಗತ್ಯ ಎಂದು ಸಲಹೆ ಮಾಡುತ್ತೇವೆ. ನಮ್ಮ ವಿದ್ಯಾಸಚಿವರು ಎಲ್ಲಿ ನಿಂತು ಮಾತನಾಡಿದರೂ ಅದನ್ನು ಜನ ಕಿವಿಗೊಟ್ಟು ಏನು ಹೇಳುತ್ತಾರೋ ಎಂದು ಕೇಳಬೇಕೆಂಬ ಮನೋಭಾವನೆ ಬಂದಿದೆ. ಇವೊತ್ತಿನ ಸಾಯಂಕಾಲ ಮಾನ್ಯ ವಿದ್ಯಾಮಂತ್ರಿಗಳ ಭಾಷಣ ಟೌನ್‌ಹಾಲನಲ್ಲಿ ನಡೆಯುವು ದಾಗಿದೆ. ಅದನ್ನು ನಾಳೆ ದಿನ ಬೆಳಗ್ಗೆ ವೃತ್ತಾಂತ ಪತ್ರಿಕೆಗಳಲ್ಲಿ ನೋಡಬಹುದು. ಮಂತ್ರಿ ಮಂಡಲ ಒಂದು ಮುಖ್ಯ ಪ್ರಶ್ನೆಯನ್ನು ಇತ್ಯರ್ಥ ಮಾಡುವಾಗ ಅದಕ್ಕೆ ಸಂಬಂಧಪಟ್ಟ ಹದಿನೈದು ಜನ ಸಚಿವರುಗಳೂ ಹದಿನೈದು ತರಹದ ಹೇಳಿಕೆಗಳನ್ನು ಕೊಡುತ್ತಿದ್ದರೆ, ಪ್ರಭುತ್ವವನ್ನು ನಿಮ ಗೊಪ್ಪಿಸಿರುವ ಶಾಸನ ಸದಸ್ಯರುಗಳಿಗೆ ಮರ್ಯಾದೆ ಬರುತ್ತದೆಯೇ ಎನ್ನುವ ಪ್ರಶ್ನೆಯು ಬರುತ್ತದೆ, ಎನ್ನುವುದನ್ನು ಮುಖ್ಯಮಂತ್ರಿಗಳು ಗಮನಕ್ಕೆ ತಗೆದುಕೊಳ್ಳಬೇಕು.

ಇವೊತ್ತು ಡಿಫೆನ್ಸು ಫಂಡಿನ ಬಗ್ಗೆ ಒಂದು ಮಾತನ್ನು ಈ ಸಭೆಯಲ್ಲಿ ಅರಿಕೆ ಮಾಡಿಕೊಳ್ಳ ಬೇಕಾಗಿದೆ. ಜನ ಸ್ವಇಚ್ಛೆಯಿಂದ ಮುಂದೆ ಬಂದು ದೇಶ ರಕ್ಷಣೆಯಲ್ಲಿ ಮಾಡುತ್ತಿದ್ದಾರೆನ್ನುವುದು ಎಲ್ಲರಿಗೂ ಗೊತ್ತು. ಆದರೆ ಕೆಲವು ಜಿಲ್ಲೆಗಳಲ್ಲಿ ನಿರ್ಬಂಧಗೊಳಿಸಿ ಈ ಫಂಡನ್ನು ವಸೂಲು ಮಾಡು ತ್ತಿದ್ದಾರೆಂದು ನಮ್ಮ ನಾಯಕರಾದ ಶ್ರೀಮಾನ್ ಶಿವಪ್ಪನವರು ನಿನ್ನೆ ಸೂಕ್ಷ್ಮವಾಗಿ ಹೇಳಿದರು. ಸರಕಾರ ತುರ್ತಿನ ಪರಿಸ್ಥಿತಿ ಎಂದು ಹೇಳಿ ಈ ನಿಧಿಗಾಗಿ ಸಹಾಯ ಮಾಡುವುದರ ಬಗ್ಗೆ ಕೆಲವು ಜಿಲ್ಲೆಗಳಿಂದ ನಮಗೆ ಬಂದಿರತಕ್ಕ ವರ್ತಮಾನವನ್ನು ನೋಡಿದರೆ, ನಮಗೆ ಬಹಳ ವ್ಯಸನವಾಗು ತ್ತಿದೆ. ಒಬ್ಬರು ಜಿಲ್ಲಾಧಿಕಾರಿಗಳು ನಿರ್ಬಂಧವಾಗಿ ಕೆಲವು ಕಡೆ ಸಿಮೆಂಟು ಮೂಟೆ ಕೊಡುವಾಗ ಒಂದು ಮೂಟೆಗೆ ಎರಡು ರೂಪಾಯಿನಂತೆ ಕೊಡಬೇಕೆಂದು ಕಡ್ಡಾಯವಾಗಿ ವಸೂಲು ಮಾಡು ತ್ತಿದ್ದಾರೆ. ಚಿತ್ರದುರ್ಗದ ಜಿಲ್ಲಾಧಿಕಾರಿಗಳು, ದಾವಣಗೆರೆಗೆ ಹೋಗಿ ಅಲ್ಲಿರುವ ಜನರಲ್ಲಿ ಇಷ್ಟಿಷ್ಟೇ ಕೊಡಬೇಕೆಂದು ಅವರನ್ನು ಏಕವಚನದಿಂದ ದರ್ಪದಿಂದ ನಿರ್ಬಂಧಪಡಿಸುತ್ತಿದ್ದಾರೆ.

ಶ್ರೀ ಎಸ್. ನಿಜಲಿಂಗಪ್ಪ.—ಏನಾದರೂ ತಿಳಿದು ಹೇಳುತ್ತಿದ್ದೀರೋ ಇಲ್ಲವೇ ಬರೀ ಊಹೆಯ ಮೇಲೆ ಹೇಳುತ್ತಿದ್ದೀರೋ ?

ಶ್ರೀ ಎಸ್. ಎಂ. ಕೃಷ್ಣ.—ಊಹೆಯ ಮೇಲೆ ಹೇಳುತ್ತಿಲ್ಲ. ಚಿತ್ರದುರ್ಗದಿಂದ ಬಂದಿರುವ ಸದಸ್ಯರು ಗಳು ಈ ಸಭೆಯಲ್ಲಿ ಉಪಸ್ಥಿತರಿದ್ದಾರೆ. ವಿರೋಧಪಕ್ಷದಲ್ಲೂ ಇದ್ದಾರೆ ನಮಗೆ ಬಂದಿರುವ ವರದಿಗಳ ಆಧಾರದ ಮೇಲೆಯೇ ಈ ದಿವಸ ಜವಾಬ್ದಾರಿಯುತವಾಗಿ ಈ ಆಪಾದನೆಯನ್ನು ಮಾಡುತ್ತಿದ್ದೇನೆ. ಆಪಾದನೆ ನಿಜವೇ ಇಲ್ಲವೇ ಎನ್ನುವುದನ್ನು ಇತ್ಯರ್ಥ ಮಾಡವುದನ್ನು ನಾನು ತಮಗೇ ಬಿಟ್ಟಿದ್ದೇನೆ. ನಾನು ಕೇಳುವುದು ಇದಕ್ಕೆ ಬದಲಾಗಿ ಇವೊತ್ತಿನ ದಿವಸ ಯೋಗ್ಯತೆಗೆ ತಕ್ಕಂತೆ ಸಂಪಾದನೆಗೆ ತಕ್ಕ ಹಾಗೆ ಸರಾಸರಿ ಇಷ್ಟು ತೆರಿಗೆ ಎಂದು ಹಾಗೆ ವಿಧಿಸಿದರೆ ಜನ ಕೊಡುವುದಕ್ಕೆ ತಯಾರಾಗಿದ್ದಾರೆ. ಆದರೆ ಈ ನಿರ್ಬಂಧಕ್ಕೊಳಗಾಗಿ ರಕ್ಷಣಾನಿಧಿಯನ್ನು ವಸೂಲು ಮಾಡುವುದನ್ನು ಬಿಡಬೇಕೆಂದು ಹೇಳು ತ್ತೇನೆ.

ಇಷ್ಟು ಹೇಳಿ ರಾಜ್ಯಪಾಲರ ಭಾಷಣ ನಿಸ್ಸಾರವಾಗಿದೆ ಮತ್ತು ಜನರಲ್ಲಿ ತಮ್ಮ ಜೀವನವನ್ನು ಸ್ಫೂರ್ತಿ ಮಾಡುವಂತಹ ದಾರಿಯನ್ನು ಹರಡುವುದರಲ್ಲಿ ವಿಫಲವಾಗಿದೆ ಎಂದು ಹೇಳಿ ಈ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎ. ಜಿ. ದೊಡ್ಡಮೇಟಿ (ರೋಣ).—ಸ್ವಾಮೀ, ರಾಜ್ಯಪಾಲರ ವಂದನಾ ನಿರ್ಣಯಕ್ಕೆ ಬೆಂಬಲ ಕೊಡುತ್ತಾ ಈ ಸಮಯದಲ್ಲಿ ಕೆಲವು ಮಾತುಗಳನ್ನು ಹೇಳಲು ಇಚ್ಛೆಪಡುತ್ತೇನೆ. ಚೈನಾ ದೇಶದವರು ನಮ್ಮ ಮೇಲೆ ಧಾಳಿ ಮಾಡಿದ್ದಾರೆ. ಅದಕ್ಕೆ ಕೆಲವು ಬೇರೆ ಕಾರಣಗಳೂ ಇರಬಹುದು. ಈ ವಿಶ್ವದಲ್ಲಿ ಪ್ರತಿಯೊಂದು ಕಡೆಯಲ್ಲಿಯೂ ಯುದ್ಧ ನಡೆಯಲು ಆ ಮೂಲಾಗ್ರವಾದ ಕೆಲವು ಕಾರಣ ಗಳಿರಬಹುದು ಅಂತಹ ಶಾಸ್ತ್ರೀಯವಾದ ಕ್ರಮಗಳನ್ನು ನಾವು ಸಮಗ್ರವಾಗಿ ಅರಿಯಬೇಕಾಗಿದೆ. ಕೆಲವು ಶಾಶ್ವತವಾದ ಕಾರ್ಯಕ್ರಮಗಳನ್ನೂ ಅನುಸರಿಸಬೇಕಾಗಿದೆ. ಚೈನಾದ ಧಾಳಿಯನ್ನು ಎದುರಿಸಲು ಬಂದೂಕಗಳಿಂದ ಅಥವಾ ಸೈನಿಕರ ಬಲದಿಂದ ಅಥವಾ ಕ್ಷಿಪಣಿಗಳಿಂದ ಸಾಧಿಸುವುದೇ ಮಹತ್ವದ್ದು ಎಂದು ತಿಳಿದಿದ್ದರೆ ಅದು ಸರಿಯಾದ ಹಾದಿಯಲ್ಲ. ಇದಕ್ಕೂ ಪೂರ್ವದಲ್ಲಿ ದೃಢವಾದ ನಿರ್ಧಾರ ಮತ್ತು ರಾಷ್ಟ್ರಾಭಿಮಾನದಲ್ಲಿ ದೃಢವಾದ ನಂಬಿಕೆ ಇರುವಂತಹವರು ಈ ಧಾಳಿಯ ಹಿನ್ನೆಲೆ ಯನ್ನು ಸೂಕ್ಷ್ಮವಾಗಿ ವಿಚಾರ ಮಾಡಬೇಕು. ಚೀಣೀಯರ ಧಾಳಿಯಿಂದ ಯಾವ ಮನುಷ್ಯನ ವ್ಯವ ಹಾರದಲ್ಲೇ ಆಗಲೀ, ಆಡಳಿತದ ವ್ಯವಹಾರದಲ್ಲೇ ಆಗಲಿ, ಜಾಗೃತಿ ಗೊಳಿಸುತ್ತಿರುವ ಮತ್ತು ಜನರು ತಮ್ಮ ದೌರ್ಬಲ್ಯವನ್ನು ತಿರುಗಿಸಲು ಆಡಳಿತದ ಅಧಿಕಾರಿಗಳಲ್ಲಾಗಲೀ ಪರದೇಶಗಳಲ್ಲಿರುವಂತೆ ಇಲ್ಲಿಯೂ ದೌರ್ಬಲ್ಯದ ವಿಚಾರವಿದೆಯೇ ಎನ್ನುವುದನ್ನು ಚೆನ್ನಾಗಿ ವಿಚಾರ ಮಾಡಬೇಕಾಗಿದೆ. ಇದನ್ನು ಮುಖ್ಯವಾಗಿ ಎದುರಿಸಲು ನಮ್ಮ ಸಮಾಜದಲ್ಲಿ ಅನೇಕ ಬಗೆಯ ಲೋಪದೋಷಗಳಿವೆ. ಆ

ಲೋಪದೋಷಗಳನ್ನು ನಿರ್ಮೂಲ ಮಾಡಲು ಸಮಾಜದಲ್ಲಿ, ಆಡಳಿತದಲ್ಲಿ, ಭ್ರಷ್ಟಾಚಾರದ ನಿರ್ಮೂಲ ಮಾಡಬೇಕು. ಇಂತಹ ಮುಖ್ಯವಾದ ದೌರ್ಬಲ್ಯವನ್ನು ನಾವು ಸಮಾಜದಲ್ಲಿ ಮತ್ತು ಆಡಳಿತದಲ್ಲಿ. ಮತ್ತು ಎಲ್ಲೆಲ್ಲಿಯೂ ತಲೆ ಎತ್ತಿರುವ ಭ್ರಷ್ಟಾಚಾರದ ನಿರ್ಮೂಲನೆಯನ್ನು ಮಾಡಬೇಕು. ಇದರಲ್ಲಿ ಕೇವಲ ಅಧಿಕಾರಿಗಳಲ್ಲೇ ಮಾಡಬೇಕೆನ್ನುವುದು ಸರಿಯಾದ ಮಾತಲ್ಲ. ಇದಕ್ಕೆ ನಮ್ಮಂತಹ ಸಾರ್ವಜನಿಕ ಕಾರ್ಯಕರ್ತರು ಬಹುಮಟ್ಟಿಗೆ ನೆರವಾಗುತ್ತಿದ್ದಾರೆ. ಭ್ರಷ್ಟಾಚಾರದ ನಿರ್ಮೂಲನೆ ಕೇವಲ ಆಡಳಿತದೊಂದರಲ್ಲೇ ಅಲ್ಲ. ರಾಜಕೀಯ ಕಾರ್ಯಕರ್ತರಲ್ಲಿಯೂ ಸಾಕಷ್ಟು ಇದೆ. ಅನೇಕ ಮಂದಿ ರಾಜಕೀಯ ಕಾರ್ಯಕರ್ತರು ಸರಕಾರಿ ಅಧಿಕಾರಿಗಳ ಮೇಲೆ ಪ್ರಭಾವ ಬೀರಲು ಪ್ರಯತ್ನಿಸುತ್ತಿದ್ದಾರೆ, ಅದು ಪ್ರಬಲವಾಗಿ ನಡೆಯುತ್ತಲೂ ಇದೆ. ಅಂತಹ ಪ್ರಯತ್ನವನ್ನು ನಾವು ಸರಿಯಾದ ರೀತಿಯಲ್ಲಿ ನಿರ್ಬಂಧಗೊಳಿಸದಿದ್ದರೆ ನಾವು ಆಡಳಿತದ ಗುರಿಯನ್ನು ಸಾಧಿಸಿದಂತಾಗುವುದಿಲ್ಲ. ಈ ದೇಶದ ಸಮಾಜದಲ್ಲಿರುವ ಕಾರ್ಯಕರ್ತರಲ್ಲಿರುವ ಪ್ರಕ್ಷೋಭೆ ಮತ್ತು ದ್ವೇಷಗಳ ಮನೋಭಾವನೆಯನ್ನು ತಪ್ಪಿಸದಿದ್ದರೆ ಅದಕ್ಕೆ ಆಶ್ಚರ್ಯಪಡಬೇಕಾದ ಕಾರಣವಿಲ್ಲ.

ಲಂಚ ನಿರೋಧ ಪ್ರಕರಣದ ವಿಷಯದಲ್ಲಿ ಕೆಲವೊಂದು ಕಾನೂನುಗಳನ್ನು ಮಾಡಿದ್ದಾರೆ. ಪೀನಲ್‌ಕೋಡಿನ 163ನೇ ಸೆಕ್ಷನ್ ಪ್ರಕಾರ 1947ನೇ ಇಸವಿಯಲ್ಲಿ ಲಂಚ ನಿರೋಧ ಪ್ರಕರಣಕ್ಕೆ ಸಂಬಂಧಪಟ್ಟ ಒಂದು ಕಾಯಿದೆ ಪಾಸಾಗಿದೆ. ಅದನ್ನು ಈಗ ಆಚರಣೆಗೆ ತರಲಾಗಿದೆ. ಇದರ ಪರಿಣಾಮ ದೇಶದಲ್ಲಿ ಕೆಲವು ಮಟ್ಟಿಗೆ ಲಾಭ ಆಗಬಹುದು. ಆದರೂ ಕೂಡ ರಾಜಕೀಯ ಭ್ರಷ್ಟಾಚಾರ ದೇಶದಲ್ಲಿ ಹೆಚ್ಚಾಗಿದೆ. ಈ ಬಗ್ಗೆ ಪರಿಶೀಲನೆ ಮಾಡಲು ಕೇಂದ್ರ ಸರ್ಕಾರದವರು ಸಂತಾನಂ ಕಮಿಟಿ ಎಂದು ಒಂದು ಕಮಿಟಿಯನ್ನು ನೇಮಕ ಮಾಡಿದರು. ಆ ಕಮಿಟಿಯವರು ಈಗಾಗಲೇ ಕೇಂದ್ರ ಸರ್ಕಾರಕ್ಕೆ ತಮ್ಮ ವರದಿಯನ್ನು ಕೊಟ್ಟಿದ್ದಾರೆ. ಆ ವರದಿಯಲ್ಲಿ ಭಾರತ ಸಂವಿಧಾನದ 311ನೇ ಕಲಮ್‌ಅನ್ನು ತಿದ್ದುಪಡಿ ಮಾಡಬೇಕು ಎನ್ನುವ ಒಂದು ಸೂಚನೆಯನ್ನು ಅದು ಒಳಗೊಂಡಿದೆ. ಆ ವರದಿ ಇನ್ನೂ ಪ್ರಸಿದ್ಧವಾಗಿಲ್ಲ. ಅದು ಪ್ರಸಿದ್ಧವಾದ ನಂತರ ಅದನ್ನು ನಮ್ಮ ರಾಜ್ಯ ಸರ್ಕಾರದವರು ತರಿಸಿಕೊಂಡು ಅದರಲ್ಲಿ ಏನೇನು ಸಲಹೆಗಳನ್ನು ಅವರು ಮಾಡಿದ್ದಾರೆಯೋ ಅವುಗಳನ್ನು ನಮ್ಮ ರಾಜ್ಯದಲ್ಲಿ ಕಳಕಳಿಯಿಂದ ವಿಚಾರ ಮಾಡಬೇಕೆಂದು ಅನೇಕ ಜನಗಳು ಹೇಳುತ್ತಿದ್ದಾರೆ. ಈಗ ಅದರ ಸುಖ ಸೌಲಭ್ಯಗಳು ಏನಿದ್ದರೂ ಕೆಲವು ಗುಂಪಿನವರಿಗೆ, ಕೇವಲ ರಾಜಕೀಯ ಮುಖಂಡರಿಗೆ ಮಾತ್ರ ಸಿಕ್ಕುತ್ತಿದೆ. ಈಗ ನಮ್ಮ ದೇಶದಲ್ಲಿ ಭ್ರಷ್ಟಾಚಾರ ನಡೆಯುವುದಕ್ಕೆ ಎರಡು ಮುಖಗಳಿವೆ. ಅಧಿಕಾರಿಗಳದು ಒಂದು ಮುಖ ಇದೆ. ಮತ್ತು ಸಾರ್ವಜನಿಕರ ಸೇವೆಯಲ್ಲಿರತಕ್ಕ ನಮ್ಮಂಥ ರಾಜಕೀಯ ಮುಖಂಡರದು ಇನ್ನೊಂದು ಮುಖ ಇದೆ. ಆದ್ದರಿಂದ ಸರ್ಕಾರದವರೂ ಆಡಳಿತದಲ್ಲಿರತಕ್ಕ ಭ್ರಷ್ಟಾಚಾರವನ್ನು ನಿರ್ಮೂಲ ಮಾಡಬೇಕು. ಮತ್ತು ಯಾವುದಾದರೂ ಒಂದು ನಿಯಮವನ್ನು ಮಾಡುವಾಗ ಅದನ್ನು ಸಾಕಷ್ಟು ಗಂಭೀರವಾದ ದೃಷ್ಟಿಯಿಂದ ವಿಚಾರ ಮಾಡಬೇಕು. ನಮ್ಮ ದೇಶದಲ್ಲಿ ಪ್ರತಿಯೊಬ್ಬರೂ ಬೆಳೆಯ ಬಹುದಾದಂಥ ಮತ್ತು ಅಸಮಾನತೆಗಳು ಮತ್ತು ಅಸಮಾಧಾನಗಳು ನಿರ್ಮೂಲ ಉಂಟಾಗುವಂಥಾ ಭಾವನೆಗಳು ಮತ್ತು ವಾತಾವರಣಗಳು ಉಂಟಾದರೆ ಯಾವ ಚೈನಾ ಅಲ್ಲಾ ಇನ್ನೂ ಇಂಥಾ ನೂರು ಚೈನಾ ಬಂದರೂ ನಮ್ಮ ದೇಶದ ಜನತೆ ಜಗ್ಗುವುದಿಲ್ಲ. ಸರ್ಕಾರ ಲಕ್ಷ್ಯ ಕೊಟ್ಟು ಆ ದೆಶೆಯಲ್ಲಿ ಕೆಲಸ ಕಾರ್ಯಗಳನ್ನು ಮಾಡಬೇಕೆಂದು ನಾನು ಹೇಳುತ್ತಿದ್ದೇನೆ. ಆ ದೆಶೆಯಲ್ಲಿ ಕೆಲಸ ಕಾರ್ಯಗಳನ್ನು ಮಾಡತಕ್ಕ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ನಮೂದು ಆಗಿಲ್ಲ. ಇದೂ ಒಂದು ತುರ್ತು ಪರಿಸ್ಥಿತಿಯಲ್ಲಿ ಕೈಗೊಳ್ಳಬೇಕಾದ ಒಂದು ಕಾರ್ಯಕ್ರಮ ಎಂದು ಸರ್ಕಾರದವರೂ ತಿಳಿದುಕೊಂಡು ಆ ದೆಶೆಯಲ್ಲಿ ಕೆಲಸ ಕಾರ್ಯಗಳನ್ನು ಮಾಡಲು ಸರ್ಕಾರದವರು ಆಲೋಚನೆ ಮಾಡಬೇಕು ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಕೃಷ್ಣಾ ಗೋದಾವರಿ ನದಿಗಳ ನೀರಿನ ವಿಷಯದಲ್ಲಿ ಅನೇಕ ಮಾನ್ಯ ಸದಸ್ಯರು ಅನೇಕ ರೀತಿಯಲ್ಲಿ ಮಾತನಾಡಿದ್ದಾರೆ. ಈ ವಿಷಯದಲ್ಲಿ ಸರ್ಕಾರ ಮತ್ತು ಜನತೆಗೆ ಬಹಳ ತೀವ್ರಾಸಕ್ತಿ ಇದೆ. ನಮ್ಮ ದೇಶದಲ್ಲಿ ಒಂದು ಪದ್ಧತಿ ಬೆಳೆದು ಬಂದಿದೆ. ಅದೇನೆಂದರೆ ಯಾವುದೇ ಒಂದು ಪರಿಸ್ಥಿತಿಯನ್ನು ತೆಗೆದುಕೊಂಡರೂ ಕೂಡ ಅದರಲ್ಲಿ ರಾಜಕೀಯ ಬೆಳೆದುಕೊಂಡು ಬಂದಿದೆ. ದೇಶದ ಪುನರ್‌ಘಟನೆ ರಾಜ್ಯದ ಪುನರ್‌ಘಟನೆಯನ್ನು ಮಾಡಬೇಕಾದ ಸಂದರ್ಭದಲ್ಲಿ ದೇಶದ ಅಭಿಪ್ರಾಯವನ್ನು ಜನತೆಯ ಅಭಿಪ್ರಾಯವನ್ನು ಸರ್ಕಾರದವರು ಬಳಸಿಕೊಂಡು ಅದನ್ನು ಸರಿಯಾದ ರೀತಿಯಲ್ಲಿ ಬಗೆಹರಿಸಬೇಕು. ಮತ್ತು ಈ ಕೃಷ್ಣ ಮತ್ತು ಗೋದಾವರಿ ನೀರಿನ ಹಂಚಿಕೆಯ ವಿಷಯದಲ್ಲಿ ನಾವು ಸಾಕಷ್ಟು ಬಲವಾದ ಮತ್ತು ನಿರ್ಧಾರವಾದ ಒಂದು ನೀತಿಯನ್ನು ಅನುಸರಿಸಿದ್ದೇವೆಂದು ಕೇಂದ್ರ ಸರ್ಕಾರಕ್ಕೆ ತಿಳಿಸಬೇಕು. ಮತ್ತು ತಮಿಳರ ಮತ್ತು ಆಂಧ್ರದವರ ಪ್ರಭಾವಕ್ಕೆ ಕಟ್ಟುಬಿದ್ದು ಕನ್ನಡಿಗರಿಗೆ ನ್ಯಾಯವಾಗಿ ದೊರೆಯಬೇಕಾದ ಪಾಲವನ್ನು ದೊರಕಿಸಿ ಕೊಡುವುದಕ್ಕೆ ಸಮರ್ಥರಾಗಬೇಕು, ಆ ಒಂದು ಹೊರೆ ನಿಮ್ಮ ಮೇಲೆ ಬಿದ್ದಿದೆ ಎನ್ನುವ ಒಂದು ಮಾತನ್ನು ಕೇಂದ್ರ ಸರ್ಕಾರಕ್ಕೆ ತಿಳಿಸಬೇಕು. ಆ ರೀತಿ ತಿಳಿಸುವುದಕ್ಕೆ ನಮ್ಮ ಸರ್ಕಾರದವರಿಗೆ ಸಾಧ್ಯವಾಗುತ್ತದೆಯೋ ಎನ್ನುವ

(ಶ್ರೀ ಎ. ಜೆ. ದೊಡ್ಡಮೇಟಿ)

ವಿಷಯದಲ್ಲಿ ಸರ್ಕಾರದವರು ತಮ್ಮ ಅಭಿಪ್ರಾಯವನ್ನೂ ಸ್ಪಷ್ಟವಾಗಿ ತಿಳಿಸಬೇಕೆಂದು ನಾನು ಅಪೇಕ್ಷೆ ಮಾಡುತ್ತೇನೆ.

ಇನ್ನು ಮೂರನೆಯದಾಗಿ ಭೂಸುಧಾರಣೆಯ ವಿಷಯ. ಹಿಂದಿನ ಮಂತ್ರಿ ಮಂಡಲದಲ್ಲಿ ರೆವಿನ್ಯೂ ಮಂತ್ರಿಗಳಾಗಿದ್ದ ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಈ ಭೂಸುಧಾರಣೆಯ ಕಾನೂನನ್ನು ಜಾರಿಗೆ ತರುವುದರಲ್ಲಿದ್ದ ತೊಡಕುಗಳನ್ನೆಲ್ಲಾ ಹೋಗಲಾಡಿಸಿ ಆ ಮಸೂದೆಯನ್ನು ಪಾಸು ಮಾಡಿದರು. ಆದರೂ ಸಹ ಆ ಕಾನೂನನ್ನು ಜಾರಿಗೆ ತರುವುದರಲ್ಲಿ ಏನೇನೋ ತೊಂದರೆಗಳು ಬಂದು ಅದು ಮುಂದೆ ಹೋಗುತ್ತಿದೆ. ಈಗಾಗಲೇ ಅದು ಜಾರಿಗೆ ಬರುವುದು ಬಹಳ ತಡವಾಗಿದೆ. ಹಿಂದೆ ಅದನ್ನು ಜಾರಿಗೆ ತರುವುದಕ್ಕೆ ಅದರ ಅವಧಿಯನ್ನು ವಿಸ್ತರಿಸಿ 1963ನೇ ಇಸವಿ ಮಾರ್ಚಿ ತಿಂಗಳ ವರೆಗೂ ಅದನ್ನು ಮುಂದುವರಿಸಿದ್ದರು. ಈಗ ಮತ್ತೆ 1964ನೇ ಇಸವಿ ಮಾರ್ಚಿ ತಿಂಗಳವರೆಗೆ ಅದರ ಅವಧಿಯನ್ನು ಹೆಚ್ಚಿಸಿದ್ದಾರೆ. ಕಾನ್ಸ್ಟಿಟ್ಯೂಷನ್ ಅಮೆಂಡ್ ಮಾಡಿಸತಕ್ಕ ಕೆಲಸ ಸರ್ಕಾರದವರಿಗೆ ಸೇರಿದ್ದು. ಯಾವುದೋ ಒಂದು ಸಣ್ಣ ಕಾರ್ಯಕ್ಕೋಸ್ಕರ ಇಷ್ಟಿಷ್ಟು ಪ್ಯಾಳ್ಯವನ್ನು ಖರ್ಚು ಮಾಡುತ್ತಿದ್ದಾರೆ. ಭೂಸುಧಾರಣೆಯ ಕಾನೂನನ್ನು ಜಾರಿಗೆ ತರುವುದು ಬೇಡ ಎಂದು ಅದನ್ನು ಸರ್ಕಾರದವರು ಮುಂದಕ್ಕೆ ಹಾಕುತ್ತಿದ್ದಾರೆಂದು ಜನತೆ ತಿಳಿದುಕೊಳ್ಳುತ್ತದೆ. ಆದ್ದರಿಂದ ಸರ್ಕಾರದವರು 1964ನೇ ಇಸವಿ ಮಾರ್ಚಿ ತಿಂಗಳೊಳಗಾಗಿ ಭೂಸುಧಾರಣೆಯ ಕಾನೂನನ್ನು ಜಾರಿಗೆ ಕೊಡ್ತೇವೆ ಕೊಡುತ್ತೇವೆಂದು ಬದ್ಧ ಪ್ರತಿಜ್ಞೆಯನ್ನು ಮಾಡಬೇಕು. ಮತ್ತು ಕಾನ್ಸ್ಟಿಟ್ಯೂಷನ್ ಅಮೆಂಡ್ ಮಾಡಿಸಿ ಈ ಭೂಸುಧಾರಣೆಯ ಕಾನೂನನ್ನು ಜಾರಿಗೆ ತರಬೇಕೆಂದು ನಾನು ಹೇಳುತ್ತೇನೆ. ಈ ರೀತಿ ಪದೇ ಪದೇ ಈ ಕಾನೂನಿನ ಅವಧಿಯನ್ನು ವಿಸ್ತಾರ ಮಾಡುತ್ತಾ ಹೋದರೆ ದೊಡ್ಡ ದೊಡ್ಡ ಜಮೀನ್ದಾರರಿಗೆ ನೋಟೀಸ್ ಕೊಟ್ಟ ಹಾಗೆ ಆಗುತ್ತದೆ. ನಿಮ್ಮ ನಿಮ್ಮ ವ್ಯವಸ್ಥೆಯನ್ನು ಮಾಡಿಕೊಳ್ಳಿ ಎಂದು ಹೇಳಿದಹಾಗೆ ಆಗುತ್ತದೆ. ಈ ಕಾರಣಕ್ಕಾಗಿ ದಯವಾಡಿ 1964ನೇ ಇಸವಿ ಮಾರ್ಚಿ ತಿಂಗಳೊಳಗಾಗಿ ಈ ಕಾನೂನನ್ನು ಜಾರಿಗೆ ತಂದೇ ತರುತ್ತೇವೆ ಎನ್ನತಕ್ಕಂಥ ಪ್ರತಿಜ್ಞೆಯನ್ನು ಸರ್ಕಾರದವರು ಮಾಡಬೇಕೆಂದು ನಾನು ವಿನಂತಿ ಮಾಡಿ ಕೊಳ್ಳುತ್ತೇನೆ.

ಇನ್ನೊಂದು ವಿಷಯ. ಹಿಂದುಳಿದ ವರ್ಗಗಳ ವಿಷಯದಲ್ಲಿ ಇತ್ತೀಚೆಗೆ ಸುಪ್ರೀಮ್ ಕೋರ್ಟಿನಲ್ಲಿ ಒಂದು ಆಜ್ಞೆ ಆಗಿದೆ. ಆದ್ದರಿಂದ ಅವರಿಗೆ ಬೇರೆ ರೀತಿಯಲ್ಲಿ ಅನುಕೂಲವನ್ನು ಒದಗಿಸುವುದು ಆಡಳಿತ ಪಕ್ಷದ ಜವಾಬ್ದಾರಿಯಾಗಿದೆ. ಸಾಮಾನ್ಯವಾಗಿ 100ಕ್ಕೆ 90ಜನ ಹಿಂದುಳಿದವರು ನಮ್ಮ ದೇಶದಲ್ಲಿದ್ದಾರೆ. ಅವರಿಗೆ ಅನುಕೂಲತೆಯನ್ನು ಮಾಡಲಿಕ್ಕೆ ಒಂದು ಹೊಸ ವಿಧಾನವನ್ನು ರಕ್ಷಣೆಯನ್ನು ಮಾಡುವುದು ಅವಶ್ಯಕ. ಹೊಸದು ಎಂದರೆ ಜಾತಿಯ ಪ್ರಶ್ನೆಯಲ್ಲ. ಈಗ ಬ್ರಾಹ್ಮಣ ಜನಾಂಗದಲ್ಲಿಯೂ ಕೂಡ ಬಹಳ ಬಡವರಿದ್ದಾರೆ. ಅವರಿಗೆ ತಿನ್ನುವುದಕ್ಕೆ ಅನ್ನವಿಲ್ಲ ಅಂಥಾ ಜನಗಳಿದ್ದಾರೆ. ಅದಕ್ಕಾಗಿ ಅವರಿಗೆ ಅನುಕೂಲವನ್ನು ಮಾಡಲು ಒಂದು ಹೊಸ ವಿಧಾನವನ್ನು ಆಲೋಚನೆ ಮಾಡಬೇಕು. ಹಳ್ಳಿಗಾಡಿನಲ್ಲಿ ವಾಸ ಮಾಡತಕ್ಕ ಜನಗಳ ಮಕ್ಕಳು ಪಟ್ಟಣಕ್ಕೆ ಬಂದು ವಿದ್ಯಾಭ್ಯಾಸ ಮಾಡಬೇಕಾದರೆ ಪಟ್ಟಣದಲ್ಲಿರತಕ್ಕ ಜನಗಳು ಮಕ್ಕಳು ವಿದ್ಯಾಭ್ಯಾಸ ಮಾಡುವುದಕ್ಕೆ ಎಷ್ಟು ಹಣ ಖರ್ಚಾಗುತ್ತದೆಯೋ ಅದರ 3 ಪಟ್ಟು ಹಣ ಹೆಚ್ಚು ಖರ್ಚು ಬರುತ್ತದೆ. ಇದನ್ನು ಸರ್ಕಾರದವರು ಲಕ್ಷ್ಯದಲ್ಲಿಡಬೇಕು. ಹಳ್ಳಿಯಿಂದ ಪಟ್ಟಣಕ್ಕೆ ವಿದ್ಯಾಭ್ಯಾಸಕ್ಕೆ ಬಂದರೆ ಹಾಸ್ಟಲಿನ ಖರ್ಚು ಕೊಡಬೇಕು. ರೂಮ್‌ರೆಂಟ್ ಕೊಡಬೇಕು. ಇನ್ನೂ ಇತರೇ ಖರ್ಚುಗಳನ್ನು ಕೊಡಬೇಕು. ಒಟ್ಟಿನಲ್ಲಿ ಒಬ್ಬ ಹಳ್ಳಿಯ ಮನುಷ್ಯನ ಮಗ ನಗರಕ್ಕೆ ಬಂದು ನಿಂತು ವಿದ್ಯಾಭ್ಯಾಸ ಮಾಡಬೇಕಾದರೆ ನಗರದಲ್ಲಿರತಕ್ಕ ಒಬ್ಬ ಮನುಷ್ಯನು ವಿದ್ಯಾಭ್ಯಾಸ ಮಾಡಬೇಕಾದರೆ ಎಷ್ಟು ಖರ್ಚಾಗುತ್ತದೆಯೋ ಅದರ 3ಪಟ್ಟು ಜಾಸ್ತಿ ಖರ್ಚಾಗುತ್ತದೆ.

ಇದು ಒಂದು ಹೊಸದಾಗಿ ಹಂತ ಹಂತವಾದ ಜಾತಿಯನ್ನು ನಿರ್ಮಾಣ ಮಾಡುತ್ತಿದ್ದಾರೆಂದು ಕಾಣುತ್ತದೆ. ಅದರಲ್ಲಿ ನಗರವಾಸಿಗಳು ಮತ್ತು ಹಳ್ಳಿಗರು ಎಂದು ಬೇರೆ ಮಾಡಿದ್ದಾರೆ. ಅದೇ ರೀತಿ ಸರ್ಕಾರದಲ್ಲಿಯೂ ಕೂಡ ಜನರ ಸಂಪರ್ಕ ಸ್ಥಿತಿಯು ಆಯಾ ವ್ಯಕ್ತಿಯದು ಅಥವಾ ಆಯಾ ಕುಟುಂಬಕ್ಕೆ ಸೇರಿದುದು ಎಂಬುದಾಗಿ ಮಾಡಿದ್ದಾರೆ. ಅದೇ ರೀತಿ ಆಯಾ ಕುಟುಂಬದಲ್ಲಿರತಕ್ಕ ಸುಶಿಕ್ಷಿತರು ಮತ್ತು ಈಗಾಗಲೇ ನೌಕರಿಯಲ್ಲಿರತಕ್ಕವರು ಈ ರೀತಿ 3-4 ತರಹ ಹೊಸ ಹೊಸ ಕ್ರೈಟೀರಿಯಾಗಳನ್ನು ಗೊತ್ತುಮಾಡಿ ಒಂದು ರೀತಿಯಾದಂಥ ಹಿಂದುಳಿದ ವರ್ಗವನ್ನು ಒಂದನ್ನು ನಿರ್ಮಾಣಮಾಡುವುದು ಅತ್ಯಾವಶ್ಯಕವಾಗಿದೆ. ಈ ವಿಷಯದಲ್ಲಿ ಸರ್ಕಾರದವರು ಜಾಗ್ರತೆಯಿಂದ ಮತ್ತು ಜಾಗರೂಕತೆಯಿಂದ ಕೆಲಸಮಾಡದಿದ್ದರೆ ಇತರ ಇನ್ನೂ ಅನೇಕ ಹಿಂದುಳಿದ ವರ್ಗಗಳಿಗೆ ಸರ್ಕಾರದವರು ಕೊಡತಕ್ಕ ಸೌಲಭ್ಯಗಳ ಬಗ್ಗೆ ವಂಚನೆಯನ್ನು ಮಾಡಿದಂತಾಗುತ್ತದೆ.

ಕೊನೆಯದಾಗಿ ಇನ್ನು ನಮ್ಮ ರಾಜ್ಯಕ್ಕೆ ಕರ್ಣಾಟಕವೆಂಬ ಹೆಸರನ್ನು ಇಡುವ ವಿಷಯದಲ್ಲಿ ನಾನು ಮೊದಲಿನಿಂದಲೂ ಸರ್ಕಾರದವರಿಗೆ ಸಾಕಷ್ಟು ಹೇಳಿದ್ದೇನೆ. ಶ್ರೀ ಮಾಕ ಕೃಷ್ಣ ಅವರೂ ಸಹ ತಮ್ಮ ಭಾಷಣವನ್ನು ಮೊದಲು ಇಂಗ್ಲಿಷ್‌ನಲ್ಲಿ ಪ್ರಾರಂಭಿಸಿದ್ದರು. ಆದರೆ ನನ್ನ ಸ್ನೇಹಿತರ ವಿನಂತಿಯನ್ನು ಮನ್ನಿಸಿ ಅಂತಹ ತರುಣರು ಕನ್ನಡದಲ್ಲಿ ಭಾಷಣ ಮಾಡಿದರು. ಇನ್ನೂ ಕೆಲವರಲ್ಲಿ ಆ ಒಂದು ಕ್ರಾಂತಿಕಾರಕವಾದ ಮನೋಭಾವನೆ ಬಂದಿಲ್ಲ. ಕರ್ಣಾಟಕ ವೆಂಬ ಹೆಸರಿನ ವಿಷಯ ದಲ್ಲಿ ಮಮತೆ ಬೇಕು.

ಶ್ರೀ ಎಸ್. ಎಂ. ಕೃಷ್ಣ.—ನಾನು ಕನ್ನಡವನ್ನೇ ಬಳಸಿಕೊಂಡನಲ್ಲ.

ಶ್ರೀ ಎ. ಜೆ. ದೊಡ್ಡಮೇಟಿ.—ಹೆಸರಿನಿಂದ ಏನು ಉಂಟು ಎಂದು ಹೇಳುವುದು ಸರಿಯಿಲ್ಲ. ಅದರಲ್ಲಿ ಎಲ್ಲವೂ ಉಂಟು. ಅದನ್ನು ವಿರೋಧ ಮಾಡುವುದು ಖಂಡಿತವಾಗಿ ಸಾಧುವಾದುದಲ್ಲ. ಈ ವಿಷಯವನ್ನು ಹಿಂದೆ ಹಿಂದಕ್ಕೇ ತೆಗೆದುಕೊಂಡು ಹೋಗುತ್ತಿದ್ದೀರಿ. ಕರ್ಣಾಟಕ ಹೆಸರು ನಮ್ಮ ರಾಜ್ಯಕ್ಕೆ ಬೇಕು ಎನ್ನುವ ಮನೋವೃತ್ತಿಯಲ್ಲಿ ಸಾಕಷ್ಟು ನಿರ್ಧಾರವಾಗಿಲ್ಲ. ಆ ನಿರ್ಧಾರ ಈ ಕೂಡಲೆ ತೆಗೆದುಕೊಳ್ಳುವುದು ಅವಶ್ಯಕವಿದೆ. ಕರ್ಣಾಟಕ ರತ್ನ ಸಿಂಹಾಸನಾಧೀಶ್ವರರಾಗಿ ಮತ್ತು ನಮ್ಮ ಕರ್ಣಾಟಕ ರಾಜ್ಯಪಾಲರಾಗಿ ನಮ್ಮ ರಾಜ್ಯಪಾಲರಾಗಲಿ ಎನ್ನುವ ಕಾಲಕ್ಕೆ ಕರ್ಣಾಟಕ ರಾಜ್ಯ ವೆಂಬ ಹೆಸರಿನ ತುರ್ತು ಪರಿಸ್ಥಿತಿಗೆ ಯಾರೂ ವಿರೋಧವಾಗಬಾರದು ಎಂದು ನಾನು ಅರಿಕೆ ಮಾಡು ತ್ತೇನೆ. ಇದು ಬೇಗ ಆಗುವುದು ಅವಶ್ಯಕವೆಂಬ ಒಂದು ದೃಷ್ಟಿಯಿಂದ ವಿಚಾರ ಮಾಡೋಣ. ಭೌತಿಕ ಸುಧಾರಣೆಗಳಿಗಿಂತಲೂ ಮಾನಸಿಕ ಒಂದು ಸಮತಾವಾದ ಸಮಾಜ ರೀತಿಯಲ್ಲಿ ಕ್ರಾಂತಿ ಕಾರಕ ಮನೋವೃತ್ತಿಯನ್ನು ಈ ದೇಶದಲ್ಲಿ ನಿರ್ಮಾಣ ಮಾಡೋಣವೆಂದು ನಾನು ಹೇಳುತ್ತೇನೆ. ಸುಮ್ಮನೆ ಗೊಡ್ಡು ವಿಚಾರಗಳಿಗೆ ಅಂಟಿಕೊಂಡು ಬಹಳ ದಿವಸಗಳ ಗಟ್ಟಲೆ ಈ ಬಗ್ಗೆ ತಡ ಮಾಡು ವುದು ಬೇಡವೆಂದು ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ಸರ್ಕಾರಕ್ಕೆ ಈ ವಿಷಯದಲ್ಲಿ ಎಲ್ಲರೂ ಬೆಂಬಲ ಕೊಡೋಣ. ಏನೇ ಆಗಲಿ ನಮ್ಮ ರಾಜ್ಯಕ್ಕೆ ಕರ್ಣಾಟಕವೆಂಬ ಹೆಸರು ನಾಳೆ ಏಪ್ರಿಲ್ ಒಂದನೇ ತಾರೀಖಿಗೆ ಬರುತ್ತದೆ ಎಂದು ನಾನು ಆಶಿಸುತ್ತೇನೆ. ಮತ್ತೆ ಈ ಪ್ರಶ್ನೆ ಹಿಂದಕ್ಕೆ ಹೋಗದ ಹಾಗೆ ನಮ್ಮ ಮಂತ್ರಿ ಮಂಡಲದವರು ವಿಚಾರಮಾಡಿ ತೀರ್ಮಾನವನ್ನು ಜಾಗ್ರತೆ ಯಾಗಿ ತೆಗೆದುಕೊಳ್ಳಬೇಕು. ಒಂದು ವೇಳೆ ಇನ್ನೂ ಯಾರನ್ನಾದರೂ ಟ್ರೆಜರಿ ಬೇಂಚಿನವರು ರಾಜಿ ಮಾಡು ವುದು ಇದ್ದರೆ ಮುಖ್ಯಮಂತ್ರಿಗಳು ಈ ಕೂಡಲೆ ಅಂತಹವರನ್ನು ಕರೆಸಿ ಅವರಲ್ಲಿ ಏನಾದರೂ ಸಂಧಾನವಿದ್ದರೆ ಮಾಡಲಿ. ಒಟ್ಟಿನಲ್ಲಿ ಪುನಃ ಈ ಪ್ರಶ್ನೆ ವಿಚಾರ ಮಾಡುವುದು, ಬಿದ್ದು ಹೋಗು ವುದು, ನಂತರ ಮತ್ತೇ ಪರಿಶೀಲನೆ ಮಾಡೋಣ ಎನ್ನುವುದು ಇವೆಲ್ಲಾ ಖಂಡಿತವಾಗಿ ಸರಿಯಲ್ಲ. ಈ ಪ್ರಶ್ನೆಯನ್ನು ಇಂತಹ ಸ್ಥಿತಿಗೆ ಇಟ್ಟರೆ ನಿಜವಾಗಿಯೂ ಬಹಳ ತೊಂದರೆಯಾಗುತ್ತದೆಂಬುದಾಗಿ ನಾನು ಈ ವಿಶೇಷ ವಿನಂತಿಯನ್ನು ನಾನು ಸರ್ಕಾರಕ್ಕೆ ಮಾಡಿಕೊಂಡು ನನಗೆ ಈ ಸಭೆಯಲ್ಲಿ ಮಾತ ನಾಡಲಿಕ್ಕೆ ಇಷ್ಟು ಅವಧಿಯನ್ನು ದೊರಕಿಸಿದ್ದಕ್ಕಾಗಿ ಅಧ್ಯಕ್ಷರಿಗೆ ವಂದನೆಗಳನ್ನು ಸಮರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ವಿ. ಶೆಟ್ಟಿ (ಚಿಕೋಡಿ).—ಅಧ್ಯಕ್ಷರೇ, ಈಗ ಮುಂದಿನ ವರ್ಷದ ಒಂದು ಧೋರಣೆ ರೂಪದಿಂದ ಸರ್ಕಾರದವರು ನಮ್ಮ ಮುಂದಿಟ್ಟಿರುವ ರಾಜ್ಯಪಾಲರ ಭಾಷಣದಲ್ಲಿ ಮೊದಲನೆಯದಾಗಿ ಒಂದು ತಪ್ಪು ಇದ್ದತೆಯೂ ಕೂಡ ನನಗೆ ಕಾಣಿಸುತ್ತದೆ. ರಾಜ್ಯಪಾಲರ ಈ ಭಾಷಣದಲ್ಲಿ ಮೊದಲನೆಯ ಪುಟದಲ್ಲಿಯೇ ಒಂದು ತಪ್ಪು ಸೇರಿದೆ. ಅದು ಈ ರೀತಿ ಇದೆ: "ಗುಪ್ತವಾಗಿ ದೊಡ್ಡ ಪ್ರಮಾಣದ ಸಿದ್ಧತೆಗಳನ್ನು ಮಾಡಿ ಇಲ್ಲಿಯವರೆಗೆ ಅಲ್ಲೊಂದು ಕಡೆ ಇಲ್ಲೊಂದು ಕಡೆ ನಮ್ಮ ಗಡಿಯ ಒಳಕ್ಕೆನುಗ್ಗಿ ಬರುತ್ತಿದ್ದ ಚೀಣೀ ದಳಗಳು ಅಸಂಖ್ಯಾತ ಬಲದಿಂದೊಡಗೂಡಿ 1962 ನೇ ಇಸವಿ ಸೆಪ್ಟೆಂಬರ್ ತಿಂಗಳ 10 ನೇ ದಿನಾಂಕದಂದು ಥಾಗ್ಲಾ ಪ್ರದೇಶದಲ್ಲಿಯ ಈಶಾನ್ಯ ಭಾಗದ ನಮ್ಮ ವ್ಯವಸ್ಥಿತ ಸರಹದ್ದನ್ನು ದಾಟಿದವು." ಆದರೆ ಈ ಸರ್ಕಾರದವರೇ ಎಬ್ಬಿಸಿರುವಂಥ ಬೇರೆ ಒಂದು ಕಾಲದಲ್ಲಿ 1962 ನೇ ಇಸವಿ ಅಕ್ಟೋಬರ್ 20 ನೇ ತಾರಿಖು ಎಂಬುದಾಗಿ ಕೊಟ್ಟಿದ್ದಾರೆ. ಚೀಣಾ ಭಾರತದ ಮೇಲೆ ಹೂಡಿದ ದಾಳಿ ಒಂದು ರೀತಿಯಲ್ಲಿ ವಿಶ್ವಾಸ ಘಾತುಕವಾದ ಒಂದು ದೊಡ್ಡ ದಾಳಿಯ ಹಿನ್ನೆಲೆ ಎಂಬುದಾಗಿ ತೋರುತ್ತದೆ. ಅದು ಈ ತುರ್ತು ಪರಿಸ್ಥಿತಿಯಲ್ಲಿ ಸ್ವಲ್ಪ ಹೆಚ್ಚು ಕಡಿಮೆಯಾಗಿದೆ. ರಾಜ್ಯಪಾಲರ ಭಾಷಣದಲ್ಲಿ ದಿನಾಂಕ 10 ಎಂದು ಕೊಟ್ಟಿದ್ದಾರೆ. ಯುದ್ಧ ಶಾಂತಿಗಳಲ್ಲಿ ಚೀಣಾದ ಆಕ್ರಮಣ ಎಂಬ ಪುಸ್ತಕದ 28 ನೇ ಪುಟದಲ್ಲಿ ದಾಳಿ ಹೂಡುವ ಪೂರ್ವ ಭಾವಿಯಾಗಿ ಚೀಣಾ ಸರ್ಕಾರದ ಉತ್ತರಕೊಟ್ಟಿರುವ ಪ್ರಕಾರ ಚೀಣಾ ಸೈನಿಕರು ಅಕ್ಟೋಬರ್ 20ಕ್ಕೆ ಥಾಗ್ಲಾ ದಾಟಿದರು ಎಂದು ಕೊಟ್ಟಿದ್ದಾರೆ. ಇದರಿಂದ ತಾರೀಖಿನಲ್ಲಿ 10 ದಿವಸಗಳೇ ಹೆಚ್ಚು ಕಡಿಮೆಯಾಗಿದೆ. ಈ ರೀತಿಯಾಗಿ ರಾಜ್ಯಪಾಲರು ಆದಂತಹವರು ಸರ್ಕಾರದ ಆಡಳಿತದಲ್ಲಿ ಬಹು ಮುಖ್ಯಸ್ಥರಾಗಿರುವವರು ಮಾಡುವ ಭಾಷಣದಲ್ಲಿ ಈ ತಪ್ಪು ನಡೆದಿದೆ. ಇದರಲ್ಲಿ ಏನು ತೋರು

(ಶ್ರೀ ಎಂ. ಬಿ. ಶೆಟ್ಟಿ)

ತ್ತದೆಂದರೆ ಸರ್ಕಾರದವರು ಯಾವ ರೀತಿಯಿಂದ ತಮ್ಮ ಒಂದು ಕಾರುಬಾರನ್ನು ನಡೆಸಿದ್ದಾರೆ ಎಂಬುದನ್ನು ವ್ಯಕ್ತಪಡಿಸುವುದಕ್ಕೆ ಇಂಥಾದ್ದನ್ನು ಒಂದು ನಿದರ್ಶನವಾಗಿ ಕೊಡಬಹುದು. ಇನ್ನೂ ಕೆಲವು ವಿಷಯಗಳನ್ನು ಹೇಳಬಹುದು. ಆದರೆ ಕಾಲಾವಕಾಶ ಕೇವಲ 10-15 ನಿಮಿಷಗಳು ಮಾತ್ರ ಇದೆ. ಆದ್ದರಿಂದ ಮೂರು ನಾಲ್ಕು ಮುಖ್ಯ ವಿಷಯಗಳ ಬಗ್ಗೆ ಮಾತ್ರ ನಾನು ಮಾತನಾಡುತ್ತೇನೆ. ಮೊದಲನೆಯದಾಗಿ ಹೈ ಕೋರ್ಟ್ ಜಡ್ಜ್‌ಗಳನ್ನು ನೇಮಕ ಮಾಡುವ ವಿಷಯ. ಎರಡನೆಯದಾಗಿ ಸರ್ಕಾರೀ ಆಫೀಸುಗಳಲ್ಲಿ ಟೆಂಪೊರರಿಯಾಗಿ 8-10-12 ವರ್ಷಗಳವರೆಗೂ ಕೆಲಸ ಮಾಡುತ್ತಿರುವ ನೌಕರರ ವಿಷಯ. ಮೂರನೆಯದಾಗಿ ಲ್ಯಾಂಡ್ ರಿಫಾರಮ್ಸ್ ವಿಷಯ. ಸುಮಾರು 6 ವರ್ಷಗಳ ಮೇಲಾದರೂ ಕೂಡ ನಮ್ಮ ಸರ್ಕಾರದವರು ಎಸ್. ಆರ್. ಸಿ. ವರದಿಯಲ್ಲಿ ಹೇಳಿರುವಂತೆ ಹೈಕೋರ್ಟಿಗೆ ಹೊರಗಿನವರನ್ನು ಯಾರನ್ನೋ 3 ವರ್ಷಗಳಿಂದಲೂ ನೇಮಕ ಮಾಡಲಿಲ್ಲ. ಏನೋ ಒಂದಾನೊಂದು ಕಾಲಕ್ಕೆ ಒಬ್ಬ ಮುಖ್ಯಸ್ಥರನ್ನು ತಂದಿದ್ದರು. ಈ ದೇಶದಲ್ಲಿ ನ್ಯಾಯಬೇಕೆಂದು ಹೇಳುವವರು ಬಹಳ ಮಂದಿ ಇದ್ದಾರೆ. ಪ್ರಜಾಪ್ರಭುತ್ವದಲ್ಲಿ ನ್ಯಾಯದಲ್ಲಿ ವಿಶ್ವಾಸವಿರಬೇಕು ಎನ್ನುವಾಗ ಆಡಳಿತದಲ್ಲಿ ಸ್ವಲ್ಪ ಬಿಗಿ ಇರಬೇಕು. ಹೈಕೋರ್ಟಿನಲ್ಲಿರುವವರೆಲ್ಲರೂ ಸ್ವಲ್ಪ ಹೆಚ್ಚು ಕಡಿಮೆ ಇಲ್ಲಿನವರೇ ಆಗಿದ್ದಾರೆ. ಟ್ರಾನ್ಸ್‌ಫರ್‌ಗಳೂ ಕೂಡ ಇಲ್ಲವೇ ಇಲ್ಲ. ಅದೇ ಜಿಲ್ಲೆಯವರನ್ನು ಅದೇ ಜಿಲ್ಲೆಯಲ್ಲಿಡುವುದು, ಅದೇ ತಾಲ್ಲೂಕಿನವರನ್ನು ಅದೇ ತಾಲ್ಲೂಕಿಗೆ ಹಾಕುವ ಒಂದು ಪದ್ಧತಿ ಇತ್ತೀಚೆಗೆ ಬಹಳವಾಗಿ ಬೆಳೆಯುತ್ತಾ ಇದೆ. ಮೊದಲಿಗೆ ಮುಂಬೈ ಸರ್ಕಾರದಲ್ಲಿ ಆ ಒಂದು ಪದ್ಧತಿ ಇತ್ತು. ಆಯಾ ಜಿಲ್ಲೆಗಳಲ್ಲಿರುವವರನ್ನು ಆಯಾ ಜಿಲ್ಲೆಗೆ ಹಾಕುತ್ತಿರಲಿಲ್ಲ. ಬಿಜಾಪುರ ದಿಂದ ಬೆಳಗಾಂಗೆ ಟ್ರಾನ್ಸ್‌ಫರ್ ಆಗಿ ಬರುವ ಪದ್ಧತಿ ಇತ್ತು. ಈಗ ಈ ಸರ್ಕಾರದಲ್ಲಿ ಆ ಪದ್ಧತಿ ತಪ್ಪಿಹೋಗಿದೆ. ನಿನ್ನೆ ನನ್ನ ಮಾನ್ಯ ಸ್ನೇಹಿತರಾದ ಶ್ರೀ ಮಾರ್ಕ ವಿ. ಎಸ್. ಪಾಟೀಲರು ಹೇಳಿದ ಹಾಗೆ ದಿವಾನೆ ಕೋರ್ಟಿನಲ್ಲಿ ಅದರಲ್ಲೂ ಸಿವಿಲ್ ಕೋರ್ಟುಗಳಲ್ಲಿ ಲಂಚರುಷುವತ್ ಬಹಳ ಜಾಸ್ತಿ ಯಾಗುತ್ತಿದೆ. ಒಂದು ರೀತಿ ಶ್ರೀ ಮಾರ್ಕ ದೊಡ್ಡಮೇಟಿಯವರು ಹೇಳಿದ ಹಾಗೆಯೂ ಈ ಪ್ರಭಾವ ಎಲ್ಲಾ ಕಡೆಗಳಲ್ಲೂ ನಡೆಯುತ್ತಿದೆ. ಹೀಗಾದರೆ ದೇಶದಲ್ಲಿ ನ್ಯಾಯವೆಲ್ಲಿಸಿಗುತ್ತದೆ? ತಾಯಿ ಹಾಲಿನಲ್ಲಿ ವಿಷವಿದೆಯೆಂದು ಎಣಿಸುವ ರೀತಿ ಈಗಿನ ನ್ಯಾಯವಾಗಿದೆ. ಯಾವ ಕೋರ್ಟಿಗೆ ಹೋಗಲಿ ಅಲ್ಲೂ ಕೂಡ ಕೈವಾಡ, ಲಂಚ ಇವೂ ಹೆಚ್ಚಿದೆ. ಆದ್ದರಿಂದಲೇ ಜನತೆಗೆ ಸರಿಯಾದ ನ್ಯಾಯ, ಸಮಾಧಾನ ದೊರಕುವುದಿಲ್ಲ. ನನ್ನ ಮಾನ್ಯ ಸ್ನೇಹಿತರಾದಂಥ ಶ್ರೀ ಮಾರ್ಕ ದೊಡ್ಡಮೇಟಿಯವರು ಹೇಳಿದ ಹಾಗೆ ರಾಜಕೀಯ ಕಾರ್ಯಕರ್ತರ ಕಾರುಬಾರಿನ ಕೈವಾಡ ಬಹಳವಿದೆಯೆಂದು ನನಗನ್ನಿಸು ತ್ತದೆ. ಮುಖ್ಯವಾಗಿ ನೋಡಿದರೆ ಈ ರಾಜಕೀಯ ಪಕ್ಷದಲ್ಲಿಯೇ ಮಂತ್ರಿಗಳ ಒಂದು ವರ್ಗವೇ ಈಗ ನಿರ್ಮಾಣವಾಗಿದೆ. ಅದರಲ್ಲಿ 3-4 ತರಹಗಳಿವೆ. ಈಗಾಗಲೇ ನಿವೃತ್ತರಾದ ಮಂತ್ರಿಗಳು ಮತ್ತು ಮಂತ್ರಿಗಳಾಗಬೇಕೆಂದಿರುವವರು ಒಂದು ವರ್ಗ, ಯಾವಾಗಲೂ ಮಂತ್ರಿಗಳಾಗಿಯೇ ಇರ ಬೇಕೆಂದು ಆಸೆ ಪಡುವವರು ಒಂದು ವರ್ಗ. ಇನ್ನು ಮುಂದೆಯಾದರೂ ಮಂತ್ರಿಗಳಾಗಬೇಕೆಂದು ಆಶೆ ಪಡುವವರು ಮತ್ತೊಂದು ವರ್ಗ—ಇಷ್ಟೊಂದು ವರ್ಗದ ಜನರು ಅಧಿಕಾರಿಗಳನ್ನು ಕಾಣುತ್ತಾ ಹೋಗಿ ತಮ್ಮ ಕೈವಾಡ ನಡೆಸುವುದು ಈಗ ಜಾಸ್ತಿಯಾಗಿದೆ. ಏಕೆಂದರೆ ಮಂತ್ರಿ ಪದವಿಯಿಂದ ನಿವೃತ್ತರಾದವರು ಕೆಲವರು ಸಾಕಷ್ಟು ತ್ರಾಸು ಪಡುತ್ತಿದ್ದಾರೆ. ಆದ್ದರಿಂದ ಅಂತಹವರು ಮತ್ತೆ ಮಂತ್ರಿಗಳಾಗಬೇಕೆಂಬ ಆಸೆ ಇಟ್ಟುಕೊಂಡಿರುವ ಹಾಗೆ ಕಂಡುಬರುತ್ತಿದೆ. ಹೀಗಿರುವಾಗ ಹೆಚ್ಚಿಗೆ ರಾಜಕೀಯ ಪಕ್ಷಗಳಲ್ಲಿರುವವರು ವರ್ಗಗಳನ್ನು ಮಾಡಿಕೊಳ್ಳಬಾರದು ಎಂದು ಶ್ರೀ ಮಾರ್ಕ ದೊಡ್ಡ ಮೇಟಿಯವರು ಹೇಳಿದ ಮಾತಿನಲ್ಲಿ ಸತ್ಯಾಂಶವಿದೆ. ಈ ವಿಚಾರವನ್ನು ಕಾಂಗ್ರೆಸ್ ಆಡಳಿತ ಪಕ್ಷ ದವರು ಕೂಲಂಕಷವಾಗಿ ಪರಿಶೀಲನೆ ಮಾಡಬೇಕು.

ಇದಕ್ಕೇ ಶಾಸನವರ್ಗವಿರುವುದು? ಈಗೇನು ದೊಡ್ಡಪ್ರಮಾಣದಲ್ಲಿ ದೊಡ್ಡ ಮೇಟಿಯವರು ಹೇಳಿ ದಹಾಗೆ ನಡೆದಿದೆ ಎಂದು ನೋಡಬೇಕು. ಆ ರೀತಿ ಯಿಂದ ಸರ್ಕಾರದ ಮೇಲೆ ಮತ್ತು ಸರ್ಕಾರಿ ಅಧಿಕಾರಿಗಳಮೇಲೆ ಕಾರ್ಯಕರ್ತರು ಮಾಡುವುದನ್ನು ನಿಲ್ಲಿಸಿದರೆ ಬಹಳ ಉಪಕಾರ ಮಾಡಿದಂತಾಗು ತ್ತದೆ.

11-30 A. M.

ಎರಡನೆಯದು ಬೆಳಗಾವಿ ಜಿಲ್ಲೆಯ ಶಾಲೆಗಳಲ್ಲಿ ಎಂಟು ಹತ್ತು ವರ್ಷಗಳಿಂದ ಹಂಗಾಮಿ ಯಾಗಿ ಕೆಲಸ ಮಾಡುತ್ತಿರುವವರ ಸ್ಥಿತಿ ಬಹಳ ಅನುಕಂಪನೀಯವಾಗಿದೆ. ಅವರನ್ನು ಎಷ್ಟು ವರ್ಷ ಗಳಾದರೂ ಖಾಯಂ ಮಾಡುವುದೇ ಇಲ್ಲ. ಇದೇ ರೀತಿಯಿಂದ ಸ್ಟೇಟ್ ಟ್ರಾನ್ಸ್‌ಪೋರ್ಟ್ ಇಲಾಖೆ

ಯಲ್ಲೂ ಕೂಡ ಸಾವಿರಾರು ಜನರನ್ನು ಟೆಂಪೊರರಿಯಾಗಿಯೇ ಮುಂದುವರಿಸುತ್ತಿದ್ದಾರೆ. ರೆವೆನ್ಯೂ ಖಾತೆಯಲ್ಲೂ ಕೂಡ ಹಂಗಾಮಿಯಾಗಿಯೇ ಅನೇಕರನ್ನು ಮುಂದುವರೆಸುತ್ತಿದ್ದಾರೆ. ಹತ್ತು ವರ್ಷಗಳಿಂದಲೂ ಎಲ್ಲ ಪರೀಕ್ಷೆಗಳನ್ನೂ ಪಾಸು ಮಾಡಿದ್ದರೂ ಕೂಡ ಎರಡನೆಯ ಗ್ರೇಡ್ ಕ್ಲಾರ್ಕುಗಳನ್ನು ಟೆಂಪೊರರಿಯಾಗಿಯೇ ಮುಂದುವರೆಸುತ್ತಿದ್ದಾರೆ. ಅವರನ್ನು ಶಾಶ್ವತ ಮಾಡಲು, ಖಾಯಂ ಮಾಡಲು ಸರ್ಕಾರದಲ್ಲಿ ಒಂದು ಧೋರಣೆಯಿರಬೇಕು. ಮೂರು ನಾಲ್ಕು ವರ್ಷಗಳ ಕಾಲ ಕೆಲಸವನ್ನು ದಕ್ಷತೆಯಿಂದ ಮಾಡಿದ್ದರೆ ಅವರನ್ನು ಖಾಯಂ ಮಾಡಬೇಕು. ಹಾಗೆ ಮಾಡಿದರೆ ನೌಕರರಿಗೂ ಒಂದು ಸಮಾಧಾನವಿರುತ್ತದೆ. ಈಗ ವಿಶೇಷ ಪರಿಸ್ಥಿತಿಯಿದೆಯೆಂದು ನೌಕರರು ಹೆಚ್ಚು ಕಾಲ ಕೆಲಸ ಮಾಡಬೇಕೆಂದು ಗೊತ್ತುಮಾಡಿದ್ದಾರೆ. ಆದರೆ ಅವರು 5 ತಾಸು ಮಾತ್ರ ಮನಸ್ಸಿಟ್ಟು ಕೆಲಸ ಮಾಡಬಲ್ಲರು. ಬೆಳಿಗ್ಗೆ ಹತ್ತರಿಂದ ಸಂಜೆ ಆರರವರೆಗೆ ಒಂದೇಸಮನೆ ದುಡಿಯಲು ಸಾಧ್ಯವಾಗುವುದಿಲ್ಲ. ಹೆಚ್ಚು ಕಾಲ ದುಡಿಯಬೇಕೆಂದು ಒತ್ತಾಯ ಮಾಡಿದರೆ ಅದರಿಂದ ಹೆಚ್ಚು ಫಲ ದೊರೆಯುವುದಿಲ್ಲ. ಹೆಚ್ಚು ಕೆಲಸವಿದ್ದರೆ ಬೇಕಾದರೆ ಹೆಚ್ಚು ಕಾರ್ಕೂನರನ್ನು ನೇಮಿಸಲು ಸಾಧ್ಯವಿದೆ. ಸೋಷಿಯಲ್ ವೆಲ್‌ಫೇರ್ ಸ್ಟೇಟ್‌ನಲ್ಲಿ ಆ ರೀತಿಮಾಡಿ ಸರ್ಕಾರ ಕೆಲಸ ನಡೆಸಬೇಕಾಗಿದೆ. ಹಾಗಿಲ್ಲದೆ ಕಾರ್ಕೂನರನ್ನು ಕಡಮೆ ಮಾಡಿ ಅಧಿಕಾರಿಗಳನ್ನು ಬಿ.ಡಿ.ಓ. ಮುಂತಾದವರನ್ನು ಹೆಚ್ಚಾಗಿ ನೇಮಿಸಿದರೆ ಅವರಿಗೆ ರುಜು ಮಾಡುವ ಕೆಲಸ ಮಾತ್ರ ಸಾಮಾನ್ಯವಾಗಿ ಇರುವುದರಿಂದ ಹೆಚ್ಚು ಉಪಯೋಗವಾಗುವುದಿಲ್ಲ. ಅಲ್ಲದೆ ಸಂಬಂಧಪಟ್ಟ ಖಾತೆಗಳಲ್ಲಿ ದುಡಿದು ಅನುಭವ ಪಡೆದವರಿಗೆ ಬಡ್ತಿ ಕೊಡದೆ ಡೈರೆಕ್ಟಾಗಿ ಮೇಲಧಿಕಾರಿಗಳನ್ನು ನೇಮಿಸುವುದನ್ನು ನೋಡಿ ದುಃಖವಾಗುತ್ತಿದೆ. ನಮ್ಮ ಡಿವಿಜನ್‌ನಲ್ಲಿ ಇದನ್ನು ನೋಡಿ ಸಾಕಾಗಿದೆ. ಇದು ಸರಿಯಲ್ಲ.

ಮೂರನೆಯದು ಭೂಸುಧಾರಣೆ, ದೊಡ್ಡ ಮೇಟಿಯವರು ಈ ಸಂಬಂಧದಲ್ಲಿ ತೆಗೆದುಕೊಂಡಿರುವ ಕಾರ್ಯಕ್ರಮದ ವಿಚಾರವನ್ನು ಹೇಳಿದರು. ಬೆಳಗಾವಿ ಡಿವಿಜನ್ ನಾಲ್ಕು ಜಿಲ್ಲೆಗಳಲ್ಲಿ ಅರುವರ್ಷಗಳಿಂದ ರೈತರು ಐದು ಪಟ್ಟು ಕೊಡುತ್ತಿದ್ದರು. ಅನೇಕ ಸಣ್ಣಪುಟ್ಟ ಮಾಲೀಕರು ಬೇರೆ ಇದ್ದಾರೆ. ಸರಾಸರಿ ಉತ್ಪತ್ತಿ 300 ರೂಪಾಯಿಗಳಿಂದ 400 ರೂಪಾಯಿಗಳವರೆಗಿದೆ. ಮೈಸೂರಿನ ಕೆಲವು ಭಾಗಗಳಲ್ಲಿ ಮೂರು ಪಾಲು ತೆಗೆದುಕೊಳ್ಳುತ್ತಿದ್ದಾರೆ. ಈ ಸಂಬಂಧದಲ್ಲಿರುವ ತೊಂದರೆಗಳನ್ನು ಹತ್ತು ವರ್ಷಗಳಿಂದ ಹೇಳುತ್ತಿದ್ದರೂ ಭೂಸುಧಾರಣೆ ಜಾರಿಗೆ ತರುವುದನ್ನು ಇನ್ನೂ ಮುಂದಕ್ಕೆ ತಳ್ಳುತ್ತಿದ್ದಾರೆ. ಇದರಿಂದ ದೊಡ್ಡ ಮೇಟಿಯವರು ಹೇಳಿದ ಹಾಗೆ ಕೆಲವರಿಗೆ ಅನುಕೂಲವಾಗಿದೆ. ಬೆಳಗಾವಿ ಡಿವಿಜನ್ನಿನ ಸಾಮಾನ್ಯ ಜನರಿಗೆ ಕೇವಲ ಮೂರರಿಂದ ಐದು ಎಕರೆಗಳು ಮಾತ್ರವಿದ್ದು ವರ್ಷದ ಖರ್ಚಿಗೆ ಒಂದು ಸಾವಿರ ರೂಪಾಯಿಗಳು ಸಹ ದೊರೆಯದೆ ಅವರು ಬಹಳ ಕಷ್ಟಪಡುತ್ತಿದ್ದಾರೆ. ಆದುದರಿಂದ ಭೂಸುಧಾರಣೆಯನ್ನು ಜಾಗ್ರತೆಯಾಗಿ ಜಾರಿಗೆ ತಂದು ಲಾವಣಿ ಪದ್ಧತಿ ವಗೈರೆ ಸುಧಾರಣೆ ಮಾಡಿದರೆ ಅವರಿಗೆ ಅನುಕೂಲವಾಗುತ್ತದೆ. ಈ ದೃಷ್ಟಿಯಿಂದ ಸರ್ಕಾರ ಭೂಸುಧಾರಣೆಯನ್ನು ಕೂಡಲೆ ಜಾರಿಗೆ ತರಬೇಕು. ಈಗ ನಡೆದಿರುವ ರೀತಿಯಿಂದ ಮೈಸೂರಿಗೆ ಸೇರದೆ ಇದ್ದರೆ ಚೆನ್ನಾಗಿತ್ತು ಎಂದು ನಮ್ಮ ನಾಲ್ಕು ಜಿಲ್ಲೆಗಳವರಿಗೆ ಅನ್ನಿಸುತ್ತಿದೆ. ಮಂತ್ರಿಗಳಿಗೆ 30 ಸಾವಿರ ರೂಪಾಯಿ ಬೆಳೆಬಾಳುವ ಕಾರಿದೆ. ಆ ಹಣಕ್ಕೆ ಬರುವ ಬಡ್ಡಿಯಷ್ಟು ಉತ್ಪತ್ತಿಯಿಲ್ಲದಿರುವ ಮಾಲೀಕರು ಸಹ ಇದ್ದಾರೆ. ಅಂಥವರಿಗೆ ಯಾವ ರೀತಿಯ ಪರಿಹಾರವನ್ನು ಕೊಟ್ಟಿಲ್ಲ. ಇದೆಲ್ಲವನ್ನು ಗಮನಿಸಿ ಜಾಗ್ರತೆಯಾಗಿ ಭೂಸುಧಾರಣೆಯನ್ನು ಜಾರಿಗೆ ತರಬೇಕಾದ್ದು ಅವಶ್ಯಕ. ಸರ್ಕಾರ ನಾನು ಹೇಳಿದ ಮೂರು ವಿಷಯಗಳ ಬಗ್ಗೆ ಬರುವ ವರ್ಷದಲ್ಲಾದರೂ ಸಾಕಷ್ಟು ಕಾರ್ಯಕ್ರಮ ಕೈಕೊಂಡು ಈಗ ಇರುವ ದುರವಸ್ಥೆಯನ್ನು ಹೋಗಲಾಡಿಸಬೇಕೆಂದು ಪ್ರಾರ್ಥಿಸಿ ನನ್ನ ಮಾತನ್ನು ಮುಗಿಸುತ್ತೇನೆ.

[MR. SPEAKER.—In the chair]

ಶ್ರೀಮತಿ ಕೆ. ಎಸ್ ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಅಧ್ಯಕ್ಷ, ರಾಜ್ಯಪಾಲರ ಭಾಷಣದಮೇಲೆ ಮಾತನಾಡುವುದು ಒಂದು ಅಭ್ಯಾಸವಾಗಿದೆ. ನಮ್ಮ ರಾಜ್ಯಪಾಲರು ಆಗಾಗ್ಗೆ ಭಾಷಣ ಮಾಡುತ್ತಲಿದ್ದಾರೆ. ಇದರ ವಿಚಾರದಲ್ಲಿ ನಾನು ನಾಲ್ಕು ಮಾತುಗಳನ್ನಾಡಬೇಕೆಂದಿದ್ದೇನೆ.

ನಾವು ಈ ಸಂಬಂಧದಲ್ಲಿ ಮಾಡಿದ ಭಾಷಣಗಳಿಗೆ ಸರ್ಕಾರ ಎಷ್ಟುಮಟ್ಟಿಗೆ ಬೆಲೆ ಕೊಡುತ್ತಿದೆ ಎಂಬುದನ್ನು ನಾನು ಐದಾರು ವರ್ಷಗಳಿಂದ ನೋಡುತ್ತಿದ್ದೇನೆ. ನಮ್ಮ ಭಾಷಣವನ್ನು ವೃತ್ತಪತ್ರಿಕೆಗಳಲ್ಲಿ ನೋಡಿ ನಾವು ಸಂತೋಷ ಪಡಬೇಕಾಗಿದೆಯೇ ಹೊರತು ಅದರಿಂದ ನೇಕಡ ಒಂದು ಅಥವಾ ಅರ್ಧದಷ್ಟಾದರೂ ಪ್ರಯೋಜನವಾಗುತ್ತಿಲ್ಲ. ಮೊನ್ನೆ ಮಂತ್ರಿಗಳೊಬ್ಬರು ಮೈಸೂರಿನಲ್ಲಿ ಒಂದು ಸಂದರ್ಭದಲ್ಲಿ ಯಾರು ಕಾರ್ನರ್ ಮಾಡಿದರೂ ಕೂಡ ನಾವು ಆಡಳಿತನಡೆಸುವುದೇ ಹೀಗೆ ಎಂದು ಹೇಳಿದರಂತೆ. ಹೀಗೆ ಜನರ ಮುಂದೆ ಅವರು ಲಘುವಾಗಿ ಹೇಳಬಾರದು. ಏಕೆಂದರೆ

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ಸದಸ್ಯರಾದ ನಾವೆಲ್ಲಾ ದಡ್ಡರಿರಬಹುದು, ಆದರೆ ಪ್ರಪಂಚದಲ್ಲಿರುವವರೆಲ್ಲಾ ದಡ್ಡರಲ್ಲ. ಅವರು ಇಂಥ ವಿಚಾರಗಳನ್ನು ಕೇಳಿದರೆ ಏನೆಂದು ಕೊಂಡಾರು ?

ನಮ್ಮ ಮಹಾರಾಜರು ದೊಡ್ಡ ವೇದಾಂತಿಗಳು ಎಲ್ಲಾ ದೇಶಗಳಲ್ಲೂ ತಿರುಗಿ ಬಹಳ ಅನುಭವ ಪಡೆದಿದ್ದಾರೆ. ಅದಕ್ಕೆ ತಕ್ಕಂತೆ ಈಗಿನ ವಿಶೇಷ ಪರಿಸ್ಥಿತಿಯಲ್ಲಿ ಎಲ್ಲರ ಭಿನ್ನಾಭಿಪ್ರಾಯಗಳನ್ನು ಮರೆತು ಒಟ್ಟಾಗಿ ಕೆಲಸಮಾಡೋಣ ಎಂದು ಹೇಳಿದ್ದಾರೆ. ಅವರು ಬಹಳ ಅನುಭವಶಾಲಿಗಳೂ, ಬುದ್ಧಿವಂತರೂ ಆಗಿರುವುದರಿಂದ ಅವರ ಮನಸ್ಸಿಗೆ ಆಗಿರುವ ನೋವನ್ನು ಇದುವರೆಗೆ ಹೇಗೋ ಸಹಿಸಿಕೊಂಡಿದ್ದಾರೆ. ಇಲ್ಲದಿದ್ದರೆ ಇದುವರೆಗೆ ಚೂರಾಗುತ್ತಿದ್ದರು. ಎಂದು ನನಗನಿಸುತ್ತದೆ. ಅವರು ತಮ್ಮ ಭಾಷಣದಲ್ಲಿ ಅನೇಕ ವಿಷಯಗಳನ್ನು ಪ್ರಸ್ತಾಪಿಸಿದ್ದಾರೆ.

Emergency measures ಸಂಬಂಧವಾಗಿ ಎಷ್ಟೋ ಸಮಿತಿಗಳನ್ನು ಮಾಡಿದ್ದೇವೆ, ಏನೇನೋ ಕೆಲಸಗಳನ್ನು ಮಾಡುತ್ತಿದ್ದೇವೆ, ಡೆಪ್ಯುಟಿ ಕಮಿಷನರುಗಳೂ ಸಮಿತಿಗಳ ಸದಸ್ಯರೂ ಕೆಲಸಮಾಡುತ್ತಿದ್ದಾರೆ ಎಂದು ಹೇಳಿದ್ದಾರೆ. ನಿಜ, ಕೆಲಸಮಾಡುತ್ತಿದ್ದಾರೆ. ಆದರೆ ಈ ಸಂಬಂಧವಾಗಿ ಹೆಣ್ಣು ಮಕ್ಕಳು ಇಷ್ಟು ಕೆಲಸಮಾಡಿದ್ದಾರೆ ಎಂದೇನಾದರೂ ಹೇಳಿದ್ದಾರೆಯೆ ಎಂದು ನೋಡಿದರೆ, ಎಲ್ಲಿಯೂ ಹೇಳಿಲ್ಲ. ಹೆಣ್ಣುಮಕ್ಕಳು ತಾವಿಟ್ಟುಕೊಂಡಿದ್ದ ಆಪದ್ಧನ, ಆಭರಣಗಳು ಮುಂತಾದುವನ್ನು ಕೊಟ್ಟಿದ್ದಾರೆ, ಅವರಿಂದ ಕಿತ್ತುಕೊಂಡಿದ್ದಾರೆ. ಇದಕ್ಕಾಗಿ ಅವರಿಗೆ ಒಂದು ಧನ್ಯವಾದಕೂಡ ಇಲ್ಲ. ಎಲ್ಲವೂ ಗಂಡಸರಿಗೆ ಮೀಸಲು. ದೇಶದಲ್ಲಿ ಶೇಕಡ 50 ರಷ್ಟು ಜನ ಹೆಣ್ಣುಮಕ್ಕಳಿದ್ದರೂ ಹೀಗಾಗಿದೆ!

ಶ್ರೀ ಆರ್. ಎಂ. ಪಾಟೀಲ್.—ಯಾರು ಕೊಟ್ಟಿದ್ದಾರೋ ಅವರಿಗೆ ಧನ್ಯವಾದಗಳನ್ನು ಕೊಟ್ಟಿದ್ದೇವೆ; ನೀವೇನೂ ಕೊಟ್ಟಿಲ್ಲವೆಂದು ಕಾಣುತ್ತದೆ.........

ಶ್ರೀಮತಿ ನಾಗರತ್ನಮ್ಮ.—ನನ್ನ ವಿಷಯ ಬೇರೆ, ಅದನ್ನು ನಾನು ಹೇಳುತ್ತಿಲ್ಲ. ನಾವು ಇಷ್ಟು ಕೊಟ್ಟಿದ್ದೇವೆ, ನಮ್ಮ ಹೆಸರನ್ನು ಪಟ್ಟಿಯಲ್ಲಿ ಸೇರಿಸಿ ಎಂದು ಕೇಳುವುದು ನಮ್ಮ ಮನೆಯ ಮರ್ಯಾದೆಗೂ ಗೊತ್ತಿಲ್ಲ. ಸಾಮಾನ್ಯವಾಗಿ ಎಲ್ಲ ಹೆಣ್ಣುಮಕ್ಕಳ ವಿಷಯವನ್ನು ಹೇಳುತ್ತಿದ್ದೇನೆ, ಅದನ್ನು ನೀವು ಕೇಳಿ.

ಹೆಣ್ಣುಮಕ್ಕಳು ಚಿನ್ನ, ಆಭರಣಗಳನ್ನು ಕೊಡುವ ವಿಷಯದಲ್ಲಿ ಮಾತ್ರವೇ ನಾನು ಹೇಳುತ್ತಿಲ್ಲ. ಹೆಣ್ಣುಮಕ್ಕಳ ವಿಷಯದಲ್ಲಿ ಸರ್ಕಾರಕ್ಕಿರುವ ಧೋರಣೆ ಮತ್ತು ಸರ್ಕಾರ ಹೆಣ್ಣುಮಕ್ಕಳಿಗೆ ಕೊಡುತ್ತಿರುವ ಸ್ಥಾನಮಾನ ಮತ್ತು ಗೌರವದ ವಿಚಾರ ಹೇಳುತ್ತಿದ್ದೇನೆ. ಪುನಃ ನಾವು ಹುಟ್ಟಿದರೆ ಈ ದೇಶದಲ್ಲೇ ಹುಟ್ಟಬೇಕು, ಮನುಷ್ಯನಾಗಿ ಅಲ್ಲದಿದ್ದರೆ ಮರವಾಗಿಯಾದರೂ ಅಥವಾ ಕಲ್ಲಾಗಿ ಆದರೂ ಇಲ್ಲಿಯೇ ಹುಟ್ಟುವಂತೆ ಮಾಡು ಭಗವಂತ ಎಂದು ಯಾರೋ ಕೇಳಿಕೊಂಡರಂತೆ. ಈಗಿನ ಪರಿಸ್ಥಿತಿಯನ್ನು ನೋಡಿದರೆ, ಮಣ್ಣಾಗಿಯೂ ಬೇಡ, ಕಲ್ಲಾಗಿಯೂ ಬೇಡ, ಈ ದೇಶದಲ್ಲಿ ಹುಟ್ಟುವುದೇ ಬೇಡ ಎಂದು ಕೇಳಿಕೊಳ್ಳುವಂತಿದೆ. ಇದನ್ನು ನಾನು ಯಾರನ್ನಾದರೂ ನಗಿಸಬೇಕೆಂದಾಗಲೀ ವಿನೋದಕ್ಕಾಗಲೀ ಹೇಳುತ್ತಿಲ್ಲ. ಹೆಣ್ಣುಮಕ್ಕಳಿಗೆ ಇಲ್ಲಿ ಎಷ್ಟು ಕಷ್ಟವಿದೆ, ಎಷ್ಟು ಬಿಕ್ಕಟ್ಟಿದೆ, ಎಷ್ಟು ಇಕ್ಕಟ್ಟಿದೆ ಎನ್ನುವುದನ್ನು ಹೇಳುತ್ತಿದ್ದೇನೆ.

ಇನ್ನು ಪದಾರ್ಥಗಳ ಬೆಲೆಗಳನ್ನು ಹತೋಟಿಗೆ ತಂದಿದ್ದೇವೆಂದು ಹೇಳಿದ್ದಾರೆ. ಇವರೇನು ಮಾಡಿದ್ದಾರೆ ? ರೈತ ಬೆಳೆಯುವ ಪದಾರ್ಥಗಳ ಬೆಲೆಗಳನ್ನು ಹತೋಟಿಗೆ ತಂದರು. ಆದರೆ ಅವನು ಕೊಳ್ಳುವ ಪದಾರ್ಥಗಳ ಬೆಲೆಗಳ ವಿಷಯದಲ್ಲಿ ಏನು ಮಾಡಿದ್ದಾರೆ ! ಆಹಾರ ಪದಾರ್ಥಗಳ ಬೆಲೆ ಹತೋಟಿಗೆ ತಂದರೆ, ಬಾಕಿ ಸಾಮಾನುಗಳನ್ನು ರೈತ ಹೇಗೆಕೊಂಡು ಕೊಳ್ಳಬೇಕು ? ಅವುಗಳ ಬೆಲೆ ಹೆಚ್ಚಾದರೆ, ರೈತ ಏನಾಗಬೇಕು ? ತಾನು ಬೆಳೆದ ಪದಾರ್ಥಕ್ಕೆ ನಾಲ್ಕು ರೂಪಾಯಿ ಇದ್ದುದಕ್ಕೆ ನಾಲ್ಕಾಣೆ ತೆಗೆದುಕೊಂಡು ತಾನು ಕೊಳ್ಳಬೇಕಾದ ಪದಾರ್ಥಗಳಿಗೆ ಹತ್ತು ರೂಪಾಯಿ ಕೊಡಬೇಕಾದರೆ ಅವನ ಸ್ಥಿತಿ ಏನಾಗಬೇಕು ? ಸರ್ಕಾರದವರು ರೈತನಿಗೆ ನಿಜವಾಗಿಯೂ ಅನ್ಯಾಯಮಾಡುತ್ತಿದ್ದಾರೆಂದು ನಾನು ಹೇಳಬೇಕಾಗಿದೆ

ಸೇವಾ ಸಹಕಾರಸಂಘಗಳ ವಿಚಾರ ಹೇಳುವುದಾದರೆ, ಹೇಗೆತಾನೆ ಇವು ಚೆನ್ನಾಗಿ ನಡೆಯಬೇಕು ? ಅಲ್ಲಿರುವ ಕೋ-ಆಪರೇಟಿವ್ ಎಕ್ಸ್ಟೆನ್ಷನ್ ಆಫೀಸರ ಗಳಿಗೆ ಎಲ್ಲರಿಗಿಂತ ಕಡಮೆ ಸಂಬಳ. ಕೈಗಾರಿಕೆ, ವ್ಯವಸಾಯ, ಸೆರಿಕಲ್ಚರ್ ಇಲಾಖೆಗೆ ಸಂಬಂಧಪಟ್ಟ ಎಲ್ಲರಿಗೂ ಸಂಬಳ ಹೆಚ್ಚಾಗಿದೆ. ಆದರೆ ಈ ಕೋ-ಆಪರೇಟಿವ್ ಎಕ್ಸ್ಟೆನ್ಷನ್ ಆಫೀಸರುಗಳಿಗೆ ಮಾತ್ರ ಹೆಚ್ಚುಮಾಡಿಲ್ಲ. ಇವರೂ ಕೊಂಡು ತಿನ್ನುವವರಾದವರೂ ಇವರಿಗೆ ಮಾತ್ರ ಹೆಚ್ಚು ಸಂಬಳ ಕೊಟ್ಟಿಲ್ಲ. ಬ್ಯಾಂಕ್‌ಗಳಲ್ಲಿ ಕೆಲಸ ಮಾಡುತ್ತಿದ್ದರೂ ಇವರಿಗೇಕೆ ಇತರರಂತೆ ಹೆಚ್ಚಿನ ಸಂಬಳ ಕೊಟ್ಟಿಲ್ಲ ? ಅವರಲ್ಲೇನಾದರೂ ತಪ್ಪು

ಕಂಡುಹಿಡಿದರೆ, ಏಕ್‌ದಮ್ ಎಲ್ಲಿಗೋ ವರ್ಗ ಮಾಡಿಬಿಡುತ್ತಾರೆ. ಕಡಮೆ ಸಂಬಳ ಪಡೆದು ಒಳ್ಳೆಯ ಕೆಲಸಮಾಡಿದರೆ ಇದೇ ಸಂಭಾವನೆಯೆ? ಜನರಲ್‌ಬಾಡಿ ಮೀಟಿಂಗ್ ಆದರೆ ಅದಕ್ಕೆ ಡೆಪ್ಯುಟಿ ಮಿನಿಸ್ಟರು ಅಥವಾ ಅವರಿಗೆ ಬೇಕಾದವರನ್ನು preside ಮಾಡಲು ಕರೆಯಲಿಲ್ಲವೆಂಬುದು ಒಂದು ದೊಡ್ಡ ತಪ್ಪು. ಇದಕ್ಕೇ ವರ್ಗಮಾಡಿಬಿಡುತ್ತಾರೆ ಎಲ್ಲ ಕಡೆಯೂ ಹೀಗೆ ನಡೆಯುತ್ತಿದೆ. Study Team ಎಂದು ರಚಿಸಿ ಕಳುಹಿಸಿದ್ದಾರೆ. ಇದರಲ್ಲಿ ಮಹಿಳಾ ಸದಸ್ಯರಾರಾದರೂ ಇದ್ದಾರೆಯೆ? ಇದನ್ನು ಕೇಳಿದರೆ ತುರ್ತು ಪರಿಸ್ಥಿತಿ ಬರುವುದಕ್ಕೆ ಮುಂಚೆಯೇ ಮಾಡಿದ್ದು ಎಂದು ಹೇಳುತ್ತಾರೆ. ಮುಂಚೆಕೂಡ ಹೆಣ್ಣುಮಕ್ಕಳು ಸಿಕ್ಕುತ್ತಿರಲಿಲ್ಲವೆ! ಬಹುಶಃ ಸಹಕಾರ ಕ್ಷೇತ್ರದಲ್ಲಿ ಇವರಿಗೆ ಹೆಣ್ಣುಮಕ್ಕಳು ಬೇಕಿಲ್ಲವೆಂದು ಕಾಣುತ್ತದೆ.

ಮಳೆ ಬೆಳೆಗಳ ಪರಿಸ್ಥಿತಿಯ ವಿಚಾರ ಮಾತನಾಡುತ್ತಾ, ಕೋಲಾರದಲ್ಲಿ ಹೆಚ್ಚಿನ ಮಳೆಯಾಗಿ ಕೆಲವು ಕೆರೆಗಳು ಒಡೆದು ಹೋದವು ಎಂದು ಹೇಳಿದ್ದಾರೆ. ಕಡಿದಾಳ್ ಮಂಜಪ್ಪನವರು ಮಂತ್ರಿಗಳಾಗಿದ್ದಾಗ ಅವರು ಸುತ್ತಾಡುವುದಕ್ಕೆ ಒಂದು ಹೆಲಿಕಾಪ್ಟರ್ ಕೊಡಿಸಬೇಕು, ಗಾಳಿಯ ಹಾಗೆ ಓಡಾಡುತ್ತಾರೆ ಎಂದು ಹೇಳುತ್ತಿದ್ದರು. ಆದರೆ, ಈಗಿನ ರೆವಿನ್ಯೂ ಮಂತ್ರಿಯವರು ನಮ್ಮ ಕಡೆ ಬರಲಿ ಎಂದು ಎಷ್ಟು ಹೇಳಿದರೂ ಬರುವುದಿಲ್ಲ. ಅಲ್ಲಿನ ಜನ ರಾಗಿಕಲ್ಲಿಗೆ ರಾಗಿ ಹಾಕಿ ಬೀಸಿ ಎಷ್ಟೋ ದಿವಸಗಳಾಗಿವೆ, ರಾಗಿ ಬೆಳೆಯೇ ಇಲ್ಲ. ಹಿಂದೆ ಕಡಲೆಕಾಯಿತಿನ್ನುತಿದ್ದರು, ಈ ಸಾರಿ ಕಡಲೆ ಕಾಯಿ ಬೆಳೆಕೂಡ ಇಲ್ಲ. ಒಂದು ಸಾರಿಯಾದರೂ ಬಂದು ನೋಡಿ ಎಂದು ಹೇಳಿದೆ, ಬರಲಿಲ್ಲ. ಚಾಮರಾಜನಗರಕ್ಕೆ ಹೋಗುತ್ತಾರೆ, ಅಲ್ಲಿಂದ ಕೊಳ್ಳೇಗಾಲಕ್ಕೆ ಹೊರಟುಹೋಗುತ್ತಾರೆ. ನಮ್ಮ ಕಡೆ ಬರುವುದಿಲ್ಲ. ಮುಖ್ಯಮಂತ್ರಿಗಳನ್ನು ಕೂಡ ಕರೆದೆ, ಅವರೂ ಬರಲಿಲ್ಲ. ನಾವು ಅವರಿಗೇನು ಮಾಡಿದ್ದೇವೋ ಗೊತ್ತಿಲ್ಲ. ಬನ್ನಿ ಎಂದು ಗೋಗರೆಯುತ್ತೇವೆ, ಆದರೂ ಬರುವುದಿಲ್ಲ. ಅದೇನು ಭಯವೋ ಗೊತ್ತಿಲ್ಲ. ನೀರಾವರಿ ಬಾವಿಗಳು, ಪಂಪುಗಳು ಇವುಗಳ ಬಗ್ಗೆ ತೆಗೆದುಕೊಂಡಿರುವ ಕಾರ್ಯಕ್ರಮಕ್ಕಾಗಿ ಸರ್ಕಾರವನ್ನು ಅಭಿನಂದಿಸಬೇಕಾಗಿದೆ. ಸರ್ಕಾರದವರು ಕಮ್ಯೂನಿಟಿ ವೆಲ್ಸ್ ತೆಗೆದು ಅವಕ್ಕೆ ಪಂಪುಹಾಕಿಕೊಟ್ಟರೆ ಎಷ್ಟೋ ಅನುಕೂಲವಾಗುತ್ತದೆಂದು ನಾನು ಹೇಳುತ್ತೇನೆ.

ಇನ್ನು ಸಮಾಜ ಕಲ್ಯಾಣ ಚಟುವಟಿಕೆ ಕಾರ್ಯ ಚೆನ್ನಾಗಿ ನಡೆಯುತ್ತಿದೆ ಎಂದು ಹೇಳಿದ್ದಾರೆ. ಇದು no asker, no teller ಎನ್ನುವ ಹಾಗಿದೆ. ಉದಾಹರಣೆಗೆ ನಮ್ಮೂರಿನಲ್ಲಿ ಹರಿಜನರ ಕಲ್ಯಾಣಕ್ಕಾಗಿ Harijan Colony ಗಳಾಗಿವೆ. ಎಲ್ಲವೂ ಮುರಿದು ಬೀಳುತ್ತಿವೆ. ಶ್ರೀಮಾನ್ ರಾಚಯ್ಯನವರು ಕೇಳಿದರೆ ಅದನ್ನು ಯಾರು ಕಟ್ಟಿದರು ಎಂದು, ಅವರವರೇ ಕಟ್ಟಿಕೊಂಡರು ಎಂದು ಕಂಟ್ರಾಕ್ಟರು ಹೇಳಿದರು, ಅದನ್ನು ಒಪ್ಪಿಕೊಂಡು ಬಂದರು. ಆಮೇಲೆ ಸಮಾಜ ಕಲ್ಯಾಣ ಮಂತ್ರಿಗಳು ಬಂದು ಕೇಳಿದರು. ಅವರು ಕಂಟ್ರಾಕ್ಟರ ಮನೆಗೆ ಹೋಗುತ್ತಾರೆ: ಅಲ್ಲಿಗೆ ಬಂದ ತಕ್ಷಣ ಊಟ, ಕಾಫಿ, ತಿಂಡಿ ಮಾಡಿಕೊಂಡು ಬರುತ್ತಾರೆ. ಇದನ್ನು ನೋಡಿದರೆ, ಅಯ್ಯೋ ಪಾಪ, ಎನಿಸುತ್ತದೆ. ಇಂಥದನ್ನೆಲ್ಲಾ ನಿಜವಾಗಿಯೂ ಮುಖ್ಯ ಮಂತ್ರಿಗಳು ನೋಡಿಕೊಳ್ಳಬೇಕು. ಈ ಅವಾಂತರವನ್ನು ಹೇಳುವುದಕ್ಕೆ ಸಾಧ್ಯವಿಲ್ಲ.

ವ್ಯವಸಾಯೋತ್ಪನ್ನ ಕಾರ್ಯಕ್ರಮದ ಪ್ರಾಧಾನ್ಯತೆಯ ವಿಷಯ ಹೇಳಬೇಕಾಗಿದೆ. 1942 ನೆಯ ಇಸವಿಯಲ್ಲಿ grow more food campaign ಬಂದಾಗ ನಮ್ಮ ವಿಜಯಾಪುರದ ಅಮಾನಿ ಕೆರೆ ಬಳಿ ಹೆಚ್ಚು ಬೆಳೆಯಬೇಕೆಂದು ಜಮೀನು ಸಾಗುವಳಿಗೆ ಕೊಟ್ಟರು. ಆ ಭೂಮಿಯನ್ನು ಇಪ್ಪತ್ತು ವರ್ಷದಿಂದ ರೈತರು ಸಾಗುವಳಿ ಮಾಡಿಕೊಂಡು ಬರುತ್ತಿದ್ದರು. ಹೋದ ಚುನಾವಣೆಯಾದ ಮೇಲೆ ಆ ರೈತರಿಗೆ ಎವಿಕ್ಷನ್ ನೋಟೀಸ್ ಕೊಟ್ಟಿದ್ದಾರೆ. ಏಕೆಂದರೆ, ಅದು ಕೆರೆಗೆ ಹಾಳು ತರುತ್ತದೆಂದು ಹೇಳುತ್ತಾರೆ, ಕಲ್ಲುಕಟ್ಟೆ project ಆಗುತ್ತಾ ಇದೆ. ಕಲ್ಲುಕಟ್ಟೆ ಹಳ್ಳದಿಂದ ಇನ್ನು ಕೆಲವು ದಿವಸದಲ್ಲಿ ವಿಜಯಾಪುರದ ಕೆರೆಯಿಂದ ನೀರು ಬರುವಂತೆ ನಾಲೆಯನ್ನು ಮಾಡಿಸಿದರೆ ನಮಗೆ ಕೆರೆಯೇ ಬೇಡ. ಈಗ ಏನಾಗಿದೆಯೆಂದರೆ, ಕೆಲವು ಅಧಿಕಾರಿಗಳು ಸೇರಿಕೊಂಡು ಆ ರೈತರು ಬೆಳೆಯಿಟ್ಟರೆ ಅದನ್ನು ತುಳಿಸುವುದು, ಬೆಳೆಗೆ ಬೆಂಕಿ ಹಾಕಿಸುವುದು, ಕಿತ್ತು ಹಾಕಿಸುವುದು, ದನಗಳನ್ನು ಬಿಟ್ಟು ಮೇಯಿಸುವುದು ಹೀಗೆಲ್ಲ ಮಾಡಿಸುತ್ತಿದ್ದಾರೆ. ಇದರಿಂದ ವ್ಯವಸಾಯೋತ್ಪನ್ನ ಹೆಚ್ಚು ಮಾಡಲು ಕುಮ್ಮಕ್ಕು ಕೊಟ್ಟಂತಾಗುತ್ತದೆಯೆ? ಇದು ನನಗೆ ಅರ್ಥವಾಗುತ್ತಿಲ್ಲ. ಇದು ಎಂಥ ವಿರೋಧಾಭಾಸ!

ಕೈಗಾರಿಕೆ ಖನಿಜಗಳ ವಿಚಾರ ಹೇಳುವುದಾದರೆ, ಹಿಂದೆ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಸರ್ವೆ ಮಾಡಿದರು ಗೋಪಾಲಸ್ವಾಮಿ ಬೆಟ್ಟದಲ್ಲಿ ಕೈಗಾರಿಕೆಗೆ ಅಗತ್ಯವಾದ raw materials ಇದೆಯೆಂದು ಹೇಳಿದ್ದರು. ಇದನ್ನು ದಯವಿಟ್ಟು ಮಂತ್ರಿಗಳು ನೋಡಬೇಕು. ಆ ತಾಲ್ಲೂಕು ಅಭಿವೃದ್ಧಿಯಾಗಬೇಕಾದರೆ ಈ ಕಡೆ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಇರಿಗೇಷನ್ ವಿಚಾರಕ್ಕೆ ಬರುತ್ತಾ ನೀರಾವರಿ ಪ್ರಾಜೆಕ್ಟು ವಿಚಾರದಲ್ಲಿ ನಮ್ಮ ತಾಲ್ಲೂಕಿಗೆ ಗ್ರಹಣ ಸುತ್ತಿಕೊಂಡಿತ್ತು. ಈಗ ಒಳ್ಳೆಯ ಕಾಲ ಬಂದಿದೆ ಎಂದು ಕಾಣುತ್ತದೆ. ಶ್ರೀಮಾನ್

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ವೀರಣ್ಣಗೌಡರು ಕೆಲವು ಒಳ್ಳೆಯ ಕೆಲಸವನ್ನು ಮಾಡಿಸಿ ಕೊಟ್ಟಿದ್ದಾರೆ. ಅದಕ್ಕೋಸ್ಕರ ನಾವು ಅವರಿಗೆ ತುಂಬಾ ಅಭಾರಿಯಾಗಿದ್ದೇವೆ. ಅಲ್ಲಿ ಒಂದು ದೊಡ್ಡ ಮೂಲ ಹೊಳೆ ಎಂದು ಇದೆ. ಅದು ಏನು ಕಾರಣವೋ ಗೊತ್ತಿಲ್ಲ. ಈಗ ಸುಮಾರು 25–30 ವರ್ಷಗಳಿಂದ ಅಲ್ಲಿ ಒಂದು ಪ್ರಾಜೆಕ್ಟ್ ಆಗಬೇಕೆಂದು ಹೇಳುತ್ತಿದ್ದರೂ, ಅದನ್ನು ಇದುವರೆಗೂ ಏತಕ್ಕೋಸ್ಕರ ನಿಲ್ಲಿಸಿದ್ದಾರೆಯೋ ನನಗೆ ಗೊತ್ತಿಲ್ಲ. ಆ ಬಗ್ಗೆ ಬೇಕಾದಷ್ಟು ಕರೆಸ್‌ಪಾಂಡೆನ್ಸ್ ಇದೆ. ಮಾನ್ಯ ಮುಖ್ಯ ಮಂತ್ರಿಗಳಿಗೂ ತಿಳಿಸಿದ್ದೇನೆ. ನುಗು ಜಲಾಶಯಕ್ಕೆ ಒಂದು ಫೀಡರ್ ಚಾನಲ್ ಮಾಡಿದ್ದಾರೆ. ಅಲ್ಲಿ ವಿಪರೀತವಾಗಿ ನೀರು ವೇಸ್ಟ್ ಆಗುತ್ತಾ ಇದೆ. ಆದ್ದರಿಂದ ಮೂಲೆ ಹೊಳೆಗೆ ಒಂದು ಡ್ಯಾಂ ಕಟ್ಟಿ ನೀರನ್ನು ಗುಂಡ್ಲುವ್ಯಾಲಿಗೆ ಡೈವರ್ಟ್ ಮಾಡಿದರೆ ಅಲ್ಲಿ ಸುಮಾರು 25–30 ಸಾವಿರ ಎಕರೆಯವರೆಗೆ ನೀರಾವರಿಯಾಗುತ್ತದೆ. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳು ಅದರ ಕಡೆ ನಿಗಾ ಇಟ್ಟು ಅದನ್ನು ಮಾಡಿಕೊಡಬೇಕು ಮತ್ತು ನಮ್ಮ ತಾಲ್ಲೂಕು ಸ್ವಲ್ಪ ಮುಂದುವರಿಯುವ ಹಾಗೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಜನಾರೋಗ್ಯ ರಕ್ಷಣೆಯ ವಿಚಾರದಲ್ಲಿ ಹೇಳುವುದಾದರೆ ಆಸ್ಪತ್ರೆಗಳಿಗೆ ಅವು ಮೊದಲು ಶುರುವಾದಾಗ ಎಷ್ಟು ಔಷಧಿಯನ್ನು ಸರ್ಕಾರದವರು ಸಪ್ಲೈ ಮಾಡುತ್ತಿದ್ದರೋ ಈಗಲೂ ಕೂಡ ಅಷ್ಟೇ ಔಷಧಿಯನ್ನು ಸಪ್ಲೈ ಮಾಡುತ್ತಿದ್ದಾರೆ. ಜನಸಂಖ್ಯೆ ಬೆಳೆದಿದೆ. ಆಸ್ಪತ್ರೆಗಳಿಗೆ ಬರತಕ್ಕಂಥ ಜನಸಂಖ್ಯೆ ಜಾಸ್ತಿಯಾಗುತ್ತಿದೆ. ಇಷ್ಟೆಲ್ಲಾ ಆಗಿದ್ದರೂ ಸಹ ಮೊದಲು ಎಷ್ಟು ಔಷಧಿಯನ್ನು ಸಪ್ಲೈ ಮಾಡುತ್ತಿದ್ದರೋ ಈಗಲೂ ಸಹ ಅಷ್ಟೇ ಔಷಧಿಯನ್ನು ಸಪ್ಲೈ ಮಾಡುತ್ತಿದ್ದಾರೆ. ಯಾರಾದರೂ ಒಬ್ಬ ಮನುಷ್ಯ ಟೈಫಾಯ್ಡ್ ಆಗಿ ಔಷಧಿ ಕೊಡಿ ಎಂದು ಆಸ್ಪತ್ರೆಗೆ ಹೋದರೆ ಒಂದು ಕ್ಲೋರಾ ಮೈಸಿಟಿನ್ ಗುಳಿಗೆಯನ್ನು ಕೊಟ್ಟು ಕಳುಹಿಸುತ್ತಾರೆ. ಸ್ವಲ್ಪ ಏಗ್ರಾವೇಷನ್ ಮಾಡಿ ಟ್ರೀಟ್‌ಮೆಂಟ್ ಕೊಡಿ ಎಂದು ಕೇಳಿದರೆ 6 ಕ್ಲೋರಾ ಮಿಸಿಟಿನ್ ಗುಳಿಗೆಯನ್ನು ಕೊಡುತ್ತಾರೆ. ಇದು ಯಾವ ಲಕ್ಷಣವೋ ನನಗಂತೂ ಅರ್ಥವಾಗುವುದಿಲ್ಲ. ಇದರ ಜೊತೆಗೆ ತಲೆಗೆಲ್ಲಾ ಒಂದೇ ಮಂತ್ರ ಎನ್ನುವ ಹಾಗೆ ಮೆಟರ್ನಿಟಿ ಆಸ್ಪತ್ರೆಗಳಲ್ಲಿ ಕೂಡ ಖಾದಿ ಬೆಡ್‌ಷೀಟ್ ಗಳನ್ನು ಉಪಯೋಗಿಸುತ್ತಿದ್ದಾರೆ. ಅದು 15 ದಿವಸ ಕೂಡ ಬಾಳುವುದಿಲ್ಲ. ವಾಷ್ ಮಾಡುವುದಕ್ಕೆ ಸ್ವಲ್ಪವೂ ತಡೆಯುವುದಿಲ್ಲ. ಆ ಕೊಳಕುಬಟ್ಟೆಯನ್ನು ಕಣ್ಣಿನಿಂದ ನೋಡುವುದಕ್ಕೆ ಆಗುವುದಿಲ್ಲ. ಇದರಲ್ಲೇ ನಮ್ಮ ದೇಶದ ಪ್ರೇಮವೆಲ್ಲಾ ಆಗಿಹೋಗಿದೆ. ಇದನ್ನೆಲ್ಲಾ ಸರ್ಕಾರದವರು ಸರಿಪಡಿಸಬೇಕೆಂದು ನಾನು ಹೇಳುತ್ತೇನೆ.

ಇನ್ನು ಶಿಕ್ಷಣದ ವಿಚಾರದಲ್ಲಿ ಹೇಳುವುದಾದರೆ ಕಂಪಲ್ಸರಿ ವಿದ್ಯಾಭ್ಯಾಸವನ್ನು ಜಾರಿಗೆ ತಂದಿದ್ದೇವೆಂದು ಹೇಳುತ್ತಿದ್ದಾರೆ. ಸ್ಕೂಲು ಇದ್ದ ಕಡೆ ಟೀಚರ್ಸ್ ಇಲ್ಲ. ಟೀಚರ್ಸ್ ಇದ್ದ ಕಡೆ ಸ್ಕೂಲುಗಳಿಲ್ಲ. ಕೆಲವು ಕಡೆ ಶಾಲೆಗಳೂ ಇಲ್ಲ. ಉಪಾಧ್ಯಾಯರೂ ಇಲ್ಲ. ಆದರೆ ಓದತಕ್ಕ ಮಕ್ಕಳೇನೋ ಬೇಕಾದಷ್ಟು ಜನ ಇದ್ದಾರೆ. ಈ ರೀತಿ ಕಡ್ಡಾಯ ಪ್ರಾಥಮಿಕ ವಿದ್ಯಾಭ್ಯಾಸ ನಡೆಯುತ್ತಿದೆ. ಮಾನ್ಯ ವಿದ್ಯಾಮಂತ್ರಿಗಳು ಹೇಳಿರತಕ್ಕ ಸ್ಟೇಟ್‌ಮೆಂಟ್ ವಿಷಯವನ್ನು ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ಆ ವಿಷಯಕ್ಕೆ ನಾನು ಹೋಗುವುದಿಲ್ಲ. ವಿದ್ಯಾಭ್ಯಾಸ ಇಲಾಖೆಯಲ್ಲಿ ಕೆಲವರು ಅದು ಒಂದು ವ್ಯಾಪಾರ ಎಂದು ಮಾಡಿಕೊಂಡಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಮೇಲಿಂದ ಕೆಳಗಿನವರೆಗೂ ಆ ಇಲಾಖೆಯಲ್ಲಿ ಯಾರಿಗೂ ಮರ್ಯಾದೆಯನ್ನು ಕೊಡುವುದಿಲ್ಲ. ವಿದ್ಯಾಭ್ಯಾಸದ ಇಲಾಖೆಯಲ್ಲಿ ಹೆಣ್ಣುಮಕ್ಕಳಿಗೆ ಮರ್ಯಾದೆಯನ್ನು ಕೊಡುವುದಿಲ್ಲ. [* * *]

Mr. SPEAKER.—I will not permit that remark. * * * * * * * *]

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ವಿದ್ಯಾಮಂತ್ರಿಗಳಿಗೆ ಹೆಣ್ಣುಮಕ್ಕಳು ಇವೆಯೋ ಇಲ್ಲವೋ ಗೊತ್ತಿಲ್ಲ. ಹೆಣ್ಣು ಮಕ್ಕಳು ಬಹುಶಃ ಇಲ್ಲದೆ ಇರುವುದರಿಂದ ಅವರಿಗೆ ಹೆಣ್ಣುಮಕ್ಕಳ ಕಷ್ಟ ಸುಖಗಳು ಅರ್ಥವಾಗುವುದಿಲ್ಲವೋ ಏನೋ ಎನ್ನುವ ಭಾವನೆ ನನಗೆ ಬಂದಿದೆ. ಏತಕ್ಕೆಂದರೆ ವಿದ್ಯಾಭ್ಯಾಸಕ್ಕೋಸ್ಕರ ಒಂದು ಸ್ಕೂಲನ್ನು ಕೊಡಿ ಎಂದು ಕೇಳುವುದು ತಪ್ಪಾಗಿದೆ. ಸ್ಕೂಲಿಗೋಸ್ಕರ ಹಣವನ್ನು ಕಲೆಕ್ಟ್ ಮಾಡಿ ಅಪ್ಲಿಕೇಷನ್ ಕೊಟ್ಟು ಸ್ಕೂಲು ಕೊಡಿ ಎಂದು ಕೇಳಿದರೂ ಸಹ ಸ್ಕೂಲು ಕೊಟ್ಟಿಲ್ಲ. ಮುಖ್ಯ ಮಂತ್ರಿಗಳಿಗೆ ನಾನು ಈ ವಿಷಯವನ್ನು ಹೇಳಿದ್ದೇನೆ. ಅವರು ಸ್ಕೂಲನ್ನು ಕೊಡುವುದಕ್ಕೆ ಒಪ್ಪಿಕೊಂಡಿದ್ದಾರೆ. ನಮ್ಮ ವಿದ್ಯಾಮಂತ್ರಿಗಳು ನಮ್ಮ ಕಾನ್ಸ್ಟಿಟ್ಯೂಯೆನ್ಸಿಗೆ ಪ್ರವಾಸ ಬರುವುದಾದರೆ ಅವರ ಪ್ರವಾಸದ ಪ್ರೋಗ್ರಾಮ್ ಕಾಪಿ ಕೂಡ ನನಗೆ ಬರುವುದಿಲ್ಲ.

*** Expunged as ordered by the Chair.

ನಮ್ಮ ಊರಿಗೆ ಏಕದಮ್ ಹೋಗಿ "This is an history making place" ಎಂದು ಹೇಳುತ್ತಾರೆ. ಏನಿದು ಈ ಮುಖ್ಯಮಂತ್ರಿಗಳು ಹೀಗೆಲ್ಲಾ ಮಾಡುತ್ತಾರೆ ಎಂದು ಗೊಣಗುಟ್ಟುತ್ತಾರೆ. ಹೀಗೆಲ್ಲಾ ಅವರು ಹೇಳೋದೇನು? ಮಾನ್ಯ ಅಧ್ಯಕ್ಷರು ಆ ವಿಷಯವನ್ನು ಹೇಳಬೇಡಿ ಎಂದು ಹೆದರಿಸುತ್ತಿದ್ದಾರೆ.

Mr. SPEAKER.—The Hon'ble Member must not feel like that. All that I meant was, "use Parliamentary language, it may be very strong.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಈಗ ಬಹಳ ಕಷ್ಟ ಪರಿಸ್ಥಿತಿ ಬಂದಿದೆ. ಮಾನ್ಯ ಮುಖ್ಯ ಮಂತ್ರಿಗಳು ನಮ್ಮ ಕಾನ್‌ಸ್ಟಿಟ್ಯೂಯೆನ್ಸಿಗೆ ಒಂದು ಸ್ಕೂಲನ್ನು ಮಂಜೂರು ಮಾಡುವುದಾಗಿ ಒಪ್ಪಿಕೊಂಡಿದ್ದಾರೆ. ಆದರೆ ವಿದ್ಯಾ ಖಾತೆಯ ಮಂತ್ರಿಗಳು ಏನು ಮಾಡುತ್ತಾರೆಯೋ ಗೊತ್ತಿಲ್ಲ. ನಿಜವಾಗಿಯೂ ನಾನು ಹೇಳಬೇಕೆಂದರೆ ಮಾನ್ಯ ವಿದ್ಯಾ ಮಂತ್ರಿಗಳು ಯಾವ ವಿಷಯವನ್ನೇ ಆಗಲೀ ಇಂಥಾ ಪರಿಸ್ಥಿತಿಗೆ ತರಬಾರದು. ನ್ಯಾಯ ಎನ್ನುವುದು ಇರಬೇಕು. ನಮ್ಮ ಮನೆಯಲ್ಲಿ ಈಗ ಮೂರು ನಾಲ್ಕು ತಲೆಗಳಿಂದಲೂ ವಿದ್ಯಾಭ್ಯಾಸಕ್ಕೆ ಸಹಾಯ ಮಾಡುತ್ತಿದ್ದಾರೆ. ಈಗಲೂ ಸಹ ನಾವು ಸಹಾಯ ಮಾಡುತ್ತೇವೆ. ಮೊನ್ನೆ ಮಾನ್ಯ ವಿದ್ಯಾ ಮಂತ್ರಿಗಳು ಮಾತನಾಡುತ್ತಾ ಇವರ ಸೊಂಟದಲ್ಲಿರತಕ್ಕ ಡಾಬನ್ನು ಏತಕ್ಕೆ ಕೊಡಬಾರದು ಎಂದು ಹೇಳಿದ್ದಾರೆ. ನನ್ನ ಸೊಂಟದಲ್ಲಿರತಕ್ಕ ಡಾಬು ಇವರ ಕಣ್ಣಿಗೆ ಏತಕ್ಕೆ ಬೀಳಬೇಕು? ಅವರು ಆ ರೀತಿ ಹೇಳುವುದರಲ್ಲಿ ಏನಾದರೂ ಅರ್ಥವಿದೆಯೇ ಎಂದು ನಾನು ಕೇಳುತ್ತೇನೆ. ಅದರ ಬದಲು ಒಳ್ಳೆ ದಪ್ಪನಾಗಿ ಗಟ್ಟಿಮುಟ್ಟಾಗಿದ್ದಾರೆ ಇವರ ಒಂದೊಂದು ತೊಟ್ಟು ರಕ್ತವನ್ನು ಏತಕ್ಕೆ ಕೊಡಬಾರದು ಎಂದು ಹೇಳಿದ್ದರೆ ನಾನು ಒಪ್ಪಿಕೊಳ್ಳುತ್ತಿದ್ದೆ. ಅದನ್ನು ಬಿಟ್ಟು ಕೈಯಲ್ಲಿರುವ ಬಳೆ, ಸೊಂಟದಲ್ಲಿರುವ ಡಾಬು, ಮೂಗುಬೊಟ್ಟು ಇವುಗಳನ್ನು ಏತಕ್ಕೆ ಕೊಡಬಾರದು ಎಂದು ಕೇಳಿದರೆ ಇದರ ಅರ್ಥವೇನು? ಹೆಣ್ಣು ಮಕ್ಕಳನ್ನು ಇಷ್ಟು ಹಗುರವಾಗಿ ಮಾತನಾಡಬಾರದು ಎಂದು ನಾನು ಹೇಳುತ್ತೇನೆ. ಮಾನ್ಯ ವಿದ್ಯಾ ಮಂತ್ರಿಗಳಿಗೆ ಇವೊತ್ತು ನಾಲ್ಕು ಚೌಕಟ್ಟು ಸರಿಯಾಗಿರಬಹುದು. ಆದರೆ ನಾನು ಇವೊತ್ತು ಕಷ್ಟದಲ್ಲಿ ಇರಬಹುದು. ಮನುಷ್ಯನಿಗೆ ಕಷ್ಟ ಬಂದೇ ಬರುತ್ತದೆ. ಅದು ಕಾಲ ಚಕ್ರ ಇದ್ದಹಾಗೆ–ನಾಳೆ ಅವರಿಗೆ ಕಷ್ಟ ಬರಬಹುದು -ಇಲ್ಲೇ ಅಲ್ಲ; ನಾವು ಮಾಡಿರುವ ಕೆಲಸ ಮುಂದೆ ಮೇಲೊಬ್ಬನಿಗೆ ಕೊಡಬೇಕಾಗುತ್ತದೆ ಎನ್ನುವುದನ್ನು ಮನಸ್ಸಿನಲ್ಲಿಟ್ಟುಕೊಂಡು ಮಾತನಾಡಬೇಕು.

ಇನ್ನು ರೋಡ್ ಟ್ರಾನ್ಸ್‌ಪೋರ್ಟ್ ವಿಚಾರದಲ್ಲಿ ಹೇಳುವುದಾದರೆ ಎಲ್ಲಾ ದೇಶದಲ್ಲಿಯೂ ಮ್ಯಾಗ್ಸಿಮಮ್ ಕಂಫರ್ಟ್ ಮತ್ತು ಮಿನಿಮಮ್ ಛಾರ್ಜಸ್ ಎಂದು ಬಸ್ಸಿನಲ್ಲಿ ಲೆಖ್ಖ ಹಾಕುತ್ತಾರೆ. ಆದರೆ ಅದು ನಮ್ಮ ದೇಶದಲ್ಲಿ ಬೇರೆ ರೀತಿಯಾಗಿದೆ. ಈಗ ಉದಾಹರಣೆಗೆ ನಮ್ಮ ಊರಿನಲ್ಲೇ ಏನಾಗಿದೆ ಎಂದರೆ ಗುಂಡ್ಲುಪೇಟೆಯಿಂದ ತೆರಕಣಾಂಬಿಗೆ ಬಸ್ಸು ಹೋಗುತ್ತದೆ. ಅಲ್ಲಿಂದ ಮುಂದಕ್ಕೆ ಚಾಮರಾಜನಗರಕ್ಕೆ ಹೋಗುವುದಿಲ್ಲ. ಅಲ್ಲಿ ಒಂದು ರೇಷ್ಮೆ ಗೂಡಿನ ಮಾರ್ಕೆಟ್ ಅನ್ನು ಓಪನ್ ಮಾಡಿದ್ದಾರೆ. ಆದ್ದರಿಂದ ಅಲ್ಲಿಂದ ಮುಂದಕ್ಕೆ ಆ ರೇಷ್ಮೆ ಗೂಡುಗಳನ್ನು ಸಾಗಿಸಿಕೊಂಡು ಹೋಗಬೇಕಾದರೆ ಬಸ್ ಬೇಕಾಗುತ್ತದೆ. ಅಲ್ಲಿ ಖಾಸಗೀಯವರು ಬಸ್ ಹಾಕುವುದಕ್ಕೂ ಅವಕಾಶವಿಲ್ಲ. ಸರ್ಕಾರದವರೂ ಬಸ್ಸನ್ನು ಹಾಕಿ ಅನುಕೂಲ ಮಾಡುವುದಿಲ್ಲ. ಆ ವಿಚಾರದಲ್ಲಿ ಎಷ್ಟು ಕಾಗದಗಳನ್ನು ಬರೆದರೂ ಆ ಬಗ್ಗೆ ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡಂತೆ ಕಾಣುವುದಿಲ್ಲ. ಆ ವಿಷಯದಲ್ಲಿ ಎಷ್ಟು ರೆಪ್ರೆಜೆಂಟೇಷನ್ ಕಳುಹಿಸಬೇಕೋ ನನಗಂತೂ ಅರ್ಥವಾಗುವುದಿಲ್ಲ. ಅದು ಸರ್ಕಾರದವರಿಗೆ ಕಣ್ಣಿಗೆ ಕಾಣುವುದಿಲ್ಲವೇನೋ ಎಂದು ಹೇಳಬೇಕಾಗಿದೆ. ಅದನ್ನು ಆದಷ್ಟು ಜಾಗ್ರತೆಯಾಗಿ ಮಾಡಿಕೊಡಬೇಕೆಂದು ಹೇಳುತ್ತೇನೆ. ಇಷ್ಟು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸುತ್ತೇನೆ. ಬಾಕಿ ವಿಷಯಗಳನ್ನು ಡಿಮ್ಯಾಂಡುಗಳು ಬಂದಾಗ ಹೇಳುತ್ತೇನೆ. ಆಗಲೂ ಸಹ ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕೆಂದು ಮಾನ್ಯ ಅಧ್ಯಕ್ಷರಲ್ಲಿ ಕೇಳಿಕೊಂಡು ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

12-00 NOON

†**Sri S. RAJAGOPAL** (Kolar Gold Fields - S. C.).—Mr. Speaker, Sir, many members of this Honourable House have already expressed their views on the Governor's Address. I would like to sav a few words and conclude within the time permitted. The Chinese forces launched a massive offensive violating the Indian borders and thus committed aggression.

(SRI S. RAJAGOPAL)

The Communist Party openly declared their unconditional and whole-hearted co-operation to Mr. Nehru and his Government. India united as never before and challenged the Chinese military might with her right with the result that she came out as victor even in the defeat in the eyes of not only non-aligned nations but also in the eyes of the whole of communist countries. It is obvious that Peking believed that their aggression would drive Mr. Nehru to seek western military alliance; to prove to the world and particularly to Mr. Kruschev the inevitability of alignment; but this does not happen despite all efforts made by Rajajis, Kriplanis, the reactionaries of this campaign. Mr. Nehru and his Government displayed faith and loyalty to non-alignment with splendid courage under a most desperate crisis. True we asked for and got Western military aid; also we asked for and got Soviet M.I.Gs. In their conspiracy against India, China expected at least the support and backing of the Indian Communist Party under the cover of international communist unity. She expected that there were many disruptive influences in India and outside Communists to side with her; but here came the biggest disappointment. China made bitter attacks on the leadership of Mr. Dange. In fact, the resolution of the Communist Party of India branding China as an aggressor was subsequently endorsed by the communist parties all over the world except one or two countries. China was condemned as world war Criminal No. 1. In the meanwhile, what happened in our country. After the Chinese aggression in our border, the first victim was the progressive man, the international man Mr. V. K. Krishna Menon. Secondly, the reactionaries tried to pull down Mr. Nehru, the unquestioned leader of this country and a world figure. Thirdly, they wanted Mr. Nehru to forsake the non-alignment policy and to join with the western block. Fortunately, they did not succeed in their attempts. Because of the Chinese aggression, the reactionary forces have taken the upper hand and put down the leftists even amongst the Congress Party. Anyhow, the Colombo Proposals have been made and Mr. Nehru unconditionally accepted *in toto* the Colombo proposals. In this cricis we have to strengthen the hands of Mr. Nehru, and the leftist group in the Congress Party itself and the ruling party itself unconditionally without any sort of criticism because we have to do everything in our power to strengthen the defence of India.

You know—history proved well—that a nation which has invaded another nation and won the battle also, has unconditionally declared cease fire. China has declared cease fire in spite of its mighty military forces. Because of the non-alignment policy, because of the neutral policy have adopted, the Chinese were forced to go back unconditionally by declaring cease fire. So that policy should have to be maintained. Because of that policy, our country occupies a unique position in the eyes of the world, in the eyes of the American bloc as well as in the eyes of communist bloc. No doubt, the Western bloc have given us substantial military aid. Even the countries who have helped us so much

never demanded us to go and join with their bloc. Certain reactionary forces are very eager to push our country towards the Western bloc. It shows very clearly how the reactionary forces have taken the opportunity to exploit the situation after the Chinese aggression. Anyhow, we have succeeded in pulling down all these reactionary forces and strengthening our Government under the leadership of Mr. Nehru and we have lent all our support to the policy adopted by Mr. Nehru, that is, the non-alignment policy.

Throughout India, most of the communists have been taken into custody. Nearly 910 communists including non-communists have been taken into custody. Subsequently, the State Governments have reviewed individual cases and they have released some of them. In Andhra Pradesh, they have taken into custody 34 communists; they have released 10 communists. In Madras, they have taken into custody 107 communists and they have released 61 communists. In Gujarat, 48 communists including 11 independents were taken into custody and subsequently, 32 were released. In the Punjab, 67 communists were taken into custody and later 21 were released. In our State, 23 communists have been taken into custody. Day before yesterday I got news that only one communist was released from Bangalore Central Jail. I am requesting the Honourable Chief Minister to review the cases of individuals and release them once for all.

Sri R. M. PATIL.—Every fortnight, cases are being reviewed.

Sri S. RAJAGOPAL.—I am asking about the release of the communists. In the meanwhile, at least consider to release the members of the Legislature who have been taken into custody–Sri Gangadar Namoshi as well as Sri Krishna Shetty and Sri M. C. Narasimhan are there. You consider to release them immediately so that they may take part in the deliberations of the Budget Session. Secondly, members of their family are put to great difficulty. Because these individuals are in jail, you are at least in a position to feed them. but it is a problem for the families of these persons. You consider at least to give them some family allowance during the period you want to keep them in jail. I have to say something about the arrangements made for the members of the family visiting the person in jail. The bar is in the middle. That side the political prisoner would have to sit. The members of his family should have to sit this side. It is very horrible. Human sympathy is not there while giving this sort of interview. They are not criminals; they are not people who have committed any crime. Without any trial, without any charge-sheet, you are putting them in jail. You consider certain human aspects and give them some facilities which are necessary.

Sri R. M. PATIL.—They are given special class No. 1. All facilities are given. It is not fair on your part to say such things without knowing the facilities afforded.

Sri S. RAJAGOPAL.—I am speaking about the method of interview. I have not said they are not given any facilities but the facilities for interview are not human. The bar may be removed. In any case,

(SRI S. RAJAGOPAL)

when the interview takes place, an officer is present and therefore nothing would be lost by removing the bar.

In Madras such prisoners are being given cloth allowance. Even that is not provided here. If they want cloth from the jail, they would have to declare that they are too poor. This is horrible. Since they are under the custody of Government and they are stated to have been given facilities, why not give them the colth or some allowance. Similarly, some pocket money should be given. Finally, as I said before, Government may consider releasing them unconditionally. The Communist party in the State have come forward with their *bona fides* and have declared support to Government. There might be certain political advantages in keeping these people in jail but that would not strengthen the defence efforts in the State. I request that atleast the Legislators may be released forthwith to enable them to participate in the budget discussions.

In the Governor's Address on page 13 it is stated "Government have been endeavouring their best to provide health facilities to the people with a view to see that the common man is able to lead a healthy life both in the village and the town". But here is a document, a letter circulated to the Ayurvedic doctors in Bangalore by a Bangalore firm called 'Gururaja Pharmacy'. The letter asks the doctors to inform the patient to purchase medicines needed by them in that particular shop. The letter further sends a list of medicines available, and promises liberal commissions and concessions to doctors who prescribe the medicines. This letter is addressed to Government Ayurvedic doctors. The letter also speaks of some personal agreement between the representations of the firm and the doctors. So our Government doctors have entered into a personal agreement with this firm for earning money.

MR. SPEAKER.—That letter may be placed in the hands of Government.

SRI S. RAJAGOPAL.—I will do that. The letter proceeds:

> "Let your prescription contain 4 or 5 varieties so that the patient could get relief by one or the other at the same time according to his paying capacity also".

So the doctors are to earn money or commissions according to the paying capacity of the patient. These are the conditions prevalent in the State Ayurvedic Hospital. Imagine a private firm asking by a circular doctors to prescribe medicines available in that shop and earning something on this ground. It is tempting the doctors to be corrupt. I request the Government, particularly the Health Minister, to take serious note of such things and to put an end to such malpractices.

Sir, the circular-letter also gives a list of medicines.

Mr. SPEAKER.—If the Hon'ble member places it on the Table it would go into the proceedings. The whole letter need not be read.

Sri S. RAJAGOPAL.—I am drawing attention to a particular point. There is one medicine called 'Dasamoolarishta'. If the Government doctor prescribes that medicine, the patient may buy it from any shop. But the Gururaja Pharmacy wants that the medicine should be bought only from their shop. So, here they do the trick. They suggest to the Government doctors to prescribe the same medicines carrying new names indicated in the letter so that if the patient goes with such code names, no Ayurvedic shop would be able to understand what it is and ultimately the patient would be compelled to go to Gururaja. If Dasamoolarishta is available for Rs. 1.50 in other shops it is Rs. 5 in this shop and this is how the patients are cheated and the particular pharmacy and doctors earn money at the cost of the patient. I request the Government to put an end to this type of corruption with an iron hand.

Sir, the Governor's address mentions of the problem of water supply to Bangalore City. Government has set apart Rs. 13 crores for this purpose. Now summer has begun and the plight of the people of Bangalore has only to be imagined. Recently the City Corporation has passed a resolution indicating the steps to be taken. They suggest bore-wells in each division, digging up of atleast two public wells in each division, that water be supplied by lorries, the Commissioner be requested to put up separate proposals for sinking bore-wells by the side of the existing water tanks and tanks under construction and so on. In this matter, Government has a great responsibility to help the Corporation.

Sir, the K. G. F. has been taken over by Government of India. Before the mines were handed over Government promised the House that a detailed discussion would be allowed before the mines are handed over. Unfortunately no such discussion had taken place.

Mr. SPEAKER.—Before the Hon'ble Member proceeds further, what is this letter he was speaking about? I have seen it just now.

Sri S. RAJAGOPAL.—This letter was circulated to all Government doctors in the Ayurvedic hospital.

Mr. SPEAKER.—How did you get it?

Sri S. RAJAGOPAL.—I got it from a doctor himself.

Mr. SPEAKER.—From which doctor? I do not want to know the name but the place. This circular is not addressed to anybody.

Sri S. RAJAGOPAL.—But it is a letter circulated to all Government doctors.

Mr. SPEAKER.—It is not addressed to anybody, nor is it signed.

Sri S. RAJAGOPAL. The names of addressees are not mentioned. The matter has to be investigated by Government.

Mr. SPEAKER.—This letter could have been written by anybody. It could be a fake. What is your charge about it?

Sri S. RAJAGOPAL.—The charge is that a particular pharmacy is exploiting Government doctors, tempting them with corruption and the

(SRI S. RAJAGOPAL)

doctors have entered into some agreement with this firm. I want to know if it is the truth.

Mr. SPEAKER.—Are you suggesting that they should not advertise their products ?

Sri S. RAJAGOPAL.—But not by offers of corruption.

Mr. SPEAKER.—What action do you want the Government to take and against which individual ?

Sri S. RAJAGOPAL.—I am requesting the Government to investigate the matter thoroughly.

Sri K. PUTTASWAMY (Minister for Municipal Administration) — In fact when the Hon'ble Member referred to the letter, we were under the impression that the letter was addressed to particular doctors with whom there was some agreement. That does not appear to be the case now.

Mr. SPEAKER.—If the Member wants he may give particulars mentioning the doctor's name who gave the letter.

Sri S. RAJAGOPAL.—I will definitely do that.

Now the K. G. F. mines have been handed over to the Centre. This House has not had the opportunity to discuss anything about it before the mines were handed over to the Centre. We do not know the details of the agreement also. I hope those details will be placed in this Hon'ble House by the Government. Now that the Central Government has taken over the K. G. F. Mines, the State Government is not having any sort of hold on these Mines except maintaining law and order. There is a request placed before the Revenue Minister and the Chief Minister that out of the compensation amount the State is getting from the Centre, they should try and establish an industry, a State owned industry in K. G. F. itself. I request that this may be considered favourably by the Chief Minister as well as by the Government to establish an industry in K. G. F. itself out of the compensation amount that the State Government is getting from the Centre in this respect.

ಶ್ರೀ ಗೋಪಾಲ ಸಾಲೆನ್ನ (ಮೂಡಬಿದ್ರಿ).—ಸನ್ಮಾನ್ಯ ಅಧ್ಯಕ್ಷರೆ, ಇಂದು ನಮ್ಮ ಮುಂದೆ ಬಂದಿರುವಂಥ ಈ ರಾಜ್ಯಪಾಲರ ಭಾಷಣವು ಮುಂದಿನ ಒಂದು ವರ್ಷದ ಅವಧಿಯಲ್ಲಿ ಏನೇನು ಕಾರ್ಯಗಳಾಗಬೇಕಾಗಿವೆ, ಯಾವ ಹೊಸಯೋಜನೆಗಳನ್ನು ಜಾರಿಗೆ ತರಲಾಗುವುದಿದೆ ಎಂಬ ಬಗ್ಗೆ ಒಂದು ಸಂಕ್ಷೇಪವಾದ ಚಿತ್ರವನ್ನು ಪ್ರದರ್ಶಿಸಬೇಕಾಗಿತ್ತು. ಆದರೆ ಇದರಲ್ಲಿ ಆ ರೀತಿಯ ಒಂದು ಯೋಜನಾತ್ಮಕವಾದ ವಿವರಗಳನ್ನು ತಿಳಿಯಲು ನಮಗೆ ಅವಕಾಶವೇ ಕಾಣುವುದಿಲ್ಲ. ಈ ಭಾಷಣದಲ್ಲಿ ಕೇವಲ ಹಿಂದಿನ ಗತವೈಭವದ ಚಿತ್ರವನ್ನು ವಿವರಿಸಿದ್ದಾರೆಯೇ ವಿನಾ ಮುಂದಿನ ವರ್ಷದಲ್ಲಿ ಯಾವ ಯಾವ ಯೋಜನೆಗಳ ಆಧಾರದ ಮೇಲೆ ನಮ್ಮ ಮುಂದೆ ಬರತಕ್ಕ ಬಡ್ಜೆಟ್ಟನ್ನು ರಚಿಸಲಾಗುವುದು, ಆ ಯೋಜನೆಗಳ ಬಗ್ಗೆ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದು ಅಗತ್ಯ ಎಂಬ ವಿಚಾರ ತಿಳಿದುಕೊಳ್ಳುವುದು ಕೂಡ ಬಹಳ ಕಷ್ಟವಾಗಿದೆ. ಅಲ್ಲದೆ ಈ ಭಾಷಣದಲ್ಲಿ ಅಲ್ಲಲ್ಲಿ ಕೆಲವು ವಿಷಯಗಳನ್ನು ವಿವರಿಸಿ ಕೇಂದ್ರದ ಆಶ್ರಯವನ್ನು ಕೇಳಲಾಗಿದೆ, ಕೆಲವು ಯೋಜನೆಗಳ ಬಗ್ಗೆ ಸಹಾಯ ನಿರೀಕ್ಷಿಸಲಾಗಿದೆ, ಇತ್ಯಾದಿ ಕೆಲವು ಆಶ್ವಾಸನೆಗಳ ವಿಷಯ ವಿವರಿಸಿದ್ದಾರೆಯೇವಿನಾ ಇಂಥಿಂಥಾ ಹೊಸತಾದ ಕಾರ್ಯಗಳನ್ನು, ಈ ವರ್ಷ ಮಾಡಲಿದ್ದೇವೆ. ಆರಂಭಮಾಡಿರುವ ಇಂಥಿಂಥಾ ಯೋಜನೆಗಳನ್ನು ಯಶಸ್ವಿಯಾಗಿ ಮುಗಿಸುತ್ತೇವೆ ಎನ್ನುವ ನಿರ್ದಿಷ್ಟವಾದ ತೀರ್ಮಾನವನ್ನು ಸರ್ಕಾರ ತೆಗೆದುಕೊಂಡಿರುವದರ ವಿಚಾರವೇನೂ ಸ್ಪಷ್ಟವಾಗಿ ಕಂಡುಬರುವುದಿಲ್ಲ. ನಿಜವಾಗಿಯೂ ಈ ಭಾಷಣ ಇಂದಿನ ಸರ್ಕಾರದ ಒಂದು ವರ್ಷದ ಅವಧಿಯ ಕಾರ್ಯಕ್ರಮವನ್ನು

ವಿಸ್ತಾರವಾಗಿ ರೂಪಿಸಿಲ್ಲ. ಈ ಸಂಬಂಧವಾಗಿ ಜನಜೀವನಕ್ಕಾಗಬಹುದಾದ ಪರಿಣಾಮದ ಸ್ಪಷ್ಟವಾದ ಚಿತ್ರವನ್ನು ಜನತೆಗೆ ಕೊಟ್ಟಿಲ್ಲವೆಂಬುದು ವ್ಯಕ್ತವಾಗುತ್ತದೆ. ಹೆಚ್ಚೆಚ್ಚು ತೆರಿಗೆಗಳನ್ನು ಜನರಿಂದ ವಸೂಲು ಮಾಡುವ ವಿಷಯಗಳಿರಬಹುದು, ಆದರೆ ಜನತೆಗೆ ಅದರ ಹೆಚ್ಚೆಚ್ಚು ಪ್ರತಿಫಲರೂಪದಲ್ಲಿ ವಾಪಸು ಹೇಗೆ ಕೊಡುತ್ತಾರೆಂಬುದನ್ನು ಈ ಭಾಷಣ ಸರಿಯಾಗಿ ತಿಳಿಸುವುದಿಲ್ಲ. ಒಂದು, ಎರಡು ಮತ್ತು ಮೂರನೆಯ ವಿಭಾಗಗಳನ್ನು ನೋಡಿದರೆ, ಇದರಲ್ಲಿ ಯುದ್ಧಕ್ಕೆ ಸಂಬಂಧಪಟ್ಟ ಕೆಲವು ವಿಷಯಗಳನ್ನು ವಿವರಿಸುವಾಗ ಚೀಣಾದಂತಹ ಒಂದು ರಾಷ್ಟ್ರ ನಮ್ಮನ್ನು ಗಂಡಾಂತರಕ್ಕೀಡುಮಾಡಿ ಸಂಪೂರ್ಣ ನಾಶಕ್ಕೆ ಯತ್ನಿಸಿದ ಕಾರ್ಯಾಚರಣೆಯನ್ನು ವಿವರಿಸಲಾಗಿದೆ. ಅದೇನು ಜನತೆಗೆ ತಿಳಿಯದಿರುವುದಲ್ಲ ಮತ್ತು ನಮ್ಮ ಸೈನಿಕರು ಏನು ಕೆಲಸಗಳನ್ನು ಮಾಡಿದರು ಎಂಬುದನ್ನೂ ಪ್ರಧಾನಮಂತ್ರಿಗಳು ತಮ್ಮ ಭಾಷಣದಲ್ಲಿ ಹೇಳಿರುವುದನ್ನು ವಿವರಿಸಲಾಗಿದೆಯಷ್ಟೆ, ಆದರೆ ನಾವು ನಮ್ಮ ರಾಜ್ಯದಲ್ಲಿ ಈ ಯುದ್ಧವನ್ನೆದುರಿಸುವುದಕ್ಕೆ ಏನು ನಿರ್ದಿಷ್ಟ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ. ನಮ್ಮ ಮುಂದಿರುವ ಈ ದಬ್ಬಾಳಿಕೆಯನ್ನೆದುರಿಸಲು ಎಷ್ಟುಮಟ್ಟಿಗೆ ಸಿದ್ಧತೆಗಳನ್ನು ಮಾಡಿದ್ದೇವೆಂಬುದನ್ನು ವಿವರಿಸದೆ ಸುಮ್ಮನೆ ರಾಜ್ಯ, ಜಿಲ್ಲಾ ಮತ್ತು ಗ್ರಾಮ ಸಮಿತಿಗಳನ್ನು ಮಾಡಿದ್ದೇವೆಂದು ಇಷ್ಟನ್ನೇ ಹೇಳಿ ಮುಗಿಸಿದ್ದಾರೆ. ನಮ್ಮ ದೇಶ ದಾಳಿಯನ್ನೆದುರಿಸಿದಾಗ ನಮ್ಮ ಜನಕ್ಕೆ ಬೇಕಾದ ಕೋವಿ, ಮದ್ದುಗುಂಡುಗಳನ್ನು ತಯಾರು ಮಾಡುವುದಕ್ಕೂ, ಧರದಿಂದ ಆಹಾರೋತ್ಪತ್ತಿಯನ್ನು ಹೆಚ್ಚಿಸುವುದಕ್ಕೂ ಏನೇನು ಕಾರ್ಯಕ್ರಮಗಳನ್ನು ಕೈಗೊಂಡಿದ್ದೇವೆಂಬ ಬಗ್ಗೆ ವಿವರಗಳು ಈ ಭಾಷಣದಲ್ಲಿಲ್ಲ.

ಬೆಲೆಗಳ ನಿಯಂತ್ರಣದ ವಿಚಾರದಲ್ಲಿ ಸರ್ಕಾರ ಕಾರ್ಯಕ್ರಮ ತೆಗೆದುಕೊಂಡ ಖರೀದಿ ಪಟ್ಟಿಯನ್ನು ಪ್ರತಿಯೊಂದು ಅಂಗಡಿಯ ಮುಂದೆ ಹಾಕುವಂತೆ ಹುಕುಮ್ ಮಾಡಿದ್ದೇವೆಂದು ಹೇಳಿದ್ದಾರೆ. ಆದರೆ ಅಂಗಡಿಗಳ ಮುಂದೆ ಬೋರ್ಡ್ ಹಾಕಿದ್ದರಿಂದ ಜನತೆಗೆ ನ್ಯಾಯವಾದ ಬೆಲೆಯಲ್ಲಿ ನಿತ್ಯಾವಶ್ಯಕ ಪದಾರ್ಥಗಳು ಸಿಕ್ಕುತ್ತವೆಯೆ ? ಅದರ ಪರಿಣಾಮವೇನಾಗಿದೆ ಎನ್ನುವುದನ್ನು ಸರ್ಕಾರ ಎಷ್ಟುಮಟ್ಟಿಗೆ ತನಿಖೆ ಮಾಡಿದೆ, ಅಥವ ಈ ಬೆಲೆಗಳನ್ನು ಸ್ಥಿಮಿತದಲ್ಲಿಡಲು ಮಾಡುವ ಕೆಲಸಗಳು ಯಾವುದು ? ಎನ್ನುವುದನ್ನು ತಿಳಿಸಬೇಕಾಗಿತ್ತು. ಏಕೆಂದರೆ, ದಿನ ದಿನಕ್ಕೆ ಜೀವನ ಪದಾರ್ಥಗಳ ಕ್ರಯಗಳು ಜಾಸ್ತಿಯಾಗುತ್ತಿವೆಯೇ ವಿನಾ ಕಡಿಮೆಯಾಗುತ್ತಿಲ್ಲ. ಈಗಿರತಕ್ಕ ಪರಿಸ್ಥಿತಿಯಲ್ಲಿ ಕೆಳವರ್ಗದ ಮತ್ತು ಮಧ್ಯಮವರ್ಗದ ಜನರು ತಮ್ಮ ಸಂಪಾದನೆಯಿಂದ ಕನಿಷ್ಠಮಟ್ಟದಲ್ಲಾದರೂ ಸುಖವಾಗಿ ಜೀವನವನ್ನು ನಡೆಸಬೇಕಾದರೆ ಬಹಳ ಕಷ್ಟವಾಗುತ್ತಿದೆಯೆಂಬುದನ್ನು ಸರ್ಕಾರ ತಿಳಿದುಕೊಳ್ಳಲಿಲ್ಲ. ಜನಜೀವನದ ಈ ಕಡೆ ಹೆಚ್ಚು ಗಮನಕೊಡಬೇಕಾಗಿತ್ತು. ಜನರು ಬಹಳ ಕಷ್ಟದಲ್ಲಿ ಜೀವನ ಮಾಡಬೇಕಾಗಿದೆ. ಸರ್ಕಾರದಲ್ಲಿ ಹಾಗೂ ಇತರ ಕಡೆ ನಿಶ್ಚಿತ ತಿಂಗಳ ಸಂಬಳ ಪಡೆಯುವ ನೌಕರರ ಪಾಡು ಹೇಳುವ ಹಾಗಿಲ್ಲ. ಅವರಿಗೆ ದೊರಕುವ ತುಟ್ಟಿಭತ್ತ ಅಥವಾ ಇತರ ಬೇರೆ ಯಾವುದೇ ರೂಪದಲ್ಲಿ ಐದು ಅಥವಾ ಹತ್ತು ರೂಪಾಯಿ ಹೆಚ್ಚಾಗಿ ಕೊಡುವುದರೊಂದಿಗೆ ಬೇರೆ ಬೇರೆ ರೂಪಗಳಲ್ಲಿ, ಎಂದರೆ ಬಸ್ ಚಾರ್ಜು, ಪ್ರತ್ಯಕ್ಷ ಹಾಗೂ ಅಪ್ರತ್ಯಕ್ಷ ತೆರಿಗೆ ಮುಂತಾದ ರೂಪಗಳಲ್ಲಿ ಇಪ್ಪತ್ತು ರೂಪಾಯಿಗಿಂತಲೂ ಹೆಚ್ಚಾಗಿ ಅವರಿಂದ ವಾಪಸು ಪಡೆಯುವುದಾದರೆ ಈ ಪರಿಸ್ಥಿತಿಯಿಂದ ಅವರು ಹೇಗೆ ಸುಧಾರಿಸಿಕೊಳ್ಳಬೇಕೋ ಗೊತ್ತಿಲ್ಲ. ಅವರು ಲಂಚದಿಂದ ದೂರವಿರಬೇಕಾದರೆ, ಅವರು ನ್ಯಾಯವಾಗಿ, ಕ್ರಮಬದ್ಧವಾಗಿ ಜೀವನವನ್ನೂ ಮುಂದುವರಿಸಬೇಕಾದರೆ, ಅವರ ಜೀವನಾವಶ್ಯಕತೆಗಳನ್ನು ಪೂರೈಸಲು ಏನು ಮಾಡಬೇಕೆಂಬುದನ್ನು ಸರ್ಕಾರ ತಿಳಿದುಕೊಳ್ಳುವುದು ಅತ್ಯಗತ್ಯವಾಗಿದೆ.

ಕೈಗಾರಿಕೆಗಳ ವಿಚಾರದಲ್ಲಿ ಕೆಲವು ವಿಷಯಗಳನ್ನು ಈ ಭಾಷಣದಲ್ಲಿ ಕೊಟ್ಟಿದೆ.

ಕೈಗಾರಿಕೆಯ ವಿಷಯದಲ್ಲಿ ಸಣ್ಣಮಟ್ಟದ ಕೈಗಾರಿಕೆಗಳಿಗೆ ಎಂದರೆ ಗುಡಿ ಕೈಗಾರಿಕೆ, ಮುಖ್ಯವಾಗಿ ಮರದ ಕೆಲಸ, ಬೆತ್ತ ಬಿದಿರಿನ ಕೆಲಸ, ಕೃಷಿಯಸಾಮಗ್ರಿ ತಯಾರಿಕೆ ಚರ್ಮದ ಕೈಗಾರಿಕೆ ಇತ್ಯಾದಿಗಳಿಗೆ ಸರ್ಕಾರದವರು ಹೆಚ್ಚುಗಮನ ಕೊಡಬೇಕು. ಆ ವಿಷಯದಲ್ಲಿ ಸರ್ಕಾರದವರು ಏನೇನು ಕಾರ್ಯಕ್ರಮವನ್ನು ಕೈಗೊಳ್ಳುತ್ತಾರೆ, ಯಾವರೀತಿ ಪ್ರೋತ್ಸಾಹ ಕೊಡುತ್ತಾರೆ ಎನ್ನುವ ವಿಷಯವನ್ನು ರಾಜ್ಯಪಾಲರ ಭಾಷಣದಲ್ಲಿ ಸರಿಯಾಗಿ ವಿವರಿಸಿಲ್ಲ. ಒಂದು ಕಡೆ ಸರ್ಕಾರದವರು ಸಹಕಾರ ಪದ್ಧತಿಯನ್ನು ಸುಧಾರಿಸಬೇಕು, ಕೈಗಾರಿಕೆಗಳಲ್ಲಿ ಉತ್ಪಾದನೆ ಜಾಸ್ತಿಯಾಗಬೇಕೆಂದು ಪತ್ರಿಕೆಗಳಲ್ಲೂ ಪ್ರಕಟಿಸಲಾಗುವ ಯೋಜನೆಗಳಲ್ಲೂ ತಿಳಿಸುತ್ತಾರೆ. ಆದರೆ ನ್ಯಾಯವಾಗಿ ಅದು ಎಷ್ಟರಮಟ್ಟಿಗೆ ಕಾರ್ಯಗತವಾಗುತ್ತದೆ; ಎಷ್ಟು ಉತ್ಪನ್ನ ಜಾಸ್ತಿಯಾಗುತ್ತದೆ ಎನ್ನುವುದನ್ನು ನೋಡಿದರೆ ನಮ್ಮ ದೇಶದಲ್ಲಿ ಅಭಿವೃದ್ಧಿಯ ಕೆಲಸ ಕಾರ್ಯಗಳು, ನಮ್ಮ ಯೋಜನೆಗಳಿಗೆ ಹಾಕಲಾಗುವ ಅಪಾರ ಹಣಕ್ಕೆ ಸರಿಯಾಗಿ ಅಷ್ಟು ಹೆಚ್ಚಿನ ಪರಿಣಾಮಕಾರಿ ಆಗುತ್ತಿಲ್ಲ ಎನ್ನುವುದು ಸ್ಪಷ್ಟವಾಗುತ್ತಿದೆ. ಉದಾಹರಣೆಗೆ ಆ ವಿಚಾರದಲ್ಲಿ ಒಂದೆರಡು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

(ಶ್ರೀ ಗೋಪಾಲ ಸಾರೆನ್ನ)

ಈಗ ಮಂಗಳೂರಿನಲ್ಲಿ ಕೆಲವು ವರ್ಷಗಳ ಹಿಂದೆ ಒಂದು ಚರ್ಮದ ಕೈಗಾರಿಕೆಯನ್ನು ಸ್ಥಾಪನೆ ಮಾಡಿದ್ದಾರೆ. ಅದಕ್ಕೆ ಸುಮಾರು ಒಂದುಲಕ್ಷ ರೂಪಾಯಿಗಿಂತಲೂ ಹೆಚ್ಚಾಗಿ ಖರ್ಚಾಗಿದೆ ಯಾದರೂ ಈಗ ಮುಚ್ಚುವ ಸ್ಥಿತಿಯಲ್ಲಿದೆ; ಮತ್ತೊಂದು ಕಡೆ ಸಹಕಾರ ಸಂಘದ ಮುಖಾಂತರ ನಡೆ ಯತಕ್ಕ ಇನ್ನೊಂದು ಜನರಲ್ ಇಂಜಿನೀಯರಿಂಗ್ ಕೈಗಾರಿಕೆ ಅಲ್ಲಿ ಇದೆ. ಬೇಕಾದ ಮೆಷನರಿ ವಗೈರೆ ಗಳನ್ನು ಒದಗಿಸಿ 9 ತಿಂಗಳ ಮೇಲೆ ಆಗಿದೆ. ಆದರೆ ಆ ಕೈಗಾರಿಕೆ ನಡೆಯಬೇಕಾದರೆ ಅವುಗಳಿಗೆ ಬೇಕಾದ ವಿದ್ಯುಚ್ಛಕ್ತಿಯನ್ನು ಈಗ 9 ತಿಂಗಳಿಂದಲೂ ಸರ್ಕಾರದವರು ವಿದ್ಯುಚ್ಛಕ್ತಿ ಬೋರ್ಡಿನ ಮೂಲಕ ಒದಗಿಸಿಕೊಟ್ಟಿಲ್ಲ. ಆ ಕೈಗಾರಿಕೆಗೋಸ್ಕರ ಬಂಡವಾಳ ಹಾಕಿರತಕ್ಕ ಹಣಕ್ಕೆ ಶೇಕಡ ನಾಲ್ಕರಂತೆ ಬಡ್ಡಿ ಕೊಟ್ಟು ಅಲ್ಲಿ ಕೆಲಸ ಮಾಡತಕ್ಕ ನೌಕರರಿಗೆ ಸಂಬಳ ಕೊಟ್ಟು ಅದರಲ್ಲ ಎಷ್ಟು ನಷ್ಟವಾಗುತ್ತದೆ ಎನ್ನುವುದನ್ನು ಯೋಚನೆ ಮಾಡಬೇಕು ತುರ್ತುಪರಿಸ್ಥಿಯಲ್ಲಿ ಸುಧಾರಿಸಿಕೊಳ್ಳ ಬೇಕು ನಿಜ. ಆದರೆ ಇಂಥಾ ಪರಿಸ್ಥಿತಿಯಲ್ಲಿಯೂ ಕೂಡ ಖಾಸಗಿಯವರಿಗೆ ವಿದ್ಯುಚ್ಛಕ್ತಿ ಸಿಕ್ಕುತ್ತದೆ. ಆದರೆ ಸಹಕಾರ ಸಂಘಗಳಂಥ ಉತ್ಪನ್ನವನ್ನು ಹೆಚ್ಚಿಸುವಂಥಾ ಸಂಸ್ಥೆಗಳಿಗೆ ಬೇಕಾದ ವಿದ್ಯುಚ್ಛಕ್ತಿ ಮುಂತಾದ ಸವಲತ್ತುಗಳು ಸಿಕ್ಕುತ್ತಿಲ್ಲ. ಈ ರೀತಿ ಆದರೆ ಉತ್ಪಾದನೆಯನ್ನು ಹೇಗೆ ಹೆಚ್ಚಿಸ ಬೇಕೆಂದು ನಾನು ಕೇಳುತ್ತೇನೆ. ಹೀಗೆಯೇ ಎಷ್ಟೋ ಸಣ್ಣ ಸಣ್ಣ ಕೈಗಾರಿಕೆಗಳಿಗಾಗಿ ಸಹಕಾರಿ ಸಂಘಗಳಿಗೆ ಮತ್ತು ಇತರ ಸಂಘಗಳಿಗೆ ಸರ್ಕಾರದವರು ಸುಮಾರು ಒಂದೊಂದು ಲಕ್ಷಕ್ಕಿಂತಲೂ ಹೆಚ್ಚುರೂಪಾಯಿಗಳನ್ನು ಒದಗಿಸಿದ್ದಾರೆ. ಆದರೆ ಆ ಹಣವನ್ನು ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯ ವಾಗದೆ ಅದೆಲ್ಲವೂ ಹಾಗೆಯೇ ವರ್ಷಗಟ್ಲೆ ಬ್ಯಾಂಕಿನಲ್ಲಿಯೇ ಉಳಿದಿವೆ. ಇಂಥಾ ಅನೇಕ ನಿದರ್ಶನಗಳನ್ನು ನಾನು ವಿಚಾರಿಸಿ ಕೇಳಿದ್ದೇನೆ. ಈ ರೀತಿ ಯೋಜನೆಗಳಿಗೆ ಸರ್ಕಾರದವರು ಹಣ ವನ್ನು ಒದಗಿಸಿದ್ದರೂ ಸಹ ಅದು ಯೋಗ್ಯರಾದ ಅರ್ಹತೆಯವರಿಗೆ ಸಿಕ್ಕಿಲ್ಲ. ಹೀಗಾಗಿ ಅದು ಸರಿ ಯಾದ ರೀತಿ ಉಪಯೋಗವಾಗದೆ ಇನ್ನೂ ಇದ್ದರೆ ಉತ್ಪಾದನೆ ಯಾವ ರೀತಿ ಜಾಸ್ತಿಯಾಗುತ್ತದೆಂದು ನಾನು ಕೇಳುತ್ತೇನೆ. ಈ ರೀತಿ ಯೋಜನೆಗಳಿಗೆ ಸರ್ಕಾರದವರು ಹೀಗೆ ಹಣವನ್ನು ಒದಗಿಸಿದ್ದರೂ ಅದು ಯಾವ ಯಾವ ಬಾಬಿಗೆ ಉಪಯೋಗವಾಗಬೇಕೋ ಅದಕ್ಕೆ ಉಪಯೋಗವಾಗದೇ ಇರುವುದಕ್ಕೆ ಕಾರಣವೇನೆಂಬುದನ್ನು ಅಂಥವರಿಂದ ಸರ್ಕಾರದವರು ರಾಷ್ಟ್ರದ ಹಿತದಲ್ಲಿ ವಿಚಾರಮಾಡುವುದು ಅತ್ಯಗತ್ಯವಾಗಿದೆ ಎಂದು ನಾನು ಹೇಳುತ್ತೇನೆ.

Mr. SPEAKER.—The House will now rise and meet again at three of the clock.

The House adjourned at Forty Minutes past Twelve of the Clock and reassembled at Thirty Minutes past Three of the Clock.

[MR. SPEAKER in the Chair]

ಶ್ರೀ ಗೋಪಾಲ ಸಾರೆನ್ನ.—ಸ್ವಾಮಿ, ಈಗಾಗಲೇ ಈ ಸಭೆಯಲ್ಲಿ ಮಾತನಾಡಿದ ಶ್ರೀಮಾನ್ ರಾಜಗೋಪಾಲ್ ಅವರು ಬಹಳ ಉತ್ತಮವಾದ ರೀತಿಯಲ್ಲಿ ಅವರ ಕಮ್ಯೂನಿಸ್ಟ್ ಪಾರ್ಟಿಯ ಕೇಸನ್ನು ವಾದಿಸಿದ್ದಾರೆ. ಅದರ ಬಗ್ಗೆ ಒಂದೆರಡು ಮಾತು ಹೇಳುವುದು ಅಗತ್ಯ. ಇವತ್ತಿನ ದಿವಸ ರಷ್ಯಾದಂಥ ಅಂತರರಾಷ್ಟ್ರೀಯ ಕಮ್ಯೂನಿಸ್ಟ್ ದೇಶಗಳು ಭಾರತದ ಮೇಲೆ ಕೈಮಾಡಿದ ಚೈನಾದ ಮೇಲೆ ಪರಿಣಾಮಕಾರಿ ಒತ್ತಾಯ ತಂದಿದ್ದಾರೆ. ಚೈನವು ಮುಂದುವರಿಯುತ್ತಿರಲಿಲ್ಲ. ಆದರೆ ರಾಜಾಜಿಯವರ ನಾಯಕತ್ವದಲ್ಲಿ ಅಂತರರಾಷ್ಟ್ರೀಯರಿಗೆ ಸರಿಯಾದ ರೀತಿಯಲ್ಲಿ ತಿಳುವಳಿಕೆ ಕೊಟ್ಟದ್ದರಿಂದ ಭಾರತಕ್ಕೊದಗಿದ ಯುದ್ಧಸನ್ನಾಹಗಳಿಂದಾಗಿ ಚೈನಾ ದೇಶವು ಭಾರತ ಪ್ರದೇಶ ಬಿಟ್ಟುಕೊಟ್ಟು ಹಿಂದೆ ವಾಪಸ್ ಹೋಗಿದ್ದಾಗಿದೆ. ಇಲ್ಲದಿದ್ದರೆ ಚೈನಾ ಈ ಕ್ರಮ ತೆಗೆದುಕೊಳ್ಳುತ್ತಿರ ಲಿಲ್ಲ. ರೀಆಕ್ಷನರೀಸ್ ಎಂದು ಹೇಳಲ್ಪಡುವ ರಾಜಾಜಿಯವರಂಥ ನಾಯಕರು ಮುಂದೆ ಬಂದು ಅಂತರ ರಾಷ್ಟ್ರೀಯ ದೊಡ್ಡ ದೊಡ್ಡ ದೇಶದ ನಾಯಕರ ಮುಂದೆ ವ್ಯವಹರಿಸಿ ತಮ್ಮ ಶಕ್ತಿ ಬಲ ಪ್ರದರ್ಶನ ಮಾಡಿದ್ದರಿಂದ ಚೈನಾದವರು ಹಿಂದಕ್ಕೆ ಸರಿಯುವಂತಾಗಿದೆ ಎನ್ನುವುದನ್ನು ನಮ್ಮ ರಾಷ್ಟ್ರ ತಿಳಿದು ಕೊಂಡಿದೆ. ಗಾಂಧೀಜಿಯವರು ಹೇಳಿದ ಹಾಗೆ ತತ್ವವನ್ನು ಪರಿಪಾಲನೆ ಮಾಡಿ ಯೋಗ್ಯ ನೀತಿಯನ್ನು

ಜಾರಿಗೆ ತರಬೇಕಾಗಿದೆ. ಅದನ್ನು ಕಾರ್ಯಗತ ಮಾಡುವ ಕೆಲಸ ಮಾಡದಿದ್ದರೆ ಇಂಥ ಕಷ್ಟವಾದ ಗಂಡಾಂತರ ಪರಿಸ್ಥಿತಿಯಲ್ಲಿ ಭಯಂಕರ ಕ್ರಾಂತಿಯನ್ನು ಎದುರಿಸುವುದಕ್ಕೆ ಸ್ವತಂತ್ರ ಪಕ್ಷದ ಪ್ರಭಾವ ಬೇಕಾಯಿತು. ಇಂದು ಕೆಲವು ರಾಜಕಾರಣಿಗಳಿಂದ ಮುಖ್ಯವಾಗಿ ಸ್ವತಂತ್ರಪಕ್ಷದವರಿಂದ ಇದು ಒದಗಿದೆ ಎನ್ನುವುದನ್ನು ಮರೆಯಬಾರದು. ಆದರೆ ಸರಕಾರ ಯಾವದೇ ರೀತಿಯ ಅಂತರ ರಾಷ್ಟ್ರೀಯ ನೀತಿಯನ್ನು ಅನುಸರಿಸಿದರೂ ಕೂಡ ಅದರಲ್ಲಿ ಏಕರೂಪತೆಯಿರಬೇಕು ಎನ್ನುವುದನ್ನು ತಿಳಿದುಕೊಳ್ಳದೇ ಇರುವುದು ಶೋಚನೀಯ. ಒಬ್ಬಿಬ್ಬರನ್ನು ಅಲ್ಲಲ್ಲಿ ಬಂಧಿಸಿದರೆ ಸಾಲದು. ರಾಷ್ಟ್ರ ವಿರೋಧ ಚಟುವಟಿಕೆ ತಡೆಗಟ್ಟಲು ಸರಿಯಾದ ರೀತಿಯಲ್ಲಿ ಕ್ರಮ ತೆದುಕೊಂಡಿಲ್ಲ. ಇನ್ನು ಮುಂದೆ ಯಾದರೂ ಕೂಡ ಸರಕಾರ ರಾಷ್ಟ್ರದಾದ್ಯಂತ ಏಕರೂಪವಾದ ನಿಲುವನ್ನು ವಹಿಸಿ ಕಾರ್ಯಾಚರಣೆ ತರಬೇಕೆಂಬುದನ್ನು ತಿಳಿದುಕೊಳ್ಳಬೇಕು. ಇನ್ನು ರಾಜ್ಯಪಾಲರ ಭಾಷಣದಲ್ಲಿ ರಾಜ್ಯದ ಸೋಷಿಯಲ್ ವೆಲ್‌ಫೇರ್ ಇಲಾಖೆ ಬಗ್ಗೆ ವಿವರ ಇದೆ. ಆದರೆ ಅದನ್ನು ಪರಿಣಾಮಕಾರಿ ಆಗಿ ತಿಳಿಸಿಲ್ಲ. ದೇಶದಲ್ಲಿಯ ಅಸ್ಪೃಶ್ಯತೆ, ಬಡತನ ಹೋಗಬೇಕು. ಸಮಾಜದಲ್ಲಿ ತಾರತಮ್ಯಭಾವದಿಂದ ಕಷ್ಟ ಅನುಭವಿಸಿದವರನ್ನು ಮುಂದೆ ತರಬೇಕು ಎಂದು ಮಹಾತ್ಮ ಗಾಂಧೀಜಿಯವರು ಹೇಳಿದ ನೀತಿಯ ಬಗ್ಗೆ ಸಾಕಷ್ಟು ಪ್ರಭಾವಪೂರಿತ ಲಕ್ಷ್ಯ ಪೂರೈಸಿಲ್ಲ. ರಾಷ್ಟ್ರದ ಈ ಪ್ರಮುಖ ವಿಚಾರ ರಾಜ್ಯಪಾಲರ ಭಾಷಣದಲ್ಲಿ ಇಳಿರುವುದು ಸಾಲದು. ಮೊದಲು ಮೈಸೂರಿನಲ್ಲಿ ಮಹಾರಾಜರ ಆಡಳಿತೆಯ ಕಾಲದಲ್ಲಿ ಏನು ಕ್ರಮ ತೆಗೆದುಕೊಳ್ಳುತ್ತಿದ್ದರೋ, ಇನ್ನಿತರ ಭಾಗಗಳಲ್ಲಿ ಬ್ರಿಟಿಷರ ಕಾಲದಲ್ಲಿ ಏನು ಕ್ರಮ ತಗೆದುಕೊಳ್ಳುತ್ತಿದ್ದರೋ, ಅಷ್ಟು (ಎಫೆಕ್ಟಿವ್) ಪರಿಣಾಮಕಾರಿಯಾಗಿ ಈಗ ಕಲ್ಯಾಣಾಭಿವೃದ್ಧಿ ನಡೆಯುತ್ತಿಲ್ಲ. ಪ್ರತಿವರ್ಷ ರಾಜ್ಯದ ಬಜೆಟ್ಟಿನಲ್ಲಿ ಅಪಾರ ಧನ ಇದಕ್ಕಾಗಿ ಒದಗಿಸಿದ್ದರೂ ಕೂಡ ಈ ಜನರಿಗೆ ಅದು ಕ್ರಮವಾಗಿ ಸಿಕ್ಕುತ್ತಿಲ್ಲ ಎಂಬುದು ದುಃಖಕರವಾದ ವಿಷಯವೆಂದು ಸರಕಾರದ ಗಮನಕ್ಕೆ ತಂದಿದ್ದೇನೆ.

ಇದು ಬಹಳ ದುಃಖಕರವಾದ ವಿಚಾರ. ಈ ಕಡೆಗೆ ಬಲವಾದ ಗಮನ (attention) ಕೊಡುವುದು ಅವಶ್ಯಕ. ಈ ವಿಭಾಗದಲ್ಲಿ ಸರಕಾರದ ಹಣ ತುಂಬಾ ಅಪವ್ಯಯ (waste) ಆಗುತ್ತಿದೆ. ಉದಾಹರಣೆಗಾಗಿ ಉಳ್ಳಾಲ ಎಂಬಲ್ಲಿ (Primary Health Centre) ಮತ್ತು Maternity Centre ಇದೆಯಾದರೂ ಪ್ರತ್ಯೇಕವಾದ ಒಬ್ಬ ಮಿಡ್‌ವೈಫ್ ಮಹಿಳಾಭಿವೃದ್ಧಿ ಕೇಂದ್ರದಲ್ಲೂ ಇದ್ದಾರೆ. ಸೋಷಿಯಲ್ ವೆಲ್‌ಫೇರ್ ಇಲಾಖೆಯಲ್ಲಿ ಈ ಹುದ್ದೆಯಾಕೆ ಬೇಕು? ಮತ್ತು ಇವರ ಮೇಲ್ವಿಚಾರ ಹಾಗೂ ಹೇಗೆ ಕೆಲಸ ಮಾಡುವುದು ಎಂಬುದನ್ನು ನೋಡುವವರಾದರೂ ಇದ್ದಾರೆಯೇ ?

ಇನ್ನು ದಲಿತವರ್ಗದವರ ವ್ಯವಸಾಯ ಕಾಲೋನಿಗಳ ವಿಷಯ ಹೇಳುವುದಾದರೆ ನನ್ನ (ಕಾನ್‌ಸ್ಟಿಟ್ಯುಯನ್ಸಿ) ಮತಕ್ಷೇತ್ರದಲ್ಲಿಯೇ ಆರು ಬಾವಿಗಳಿದ್ದರೆ ಅವು ಅರ್ಧ ಅರ್ಧ ಕೆಲಸ ಆಗಿವೆಯೇ ಹೊರತು ಪೂರ್ತಿಯಾಗಿಲ್ಲ. ಆದರೆ ಸರ್ಕಾರದ ಲೆಕ್ಕಾಚಾರದಲ್ಲಿ (ಕಂಪ್ಲೀಟ್) ಪೂರ್ತಿ ಆಗಿವೆಯೆಂದೇ ವರದಿಯಾಗಿದೆ. ಆದರೆ ಅದು ಇನ್ನು ಹಾಗೆಯೇ ಅರ್ಧಕ್ಕರ್ಧ ಉಳಿಯಬೇಕಾಯಿತು. ಈ ವರ್ಷದ ಬಜೆಟ್ಟಿನಲ್ಲಿ ಅವುಗಳಿಗೆ (ಅಲಾಟ್‌ಮೆಂಟ್) ಹಣದ ಪೂರೈಕೆ ಇಲ್ಲದಿರುವುದರಿಂದ, ಅವುಗಳು ಕಂಪ್ಲೀಟ್ ಆಗುವುದಕ್ಕೆ ಅವಕಾಶವಿಲ್ಲ.

ಇಂಥ ಇನ್ನೂ ಎಷ್ಟೋ ವಿಚಾರಗಳಿವೆ. ಇನ್ನೊಂದು ಕಡೆ ಒಂದು ದಲಿತರಿಗಾಗಿಯೇ ಪ್ರತ್ಯೇಕ ಶಾಲೆ ಇದೆ. ಇಲ್ಲಿ 6, 7 ಮತ್ತು 8 ನೇ ಕ್ಲಾಸ್ ಮಾತ್ರ ಇದೆ. ಈ ಶಾಲೆಯ ಒಂದು ಮೈಲ ಸುತ್ತಳತೆ ದೂರದಲ್ಲಿ ಏಳೆಂಟು ಹಾಯರ್ ಎಲಿಮೆಂಟ್ರಿ ಶಾಲೆಗಳೂ, ಹೈಸ್ಕೂಲುಗಳೂ ಇವೆ. ಆದರೆ ಈ ಒಂದು ಶಾಲೆಯ ಮೂರು ದರ್ಜೆಗಳಿಗಾಗಿ 6 ಸಾವಿರ ರೂಪಾಯಿ ಅಧ್ಯಾಪಕರ ಸಂಬಳ ಇತ್ಯಾದಿಗಳಿಗಾಗಿಯೇ ಖರ್ಚಾಗುತ್ತಿದೆ. ಈ ಶಾಲೆ ಆ ಕೇಂದ್ರದಲ್ಲಿ ದಲಿತರಿಗಾಗಿಯೇ ಏಕೆ ಬೇಕು?

ಇನ್ನೂ ಕೆಲವು ಬೇಡವಾದ ವಿಚಾರಗಳಿಗಾಗಿ ಹಣ ಹಾಳಾಗುತ್ತಿರುವ ವಿಚಾರಗಳನ್ನು ಹೇಳಬೇಕಾಗಿತ್ತು. ಆದರೆ ಸಮಯಾವಕಾಶವಿಲ್ಲ. ದಲಿತರ ಹೆಸರಿನಲ್ಲಿ, ಸಮಾಜ ಕಲ್ಯಾಣಾಭಿವೃದ್ಧಿಯ ಹೆಸರಲ್ಲಿ ಇಂಥ ಅಪವ್ಯಯವನ್ನು ನಿಲ್ಲಿಸಿ, ಸರ್ಕಾರ ಉತ್ತಮವಾದ ಯೋಗ್ಯಫಲಕೊಡತಕ್ಕ ಯೋಜನೆಗಳಿಗಾಗಿಯೇ ಆರ್ಥಿಕ ವೆಚ್ಚವನ್ನು ಮಾಡಿ ದಲಿತ ಜನರಿಗೆ ನಿಜವಾಗಿ ಉಪಯುಕ್ತವಾದ ಕಾರ್ಯಗಳನ್ನು ಜಾರಿಗೆ ತರದಿದ್ದರೆ, ರಾಜ್ಯದ ಜನರಲ್ಲಿ ತುಂಬಾ ಅಸಮಾಧಾನಕರ, ಗಂಡಾಂತರ ಪರಿಸ್ಥಿತಿ ಬರಬಹುದಲ್ಲದೆ ಕ್ರಾಂತಿಗೂ ಕಾರಣವಾಗಬಹುದೆಂಬ ಎಚ್ಚರಿಕೆಯನ್ನು ಸರ್ಕಾರಕ್ಕೆ ಕೊಡಲು ಬಯಸಿ, ಸಮಯಾವಕಾಶವಿಲ್ಲದ್ದರಿಂದ ನನ್ನ ಮಾತನ್ನು ಮುಗಿಸುತ್ತೇನೆ.

Sri B. R. SUNTHANKAR (Belgaum City).—Mr. Speaker, sir, The Governor's Address this year has been, as rightly described by some of the Honourable Members on this side, quite uninspiring and insipid. This is the seventh Address that is delivered by His Excellency the

(SRI B. R. SUNTHANKAR)

Governor to this august House since I set my foot on the floor of this House and this is the eighth Address since the inauguration of the new State. If we take a review of all these Addresses, we can say that all these addresses have been very disappointing. There was something in the first Address that was delivered in December 1956. That Address had held out high hopes about the new State of Mysore. But the hopes that were entertained, the assurances that were held out were not kept up and there was a sense of frustration and disappointment throughout. All these Addresses, I may say, were a sort of periodical reports. This year's Address contains nothing but a catalogue of governmental activities. In all these Addresses there are some common features and there are some common points. In every Address we find a reference to the land reforms. In each of the addresses without exception there has been a reference to land reforms. But after seven years, what is the state of the land reforms ? The Nagpur resolution of the Congress had called upon all the Congress Governments to implement the land reforms by the end of 1959. Three years have passed, but in this State the land reforms are not yet enforced. Last year, we were told at this time that there were some constitutional difficulties. This year we are told the same excuse. That means, Government is not serious. If the Constitution has got to be amended, it can be amended. This Government can bring pressure on the Central Government to bring the necessary amendments. When every year so many amendments are brought and passed by the Parliament, I do not understand why a simple amendment, requiring of the enforcement of land reforms in Mysore should not be brought.

Similarly, every year there is a reference to the seasonal conditions, either a reference to wet famine or dry famine ; but the conditions have remained the same. The seasonal conditions, the scarcity conditions still persist in various parts of the State.

Similarly, in the present Address we may search in vain for enunciation of new policies by the Government. It is a sort of, as I have already said, a routine, periodical, progressive report. In the first Address after the inauguration of the State, the Governor was pleased to declare : "My Government will try to improve the material well being of the people and make the State health and prosperous part of India. Seven years have passed and have they reached any nearer to this healthy and prosperous State? The answer is clear 'No'. Similarly, two years back in the Address of 1961, we were told that we are approaching nearer a Welfare State." Have they really approached anywhere nearer to the welfare State ; that is the question of questions. Yes, there is welfare ; but that welfare is only for the ruling class, the ruling party, not for the common man. The lot of the common man is getting worse and worse day by day. With the rising cost of living, with the heavy and rising burden of taxation, the lot of the common man is getting worse and

worse day by day. He is far from this welfare State or a prosperous or healthy State.

Now the emergency is hanging on us; the emergency situation is still there; the sword of Chinese aggression is hanging high on our shoulders. But nowhere do we see any sense of emergency or seriousness. Nowhere is the atmosphere of emergency discernible. Everything is going on merrily, as usual. For some days, there was a farce of parading drill of white collers near Vidhana Soudha. All that is a matter of the past now. A lull has set in. The upsurge and the energies of the people that were released in the months of October and November have subsided and waned. There has been complacency all round, particularly complacency in Government quarters is deplorable. The tours of Ministers and Deputy Ministers are going on unabated. As a matter of fact, they have increased. A fortnight back on one day, there were half a dozen Ministers and Deputy Ministers touring in Belgaum district. Similarly, *Tula Bhars* are being performed. There is an atmosphere of the festival everywhere. I think the Hon'ble Chief Minister is visiting Belgaum next Sunday to perform his own *Tula Bhar* with currency notes. Thus the festivity goes on. The Emergency is now turned into a mockery. This is to be regretted indeed. The emergency seems to be only for the common man, not for the Government quarters. Unnecessary hardships are caused in the name of emergency. For example, there was cut of power supply upto a limit of 25 per cent throughout the State. A cut in a city like Bangalore, where defence industries are established, can be understood but not in moffusil towns where the rate of electricity is already high and where we are already economising electricity in a city like Belgaum. Generally we do not use bulbs of more than 15 candle power because rates of power are high. Therefore a 25 per cent cut is causing unnecessary hardships to the people. That means for a part of the night we have to go without lights.

Similarly, so much is talked about national defence fund. Belgaum is leading in this respect. But how is this fund collected? It is collected under coercion, intimidation and threats. Persons are called to the office of the Deputy Commissioner where they are dictated a certain amount, which they must pay. If they grumble or if they request for a lesser amount, the D.C. tells them : "We know how to recover that amount. We have got means to get that money. Get out".

Sri S. NIJALINGAPPA.—Was the Hon'ble Member present on any such occasion?

Sri B. R. SUNTHANKAR.—I can quote a number of such instances.

Sri S. NIJALINGAPPA.—I wish the Hon'ble Member would give me a list of such cases.

Sri B. R. SUNTHANKAR.—I will give the Chief Minister any number of such lists.

The hotel-wallahs and shop-keepers are threatened that their licences and permits will not be renewed unless they pay the prescribed

amount. In the villages the cultivators are compelled to pay the equal amount of land assessement. It is not voluntary, it is under compulsion. I do not understand the propriety of this mode of collection. The fund should be built up with spontaneous effort. Our Prime Minister has already declared on the floor of the Lok Sabha that coercion in collection of national defence fund mars the sponteneity of the effort. I do not know why the Government is incurring the displeasure of the people and unnecessarily creating ill-feeling among them.

Mr. SPEAKER.—I heard another Hon'ble Member say that there was nothing of that type.

Sri B. R. SUNTHANKAR.—It is within my knowledge and experience. I know that this sort of thing is happening in Belgaum City. I can quote a number of instances where coercion and intimidation have been employed.

Sri S. NIJALINGAPPA.—I have received not a single letter from this gentleman or a complaint since the last four months.

Sri B. R. SUNTHANKAR.—There have been so many complaints and criticisms in Belgaum papers. I do not know whether Government have taken care to go through these papers.

Sri S. NIJALINGAPPA.—My friends' papers possibly.

Sri B. R. SUNTHANKAR.—Belgaum started first and Bijapur and Dharwar thought they were lagging behind. They followed the example of Belgaum. After I came here I have been hearing the same sort of complaints, for example, about Nanjangud Sub-division. I am told here Police are being used to collect defence fund.

Sri K. PUTTASWAMY.—Does the Hon'ble Member know where that place is?

Sri B. R. SUNTHANKAR.—Certinly I know. But I have not gone there but that is my information.

Government machinery is moving very slow in matters connected with defence; there has been poor response to recruitment but there is no drive or effort to encourage recruitment to military services in the State. Even facilities that are due to those Government employees who are selected for military commissions are not given. I know of a case where a medical officer from the Medical Department was selected for the Emergency Commission but he has been relieved after being asked to resign his job. There is no guarantee of his service, increment and promotions. Is this the way of building war effort? Sir, we know there is great dearth of nurses for military services. There was a nursing auxiliary centre at Belgaum but it has been very recently closed down. Is this our contribution to defence efforts?

Sir, China has defeated us. China has caught us napping and if the country and the States do not prepare themselves, well then the fate of our nation is doomed. We must be very serious about national defence and emergency.

I will now turn to the border question. This aggression on the Himalayan border has receded our State border question into the back ground. Due to the national emergency we have suspended our agitation but suspension of agitation does not mean—I wish to make it very clear on the floor of this House that we have altogether given up our demand. We are going to press forward our demand at the opportune time, as soon as the emergency slackens. We are going to revive our demand for the integration of Marathi areas with Maharashtra, Sir, when the inter-state disputes like the Krishna and Godavari River waters are being discussed and when attempts are made to settle such disputes, I do not understand why the interstate border dispute should not be tackled, discussed and settled. I appeal to this Government to settle this question as early as possible to settle the border question of the Marathi border areas as well as the Kannada areas in the adjoining the State. I would like to refer to the 1956 address of the Governor. In that address, Government had assured that it would try to briug all the Kannada areas, particularly the areas of Kasargode, Madakasira and South Sholapur into the new Mysore State. That was an assurance held out to settle this question at an early date. But, seven years have passed and that "early date" has not yet come. Two years back, after the appointment of the Four-man Border Committee, the Government had declared in the Governor's Address it was declared that the four-man Border Committee is appointed and they were waiting for the deliberations of that Committee. The deliberations are over and the secret reports of the representatives of Mysore and Maharashtra have come out and they were printed and submitted to the respective Governments. What holds back the Government to take decisions now ? There is no reference whatsoever in this address about the border problem and about the reports of that Committee. There is absolutely no reference.

3-30 P.M.

Now, we are asked to sink our differences. We have shown that we can sink our differences at the opportune moment and when necessity demands. But, has this gesture of ours of the M. E. S. of Belgaum and Karwar reciprocated by this Government? How the Government is treating us? Yesterday, my hon'ble friend and colleague, Sri V. S. Patil has referred about the Belgaum Municipality. We learn that there is a move to suspend this Municipality and take over the administration of the Municipality. Sir, the Election Commission has decided to hold by elections, What holds back this Government to hold elections of the Municipality ? Why this Government is delaying holding of fresh elections, I do not understand. The Government have also given an assurance to the Mysore High Court that they would hold the elections as early as possible. The best thing is that they should hold the elections immediately.

There has been too much talk about the linguistic minorities. We

(SRI B. R. SUNTHANKAR)

are told that at the Southern Zonal Council a number of very important decisions were taken, but we do not know how far these decisions have been implemented. Sir, our cry here on the floor of the House has been, since the beginning, a cry in the wilderness. I may quote here some instances for the information of the House as to how we, the Maharashtrians and Marathi language are treated. In the Posts and Telegraphs Department, Marathi is not recognised, while Telugu, Kannada and Urdu langauges are recognised.

MR. SPEAKER.—How can it be? Has the Constitution been changed?

SRI S. NIJALINGAPPA.—Neither the Constitution has been changed nor the appointments are made in consultation with us.

SRI B. R. SUNTHANKAR.—Sir, I made enquiries with the Postal Authorities and they say that the list of recognised languages the State Government gave them does not include Marathi language.

SRI S. NIJALINGAPPA.—Let my friend give me any letter or any communication he has made or received. I would be very happy to know that.

SRI B. R. SUNTHANKAR.—The Post Master-General himself gave me that information when I met him a few days back. Then Sir, the increments and promotions of the Government Marathi employees have been stopped for not having passed the Kannada test. It has been made compulsory for the Marathi Primary School teachers in the Bidar District to pass the Kannada test. Similarly, the increments and promotions of Nurses have been stopped in my area. I should say that this is being done with an attitude of revenge on the part of the Government. Recently a Plan Exhibition Train visited Belgaum. All the demonstrations of plan programmes were either in English or Kannada and no demonstrations were made in Marathi as if the plan programme is not for Marathi areas. Similarly, war publicity was made either in English or Kannada and not in Marathi. Kannada Officers are posted to our areas. The Educational Inspector of the Belgaum District is an old Mysorean who does not know a word of Marathi. The Belgaum Municipality asked for a Health Officer to be posted. This Government sent a Mysore L.M.P., who does not know a word of Marathi. Such is the fate of Marathi people in this state.

ಶ್ರೀ ಎಂ. ಸಿ. ಬಸಪ್ಪ (ಚಾಮರಾಜನಗರ):—ಮಾನ್ಯ ಅಧ್ಯಕ್ಷರೇ, ಈ ಸಭೆಗೆ ರಾಜ್ಯಪಾಲರು ಅಪ್ಪಣೆಕೊಡಿಸಿರುವ ಭಾಷಣದ ಬಗ್ಗೆ ಶ್ರೀಮಾರ್ಕ ಹುಲ್ಲೊಕ್ಕೋಟಿಯವರು ತಂದಿರತಕ್ಕ ನಿರ್ಣಯವನ್ನು ಸಂಪೂರ್ಣವಾಗಿ ಅನುಮೋದಿಸುತ್ತ ನಾನು ಒಂದೆರಡು ಮಾತುಗಳನ್ನಾಡಲು ಇಷ್ಟಪಡುತ್ತೇನೆ.

ನಾನು ಕಳೆದ ಸಾಲಿನಲ್ಲಿ ರಾಜ್ಯಪಾಲರು ಮಾಡಿರತಕ್ಕ ಭಾಷಣವನ್ನೂ ಓದಿದ್ದೇನೆ. ಆದರೆ ಅವರು ಈ ಸಾಲಿನಲ್ಲಿ ಅಪ್ಪಣೆ ಕೊಡಿಸಿರತಕ್ಕ ಭಾಷಣದಲ್ಲಿ ಒಂದು ವಿಶೇಷ ಲಕ್ಷಣವಿರುತ್ತದೆ. ದೇಶಕ್ಕೆ ಒದಗಿರುವ ತುರ್ತುಪರಿಸ್ಥಿತಿಯ ವಿಚಾರವಾಗಿ ರಾಜ್ಯ ಕೈಗೊಳ್ಳಲಿರುವ ಕಾರ್ಯಕ್ರಮಗಳ ವಿಷಯವನ್ನು ಅವರು ತಮ್ಮ ಭಾಷಣದಲ್ಲಿ ಪ್ರಸ್ತಾಪಮಾಡಿದ್ದಾರೆ. ಆದರೆ ಈಗ ತಾನೆ ಮಾತನಾಡಿದ ನನ್ನ ಸ್ನೇಹಿತರು ಈ ತುರ್ತು ಪರಿಸ್ಥಿತಿ ವಿಚಾರವಾಗಿ ತದ್ವಿರುದ್ಧವಾದ ಅಭಿಪ್ರಾಯವನ್ನು ತಿಳಿಸಿದ್ದಾರೆ. ಅವರು ಮಾತನಾಡುತ್ತ ಈ ತತ್ಸಂಬಂಧದಲ್ಲಿ ಅನೇಕ ಕಡೆ ಅಧಿಕಾರಿಗಳಿಗೆ ಹಿಂಸೆ ಕೊಟ್ಟಿದ್ದಾರೆ, ಮಂತ್ರಿಗಳು ಅನಗತ್ಯವಾಗಿ ಪ್ರವಾಸ ಹೋಗುತ್ತಿದ್ದಾರೆಂಬುದಾಗಿ ಅವರೇನು ಹೇಳಿದ್ದಾರೆ

ಅದೆಲ್ಲವೂ ನಮ್ಮ ಅಭಿಪ್ರಾಯಕ್ಕೆ ತದ್ವಿರುದ್ಧವಾಗಿವೆ. ನಾವಾಗೇ ನಮ್ಮ ಮುಖ್ಯಮಂತ್ರಿಗಳ ಬಳಿ ಹೋಗಿ ತಾವು ನಮ್ಮ ಪ್ರಾಂತದಲ್ಲಿ ಪ್ರವಾಸ ಕೈಗೊಳ್ಳಬೇಕು, ತಾವು ನಮಗೆ ಈ ರಕ್ಷಣಾ ನಿಧಿ ಸಂಗ್ರಹಣೆ ಕಾರ್ಯದಲ್ಲಿ ನೆರವಾಗಬೇಕು ಎಂಬುದಾಗಿ ಅವರಲ್ಲಿ ಪ್ರಾರ್ಥನೆ ಮಾಡಿಕೊಂಡಿದ್ದರ ಮೇಲೆ ಅವರು ನಮ್ಮ ಪ್ರಾರ್ಥನೆಯನ್ನು ಮನ್ನಿಸಿ ಅವರು ನಮ್ಮ ಪ್ರಾಂತದಲ್ಲಿ ಪ್ರವಾಸ ಮಾಡಿದರು. ಅವರ ಈ ಪ್ರವಾಸದಲ್ಲಿ ನಾವು ಪೋಲೀಸ್ ಅಧಿಕಾರಿಗಳನ್ನು ಬಳಸಲಾಯಿತೆಂದು ಆ ಮಾನ್ಯ ಸದಸ್ಯರು ಆಪಾದನೆ ಮಾಡಿದರು. ಆದರೆ ನಾನು ನಂಜನಗೂಡ್ ಸಬ್‌ಡಿವಿಷನ್ ಕಡೆಯ ಸರಹದ್ದಾದ ಚಾಮರಾಜನಗರ ತಾಲ್ಲೂಕಿನಿಂದ ಬಂದಿರತಕ್ಕ ಸದಸ್ಯನಾಗಿದ್ದೇನೆ. ನಾನು ಈ ಹಣ ವಸೂಲಿ ಕಾರ್ಯದಲ್ಲಿ ಸುಮಾರು 20 ದಿವಸಗಳ ಕಾಲ ತಿರುಗಾಡಿದ್ದೇನೆ. ಆ ಅವಧಿಯಲ್ಲಿ ಒಂದು ದಿನವಾದರೂ ನಾವು ಪೋಲೀಸ್ ಅಧಿಕಾರಿಗಳ ಸಹಾಯವನ್ನು ತೆಗೆದುಕೊಂಡಿಲ್ಲ ಎಂಬ ಅಂಶವನ್ನು ನಾನಿಲ್ಲಿ ಸ್ಪಷ್ಟವಾಗಿ ತಿಳಿಸಬಯಸುತ್ತೇನೆ. ಮೇಲಾಗಿ ಆ ನಮ್ಮ ಪ್ರದೇಶದಲ್ಲಿ ಜನರಿಗೆ ಎಷ್ಟು ಉತ್ಸಾಹ—ಹುರುಪಿತ್ತು ಎಂಬುದನ್ನು ಹೇಳಬೇಕೆಂದರೆ ಕೇವಲ ಎರಡೇ ಎರಡು ಗಂಟೆಗಳಲ್ಲಿ ನಾವು 2 ತಿಂಗಳು ಸಾಧಿಸಿದರೂ ಸಾಧ್ಯವಾಗದಂಥ ಕಾರ್ಯ ಆಯಿತು. ಕೇವಲ ಎರಡೇ ಗಂಟೆಗಳಲ್ಲಿ 30 ಸಾವಿರ ರೂಪಾಯಿಗಳ ನಿಧಿ ಸಂಗ್ರಹಣೆ ಆಯಿತು. ಅಷ್ಟೇ ಅಲ್ಲದೆ, 30 ಪಲ್ಲ ಭತ್ತ, ಚಿನ್ನ ಹೀಗೆ ರಕ್ಷಣಾ ನಿಧಿಗೆ ನಾನಾ ರೂಪದಲ್ಲಿ ನಿಧಿ ಸಂಗ್ರಹಣೆ ಆಯಿತು. ಇಂಥ ಸಂದರ್ಭಗಳಲ್ಲಿ ಕೂಡ ಮಂತ್ರಿಗಳು ವೃಥಾ ಕಾಲಹರಣ ಮಾಡಿಕೊಂಡು ಪ್ರವಾಸ ಮಾಡುತ್ತಿದ್ದಾರೆಂದು ಹೇಳಿದುದು ಸರಿಯಾದ್ದಲ್ಲ. ಮಾನ್ಯ ಮುಖ್ಯಮಂತ್ರಿಗಳು ಅಲ್ಲಿಗೆ ಆ ದಿವಸ ಬಂದುದರಿಂದ ನಾವು 20 ದಿವಸ ಮಾಡಿದರೂ ಸಾಧಿಸಲಾಗದಂಥ ಕಾರ್ಯವನ್ನು ಅವರು 2 ಗಂಟೆಗಳಲ್ಲಿ ಸಾಧಿಸಿದರು. ಹೀಗೆ ಅಗತ್ಯ ಬಿದ್ದಾಗಲೆಲ್ಲ ಮಂತ್ರಿಗಳು ಪ್ರವಾಸ ಕೈಗೊಳ್ಳಲೇಬೇಕಾಗಿರುತ್ತೆ. ಆದಕಾರಣ ಅವರು ಪ್ರವಾಸವನ್ನು ಕಡಮೆ ಮಾಡಬೇಕೆಂದು ಹೇಳಿದುದು ಸರಿಯಾದ್ದಲ್ಲ ಎಂಬುದಾಗಿ ನಾನು ತಮ್ಮೆಲ್ಲರಲ್ಲೂ ಅರಿಕೆ ಮಾಡಿಕೊಳ್ಳುತ್ತೇನೆ.

ಈ ವರ್ಷದ ಕಾರ್ಯಕ್ರಮಗಳಲ್ಲಿ ರಾಜ್ಯಪಾಲರು ಅಪ್ಪಣೆ ಕೊಡಿಸಿರುವ ಪ್ರಕಾರ ಏನು ಮಾಡಿದ್ದಾರೆಂದರೆ ರಾಜ್ಯದಲ್ಲಿ ಆಹಾರದ ಬೆಳೆಯನ್ನು ಹೆಚ್ಚಿಗೆ ಬೆಳೆಯಬೇಕು, ಅದಕ್ಕಾಗಿ ನೀರಾವರಿ ಕಾಮಗಾರಿಗಳನ್ನು ತೆಗೆದು ಕೊಳ್ಳಬೇಕು. ಹಾಗೂ ನೀರಾವರಿ ಬಾವಿಗಳನ್ನು ಹೆಚ್ಚು ಮಾಡಬೇಕು ಎನ್ನುವ ಅಂಶವನ್ನು ಉಲ್ಲೇಖಿಸಿದ್ದಾರೆ. ಕಳೆದ ಸಾಲಿನಲ್ಲಿ ಸುಮಾರು 16,700 ಬಾವಿಗಳನ್ನು ಮಂಜೂರು ಮಾಡಿದ್ದಾರೆ. ಅವುಗಳಲ್ಲಿ ಈಗಾಗಲೇ 8,000 ಬಾವಿಗಳು ಪೂರ್ತಿಯಾಗಿವೆ. ನಾಲ್ಕು ಸಾವಿರ ಬಾವಿಗಳು ಈ ವರ್ಷದ ಮಾರ್ಚಿ 31ನೆಯ ತಾರೀಖಿನೊಳಗಾಗಿ ಪೂರ್ತಿಯಾಗುವ ನಿರೀಕ್ಷೆ ಇದೆ ಎಂದು ಅಪ್ಪಣೆ ಕೊಡಿಸಿದ್ದಾರೆ. ಈಗಾಗಲೇ ಎಲೆಕ್ಟ್ರಿಸಿಟಿ ಬೋರ್ಡಿನವರೂ ಸಹ ಈ ಬಾವಿಗಳಿಗೆ ನೀರಾವರಿ ಪಂಪುಗಳನ್ನೂ ಒದಗಿಸಿಕೊಡಬೇಕು ಮತ್ತು ಆ ಬಾವಿಗಳಿಂದ ನೀರನ್ನೆತ್ತಿ ಫಸಲನ್ನು ತೆಗೆಯಬೇಕು ಮತ್ತು ಉತ್ಪಾದನೆಯನ್ನು ಹೆಚ್ಚಿಸತಕ್ಕ ಅನುಕೂಲತೆಗಳನ್ನು ರೈತರಿಗೆ ಕೊಡಬೇಕೆಂದು ಸರ್ಕಾರ ಯೋಚನೆ ಮಾಡಿದೆ. ಪಂಪ್‌ಸೆಟ್‌ಗಳನ್ನು ಒದಗಿಸುವ ಯೋಜನೆಬಗ್ಗೆ ಅನೇಕ ಸದಸ್ಯರು ಹೇಳಿದ್ದಾರೆ. ಈಗಿನ ತುರ್ತುಪರಿಸ್ಥಿತಿಗಿಂತ ಮುಂಚೆ ಸರ್ಕಾರದವರು ಬೋರ್ಡಿನವರು ಒಂದು ನಿಯಮವನ್ನು ಪಾಲಿಸುತ್ತಿದ್ದರು. ನೀರಾವರಿ ಬಾವಿಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡಬೇಕಾದರೆ ಒಂದು ಎಚ್. ಪಿ. ಪವರ್ ಉಪಯೋಗಿಸಿದರೆ 1,250 ರೂಪಾಯಿ ಖರ್ಚು ಮಾಡಬಹುದು ಎಂದು ಅವಕಾಶವನ್ನು ಕೊಟ್ಟಿದ್ದರು. ಈಗ ಅದನ್ನು 2,500 ರೂಪಾಯಿಗಳಿಗೆ ಹೆಚ್ಚಿಸಿದ್ದಾರೆ. ಇದರಲ್ಲಿ ಒಂದು ಕಷ್ಟವನ್ನು ನಾವು ನೋಡುತ್ತಿದ್ದೇವೆ. ಹಿಂದೆ ಅಧಿಕಾರಿಗಳು ಅಂದಾಜನ್ನೂ ತಯಾರಿಸಿದ್ದು ಇಷ್ಟು ವಿದ್ಯುಚ್ಛಕ್ತಿಯನ್ನು ಉಪಯೋಗಿಸಿದರೆ ಇಷ್ಟು ಸಾವಿರ ರೂಪಾಯಿಗಳ ಅಂದಾಜನ್ನು ಮಂಜೂರ್ಮಾಡಬಹುದು ಎಂದು ಅಂದಾಜುಗಳನ್ನು ಮಂಜೂರ್ಮಾಡಿದ್ದಾರೆ. ಇವೊತ್ತು ಸರ್ಕಾರದವರು ಅದನ್ನು ಇಮ್ಮಡಿಮಾಡಿರುವುದರಿಂದ ಹಿಂದೆ ಮಂಜೂರಾಗದೆ ಇರುವ ಅಂದಾಜುಗಳನ್ನು ಕೂಡ ಈಗಿನ ಲೆಕ್ಕಕ್ಕೆ revise ಮಾಡಿ ಪುನಃ ಸಂಬಂಧಪಟ್ಟ ಅಧಿಕಾರಿಗಳ ಮುಂದೆ ಹೋಗಿ ಮಂಜೂರಾಗಬೇಕೆನ್ನುವ ನಿಯಮವನ್ನು ಕಡ್ಡಾಯವಾಗಿ ಹಾಕಿದರೆ, ಬಹುಶಃ ಸರ್ಕಾರದವರು ಈ ವರ್ಷದ ಆಖೈರಿನೊಳಗಾಗಿ ಐದು-ಹತ್ತು ಸಾವಿರ ನೀರಾವರಿ ಪಂಪ್‌ಗಳನ್ನು ಕೊಡಬೇಕೆಂಬ ಗುರಿಯನ್ನು ಸಾಧನೆ ಮಾಡುವುದಕ್ಕೆ ಸಾಧ್ಯವಿದೆ. ಇದರ ಬದಲು ಮಂಜೂರಾಗದೆ ಇರುವ ಅಂದಾಜುಗಳು ಈಗಿನ ಪರಿಮಿತಿಯಲ್ಲಿ ಬರುವುದಾದರೆ ಮಂಜೂರಾತಿಗೆ ಕಾಯದೆ ಕೆಲಸವನ್ನು ತೆಗೆದು ಕೊಳ್ಳತಕ್ಕದ್ದು ಎನ್ನುವ ಸೂಚನೆಯನ್ನು ಅಧಿಕಾರಿಗಳಿಗೆಕೊಟ್ಟ ಪಕ್ಷದಲ್ಲಿ ಸರ್ಕಾರದವರು ಏನು ನಿರೀಕ್ಷೆ ಮಾಡಿದ್ದಾರೆ, ಏನೊಂದು ಹಣವನ್ನು ಒದಗಿಸಬೇಕೆಂದು ಅಪೇಕ್ಷೆ ಪಡುತ್ತಾರೆ, ಅದನ್ನು ಸಕಾಲದಲ್ಲಿ ಕೊಟ್ಟಹಾಗಾಗುತ್ತದೆಂದು ನಾನು ಭಾವನೆ ಮಾಡಿಕೊಂಡಿದ್ದೇನೆ.

ಒಂದೆರಡು ವಿಷಯಗಳಲ್ಲಿ ನನಗೂ ಕೂಡ ಕಳೆದ ವರ್ಷ ರಾಜ್ಯಪಾಲರ ಭಾಷಣದಲ್ಲಿ ಹೇಳಿರುವುದಕ್ಕೂ ಈ ವರ್ಷ ಅಪ್ಪಣೆ ಕೊಡಿಸಿರುವುದಕ್ಕೂ ಸ್ವಲ್ಪ ವ್ಯತ್ಯಾಸವಿದೆ ಎಂದು ಕಾಣುತ್ತದೆ. ಒಂದು

(ಶ್ರೀ ಎಂ. ಸಿ. ಬಸಪ್ಪ)

ಭೂಸುಧಾರಣೆಗೆ ಸಂಬಂಧಪಟ್ಟದ್ದು. ಕಳೆದ ವರ್ಷದಲ್ಲಿ ಭೂಸುಧಾರಣೆಗೆ ರಾಷ್ಟ್ರಾಧ್ಯಕ್ಷರ ಅನುಮತಿ ಬಂದಿದೆ ಎಂದು ಅಪ್ಪಣೆ ಕೊಡಿಸಿದ್ದಾರೆ. ಅದರಲ್ಲಿ

"The Mysore Land Reforms Bill was passed by both the Houses of the Legislature and has very recently received the President's assent."

ಎಂದು ಹೇಳಿದ್ದಾರೆ. ಈಸಾರಿ ಅಪ್ಪಣೆ ಕೊಡಿಸಿರುವುದರಲ್ಲಿ

"The assent of the President has been given subject to amendments to certain sections of the Bill."

ಎಂದು ಹೇಳಿದ್ದಾರೆ. ಇದರಲ್ಲಿ ಸ್ವಲ್ಪ ವ್ಯತ್ಯಾಸ ಕಾಣಬರುತ್ತದೆ. ಏತಕ್ಕೋಸ್ಕರ ಈರೀತಿ ಆಯಿತು ಎನ್ನುವುದನ್ನು ಪರಿಶೀಲನೆ ಮಾಡಬೇಕಾಗಿದೆ. ಅನೇಕ ಸಂದರ್ಭಗಳಲ್ಲಿ ರೆವೆನ್ಯೂ ಮಂತ್ರಿಗಳು ಅಪ್ಪಣೆ ಕೊಡಿಸಿದ್ದಾರೆ: ಭೂಸ ಧಾರಣೆಯನ್ನು ಏನು ಶಾಸನವನ್ನಾಗಿ ಮಾಡಿದ್ದೇವೆ ಅದನ್ನು ಅವಷ್ಟು ಬೇಗ ಜಾರಿಗೆ ತರುತ್ತೇವೆ. ಆದರೆ ರಾಜ್ಯಾಂಗಕ್ಕೆ ಸಂಬಂಧಿಸಿದಂತೆ ಕೆಲವು ಅಡ್ಡಿ ಆತಂಕಗಳು ಬಂದಿರುವುದರಿಂದ ಜಾರಿಗೆ ತರುವುದಕ್ಕಾಗಲಿಲ್ಲವೆಂದು ಹೇಳಿದ್ದಾರೆ. ಬಹುಶಃ ಇದನ್ನು ರಾಜ್ಯಪಾಲರು ಹೇಳಿದ್ದರೆ ಚೆನ್ನಾಗಿರುತ್ತಿತ್ತು. ರಾಜ್ಯಾಂಗದ ತಿದ್ದುಪಡಿ ಏನಿದೆಯೋ ಅದನ್ನು ಆದಷ್ಟು ಬೇಗವಾಡಿ ಈ ಕಾನೂನನ್ನು ಜಾರಿಗೆ ತರಬೇಕೆಂದು ನಾನು ಸರ್ಕಾರವನ್ನು ಪ್ರಾರ್ಥಿಸುತ್ತೇನೆ.

ಗೋದಾವರಿ ಮತ್ತು ಕೃಷ್ಣ ನದಿಗಳ ನೀರಿನ ವಿಚಾರವಾಗಿ ಈ ದಿನ ಬೆಳಿಗ್ಗೆ ಕೂಡ ಪ್ರಶ್ನೋತ್ತರಗಳ ಕಾಲದಲ್ಲಿ ನಡೆಯಿತು. ಅದರ ಬಗ್ಗೆ ಕೂಡ ಕಳೆದ ವರ್ಷಕ್ಕೂ ಈ ವರ್ಷಕ್ಕೂ ಮಹತ್ತರವಾದ ಬದಲಾವಣೆಯನ್ನು ಕಾಣುವುದಿಲ್ಲ. ಕಳೆದ ವರ್ಷ ರಾಜ್ಯಪಾಲರು ಹೇಳಿದರು :

"As the Commission is not competent to decide on the rights or the use of water by the various States, my Government has sent a formal application to the Government of India requesting them for the appointment of a Tribunal under the Inter-State Water Disputes Act, 1956, so that the rights of this State might receive adequate attention and proper adjudication."

ಈ ಹೊತ್ತು ಪ್ರಾತಃಕಾಲ ಒಂದು ಪ್ರಶ್ನೆಗೆ ಉತ್ತರ ಕೊಡುತ್ತ ನಾವು ಅಪ್ಲಿಕೇಷನ್ ಹಾಕಿರುವುದು ನಿಜ. ಅಗತ್ಯಬಿದ್ದಾಗ ಅದನ್ನು ನಾವು ಕೇಂದ್ರ ಸರ್ಕಾರವನ್ನು ಒತ್ತಾಯಮಾಡುತ್ತೇವೆ. ಈಗ ಅಷ್ಟಕ್ಕೇ ಬಿಟ್ಟಿದ್ದೇವೆಂದು ಹೇಳಿದರು. ಈ ಸಾಲಿನ ರಾಜ್ಯಪಾಲರ ಭಾಷಣವನ್ನು ನೋಡುವುದಾದರೂ ಕೂಡ ಅಗತ್ಯವಾದ ಎಲ್ಲ ಏರ್ಪಾಡುಗಳನ್ನು ಸರ್ಕಾರ ಮಾಡುತ್ತಿದೆ. ನಮಗೆ ಸಿಕ್ಕಬೇಕಾದ ನೀರಿನ ಭಾಗ ವೆಷ್ಟಿದೆಯೋ ಅದನ್ನು ಪಡೆಯಲು ಕ್ರಮ ತೆಗೆದುಕೊಳ್ಳುತ್ತಿದೆ ಎಂದು ಮಾತ್ರ ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಅಗತ್ಯ ಬಿದ್ದಾಗ ಒತ್ತಾಯ ಮಾಡುತ್ತೇವೆಂದು ಹೇಳಿದರು. ಬಹುಶಃ ಪತ್ರಿಕೆಗಳಲ್ಲಿ ಬರುವ ವಿಷಯಗಳನ್ನು ನಾವು ನೋಡುವುದಾದರೆ ಈ ನದಿಗಳ ನೀರನ್ನು ಉಪಯೋಗಿಸಿಕೊಂಡು ನಮ್ಮ ಪಕ್ಕದ ಪ್ರದೇಶವಾದ ಆಂಧ್ರದಲ್ಲಿ ಶ್ರೀಶೈಲಂ, ನಾಗಾರ್ಜುನ ಸಾಗರ ಇಂಥ ಭಾರಿ ಪ್ರಾಜೆಕ್ಟ್‌ಗಳ ಕೆಲಸಗಳು ಮುಗಿಯುತ್ತಿರುವಾಗ, ನಮಗೆ ಇದರಲ್ಲಿ ಇರುವ ನೀರಿನಹಕ್ಕು ಎಷ್ಟು ಎಂಬುದನ್ನು ಮೂರನೆಯವರು ತೀರ್ಮಾನ ಮಾಡುವವರೆಗೂ ವಾದ ಮಾಡುತ್ತ ಕುಳಿತುಕೊಂಡರೆ ಏನಾಗಬಹುದು ಎಂಬುದನ್ನು ಯೋಚನೆಮಾಡಬೇಕು. ಈ ಸಂದರ್ಭದಲ್ಲಿ ನನ್ನಲ್ಲಿ ಉಂಟಾಗಿರುವ ಹೆದರಿಕೆಯನ್ನು ಹೇಳಿದರೆ ತಪ್ಪಾಗಲಾರದು. ಆಂಧ್ರಪ್ರದೇಶದವರು ಈ ಎರಡು ಜಲಾಶಯಗಳನ್ನು ಕಟ್ಟಿದ ಮೇಲೆ ಕೇಂದ್ರ ಸರ್ಕಾರದವರು ಆಂಧ್ರ ಪ್ರದೇಶದಲ್ಲಿ ಕೋಟ್ಯಂತರ ರೂಪಾಯಿ ಖರ್ಚು ಮಾಡಿರುವಾಗ ಈಗ ಏನುಮಾಡುವುದಕ್ಕಾಗುತ್ತದೆ ಎಂದು ಒಂದೇ ಮಾತಿನಲ್ಲಿ ಹೇಳಿದರೆ ಬಹುಶಃ ನಮಗೆ ನಿಜವಾಗಿಯೂ ಸಲ್ಲಬೇಕಾಗಿರುವ ಹಕ್ಕನ್ನು ನಾವು ಕಳೆದುಕೊಂಡ ಹಾಗಾಗುತ್ತದೆ. ನಮ್ಮ ಸರ್ಕಾರದವರು ಅಲ್ಲಿಯತನಕ ಬಿಡದೆ ಈಗಾಗಲೇ ಏನು ಅರ್ಜಿ ಹಾಕಿದ್ದಾರೆಯೋ ಅದನ್ನು ಒತ್ತಾಯಮಾಡಿ ಟ್ರಿಬುನಲ್ ರಚನೆ ಮಾಡುವಂತೆ ಪ್ರಯತ್ನಿಸಬೇಕು ಮತ್ತು ನಾವು ನಮ್ಮ ಪ್ರಾಜೆಕ್ಟ್‌ಗಳನ್ನು ಕಟ್ಟಲು ಅಪ್ಪಣೆಯನ್ನುಕೊಡಿ, financial assistance ಏನು ಕೊಡಬೇಕೋ ಅದನ್ನುಕೊಡಿ, ಎಂದು ನಾವು ಕೂಡ ನಮಗೆ ಬರಬೇಕಾದ

ನೀರಿನ ಹಕ್ಕನ್ನು ತೆಗೆದುಕೊಳ್ಳಬೇಕು. ರಾಜ್ಯಪಾಲರ ಭಾಷಣದಲ್ಲಿ ಹೇಳಿರುವಂತೆ ನಮ್ಮ ರಾಜ್ಯದಲ್ಲಿ ಶೇಕಡ ಏಳರಷ್ಟು ಮಾತ್ರ ನೀರಾವರಿ ಪ್ರದೇಶವಾಗಿದೆ. ಆಂಧ್ರ ಮತ್ತು ಮದ್ರಾಸ್ ರಾಜ್ಯಗಳಲ್ಲಿ ಶೇಕಡ 45 ಮತ್ತು 27 ಇದೆ. ಹೀಗಿರುವಾಗ ನೀರಿನ ಅವಶ್ಯಕತೆ ಮೈಸೂರಿಗೆ ಜಾಸ್ತಿ ಬೇಕೇ ಹೊರತು ಹೆಚ್ಚಿಗೆ ಅನುಕೂಲವಾಗಿರತಕ್ಕ ಪ್ರದೇಶಕ್ಕೆ ಇನ್ನೂ ಹೆಚ್ಚಿನ ಅನುಕೂಲವಾಗುವಂತೆ ಮಾಡುವುದು ಸರಿಯಲ್ಲ. ಈ ಸನ್ನಿವೇಶದಲ್ಲಿ ಕೇಂದ್ರ ಸರ್ಕಾರ ತುರ್ತಾಗಿ ಆಲೋಚನೆಮಾಡಿ ನಮಗೆ ಸಲ್ಲಬೇಕಾದ ನೀರಿನ ಹಕ್ಕನ್ನು ಸಲ್ಲುವಂತೆ ನೀರಿನ ಹಂಚಿಕೆ ಪ್ರಶ್ನೆಯನ್ನು ಪರಿಹಾರಮಾಡಿ ಕೊಡಬೇಕು. ಇಲ್ಲದೆ ಇದರೆ ನಾವು ಅಪ್ಪರ್ ಕೃಷ್ಣ ಪ್ರಾಜೆಕ್ಟ್ ಕಟ್ಟಬೇಕೆಂದು ಏನು ಯೋಜನೆಯಲ್ಲಿ ಸೇರಿಸಿಕೊಂಡಿದ್ದೇವೆಯೋ ಅದನ್ನು ಆದಷ್ಟು ಬೇಗ ಪ್ರಯತ್ನ ಮಾಡಿದರೆ ಬಹುಶಃ ಆವಾಗ ನಮ್ಮ ಹಕ್ಕುಬಾಧ್ಯತೆಗಳನ್ನು ಅವರು ತಿಳಿದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆಂದು ನಾನು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಸಂಸ್ಥಾನ ಸರ್ಕಾರವು ಎಲ್ಲ ಏರ್ಪಾಡುಗಳನ್ನು ಮಾಡಿ ನಮಗೆ ದೊರೆಯಬೇಕಾದ ನೀರನ್ನು ಆದಷ್ಟು ಬೇಗ ಒದಗಿಸಿಕೊಡುತ್ತಾರೆಂದು ನಾನಾದರೂ ಅರಿಕೆ ಮಾಡಿಕೊಳ್ಳುತ್ತೇನೆ.

ಇಷ್ಟನ್ನು ಹೇಳಿ, ಶ್ರೀ ವರ್ಮಾ ಹುಲ್ಕೋಟಿಯವರು ಮಂಡಿಸಿರುವ ನಿರ್ಣಯಕ್ಕೆ ನನ್ನ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿ ನನ್ನ ಎರಡು ಮಾತುಗಳನ್ನು ಮುಕ್ತಾಯಮಾಡುತ್ತೇನೆ.

ಶ್ರೀ ಜಿ. ವಿ. ಗೌಡ (ಪಾಳ್ಯಂ).—ಮಾನ್ಯ ಸಭಾಪತಿಗಳೇ, ಈಗಾಗಲೇ ರಾಜ್ಯಪಾಲರ ಭಾಷಣವನ್ನು ವಿಚಾರಪೂರಿತವಾಗಿ ನಮ್ಮ ಮಾನ್ಯ ಮಿತ್ರರುಗಳು ವಿಮರ್ಶೆ ಮಾಡಿದ್ದಾರೆ. ರಾಷ್ಟ್ರದಲ್ಲಿ ತುರ್ತುಪರಿಸ್ಥಿತಿ ಘೋಷಣೆಯಾದಾಗ ನಮ್ಮ ಜನತೆ ಯಾವ ಒಂದು ಉತ್ಸುಕತೆಯಿಂದ, ಕಾತುರತೆಯಿಂದ ಒಕ್ಕೊರಳಿನಿಂದ ಸಹಾಯ ಸಹಕಾರಗಳನ್ನು ಕೊಡಲು ಸನ್ನದ್ಧರಾದರೋ ಆ ಪರಿಸ್ಥಿತಿ ಇವೊತ್ತಿನ ದಿವಸ ಮಾಯವಾಗಿದೆ ಎಂದು ನನಗಂತೂ ಅನ್ನಿಸುತ್ತದೆ. ಅದೇ ಧಾಟಿಯಲ್ಲಿ ನಿಲ್ಲುವಂಥ ಒಂದು ವ್ಯವಸ್ಥೆ ಮಾಡುವುದರಲ್ಲಿ ಸರ್ಕಾರ ವಿಫಲವಾಗಿದೆ ಎಂದು ನಾನು ಅನ್ನದೆ ವಿಧಿಯಿಲ್ಲ.

ನನ್ನ ಮಾನ್ಯ ಮಿತ್ರರುಗಳು ಪ್ರಸ್ತಾಪಮಾಡಿದ ರೀತಿಯಲ್ಲಿ, ಈ ಸಾರಿಯ ರಾಜ್ಯಪಾಲರ ಭಾಷಣದಲ್ಲಿ ನಮ್ಮ ರಾಜ್ಯದೊಳಗೆ ಯಾವ ಆಶಾದಾಯಕವಾದುವನ್ನು ರೂಪಿಸತಕ್ಕ ಒಂದು ತರಹದ ಚಿತ್ರವನ್ನೂ ಕಾಣುತ್ತಿಲ್ಲ. ಇದು ನಿಜವಾಗಿಯೂ ನೀರಸವಾದುದು, ನಿಷ್ಪ್ರಯೋಜಕವಾದುದು, ಹಾಗೂ ಯಾವ ಒಂದು ಸ್ಫೂರ್ತಿಯನ್ನಾಗಲೀ ಅಥವಾ ಒಂದು ಆಸೆ ಆಕಾಂಕ್ಷೆಯನ್ನಾಗಲೀ ಸಾಧನೆ ಮಾಡುವ ಒಂದು ಪರಿಸ್ಥಿತಿಯನ್ನಾಗಲೀ ನಾವು ನೋಡಲಿಕ್ಕೆ ಸಾಧ್ಯವಾಗಲಿಲ್ಲ. ಇದು ನಿಜವಾಗಿಯೂ ಬಹು ಶೋಚನೀಯ ಎಂದು ನಾನು ಹೇಳಲೇಬೇಕಾಗಿದೆ.

ಸ್ವಾಮಿ, ರಾಜ್ಯಪಾಲರ ಹೇಳಿಕೆಯ ಮುಖೇನ ಈಗಾಗಲೇ ಮೂರನೆಯ ಪಾಂಚವಾರ್ಷಿಕ ಯೋಜನೆ ಮುಗಿಯುವುದರಲ್ಲಿ ನಾವು ಸುಮಾರು 29 ಕೋಟಿ ರೂಪಾಯಿಗಳಷ್ಟು ಹಣವನ್ನು ಕೂಡಿಸಲಿಕ್ಕೆ ಸಾಧ್ಯವಾಗುತ್ತದೆ ಎಂದು ಹೇಳಿದ್ದಾರೆ. ಇದನ್ನು ಮಿತವ್ಯಯ ಮಾಡುವುದರಿಂದ ಸಾಧಿಸಬಹುದು ಎಂದು Resources and Economy Committee ಯವರು ಮಾಡಿರುವ ಸಲಹೆಗಳಂತೆ ಬರಬಹುದು ಎಂಬ ನಿರೀಕ್ಷೆಯಿಂದ ಇದ್ದಾರೆ. ಅಲ್ಲದೆ ಈಚೆಗೆ ಕೆಲವು ಕಾಯಿದೆಗಳನ್ನು ಇಲ್ಲಿ ಅಂಗೀಕರಿಸಿರುವುದರಿಂದ ಇದರ ಪರಿಣಾಮವಾಗಿ ಸುಮಾರು 29 ಕೋಟಿಯಷ್ಟು ಶೇಖರಣೆ ಮಾಡುವುದಕ್ಕೆ ಸಾಧ್ಯವಿದೆ ಎನ್ನುವ ಸೂಚನೆಯನ್ನೂ ಕೊಟ್ಟಿದ್ದಾರೆ, ಇನ್ನೂ ಮೂರನೆಯ ಪಾಂಚವಾರ್ಷಿಕ ಯೋಜನೆಯನ್ನು ಪೂರೈಸಲು ಸುಮಾರು 42 ಕೋಟಿಯಷ್ಟು ಬೇಕಾಗುತ್ತದೆ ಎಂದಿರುವುದರಲ್ಲಿ ಇನ್ನೂ ಸುಮಾರು ಹದಿಮೂರು ಕೋಟಿಯಷ್ಟು ಖೋತಾಬೀಳುತ್ತದೆ ಎಂದು ಹೇಳುತ್ತಿದ್ದಾರೆ. ಈ 13 ಕೋಟಿಯಷ್ಟು ಹಣವನ್ನು ಯಾವುದಾದರೂ ತೆರಿಗೆಯ ಮೂಲಕ ಪಡೆಯಲು ಅವಕಾಶ ನಮಗೆ ಬೇಕು ಎಂದು ಒಂದು ಸೂಚನೆಯನ್ನು ರಾಜ್ಯಪಾಲರ ಮುಖೇನ ಈ ಭಾಷಣದಲ್ಲಿ ಹೇಳಿಸಿದ್ದಾರೆ ಎಂದು ನನಗನಿಸುತ್ತದೆ. ತಮಗೆಲ್ಲಾ ಗೊತ್ತಿರುವಹಾಗೆ, ಭೂ ಕಂದಾಯದ ಮೇಲೆ ಸರ್‌ಚಾರ್ಜನ್ನು ಹಾಕಬೇಕೆಂದು ಬಿಲ್ಲು ಪಾಸುಮಾಡಿದ್ದಾರೆ. ಅದರಿಂದ ಸುಮಾರು ವರ್ಷಕ್ಕೆ ಮೂರೂವರೆ ಕೋಟಿಯಷ್ಟು ಉತ್ಪನ್ನ ಬರಬಹುದು, ಎಂದರೆ ನಾಲ್ಕು ವರ್ಷಗಳಲ್ಲಿ ಸುಮಾರು 14 ಕೋಟಿ ರೂಪಾಯಿಗಳಷ್ಟು ಬರುವುದಾಗಿದೆ. ಅಲ್ಲದೆ ಈ ದೇಶದಲ್ಲಿ Resources and Economy ಕಮಿಟಿಯವರು ಹೇಳಿರುವಂತೆ ಅರಣ್ಯಖಾತೆಯನ್ನು ದಕ್ಷತೆಯಿಂದ ನಿರ್ವಹಿಸುವುದಾದರೆ ಸುಮಾರು ಮೂರು ನಾಲ್ಕು ಕೋಟಿಯಷ್ಟು ಹೆಚ್ಚಿನ ವರಮಾನ ಪಡೆಯಬಹುದು ಎನ್ನುವ ಒಂದು ಅಂದಾಜನ್ನು ಮಾಡಿದ್ದಾರೆ. ಕೊನೆಯ ಪಕ್ಷ ವರ್ಷವೊಂದಕ್ಕೆ ಎರಡು ಕೋಟಿಯಷ್ಟು ಬರುತ್ತೆ ಎಂದು ಇಟ್ಟುಕೊಂಡರೂ ನಾಲ್ಕು ವರ್ಷಗಳಿಗೆ ಸುಮಾರು ಎಂಟು ಕೋಟಿಯಷ್ಟು ವರಮಾನ ಬರುತ್ತದೆ. ಮನರಂಜನೆ ತೆರಿಗೆಯನ್ನು ಜಾರಿಗೆ ಕೊಟ್ಟರೆ ಅದರಲ್ಲಿ ಎರಡು ಕೋಟಿಯಷ್ಟು ಬರುತ್ತದೆ. ಸ್ಟಾಂಪು ಡ್ಯೂಟಿಯಿಂದ

(ಶ್ರೀ ಜಿ. ಎ. ಗೌಡ)

ಸುಮಾರು ಒಂದು ಕೋಟಿಯಷ್ಟು ಆದಾಯ ಬರುತ್ತದೆ. ಅಲ್ಲದೆ ಮಾರಾಟ ತೆರಿಗೆಯನ್ನು ಪುನರ್ವಿಮರ್ಶೆ ಮಾಡಿದ ರಿಂದ ಅದರಲ್ಲಿ ಕೂಡ ನಾಲ್ಕು ವರ್ಷಕ್ಕೆ ಸುಮಾರು ಆರುಕೋಟಿಯಷ್ಟು ಬರುತ್ತದೆ. ಅಲ್ಲದೆ ಮೋಟಾರ್ ವೆಹಿಕಲ್ಸ್ ಟ್ಯಾಕ್ಸೇಷನ್‌ನಿಂದ ಸುಮಾರು ಒಂದೂವರೆ ಕೋಟಿಯಷ್ಟು ಬರಬಹುದು. ಸರಕಾರ ಮಿತವ್ಯಯವನ್ನು ತರಬೇಕೆಂದಿದ್ದಾರೆ. ಅದನ್ನು ಪ್ರಯತ್ನಪಟ್ಟು ಮಾಡಿದರೆ ಸುಮಾರು ಒಂದು ಕೋಟಿಯಷ್ಟು ಉಳಿತಾಯವಾಗಬಹುದ . ಎಂದರೆ, ನಾಲ್ಕುವರ್ಷಕ್ಕೆ ನಾಲ್ಕು ಕೋಟಿಯ ಷ್ಟು ಉಳಿತಾಯವಾಗಬಹುದು. ಮೂರನೆಯ ಪಂಚವಾರ್ಷಿಕ ಯೋಜನೆಯು ಮುಕ್ತಾಯವಾಗುವ ಹೊತ್ತಿಗೆ ನಮಗೆ ಇನ್ನೂ ಸುಮಾರು ನಲವತ್ತು ಕೋಟಿಯಷ್ಟು ಪಡೆಯಲು ಒಂದು ಅವಕಾಶವಿದೆ. ಹಾಗಿರುವಾಗ ಈಗ ಸುಮಾರು 29ಕೋಟಿಯಷ್ಟು ಹಣವನ್ನು ಪಡೆಯಲು ನಮ್ಮ ಜನತೆಯ ಮೇಲೆ ತೆರಿಗೆ ಹೊರೆಯನ್ನು ಹೊರಿಸುವ, ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಹಾಕುವ ಒಂದು ಸೂಚನೆಯನ್ನೂ ರಾಜ್ಯಪಾಲರ ಭಾಷಣದ ಮುಖೇನ ಸೂಚಿಸಿದ್ದಾರೆ. ನಮ್ಮ ಸರಕಾರ ಈ ಮಾರ್ಗವನ್ನು ಸರಿಸುವುದು ನ್ಯಾಯವಾದ ಮಾರ್ಗವಲ್ಲ ಎಂದು ಹೇಳಬೇಕಾಗಿದೆ. ತಮಗೇ ಗೊತ್ತಿರುವ ಹಾಗೆ, ನಮ್ಮ ಜನತೆಯ ಮೇಲೆ ಈಗ ಹೊರಿಸಿರುವ ತೆರಿಗೆ ಹೊರೆಯೇ ಬಹಳ ಜಾಸ್ತಿಯಾಗಿ ಬಿದ್ದಿದೆ. ಇವೊತ್ತಿನ ದಿವಸ ನಮ್ಮ ದೇಶ ಸಮುದಾಯಿಕ ಯೋಜನೆಗಳಿಗಾಗಿ ಸುಮಾರು ಶೇಕಡ ಹನ್ನೆರಡರಷ್ಟು ಎಂದಾದರೆ, ಸರಾಸರಿ ಆದಾಯ ಶೇಕಡಾ ಇಪ್ಪತ್ತರಷ್ಟು ಬರಬೇಕೆಂದು ಇದನ್ನು ಜನರಮೇಲೆ ಹೊರಿಸುವುದಾದರೆ, ಅದನ್ನು ಜನರಿಂದ ಸರಕಾರ ಪಡೆಯಲು ಎಷ್ಟು ಮಟ್ಟಿಗೆ ಸಾಧ್ಯವಾಗುತ್ತದೆ ಎಂದು ಇಲ್ಲಿ ನಾನು ಪ್ರಶ್ನೆಮಾಡಬೇಕಾಗಿದೆ. ಏಕೆಂದರೆ, ಗ್ರಾಮಾಂತರ ಪ್ರದೇಶಗಳ ಕಡೆಗೆ ಸರಕಾರ ಅಷ್ಟು ಗಮನ ಕೊಟ್ಟಿಲ್ಲ ಎನ್ನುವುದನ್ನು ಸರಕಾರ ಯೋಚನೆ ಮಾಡಬೇಕು. ಪಾಂಚವಾರ್ಷಿಕ ಯೋಜನೆಗಳನ್ನು ಯಶಸ್ವಿಯಾಗಿ ಮಾಡಲು ರಾಜ್ಯಪಾಲರು ತಮ್ಮ ಭಾಷಣದಲ್ಲಿ ಆದಾಯವನ್ನು ಹೆಚ್ಚಿಸಿಕೊಂಡು ಮಾಡಬೇಕೆನ್ನುವುದರ ಬಗೆಗೆ ಸ್ವಲ್ಪ ಯೋಚನೆ ಮಾಡಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ಜನತೆಯಲ್ಲಿ ಆರ್ಥಿಕ ಅಭಿವೃದ್ಧಿ ಎಷ್ಟು ಮಟ್ಟಿಗೆ ಆಗಿದೆ ಎನ್ನುವುದನ್ನು ಅವರು ಹೇಳಿಲ್ಲ. ಅಲ್ಲಿನ ಜನ ಬಹಳ ಸಂಕಷ್ಟಗಳಿಗೆ ಗುರಿಯಾಗಿದ್ದಾರೆ. ಆದ್ದರಿಂದ ಇನ್ನು ಮುಂದೆ ಯಾವ ವಿಧವಾದ ತೆರಿಗೆಯನ್ನೂ ಹೊರಲು ಅವರಿಗೆ ಸಾಧ್ಯವಾಗುವಂತಹ ಸರಿಯಾದ ವಾತಾವರಣವನ್ನು ಸರಕಾರ ನಿರ್ಮಾಣಮಾಡಿಲ್ಲ ಎಂದು ನಾನು ಇಲ್ಲಿ ಹೇಳಬೇಕಾಗಿದೆ. ಬಡವನಾಗಿರುವವನು ಬಡವನಾಗಿಯೇ ಉಳಿಯುತ್ತಿದ್ದಾನೆ, ಶ್ರೀಮಂತನಾದವನು ಶ್ರೀಮಂತಿಕೆಯನ್ನು ಹೆಚ್ಚಿಸಿಕೊಳ್ಳುತ್ತಿದ್ದಾನೆ. ಇಂತಹವರ ಮೇಲೆ ಯಾವ ವಿಧವಾದ ತೆರಿಗೆಯನ್ನು ಹಾಕದೆ ಬಡವರ ಮೇಲೆಯೇ ತೆರಿಗೆಯ ಹೊರೆಯನ್ನು ಹೇರುವುದು ಸರಿಯಲ್ಲ. ರಾಜ್ಯಪಾಲರು ರೈತರ ಬಗೆಗೆ ಒಂದು ಮಾತನ್ನು ಇಲ್ಲಿ ಹೇಳಿದ್ದರೆ ಸಮಂಜಸವಾಗಿರುತ್ತಿತ್ತು. ಗ್ರಾಮಾಂತರ ಪ್ರದೇಶಗಳಲ್ಲಿರುವ ರೈತರ ಸ್ಥಿತಿ ಬಹಳ ಶೋಚನೀಯವಾಗಿದೆ. ಅವನ ಸ್ಥಿತಿಯನ್ನು ಯಾವ ವಿಧದಲ್ಲಿಯೂ ಉತ್ತಮಪಡಿಸಿಲ್ಲ, ರೈತರು ಬೆಳೆಯತಕ್ಕ ಆಹಾರ ಪದಾರ್ಥಗಳಿಗೆ ಸರಿಯಾದ ಬೆಲೆಯನ್ನು ನಿಗದಿಮಾಡಬೇಕೆಂದು ಈಗ ಪ್ರಯತ್ನ ಮಾಡುತ್ತಿದ್ದಾರೆ. ಸರಕಾರ ಮಾಡುತ್ತದೆ ಎಂದು ನಂಬೋಣ. ಆದರೆ ನಮ್ಮ ಮಾನ್ಯಸದಸ್ಯರನೇಕರು ಹೇಳಿದಹಾಗೆ, ರೈತನ ಸ್ಥಿತಿಯನ್ನು ಉತ್ತಮಪಡಿಸಲು ಆಗದಿದ್ದರೆ ಅವರಿಂದ ಹೆಚ್ಚಿನ ಉತ್ಪನ್ನ ಮಾಡಲು ಸಾಧ್ಯವೇ ಎನ್ನುವುದನ್ನು ಸ್ವಲ್ಪಮಟ್ಟಿಗೆ ಯೋಚನೆ ಮಾಡಬೇಕು. ಸರಕಾರ ಇಂತಹವರ ಬಗೆಗೆ ತಾರತಮ್ಯವನ್ನು ಕಡಿಮೆಮಾಡುತ್ತಾರೆಂದು ಇದ್ದೆವು. ಆದರೆ ಎಷ್ಟುಮಟ್ಟಿಗೆ ಸಹಾಯ ಮಾಡುತ್ತಿದ್ದಾರೆ ಎನ್ನುವುದನ್ನು ನೋಡಿದರೆ, ಶ್ರೀಮಂತರಾದವರು ಹೆಚ್ಚಿನ ಶ್ರೀಮಂತರಾಗಲು ಅವಕಾಶವಾಗುತ್ತಿದೆ. ಮೂಲಭೂತವಾದ ಅವಶ್ಯಕತೆಗಳನ್ನೂ ಪೂರೈಕೆಮಾಡಿಕೊಡಲೂ ಸಾಧ್ಯವಾಗಿಲ್ಲ. ಇಂತಹ ಒಂದು ಪರಿಸ್ಥಿತಿಯಿರುವಾಗ ನಮ್ಮ ಯೋಜನೆಗಳೆಲ್ಲಾ ಯಶಸ್ವಿಯಾಗುತ್ತಿದೆ ಎಂದು ಹೇಳುತ್ತಿದ್ದಾರೆ. ರಾಷ್ಟ್ರದ ಸಮುದಾಯದ ಅಭಿವೃದ್ಧಿಯೋಜನೆ ಎಂದರೆ ವಿಕಾಸಯೋಜನೆ ಯಶಸ್ವಿಯಾಗಿದೆ ಎಂದು ಹೇಳುವುದರಲ್ಲಿ ಅರ್ಥವಿಲ್ಲ. ಮೂರನೆ ಪಂಚವಾರ್ಷಿಕ ಯೋಜನೆಯಲ್ಲಿ ಎಷ್ಟು ಪ್ರಗತಿಯನ್ನು ಪಡೆಯಬೇಕೆಂದು ತಂದರೋ ಅಷ್ಟನ್ನು ಪಡೆಯಲು ವಿಫಲರಾಗಿದ್ದಾರೆ. ಕೇಂದ್ರದಿಂದ ಎರಡನೇ ಯೋಜನೆಗಾಗಿ ನಮಗೆ 110 ಕೋಟಿ ಕೊಟ್ಟರು. ಈಗ ಮೂರನೆ ಯೋಜನೆಗಾಗಿ 140ಕೋಟಿ ಎಂದು ನಿಗದಿಮಾಡಿದ್ದಾರೆ. ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಆದ ಕೆಲಸಗಳಿಗಿಂತ ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಹೆಚ್ಚಿನ ಸ್ಕೀಮುಗಳನ್ನು ಸೇರಿಸಲಾಗಿತ್ತು. ಹಾಗಿದ್ದರೂ ಇಷ್ಟೊಂದು ತಾರತಮ್ಯವನ್ನು ಕೇಂದ್ರದವರು ಏಕೆ ಮಾಡಬೇಕಾಗಿತ್ತು ಎಂದು ಸರಕಾರದ ಗಮನಕ್ಕೆ ಇಲ್ಲಿ ತರಲು ಇಚ್ಛಿಸುತ್ತೇನೆ. ಇವೊತ್ತಿನ ದಿವಸ ಮದರಾಸಿಗೆ 2 0ಕೋಟಿ ಇದೆ. ಆಂಧ್ರಕ್ಕೆ 210ಕೋಟಿ ಇದೆ ಆದರೆ ನಮಗೆ ಕೊಡಬೇಕಾದ್ದು ರತಕ್ಕದ್ದು ಕೇವಲ 140ಕೋಟಿ ಮಾತ್ರ ಹೀಗೆ ಮಾಡಿರುವುದು ಸರಿಯೇ ನಾವು ನಮಗೆ ಬರಬೇಕಾದ

ಸೆಂಟ್ರಲ್ ಅಸಿಸ್ಟೆನ್ಸ್‌ನ್ನು ಸರಿಯಾಗಿ ಪಡೆಯದಿದ್ದರೆ, ನಮ್ಮಲ್ಲಿ ಆಗಬೇಕಾಗಿರುವ ಅಭಿವೃದ್ಧಿ ಕೆಲಸಗಳನ್ನು ಹೇಗೆ ಮಾಡಲು ಸಾಧ್ಯವಾಗುತ್ತದೆ? ಈ ದೃಷ್ಟಿಯಿಂದ ಈಗ ನಮ್ಮ ಸರಕಾರ ಕಾಳೀನದಿ ಯೋಜನೆಗಾಗಿ ಕೇಂದ್ರವನ್ನು ಐದು ಕೋಟಿಯಷ್ಟು *ad hoc* grants ಆಗಿ ಕೊಡಬೇಕೆಂದು ಮನವಿ ಕಳುಹಿಸಿದ್ದಾರೆಂದು. ನಾವು ಈಚೆಗೆ ಪೇಪರಿನಲ್ಲಿ ಓದಿದ್ದೇವು. ಇದು ಬಹು ಸಂತೋಷದ ಸಂಗತಿ. ಆಂಧ್ರ ಸರಕಾರದವರು ಅವರಲ್ಲಿರುವ ನಾಗಾರ್ಜುನ ಸಾಗರದ ಯೋಜನೆಗಾಗಿ ಕೇಂದ್ರದಿಂದ ಸುಮಾರು ಇಪ್ಪತ್ತು ಕೋಟಿಯಷ್ಟು *ad hoc* grants ಆಗಿ ಪಡೆದಿದ್ದಾರೆ. ಹೀಗಿರುವಾಗ ನಮ್ಮ ದೇಶದವರು ಐದು ಕೋಟಿ ಎಂದು ಕೇಳಿರುವುದು ಹೆಚ್ಚೇನಲ್ಲ. ಆಂಧ್ರದವರು ಪ್ರತಿವರ್ಷವೂ ಐದು ಕೋಟಿಯಷ್ಟು ಎಂದು ಕೇಳಿ ನಾಲ್ಕುವರ್ಷದಿಂದ ಇಪ್ಪತ್ತು ಕೋಟಿಯಷ್ಟು ಪಡೆದು ಈ ಯೋಜನೆಯನ್ನು ಪರಿಪೂರ್ಣವಾಗಿ ಮಾಡಬೇಕೆನ್ನುವ ಆಸೆ ಆ ಸರಕಾರಕ್ಕಿದೆ. ಈ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳನ್ನು ಕೇಳಿದಾಗ ನಮ್ಮ ರಾಜ್ಯದ ಹಿತರಕ್ಷಣೆಯನ್ನು ಮಾಡಲು ಪೂರ್ಣವಾಗಿ ನಮಗೇ ಬಿಡಿ. ನಾವೇ ಅದಕ್ಕೆ ಬೇಕಾದ ಕೆಲಸವನ್ನೆಲ್ಲಾ ಮಾಡುತ್ತೇವೆ ಎನ್ನುವ ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಆದರೆ ಅಂತಹ ಒಂದು ನ್ಯಾಯ ಸಿಗುವುವಂತಿದ್ದರೆ ಬಹಳ ಒಳ್ಳೆಯದು. ಈಗಿನ ವಾತಾವರಣ ಮತ್ತು ಪರಿಸ್ಥಿತಿಗಳನ್ನು ಮತ್ತು ಆಗುವ ವ್ಯವಸ್ಥೆಗಳನ್ನು ನೋಡುತ್ತಾ ಕುಳಿತಿದ್ದರೆ ನಮ್ಮ ದೇಶದ ಹಿತರಕ್ಷಣೆ ಎಲ್ಲಿ ಆಗುತ್ತದೆ ಎನ್ನುವ ಹೆದರಿಕೆ ಬರಲು ಅವಕಾಶವಿದೆ. ಮಾನ್ಯ ಸದಸ್ಯರಾದ ಶ್ರೀಮಾನ್ ಎಂ. ಸಿ. ಬಸಪ್ಪನವರು ಹೇಳಿದ ಹಾಗೆ ನಾಗಾರ್ಜುನ ಸಾಗರ ಯೋಜನೆ, ಶ್ರೀ ಶೈಲಂ ಯೋಜನೆ ಹಾಗೂ ಪೋಚಂಪಾಡು ಯೋಜನೆ ಇವನ್ನು ಪೂರೈಕೆಮಾಡಿದರೆ ನವಗೆ ನೀರೆಲ್ಲಿಂದ ಬರಬೇಕು? ನಮಗೆ ನೀರು ಕೊಡಲೇಬೇಕು ಎನ್ನುವ ವ್ಯವಸ್ಥೆ ಮಾಡಲು ಈ ಸಮಸ್ಯೆ ಇತ್ಯರ್ಥವಾಗುವವರೆಗೆ ಯಾವ ಒಂದು ಕಾರ್ಯಕ್ರಮವನ್ನೂ ಮುಂದುವರಿಸಕೂಡದು ಎಂದು ನಮ್ಮ ಸರ್ಕಾರದವರು ಕೇಂದ್ರ ಸರಕಾರದ ಗಮನಕ್ಕೆ ತರುವಂತೆ ಮಾಡಿದರೆ ಆಗ ನಮಗೆ ನ್ಯಾಯ ಸಿಗಲು ಅನುಕೂಲವಾಗುತ್ತದೆ. ಇವೊತ್ತಿನ ದಿವಸ ಕೇಂದ್ರ ಸರಕಾರ ಹಣ ಕೊಟ್ಟು ಬೇಗ ಬೇಗ ನಾಗಾರ್ಜುನ ಸಾಗರದ ಕೆಲಸವನ್ನು ನಡೆಸುತ್ತಿದ್ದಾರೆ ಈ ದೃಷ್ಟಿಯಿಂದ ಯೋಚನೆ ಮಾಡುವಾಗ what has been done cannot be undone ಎನ್ನುವ ಹಾಗೆ ಆದರೆ, ನಮಗೆ ಯಾವ ಯೋಜನೆಗಳನ್ನೂ ಮಾಡಲು ಅನುಕೂಲವಿಲ್ಲ ಎನ್ನುವುದನ್ನು ಮುಖ್ಯಮಂತ್ರಿಗಳಲ್ಲಿ ಪ್ರಶ್ನೆ ಮಾಡಬೇಕಾಗಿದೆ. ಕೃಷ್ಣಾ ನದಿಯ ನೀರಿನಲ್ಲಿ ಮೈಸೂರಿಗೆ ಶೇಕಡಾ 47.5ರಷ್ಟು ಬರಬೇಕೆಂದಿದೆ. ಮಹಾರಾಷ್ಟ್ರಕ್ಕೆ ಶೇಕಡಾ 28ರಷ್ಟು ಸಿಗಬೇಕೆಂದಿದೆ. ಹಾಗೆ ಆಂಧ್ರಕ್ಕೆ ಶೇಕಡಾ 24.5ರಷ್ಟು ಸಿಗಬೇಕಾದರೆ, ಮೈಸೂರು ಸ್ಟೇಟಿಗಾಗಿ ನೂರರಲ್ಲಿ ಶೇಕಡಾ 47.5ರಷ್ಟು ಎಂದಿದ್ದರೂ ಮಾನ್ಯ ಮುಖ್ಯಮಂತ್ರಿಗಳು ಇದರಲ್ಲಿ ಮದರಾಸು ರಾಜ್ಯದವರೂ ನೀರನ್ನು ತೆಗೆದುಕೊಳ್ಳಲಿ, ಆಕ್ಷೇಪಣೆ ಇಲ್ಲ ಎಂದು ಹೇಳುವುದರಲ್ಲಿ ಅರ್ಥವಿಲ್ಲ. ನಮ್ಮ ನಿಲುವು ಈ ರೀತಿಯಿದೆ. ನಮ್ಮ ಬೇಡಿಕೆಗೆ ಅನುಗುಣವಾಗಿ ಶೇಕಡ 47ರಷ್ಟು ಬರಬೇಕು. ಮದ್ರಾಸ್‌ನವರು ತೆಗೆದುಕೊಳ್ಳಲಿ ಎಂದು ಕೇಳುವುದು ಸರಿಯಲ್ಲ. ಈ ವಿವಾದ ಇತ್ಯರ್ಥವಾದ ಮೇಲೆ ತೆಗೆದುಕೊಳ್ಳಬಹುದು. ಕೃಷ್ಣಾನದಿಯ ಸರ್‌ಪ್ಲಸ್ ವಾಟರ್ ಸಿಕ್ಕುವದಿಲ್ಲ ಎಂಬುದು ಮೆಮೊರಾಂಡಂನಲ್ಲಿ ಕಂಡುಬರುತ್ತದೆ. ಆದ್ದರಿಂದ ಮದ್ರಾಸ್‌ನವರು ತೆಗೆದುಕೊಳ್ಳಲಿ ಎಂದು ಹೇಳುವುದು ಅರ್ಥವಾಗುವುದಿಲ್ಲ. ಇದರಿಂದ ನಮ್ಮ ನಿಲುವಿಗೆ ಪೆಟ್ಟು ಬರುತ್ತದೆ. ಈ ಮೊದಲು ಇಂಟರ್ ಸ್ಟೇಟ್ ಬೋರ್ಡ್ ನೇಮಕ ಮಾಡಲಿ ಎಂದು ಹೇಳಿದಾರೆ. ಗುಲ್ಹಾಟಿ ಕಮಿಟಿ ಮಾಡಿದ್ದರು. ಈಗ ಆದಷ್ಟು ಬೇಗ ಒಂದು ನ್ಯಾಯ ಮಂಡಲಿ ನೇಮಕ ಮಾಡಲು ಏರ್ಪಾಡು ಮಾಡಬೇಕಾಗಿತ್ತು. ಅಂದರೆ ಆಂಧ್ರದವರು ಏನೇನು ಕಾರ್ಯಕ್ರಮ ತೆಗೆದುಕೊಳ್ಳುತ್ತಿದ್ದಾರೆಯೋ ಅದನ್ನು ತಡೆಗಟ್ಟಲು ಸಾಧ್ಯವಿದೆ. ನ್ಯಾಯ ದೊರಕಬಹುದಾದ ವಾತಾವರಣ ಉಂಟಾಗಬಹುದು. ಆದಷ್ಟು ಬೇಗ ನಮ್ಮ ಬೇಡಿಕೆಗೆ ಚ್ಯುತಿ ಬಾರದಂತೆ ನೋಡಿಕೊಳ್ಳಬೇಕೆಂದು ಮುಖ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅಪ್ಪರ್ ಕೃಷ್ಣಾ, ಮಲಪ್ರಭಾ ಈ ಯೋಜನೆಗಳಿಂದ 13 ಲಕ್ಷ ಎಕರೆ ಜಮೀನು ಸಾಗುವಳಿ ಮಾಡುವುದು ಸಾಧ್ಯವಿದೆ. ಅಷ್ಟು ನೀರನ್ನು ನಮ್ಮ ಪಾಲಿಗೆ ಬರುವ ಹಾಗೆ ಉಳಿಸಿಕೊಂಡರೆ ಈ ಯೋಜನೆಗಳು ಸಾಧ್ಯ; ಇಲ್ಲದಿದ್ದರೆ ಇಲ್ಲ ಎನ್ನುವುದನ್ನು ಸರ್ಕಾರ ತಿಳಿದುಕೊಳ್ಳಬೇಕು.

4-00 P.M.

ಸ್ವಾಮಿ, ಕಡ್ಡಾಯ ಉಚಿತ ಶಿಕ್ಷಣವು ಸಮರ್ಪಕವಾಗಿ ನಡೆದಿದೆಯೆಂದು ರಾಜ್ಯಪಾಲರ ಭಾಷಣದಲ್ಲಿ ಹೇಳಿಸಿದ್ದಾರೆ. ಕಡ್ಡಾಯ ಶಿಕ್ಷಣ ಪಡೆಯುವ ಸಂಖ್ಯೆಯನ್ನು ಸೇರಿಸುವಾಗ್ಗೆ ಎಲ್ಲ ಮಕ್ಕಳನ್ನೂ ಸೇರಿಸಿದ್ದಾರೆ. ಇವರಲ್ಲಿ ಶೇಕಡ 60ರಷ್ಟು ಬರಬರುತ್ತಾ ಕಡಿಮೆಯಾಗುತ್ತದೆ. ಹಳ್ಳಿಗಳಲ್ಲಿ ಉಚಿತ ಶಿಕ್ಷಣ ಯೋಜನೆ ಯಶಸ್ವಿಯಾಗಿಲ್ಲ, ಸರಕಾರ ಈ ಯೋಜನೆಯನ್ನು ಪುನರ್ವಿಮರ್ಶೆ ಮಾಡ

(ಶ್ರೀ ಟಿ. ವಿ. ಗೌಡ)

ಬೇಕು. ಖಾಸಗೀ ಹೈಸ್ಕೂಲುಗಳಲ್ಲಿ ವರ್ಷಕ್ಕೆ 1,200 ರೂಪಾಯಿಗಳ ಕೆಳಗೆ ವರಮಾನ ವಿರತಕ್ಕಂಥವರಿಗೆ ಉಚಿತ ಶಿಕ್ಷಣ ಕೊಡಬೇಕೆಂದು ಸರಕಾರದ ಆಜ್ಞೆ ಇದೆ. ಇದಕ್ಕಾಗಿ ಶಿಕ್ಷಣ ಸಂಸ್ಥೆಯವರು ಗ್ರ್ಯಾಂಟ್ ಪಡೆಯುತ್ತಾರೆ. ಆದರೆ ಖಾಸಗೀ ಶಿಕ್ಷಣ ಸಂಸ್ಥೆಯಲ್ಲಿ ಈ ರಿಯಾಯಿತಿ ಜನರು ಪಡೆಯುತ್ತಿಲ್ಲ. ಮಕ್ಕಳಿಂದ ಫೀಜ್ ವಸೂಲ್ಮಾಡಲಾಗುತ್ತಿದೆ ಎಂದು ವಿಶ್ವಸನೀಯವಾಗಿ ತಿಳಿದು ಬಂದಿದೆ. ಬೆಂಗಳೂರು ನಗರದಲ್ಲಿ ಫೀಜ್ ತೆಗೆದುಕೊಳ್ಳುತಿದ್ದಾರೆ. ಇದಲ್ಲದೆ ಸರ್ಕಾರ ದಿಂದ ಫೀ ಕನ್ಸೆಷನ್ ಸಹ ಪಡೆಯುತಿದ್ದಾರೆ. ಇದು ಬಹಳ ಅನ್ಯಾಯ. ಇದಕ್ಕೆ ತೀವ್ರ ಗಮನ ಕೊಟ್ಟು ಫೀಜ್ ವಸೂಲ್ಮಾಡಬಾರದು ಎಂದು ಅವರಿಗೆ ತಿಳಿಸಬೇಕು. ಒಂದು ವೇಳೆ ಈಗಾಗಲೇ ಫೀಜ್ ವಸೂಲ್ಮಾಡಿದ್ದರೆ ಅದನ್ನು ಹಿಂದಿರುಗಿ ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ವಿದ್ಯುತ್ ವಿಚಾರದಲ್ಲಿ ಮುಂದಿನ ಮಾರ್ಚ್, ಏಪ್ರಿಲ್ ಒಳಗಾಗಿ ಶರಾವತಿ ಯೋಜನೆ ಯಾಗುತ್ತದೆಂದು ರಾಜ್ಯಪಾಲರ ಮುಖದಿಂದ ಭರವಸೆ ಕೊಟ್ಟಿದ್ದಾರೆ. ಈ ಅವಧಿಯಲ್ಲಿ ಪೂರ್ತಿ ಯಾಗಬೇಕು. ಕಾಳೀನದಿ ಯೋಜನೆ ಕೈಕೊಳ್ಳಬೇಕು. ಇದರಿಂದ ಆರು ಲಕ್ಷ ಕಿಲೋವಾಟ್ ವಿದ್ಯುಚ್ಛಕ್ತಿ ದೊರೆಯುತ್ತದೆ. ಇದಲ್ಲದೆ ಕಾವೇರಿ, ಹೊಗೇನಕಲ್, ಮೇಕೆದಾಟು ಯೋಜನೆ ಗಳನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಆಂಧ್ರ, ಮಹಾರಾಷ್ಟ್ರ, ಒರಿಸ್ಸಾ, ಮುಂತಾದ ರಾಜ್ಯಗಳಿಗೆ ಕೇಂದ್ರ ಸರ್ಕಾರ ದೊಡ್ಡ ಪ್ರಮಾಣದಲ್ಲಿ ಬೆಂಬಲ ನೀಡುತ್ತಿದ್ದಾರೆ. ಆದರೆ ನಮ್ಮ ರಾಜ್ಯಕ್ಕೆ ಕಡಿಮೆ ಸಹಾಯ ದೊರೆತಿದೆ. ಕೇಂದ್ರ ಸರ್ಕಾರದ ಖರ್ಚಿನಿಂದ ನಮ್ಮ ರಾಜ್ಯದಲ್ಲಿ ಯೋಜನೆಗಳನ್ನು ಕಾರ್ಯಗತ ಮಾಡುವುದಾದರೆ ಯೋಜನೆಯ ಹೊಣೆ ನಮ್ಮ ಮೇಲೆ ಇರುವುದಿಲ್ಲ. ಇದನ್ನು ಯೋಚನೆ ಮಾಡಿ ಒಂದು ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ಸರಕಾರಕ್ಕೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಲ್ಯಾಂಡ್ ರಿಫಾರ್ಮ್ಸ್ ಬಗ್ಗೆ ಅನೇಕ ಸಲ ಹೇಳಿದ್ದಾರೆ. ಆದರೆ ಈ ಹೇಳಿಕೆಯು ಸತ್ಯಕ್ಕೆ ದೂರವಾಗಿದೆ. ಅದನ್ನು ರಾಜ್ಯಪಾಲರ ಬಾಯಿಂದ ಹೇಳಿಸಿದ್ದಾರೆಂದು ಬಹಳ ವ್ಯಸನದಿಂದ ಹೇಳಬೇಕಾಗಿದೆ.

> "The assent of the President has been given subject to amendments to certain sections of the Bill."

The President will not give assent subject to anything else. Either he has to give it or reject it. That is what is provided under the Constitution.

ಇದು ಸರಿಯಾದ ಮಾತು ಅಲ್ಲ. ರೈತವಾರಿ ಪದ್ಧತಿ ಇಲ್ಲದೇ ಇರತಕ್ಕಂಥ ಸ್ಥಳದಲ್ಲಿ, ಸಣ್ಣ ತಿದ್ದು ಪಡಿ ತಂದು, ಕೂಡಲೇ ಜಾರಿ ಮಾಡಲು ಯಾವ ಅಡ್ಡಿಯಿಲ್ಲ. ಮುಖ್ಯ ಮಂತ್ರಿಗಳು ಮನಸ್ಸು ಮಾಡಿ ದರೆ ಒಂದು ತಿಂಗಳಿನಲ್ಲಿ ಈ ಕಾನೂನನ್ನು ಜಾರಿಗೆ ಕೊಡಲು ಸಾಧ್ಯವಿದೆ. Seasonal Condition ಪ್ರವಾಹ ಬಗ್ಗೆ ಭಾಷಣದಲ್ಲಿ ಹೇಳಿಸಿದ್ದಾರೆ. ನಿರ್ಗತಿಕರಾದ ಜನರ ರೀಹ್ಯಾಬಿಲಿಟೇಷನ್ ಆಗಿಲ್ಲ ಎಂಬುದು ಶೋಚನೀಯ. ಅಂಥವರ ಬಗ್ಗೆ ಒಂದು ವ್ಯವಸ್ಥೆ ಬೇಗನೆ ಮಾಡುವುದು ಅಗತ್ಯ. ಇಲ್ಲದಿದ್ದರೆ ಅವರಿಗೆ ಬಹಳ ಅನ್ಯಾಯವಾಗುವುದು. ಆದಷ್ಟು ಜಾಗ್ರತೆ ಈ ಪುನರ್ ವ್ಯವಸ್ಥೆ ಕೆಲಸ ಪೂರ್ತಿ ಮಾಡಬೇಕೆಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

ಪಂಚಾಯಿತಿ ರಾಜ್ಯ ಕಾರ್ಯಕ್ರಮಗಳು ಸಮರ್ಪಕವಾಗಿ ಕೆಲಸ ಮಾಡುತ್ತಿವೆ ಎಂದು ರಾಜ್ಯ ಪಾಲರ ಬಾಯಲ್ಲಿ ಹೇಳಿಸಿದ್ದಾರೆ. ಈ ಯೋಜನೆ ಪರಿಶೀಲನೆ ಮಾಡುವುದಕ್ಕೆ ಸಮಿತಿ ನೇಮಿಸಿದ್ದಾರೆ. ಆದರೆ ಈ ಸಮಿತಿ ನೇಮಕ ಮಾಡುವ ಅವಶ್ಯಕತೆಯಿರಲಿಲ್ಲ ಎಂದು ಅನಿಸುತ್ತದೆ. ಇವತ್ತಿನ ದಿವಸ ಅಧಿಕಾರ ವಿಕೇಂದ್ರೀಕರಣ ಮಾಡುತ್ತೇವೆಂದು ಬಾಯಲ್ಲಿ ಹೇಳುತ್ತಾರೆ. ಆದರೆ ಕಾರ್ಯಗತ ವಾಗುತ್ತಿಲ್ಲ. ಪಂಚಾಯತ ರಾಜ್ಯ ಸುಗಮವಾಗಿ ಕೆಲಸಮಾಡುತ್ತಿದೆ ಎಂದು ಹೇಳುವುದರಲ್ಲಿ ಅರ್ಥವಿಲ್ಲ.

ಇವತ್ತಿನ ದಿವಸ ಮದ್ರಾಸಿನಲ್ಲಿ ಪಂಚಾಯಿತಿ ರಾಜ್ಯಕ್ರಮ ನಡೆಯುತ್ತಿದೆ; ಆಂಧ್ರದಲ್ಲಿ ನಡೆಯುತ್ತಿದೆ; ಮಹಾರಾಷ್ಟ್ರದಲ್ಲಿ ನಡೆಯುತ್ತಿದೆ; ಇದು ನಿಮಗೆ ಗೊತ್ತಿದೆ. ಅಲ್ಲಿರುವ ಕಾನೂನುಗಳನ್ನು ನೋಡಿ, ನಮ್ಮ ರಾಜ್ಯದ ಕಾನೂನು ಅದಕ್ಕೆ ಸಮನ್ವಯ ಮಾಡಿ, ತಿದ್ದುಪಡಿ ತಂದು, ಅಧಿಕಾರವನ್ನು ನಿಜವಾಗಿ ವಿಕೇಂದ್ರೀಕರಣ ಮಾಡುವುದಕ್ಕೆ ಅವಕಾಶವಿದೆ. ಅದು ಬಿಟ್ಟು ಒಂದು ಸಮಿತಿ ನೇಮಕ ಮಾಡಿದ್ದಾರೆ; ಆ ಸಮಿತಿ ಸದಸ್ಯರು ಪ್ರವಾಸ ಮಾಡುತ್ತಾರೆ; ಬೇರೆ ರಾಜ್ಯಗಳಿಗೆ ಹೋಗುತ್ತಾರೆ; ಈ ಸಮಿತಿ ಮಾಡಬೇಕಾದ ಅವಶ್ಯಕತೆ ಇರಲಿಲ್ಲ. ಎಲ್ಲಾ ಕಡೆಯಿಂದ

ರಿಪೋರ್ಟ್ ತರಿಸಿಕೊಂಡು ನಮ್ಮ ರಾಜ್ಯಕ್ಕೆ ಅನುಗುಣವಾದ ಒಂದು ಪದ್ಧತಿಯನ್ನು ಅಳವಡಿಸಿ ಕೊಂಡು ಮಾಡಿದ್ದರೆ ಚೆನ್ನಾಗಿರುತ್ತಿತ್ತು. ಸಮಿತಿ ಎಲ್ಲಾ ಪರಿಶೀಲನೆ ಮಾಡಿ ಸರ್ಕಾರಕ್ಕೆ ವರದಿ ಒಪ್ಪಿಸುತ್ತಾರೆ. ಆದರೆ ಸಮಿತಿಯ ವರದಿಯನ್ನು ಸರ್ಕಾರದವರು ಸಂಪೂರ್ಣ ಅಂಗೀಕಾರ ಮಾಡಿ ಕೊಳ್ಳುತ್ತಾರೆಂದು ಎಲ್ಲಿ ಗ್ಯಾರಂಟಿ ಇದೆ? ಅನೇಕ ಸಮಿತಿಗಳ ವರದಿಗಳು ಸಂಪೂರ್ಣವಾಗಿ ಕಾರ್ಯಗತವಾಗಿಲ್ಲ. ಈ ಸಮಿತಿ ನೇಮಕದಿಂದ ಹಣ ವೇಸ್ಟ್ ಆಗುತ್ತದೆಯೇ ಹೊರತು, ಅದರಿಂದ ಸಮರ್ಪಕವಾದ ಪ್ರತಿಫಲ ಸಿಗುವುದಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಇವತ್ತು ಪಂಚಾಯಿತಿ ಸಂಸ್ಥೆಗಳಿಗೆ ಹೆಚ್ಚಿನ ಅಧಿಕಾರ ಕೊಡುವುದೇ ಅಲ್ಲದೆ, ಅವುಗಳಿಗೆ ಹೆಚ್ಚಿನ ಆದಾಯ ಬರುವಂತೆ ಮಾಡಿಕೊಡಬೇಕು ; ಗ್ರಾಮ ಅಭಿವೃದ್ಧಿ ಯೋಜನೆಗಳನ್ನೂ ತಾವು ಮಾಡಬೇಕು.

ಯುದ್ಧ ಪರಿಸ್ಥಿತಿಯಿಂದಾಗಿ ರಾಜ್ಯದಲ್ಲೆಲ್ಲಾ ಗ್ರಾಮ ಸ್ವಯಂ ಸೇವಕ ದಳಗಳ ನಿರ್ಮಾಣವನ್ನು ಮಾಡಿದ್ದೀರ. ಉತ್ಪನ್ನವನ್ನು ಹೆಚ್ಚು ಮಾಡತಕ್ಕಂಥ, ರಕ್ಷಣೆ ಮಾಡತಕ್ಕಂಥ, ಸಾಮೂಹಿಕ ವಿದ್ಯಾಭ್ಯಾಸ ನಡೆಸತಕ್ಕಂಥ ಜವಾಬ್ದಾರಿಯನ್ನು ಅವರಿಗೆ ವಹಿಸಿಕೊಟ್ಟಿದ್ದೇವೆಂದು ಹೇಳಿದ್ದಾರೆ. ಎಷ್ಟು ಗ್ರಾಮಗಳಲ್ಲಿ ಈ ಕೆಲಸಗಳು ನಡೆದಿವೆ ಎಂಬ ಬಗ್ಗೆ ವರದಿಗಳನ್ನು ಮುಖ್ಯಮಂತ್ರಿಗಳು ತರಿಸಿಕೊಂಡು ಓದಿದ್ದರೆ ಚೆನ್ನಾಗಿತ್ತು. ಬರೀ ಪೇಪರಿನಲ್ಲಿ ನೋಡಿಕೊಂಡು, ಬಾಯಿನಲ್ಲಿ ಕೇಳಿ ಕೊಂಡು ತೃಪ್ತರಾಗುವ ಹಾಗಿಲ್ಲ. ಕಾರ್ಯತಃ ಏನು ನಡೆದಿದೆ ಎಂದು ಹೇಳಿದ್ದರೆ ಚೆನ್ನಾಗಿತ್ತು. ಈ ದಳ ಜನತೆಗೆ ಪ್ರಯೋಜನವಾಗತಕ್ಕಂಥ ಕೆಲಸವನ್ನು ಮಾಡಬೇಕು.

ಇನ್ನೂ ಅನೇಕ ವಿಚಾರಗಳನ್ನು ಇದ್ದರೂ ಕೂಡ, ಕಾಲಾವಕಾಶ ಇಲ್ಲದ್ದರಿಂದ ಬಿಡಬೇಕಾಗಿದೆ. ಈ ಒಂದು ತಿದ್ದುಪಡಿ ಏನಿದೆ ಅದನ್ನು ಸಮರ್ಥನೆ ಮಾಡುತ್ತಾ, ಈ ಒಂದು ಸಮಾಜವಾದ ನಿರ್ಮಾಣ ಮಾಡಲಿಕ್ಕೆ ಸಹಾಯವಾಗದೆ ಇರತಕ್ಕಂಥ ಈ ಹೇಳಿಕೆಯನ್ನು ಒಪ್ಪಲಿಕ್ಕೆ ಸಾಧ್ಯವಿಲ್ಲ.

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸೀಪುರ).—ಮಾನ್ಯ ಸಭಾಪತಿಗಳೇ, ಈಗ ನಮ್ಮ ಮುಂದಿರತಕ್ಕಂಥ ರಾಜ್ಯಪಾಲರ ಭಾಷಣದ ಸಂಬಂಧ ಇರುವ ವಂದನಾರ್ಪಣದ ಈ ಒಂದು ಸೂಚನೆಯನ್ನು ಅನುಮೋದಿಸುತ್ತೇನೆ. ಕಳೆದ ಸಾರಿ ರಾಜ್ಯಪಾಲರ ಭಾಷಣ ಬಂದಾಗ ಅದನ್ನು ಮೊದಲನೆ ಸಾರಿ ನೋಡಿದೆವು. ಎರಡನೇ ಸಾರಿ ರಾಜ್ಯಪಾಲರ ಭಾಷಣವನ್ನು ನೋಡುತ್ತಾ ಇದ್ದೇವೆ. ಯಾವ ತರಹ ಚೈತನ್ಯವನ್ನು ಕೂಡ ಉಂಟು ಮಾಡತಕ್ಕಂಥ ಒಂದು ಅವಕಾಶ ಇದರಲ್ಲಿಲ್ಲ. ರಾಜ್ಯಪಾಲರ ಬಾಯಿಯಿಂದ, ಸರ್ಕಾರ ಯಾವುದಾದರೂ ಸಂಘ ಸಂಸ್ಥೆಗಳು ವರದಿ ಅರ್ಪಿಸುವ ರೀತಿಯಲ್ಲಿ ಕೆಲವು ಅಂಶಗಳನ್ನು ಹೇಳಿಸಿದ್ದಾರೆ. ಇದು ನಿಜವಾಗಿಯೂ ಬಹಳ ವ್ಯಥೆಪಡತಕ್ಕಂಥ ವಿಷಯ.

ಇಲ್ಲಿ ತುರ್ತು ಪರಿಸ್ಥಿತಿ ಸಂಬಂಧದಲ್ಲಿ ಸರ್ಕಾರದ ಉದ್ದೇಶಗಳೇನು ? ಸರ್ಕಾರ ನೀರಾವರಿಗೆ ಹಾಗೂ ವ್ಯವಸಾಯಕ್ಕೆ ಹೆಚ್ಚಿನ ಅಗ್ರತೆಯನ್ನು ಕೊಡುವುದನ್ನು ಹೇಳಿದ್ದಾರೆ. ಆದರೆ ನೀರಾವರಿಗೆ ಸಂಬಂಧಪಟ್ಟಂತೆಯೇ ಆಗಲಿ, ವ್ಯವಸಾಯಕ್ಕೆ ಅನುಗುಣವಾಗಿಯೇ ಆಗಲಿ, ಅನುಕೂಲ ಗಳನ್ನು ಸರಿಯಾದ ರೀತಿಯಲ್ಲಿ ಕಲ್ಪನೆ ಮಾಡಿಲ್ಲ. ಈಗ ಬಹಳ ಜನ ಸದಸ್ಯರು ಈ ಚರ್ಚೆಯಲ್ಲಿ ಭಾಗವಹಿಸಿದವರು, ಸರ್ಕಾರ ಈ ವರ್ಷ ರೈತರಿಗೆ 5 ಸಾವಿರ ನೀರಾವರಿ ಪಂಪುಗಳನ್ನು ಒದಗಿಸತಕ್ಕಂಥ ಯೋಜನೆಯನ್ನು ಹಾಕಿಕೊಂಡಿದ್ದಾರೆಂದು ಹೇಳಿದರು. ಆದರೆ ಈ 5 ಸಾವಿರ ಪಂಪುಗಳನ್ನು ಯಾವ ರೀತಿಯಲ್ಲಿ ಹಂಚುವುದಕ್ಕೆ ಮಾಡಿದ್ದಾರೆನ್ನುವುದನ್ನು ಸ್ವಲ್ಪ ಪರಿಶೀಲನೆ ಮಾಡ ಬೇಕಾಗಿದೆ. ಯೋಜನೆಯನ್ನು ನೋಡಿದರೆ ನನಗೆ ಒಂದು ದೃಷ್ಟಾಂತ ಜ್ಞಾಪಕಕ್ಕೆ ಬರುತ್ತದೆ. ಹಾಸನ ಡಿಸ್ಟ್ರಿಕ್ಟಿನಲ್ಲಿ ರೋಡ್ ಟ್ರಾನ್ಸ್‌ಪೋರ್ಟನ್ನು ನ್ಯಾಷನಲೈಸ್ ಮಾಡಿದಾಗ ಒಂದೇ ರಾತ್ರಿ 200 ಬಸ್ ತೆಗೆದುಕೊಂಡು ಹೋಗಿ ಹಾಕಿದರು. ಈಗ ಆ ಬಸ್ಸುಗಳ ಪರಿಸ್ಥಿತಿ ಏನಾಗಿದೆಯೆಂದರೆ ಅವು ಕೆಲಸ ಮಾಡತಕ್ಕಂಥ ಪರಿಸ್ಥಿತಿಯಲ್ಲಿಲ್ಲ. ಕಾರಣ ವಿಚಾರ ಮಾಡಿದ್ದರಲ್ಲಿ ಬಸ್ ಬಾಡಿ ಬಿಲ್ಡಿಂಗಿಗೆ ಬೇಕಾದಂಥ ಸರಿಯಾದ ಕ್ವಾಲಿಟಿ ಪದಾರ್ಥಗಳು ಸಾಮಗ್ರಿಗಳು ಒದಗುತ್ತಿಲ್ಲ ಎಂದು ಹೇಳಿದರು. ಅದೇ ತರಹದಲ್ಲಿ ಈ 5 ಸಾವಿರ ಪಂಪುಗಳನ್ನು ಹಂಚಬೇಕಾದರೆ ಏನು ವ್ಯವಸ್ಥೆ ಮಾಡಿದೆ ? ಮೊನ್ನೆ ಪೇಪರಿನಲ್ಲಿ ನೋಡಿದೆ. ಮಂಗಳೂರಿನಲ್ಲಿ ಒಂದು Agricultural Marketing Society ಪಂಪನ್ನು ಹಂಚತಕ್ಕಂಥ ವ್ಯವಸ್ಥೆ ಇಟ್ಟುಕೊಂಡಿದೆಯೆಂದು. ರೈತನಿಗೆ ಒಂದು ಸ್ಟ್ಯಾಂಡರ್ಡ್ ಕಂಪನಿ ಪಂಪು ಕೊಡದೆ ಹೋದರೆ ಏನೂ ಉಪಯೋಗವಾಗುವುದಿಲ್ಲ ಕೌಪರ್ಸ್ ಅಥವ ಕಿರ್ಲೋಸ್ಕರದ್ದೋ ಸರಿಯಾಗಿ ನೋಡಿಕೊಟ್ಟರೆ ಪ್ರಾಯಶಃ ಉಪಯೋಗವಾಗುತ್ತದೆ. ಇಲ್ಲದೆ ಹೋದರೆ ಅವನಿಗೆ ಅದು ಹೊರೆಯಾಗುತ್ತದೆ. ಅದನ್ನು ವಿಲೇವಾರಿ ಮಾಡತಕ್ಕಂಥ ಕ್ರಮವನ್ನೂ ಸಂಬಂಧಪಟ್ಟ ಅಧಿಕಾರಿ ಗಳಿಗೆ ಸಡಿಲವಾದ ರೀತಿಯಲ್ಲಿ ತಿಳಿಸಿಲ್ಲ, ಕಾರಣವೇನೆಂದರೆ, ನನಗೆ ತಿಳಿದಿರುವ ಪ್ರಕಾರ ಪಂಪನ್ನು ಹಂಚಬೇಕಾದರೆ ಬಿ. ಡಿ. ಓ. ಅಪ್ಲಿಕೇಷನ್ ರಿಸೀವ್ ಮಾಡಬೇಕೆಂದಿದೆ. ಯಾವ ಒಂದು ಮೇರೆಗೆ ಎಷ್ಟು ಅಮೌಂಟನ್ನು ಪಾಲಿಸಿಗೋಸ್ಕರ ರಿಸೀವ್ ಮಾಡಬೇಕೆಂದು ನಿರ್ದಿಷ್ಟವಾಗಿ ತಿಳಿಸಿಲ್ಲ. ಅದು ಬಹಳ ಮುಖ್ಯವಾದುದು. ಏಕೆಂದರೆ ಸರಿಯಾದ ವ್ಯವಸ್ಥೆ ಮಾಡದೆ ಹೋದರೆ ನಾಳೆ ದಿವಸ ಅದು

(ಶ್ರೀ ಎಚ್. ಡಿ. ದೇವೇಗೌಡ)

ಒಂದು ಕೆಟ್ಟ ಪರಿಣಾಮಕ್ಕೆ ಇಟ್ಟುಕೊಳ್ಳುತ್ತದೆ. ಪಂಪನ್ನು ಹಂಚುವಾಗ ಒಬ್ಬರಿಬ್ಬರು ಮುಖಂಡರಿಗೆ ಕೊಟ್ಟಿದೆ. 900 ರೂಪಾಯಿರುವುದು 1,500 ರೂಪಾಯಿಗೆ ಹೋಗುವ ಸನ್ನಿವೇಶ ಕಲ್ಪಿಸಿದ ಹಾಗಾಗುತ್ತದೆ. ಪಂಪಿನ ಬೆಲೆಯನ್ನು ಪ್ರೀಮಿಯಮ್ ಬೇಸಿಸ್ ಮೇಲೆ ತೆಗೆದುಕೊಳ್ಳುವಂತೆ ಮಾಡಿದ್ದಾರೆ. ಪ್ರೀಮಿಯಮ್ ಕೊಡದೆ ಹೋದರೆ ಸರ್ಕಾರವೇ ರೈತನಿಂದ ಪಂಪನ್ನು ವಹಿಸಿಕೊಳ್ಳಬೇಕಾಗುತ್ತದೆ. ಹಾಗಾದರೆ ಉದ್ದೇಶ ಸಫಲವಾಗುವುದಿಲ್ಲ. ಈ ಯೋಜನೆಯಿಂದ ರೈತರ ಮೇಲೆ ದುಷ್ಪರಿಣಾಮವಾಗಬಾರದು. ಆದ್ದರಿಂದ ಸರ್ಕಾರ ಕೂಲಂಕಷವಾಗಿ ಯೋಚನೆ ಮಾಡಿ ಪಂಪನ್ನು ಹಂಚಬೇಕು.

[MR. CHAIRMAN (SRI M. GHOUSE MOHIUDDIN) in the Chair]

ಹಾಗೆಯೇ Education ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಹೇಳಿಸಿದ್ದಾರೆ. 85 ಪರ್ಸೆಂಟ್ ವಿದ್ಯಾರ್ಥಿಗಳಿಗೆ ಉಚಿತ ವಿದ್ಯಾಭ್ಯಾಸದ ಸೌಲಭ್ಯವನ್ನು ಒಂದಲ್ಲ ಒಂದು ರೀತಿಯಲ್ಲಿ ಸರ್ಕಾರ ಒದಗಿಸಿ ಸಹಾಯ ಮಾಡಿದೆಯೆಂದು ಹೇಳಿದ್ದಾರೆ. ಶೇಕಡ 85 ರಷ್ಟು ವಿದ್ಯಾರ್ಥಿಗಳಿಗೆ scholarship, freeship ಕೊಡುವ ವ್ಯವಸ್ಥೆ ಮಾಡಿದ್ದೇವೆ ಎಂದು ಇಲ್ಲಿ ಹೇಳಿದ್ದಾರೆ. ನಮ್ಮ ವಿದ್ಯಾ ಮಂತ್ರಿಗಳು ಒಂದು ಸೌಲಭ್ಯದ ಹಿನ್ನೆಲೆಯನ್ನು ನೋಡಿದರೆ ಹಿಂದೆ ಏನು ದೊರೆಯುತ್ತಿತ್ತೋ ಅದರಲ್ಲಿ ಶೇಕಡ 50 ರಷ್ಟು ಕಡಿಮೆಯಾಗಿದೆ. ಸ್ಕಾಲರ್‌ಷಿಪ್ ಕೊಡತಕ್ಕಂಥ ಕಾಲೇಜು ವಿದ್ಯಾರ್ಥಿಗಳು ಫೀಸ್ ಕೊಡಬೇಕೆಂದು ಆರ್ಡರ್ ಮಾಡಿದ್ದಾರೆ 150 ರೂಪಾಯಿ ಸ್ಕಾಲರ್‌ಷಿಪ್ ಬಂದರೆ, 40–50 ರೂಪಾಯಿನಷ್ಟು ಅದಕ್ಕೆ ಸೇರಿಸಿ ಫೀಸ್ ಕೊಡಬೇಕು. ಹೀಗಿದ್ದು ಶೇಕಡ 85 ರಷ್ಟು ವಿದ್ಯಾರ್ಥಿಗಳಿಗೆ ಉಚಿತ ವಿದ್ಯಾಭ್ಯಾಸದ ಸೌಲಭ್ಯ ಕಲ್ಪಿಸಿದ್ದೇವೆಂದು ಯಾವ ಬಾಯಿನಿಂದ ಹೇಳುತ್ತಾರೋ ಗೊತ್ತಿಲ್ಲ. ಸರ್ಕಾರದ ಹೇಳಿಕೆ ಬಹಳ ಆಶ್ಚರ್ಯವಾಗಿ ಕಾಣುತ್ತದೆ. ಫೀ ವಜಾ ಮಾಡಿಕೊಂಡು ಸ್ಕಾಲರ್‌ಷಿಪ್ ಹಣ ಕೊಡಬೇಕು. ಇದು ಬಹಳ ಅನ್ಯಾಯ. ಹಿಂದೆ ಸ್ಕಾಲರ್‌ಷಿಪ್ ಕೊಡಬೇಕಾದರೆ ಇದ್ದ ಸೌಲಭ್ಯ ಅಂದರೆ ಫೀಜಿನ ಖಾತಾ ಬಾಕಿ ಕೊಡುವುದು ತೆಗೆದಿರುವುದು ಬಹಳ ಅನ್ಯಾಯವಾಗಿದೆ. ಇದನ್ನು ಸರಿಪಡಿಸಬೇಕು ಇಲ್ಲದೇ ಇದ್ದರೆ ಬಹಳ ಕಷ್ಟವಾಗುತ್ತದೆ. ಹಿಂದೆ ದೊರೆಯುತ್ತಾ ಇದ್ದ ಸೌಕರ್ಯ ಕಿತ್ತು ಹಾಕಿ ಕಣ್ಣು ಒರೆಸುವುದಕ್ಕೆ ಬೆನಿಫಿಟ್ಸ್ ಕೊಡುತ್ತಾ ಇದ್ದೇವೆ ಎಂದು ಹೇಳುವುದು ಬಹಳ ಅನ್ಯಾಯ. ಇದನ್ನು ಪುನರ್ವಿಮರ್ಶೆ ಮಾಡಬೇಕು.

ಹೀಗೆಯೇ ಇರಿಗೇಷನ್ ಬಗ್ಗೆ ಸ್ವಲ್ಪ ತುಲನೆ ಮಾಡಿ ನೋಡಿದರೆ ಮೇಜರ್ ಇರಿಗೇಷನ್ ಬಗ್ಗೆ ಎಳ್ಳಷ್ಟೂ ಕೂಡ ಆಶಾದಾಯಕವಾದ ಭಾವನೆ ಕಂಡು ಬರುತ್ತಾ ಇಲ್ಲ. ರೈತನಿಗೆ ನಿರಾಶೆಯಾಗದಂತೆ ಮಾಡುವುದು ಸರ್ಕಾರದ ಕರ್ತವ್ಯ. ಅಂಥಾ ನೀರಾವರೀ ಯೋಜನೆಗಳನ್ನು ಕಾರ್ಯಗತ ಮಾಡುವುದಕ್ಕೆ ಬಹುಶಃ ರಾಜಕೀಯದ ಪ್ರಭಾವಕ್ಕೆ ಒಳಗಾಗಿ ಆತಂಕ ಉಂಟಾಗಿರಬಹುದೆಂದು ಕಾಣುತ್ತದೆ. ಯಾವುದೇ ಸರ್ಕಾರ ಇರಲಿ, ಇವತ್ತು ಈ ಮಂತ್ರಿ ಮಂಡಲ ಇರಬಹುದು, ನಾಳೆ ಹೋಗಬಹುದು. ಒಬ್ಬ ಮಂತ್ರಿ ಅಥವಾ ಮಂತ್ರಿಮಂಡಲ ಮಾಡಿರುವುದನ್ನು ಇನ್ನೊಂದು ಮಂತ್ರಿ ಮಂಡಲ ಬದಲಾವಣೆ ಆದ ಹಾಗೆ ಆ ಯೋಜನೆಗಳನ್ನು ಬದಲಾವಣೆ ಮಾಡುವುದು ನಿಜವಾಗಿಯೂ ಯಾವ ಸರ್ಕಾರಕ್ಕೂ ಗೌರವ ತರುವುದಿಲ್ಲ ಎಂಬುದನ್ನು ಸ್ಪಷ್ಟಪಡಿಸಿ ಹೇಳುತ್ತೇನೆ. ಕಾವೇರಿ ನೀರಿನ ಬಗ್ಗೆ 1924 ನೇ ಇಸವಿಯಲ್ಲಿ ಮದರಾಸ್ ಸರ್ಕಾರದ ಜೊತೆಗೆ ನಮ್ಮ ಸರ್ಕಾರ ಒಪ್ಪಂದ ಮಾಡಿಕೊಂಡಿರುವ ಪ್ರಕಾರ 1972 ನೇ ಇಸವಿಗೆ ಮುಗಿಯುತ್ತದೆ. ಅಷ್ಟರಲ್ಲಿ ಹಾರಂಗಿ, ಕಂಬದ ಕಡ ಯೋಜನೆಯನ್ನು ಪೂರೈಸಬೇಕಾದ್ದು ಸರ್ಕಾರದ ಕರ್ತವ್ಯವಾಗಿತ್ತು. ಈ ದಿನ ರಾಜ್ಯಪಾಲರ ಭಾಷಣದಲ್ಲಿ ಅದರ ಬಗ್ಗೆ ಯಾವ ಪ್ರಸ್ತಾಪವನ್ನೂ ಮಾಡಿಲ್ಲ. ಮೂರನೆ ಪಂಚವಾರ್ಷಿಕ ಯೋಜನೆಯ ಮೂರನೆ ವರ್ಷದ ಆದಿಯಲ್ಲಿ ಇದ್ದೇವೆ. ಇದರ ಬಗ್ಗೆ ರಾಜ್ಯಪಾಲರು ಏನೂ ಹೇಳದೇ ಇರುವುದು ಸರ್ಕಾರದವರಿಗೆ ನಿಜವಾಗಿಯೂ ಗೌರವ ತರುವುದಿಲ್ಲ. ಈಗ ಹಾರಂಗಿ ಯೋಜನೆಯ ವಿಷಯದಲ್ಲಿ ಸ್ವಲ್ಪ ವಿವರವಾಗಿ ಅಂಕಿ ಅಂಶಗಳನ್ನು ಪರಿಶೀಲಿಸಿದರೆ, ಕಳೆದ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಿದ ಸಂದರ್ಭದಲ್ಲಿ ಅರಕಲಗೂಡು ಕ್ಷೇತ್ರದ ಶ್ರೀಮಾನ್ ತಿಮ್ಮಪ್ಪಗೌಡರು ಸ್ಪಷ್ಟವಾಗಿ ಹೇಳಿದರು. ಇದು ಬಹುಶಃ ಭಾರತದಲ್ಲಿ ಇಂಥಾ ಉತ್ತಮವಾದ ಯೋಜನೆ ಯಾವುದೂ ಇಲ್ಲ, ಕೇವಲ ಒಂದು ಹಳ್ಳಿ ಮುಳುಗಡೆಯಾಗುತ್ತದೆ. 1 ಲಕ್ಷ 50 ಸಾವಿರ ಎಕರೆ ನೀರಾವರಿಗೆ ಅನುಕೂಲವಾಗುವಂಥ ಒಂದು ಬೃಹತ್ ಪ್ರಮಾಣದ ಈ ಯೋಜನೆಯನ್ನು ಕಾರ್ಯಗತ ಮಾಡುವುದಕ್ಕೆ ಯಾವುದೋ ರೀತಿಯ ನೆಪ ಹಾಕಿ ಹಿಂದೆ ಮುಂದೆ ನೋಡುತ್ತಾ ಇದ್ದೀರಿ. ಟೆಕ್ನಿಕಲ್ Water Commission ಅವರು ಕನ್‌ಕರೆನ್ಸ್ ಕೊಟ್ಟಿಲ್ಲ, ಆದ್ದರಿಂದ ಮಾಡುವುದಕ್ಕೆ ಆಗು

ವುದಿಲ್ಲ ಎಂದು ಹೇಳಿ alternate ಯೋಜನೆ ಮಾಡಬೇಕೆಂದು ಹೇಳುತ್ತಾ ಇದ್ದೀರಿ. ಹಿಂದೆ ಯಾವ ಒಂದು ಆಶ್ವಾಸನೆ ಕೊಟ್ಟಿದ್ದಿರಿ. ಈ ಯೋಜನೆಯನ್ನು ಮಾಡಿ ನೀರಾವರಿ ಸೌಕರ್ಯ ಒದಗಿಸಿ ಜನರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮವಾಗೊಳಿಸುತ್ತೇವೆ ಎಂದು ಹೇಳಿದ್ದೀರಿ ಅದನ್ನು ಮಾಡತಕ್ಕದ್ದು ಸರ್ಕಾರದ ಹೊಣೆಯಾಗಿದೆ. ಇದರ ವಿಷಯದಲ್ಲಿ ಸರ್ಕಾರ ಬಹಳವಾಗಿ ಹಿಂದೆ ಬಿದ್ದಿದೆ ಎಂದು ವಿಷಾದದಿಂದ ಹೇಳಬೇಕಾಗುತ್ತದೆ. ಮನುಷ್ಯನ ಶರೀರವನ್ನು ತುಂಡು ತುಂಡಾಗಿ ಬೇರ್ಪಡಿಸಿದಂತೆ ಎರಡು ಯೋಜನೆಗಳನ್ನು ಮಾಡಬೇಕೆಂದು ಸರ್ಕಾರ ಯೋಜನೆ ಮಾಡುತ್ತಾ ಇದೆ. ಹರದೂರಿನ ಹತ್ತಿರ 60 ಅಡಿ ಎತ್ತರದ ಡ್ಯಾಂ ಹಾಕಿ 20 ಸಾವಿರ ಎಕರೆಗೆ ನೀರಾವರಿ ಮಾಡಬೇಕೆಂತಲೂ, ಹುದಗೂರಿನ ಸೈಟಿನಲ್ಲಿ 120 ಅಡಿ ಡ್ಯಾಂ ಹಾಕಿ 40 ಸಾವಿರ ಎಕರೆಗೆ ನಿರಾವರಿ ಮಾಡಬೇಕಂತಲೂ alternate ಯೋಜನೆ ಇದೆ. ಯಾರೋ ಒಬ್ಬ ರಾಜಕೀಯ ಮುಖಂಡರ ಅನುಕೂಲಕ್ಕೆ ಈ ರೀತಿ ಶರೀರವನ್ನು ರುಂಡ ಮುಂಡವಾಗಿ ಬೇರ್ಪಡಿಸಿದಂತೆ, ಈ ರೀತಿ ಒಂದು ಕಡೆ ಅಣೆಕಟ್ಟು, ಒಂದು ಕಡೆ ಡ್ಯಾಂ ಆದರೆ ಇದು ಬಹಳ ಅನ್ಯಾಯ. ಆದರೆ ಅದರಿಂದ ದುಷ್ಪರಿಣಾಮವಾಗುತ್ತದೆ. ಮೈಸೂರು ದೇಶದಲ್ಲಿ ಸರ್. ಎಂ. ವಿಶ್ವೇಶ್ವರಯ್ಯನವರಂಥ ಮಹಾನುಭಾವರು ಜನಿಸಿದ ದೇಶದಲ್ಲಿ ಇಂಜನಿಯರುಗಳು ಬಹಳ ಹೆಸರುವಾಸಿಯಾಗಿದ್ದರು. ಅಂಥ ಇಂಜನಿಯರುಗಳು ರಾಜಕೀಯ ಮುಖಂಡರ ಕೈಗೊಂಬೆಯಾಗಿ ಮಂತ್ರಿ ಮಂಡಲ ಬದಲಾವಣೆಯಾದಂತೆಲ್ಲಾ ಪ್ಲಾನ್ ಬದಲಾವಣೆ ಮಾಡುತ್ತಿರುವುದು ನಿಜವಾಗಿಯೂ ಅವಮಾನಕರವಾದ ವಿಷಯ. ಈ ದಿವಸ ನಮ್ಮ ಇಂಜನಿಯರುಗಳು ಮಾಡತಕ್ಕ ಯೋಜನೆ ಬಗ್ಗೆ ಸೆಂಟರ್‌ನಲ್ಲಿ ಮನ್ನಣೆ ದೊರಕುತ್ತಿಲ್ಲ ಎಂದರೆ ಇದು ನಿಜವಾಗಿಯೂ ಶೋಚನೀಯ. ಹಿಂದೆ ಇದ್ದ ಲೋಕೋಪಯೋಗಿ ಮಂತ್ರಿಗಳು ಒಂದು ಯೋಜನೆ ತಯಾರು ಮಾಡಿದ್ದರು. ಅದು ಈ ಹಿಂದೆಯೇ ಮೂರನೆ ಪಂಚವಾರ್ಷಿಕ ಯೋಜನೆಯಲ್ಲಿ ಅಡಕವಾಗಿತ್ತು. ಅದನ್ನು ಆದಷ್ಟು ಜಾಗ್ರತೆ ಕಾರ್ಯಗತ ಮಾಡಲು ರಾಜಕೀಯ ಭೇದಭಾವ ಮರೆತು ಪ್ರಾರಂಭ ಮಾಡಬೇಕೆಂದು ಹೇಳಿ ಈ ಸಂದರ್ಭದಲ್ಲಿ ಒತ್ತಾಯಪಡಿಸುತ್ತೇನೆ.

ಹೀಗೆಯೇ ಗೋರೂರು ಡ್ಯಾಂ ವಿಷಯದಲ್ಲೂ ಕೂಡ 45 ಸಾವಿರ ಎಕರೆ ನೀರಾವರಿಯಾಗುತ್ತದೆಂದು ಅಂದಾಜಾಗಿದೆ. ಸೆಂಟ್ರಲ್ ವಾಟರ್ ಅಂಡ್ ಪವರ್ ಕಮೀಷನ್ ಅವರ ಟೆಕ್ನಿಕಲ್ ಒಪೀನಿಯನ್‌ಗೆ ಹೋಗಿದೆ ಎಂದು ತಿಳಿಸಿದ್ದರು. ಈ ವರ್ಷದ ಮಾರ್ಚಿಯಲ್ಲೇ ಪ್ರಾರಂಭ ಮಾಡುತ್ತೇವೆ ಎಂಬ ಭರವಸೆ ಕೊಟ್ಟಿದ್ದರು. ಅದು ಹಾಗೆ ಆಗಲಿಲ್ಲ. ಬಹಳ ಅನ್ಯಾಯವಾಗಿದೆ. ಮಂತ್ರಿಗಳಾಗಿರತಕ್ಕವರು ರೈತರಿಗೆ ಭರವಸೆ ಕೊಡುತ್ತೀರಿ. ನೀರಾವರೀ ಯೋಜನೆ ಬಗ್ಗೆ, ವ್ಯವಸಾಯದ ಬಗ್ಗೆ ರೈತರಿಗೆ ಸೌಲಭ್ಯ ದೊರಕಿಸುತ್ತೇವೆ ಎಂದು ಉಪದೇಶ ಕೊಡುತ್ತೀರಿ, ಆದರೆ ಅವನ್ನು ಕಾರ್ಯಗತ ಮಾಡಲು ಪ್ರಯತ್ನ ಮಾಡದಿದ್ದರೆ ಒಳ್ಳೆಯ ಪರಿಣಾಮವಾಗುವುದಿಲ್ಲ. ಅದರಿಂದ ಜನತೆಗೆ ಬಹಳ ಅನ್ಯಾಯವಾಗಿ ಕೆಲವು ಸದಸ್ಯರು ಹೇಳಿದ ಹಾಗೆ ಶ್ರೀಮಾನ್ ದೊಡ್ಡಮೇಟಿಯವರು ಹೇಳಿದಂತೆ ಕ್ರಾಂತಿಕಾರಕ ಸ್ವರೂಪ ತಾಳುತ್ತದೆ. ಅದಕ್ಕೆ ಅವಕಾಶ ಕೊಡಬಾರದು, ತಾವು ಪ್ರಯತ್ನ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಹೀಗೆಯೇ ಲಫ್ಟ್ ಇರಿಗೇಷನ್‌ಗೆ ಸರ್ಕಾರದವರು ಬಹಳ ಹೆಚ್ಚಿನ ಆದ್ಯತೆ ಕೊಡಬೇಕು. ಉಪಮಂತ್ರಿಗಳಾದ ಆಲೂರು ಹನುಮಂತಪ್ಪನವರು ಹೇಳಿದ್ದಾರೆ, ಒಂದೊಂದು ಕಡೆ ಒಂದೊಂದು ಹೇಳಿಕೆ ಕೊಡುತ್ತಾ ಇದ್ದಾರೆ. ಚಾಮರಾಜ ನಗರದಲ್ಲಿ ಇದರ ಬಗ್ಗೆ ಪಾಲಿಸಿ decide ಆಗಿಲ್ಲ, ಅಂತಿಮ ತೀರ್ಮಾನಕ್ಕೆ ಬಂದಿಲ್ಲ ಎಂದು ಹೇಳಿದ್ದಾರೆ. ಇದಕ್ಕೆ ಬದಲಾಗಿ ಒಂದು ತೀರ್ಮಾನ ಮಾಡಿ ಸರ್ಕಾರದವರು ಸಹಾಯ ಮಾಡುತ್ತಾರೆಯೇ, ಸಹಕಾರಿ ಸಂಘಗಳ ಮೂಲಕ ಸಹಾಯ ಸಿಕ್ಕುತ್ತದೆಯೇ ಎಂಬುದನ್ನು ಹೇಳದಿದ್ದರೆ ಬಹಳ ಕಷ್ಟವಾಗುತ್ತದೆ. ಸಹಕಾರಿ ಸಂಘಗಳ ಮುಖೇನ ಸಹಾಯ ಒದಗಿಸುವುದಾದರೆ ತೊಂದರೆಯಾಗುತ್ತದೆ. ಏಕೆಂದರೆ ಪೂರ್ವಾದಿ ಸಾಲ ಜಮೀನುಗಳ ಮೇಲೆ ಇದ್ದು ಹಣ ಕೊಡುವುದು ಕಷ್ಟವಾಗುತ್ತದೆ. ಸರ್ಕಾರದ ಮುಖೇನ ಸಹಾಯ ಮಾಡುವುದಾದರೆ ಬಹಳ ಫಲಪ್ರದವಾಗಿ ರೈತರಿಗೆ ಅನುಕೂಲ ದೊರೆಯುತ್ತದೆ ಎಂದು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ. ಆದ್ದರಿಂದ ಲಫ್ಟ್ ಇರಿಗೇಷನ್ ಬಗ್ಗೆ ಸರ್ಕಾರದವರು ಆದಷ್ಟು ಜಾಗ್ರತ ತೀರ್ಮಾನ ಕೈಕೊಳ್ಳಬೇಕೆಂದು ಪ್ರಾರ್ಥನೆ ಮಾಡಿ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ.

† ಶ್ರೀ ಎಂ. ಶ್ರೀನಿವಾಸ ನಾಯಕ್ (ಮಂಗಳೂರು-I).—ಮಾನ್ಯ ಸಭಾಪತಿಗಳೇ, ಶ್ರೀಮಾನ್ ಹುಲಕೋಟಿಯವರು ರಾಜ್ಯಪಾಲರ ಭಾಷಣಕ್ಕೆ ಮಂಡಿಸಿರುವ ಅಭಿನಂದನಾ ನಿಲುವಳಿಯನ್ನು ಹೃತ್ಪೂರ್ವಕವಾಗಿ ನಾನು ಪುಷ್ಟೀಕರಿಸುತ್ತೇನೆ. ರಾಜ್ಯಪಾಲರು ಸ್ವಾರ್ಥದಾಯಕವಾದ ಮಾರ್ಗದರ್ಶನ ಮಾಡಿರುವುದಲ್ಲದೆ ಕೆಲವು ವಿಚಾರಪೂರಿತವಾದ ಅಂಶಗಳನ್ನು ತಿಳಿಸಿರುವುಕ್ಕೆ ಈ ಸಭೆಯ ಸದಸ್ಯರು ಮಾತ್ರವಲ್ಲದೆ ಇಡೀ ಮೈಸೂರು ಸಂಸ್ಥಾನದ ಜನತೆಯೂ ಕೂಡ ಅವರಿಗೆ ಅಭಿನಂದನೆ

(ಶ್ರೀ ಎಂ. ಶ್ರೀನಿವಾಸ ನಾಯಕ್)

ಯನ್ನು ಅರ್ಪಿಸಬೇಕಾಗಿದೆ. ಏಕೆಂದರೆ ಅವರ ಭಾಷಣ ಸಂಸ್ಥಾನದ ಜನತೆಯಲ್ಲಿ ಒಂದು ವಿಶೇಷ ರೀತಿಯಲ್ಲಿ ಆಶಾದಾಯಕವಾದ ಅವಕಾಶವನ್ನು ಕಲ್ಪಿಸಿ ಕೊಟ್ಟಿದೆ ಎಂದು ಹೇಳಬೇಕಾಗಿದೆ. 7 ವರ್ಷಗಳಿಂದ ಈ ಸಭೆಯಲ್ಲಿ ರಾಜ್ಯಪಾಲರು ಭಾಷಣ ಮಾಡುತ್ತಾ ಇದ್ದಾರೆ, ಹಲವು ಮಂದಿ ಅದನ್ನು ಟೀಕಿಸುತ್ತಾ ಇದ್ದಾರೆ.

4-30 P.M.

ಈ ವರ್ಷವೂ ಕೂಡ ರಾಜ್ಯಪಾಲರ ಭಾಷಣವು ಬಹಳ ನೀರಸವಾಗಿದೆ ಎನ್ನತಕ್ಕ ವಿಚಾರವನ್ನು ಕೆಲವರು ಹೇಳಿದ್ದಾರೆ. ಆದರೆ ಅದು ಸರಿಯಿಲ್ಲ. ಆದರೆ ಈ ಸಾಲಿನ ರಾಜ್ಯಪಾಲರ ಭಾಷಣದಲ್ಲಿ ಅನೇಕ ವಿಚಾರ ಪೂರಿತವಾದ ವಿಷಯಗಳು ತುಂಬಿವೆ ಮತ್ತು ಆ ವಿಚಾರಗಳು ಹಾಗೂ ಮುಂದುವರೆದುಕೊಂಡು ಹೋಗುತ್ತಿವೆಯೆಂದು ನಾನೀಗ ಹೇಳಬೇಕಾಗಿದೆ. ನಮ್ಮ ರಾಜ್ಯಪಾಲರು ಅಪ್ಪಣೆ ಕೊಡಿಸಿರತಕ್ಕ ಭಾಷಣದಲ್ಲಿ ತುರ್ತುಪರಿಸ್ಥಿತಿ ಬಗ್ಗೆ ಯೋಗ್ಯ ಸಲಹೆಗಳನ್ನಿತ್ತಿದ್ದಾರೆ. ಈ ವಿಚಾರದಲ್ಲಿ ನಮ್ಮ ರಾಜ್ಯ ಯಾವ ರೀತಿ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂಬುದನ್ನು ಅದರಲ್ಲಿ ಸೂಚಿಸಲಾಗಿದೆ. ರಾಷ್ಟ್ರದ ನಾಯಕರಾದ ಪಂಡಿತ್ ಜವಹರಲಾಲ್ ನೆಹರೂರವರು ತುರ್ತುಪರಿಸ್ಥಿಯನ್ನು ಎದುರಿಸಲು ನಾವು ಹೇಗೆ ನಮ್ಮ ಉತ್ಪತ್ತಿಯನ್ನು ಎಲ್ಲ ರೀತಿಗಳಲ್ಲೂ ಹೆಚ್ಚಿಸಬೇಕೆಂಬುದನ್ನು ತಿಳಿಸಿದ್ದಾರೆ. ಯುದ್ಧಕ್ಕೆ ಯೋಧರನ್ನು ತಯಾರಿಸುವುದರಲ್ಲೂ, ರಕ್ಷಣಾನಿಧಿಗೆ ಸಹಾಯಮಾಡುವುದರಲ್ಲೂ, ನಮ್ಮ ಆಹಾರಧಾನ್ಯಗಳ ಉತ್ಪತ್ತಿಯನ್ನು ಜಾಸ್ತಿ ಮಾಡುವುದರಲ್ಲೂ, ರಕ್ತದಾನ ಮಾಡುವುದರಲ್ಲೂ ನಾವು ಹೀಗೆ ಹುರುಪಿನಿಂದ ಕೆಲಸ ಮಾಡಬೇಕಾಗಿರುತ್ತೆಂಬುದು ತಿಳಿಸಿದ್ದಾರೆ. ಅವರು ಇತ್ತಿರುವ ಕರೆಗೆ ಅನುಗುಣವಾಗಿ ನಾವು ಇಲ್ಲಿ ನಮ್ಮ ಆಹಾರ ಬೆಳೆಗಳನ್ನು ಜಾಸ್ತಿ ಮಾಡಲು ಈಗಾಗಲೆ ನಮ್ಮ ಸರ್ಕಾರ ಕಾರ್ಯಕ್ರಮ ಕೈಗೊಂಡಿದೆ. ಆದರೆ ಇದನ್ನು ಇನ್ನೂ ಹೆಚ್ಚು ತ್ವರಿತದಿಂದ ನಡೆಸಬೇಕಾದ್ದು ಅಗತ್ಯವೆಂದು ನಾನು ಹೇಳುತ್ತೇನೆ. ಈ ಮೂರನೆ ಪಂಚವಾರ್ಷಿಕ ಯೋಜನೆಯಲ್ಲಿ ಅಡಕವಾಗಿರತಕ್ಕ ಕಾರ್ಯಕ್ರಮಗಳಲ್ಲಿ ನಮ್ಮ ಸರ್ಕಾರ ಈಗಾಗಲೇ ಅನೇಕ ಕೆಲಸಗಳನ್ನು ಕೈಗೊಂಡಿದೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 21 ನದಿಗಳು ಹರಿಯುತ್ತಿವೆ. ಈ ನದಿಗಳಿಗೆ ಅಣೆಕಟ್ಟುಗಳನ್ನು ಹಾಕಿ ಮತ್ತು ಈ ನದಿಗಳಲ್ಲಿ ಸಮುದ್ರದ ಉಪ್ಪು ನೀರು ಬಾರದಂತೆ ತಡೆಗಟ್ಟಿದ್ದೇ ಆದರೆ ವ್ಯವಸಾಯಕ್ಕೆ 6 ಸಾವಿರ ಪಂಪುಸೆಟ್ಟುಗಳನ್ನು ಈ ಅಣೆಕಟ್ಟಿನ ಆಯ ಕಟ್ಟಿಗೂ 10 ಸಾವಿರ ಪಂಪುಸೆಟ್ಟುಗಳನ್ನು ಬಾವಿ ನೀರಿನ ವ್ಯವಸಾಯಗಾರರಿಗೂ ಒದಗಿಸಿ, ಹೀಗೆ ಒಟ್ಟು 16 ಸಾವಿರ ಪಂಪುಸೆಟ್ಟುಗಳನ್ನು ಒದಗಿಸಿ ಕೊಟ್ಟಿದ್ದೇ ಆದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು 20 ಲಕ್ಷ ಮುಡಿ ಅಕ್ಕಿಯನ್ನು ಜಾಸ್ತಿಯಾಗಿ ಉತ್ಪತ್ತಿ ಮಾಡಲು ಅವಕಾಶವಿದೆಯೆಂದು ಲೆಕ್ಕ ಹಾಕಿದ್ದಾರೆ. 20 ಲಕ್ಷ ಮುಡಿ ಅಕ್ಕಿಗೆ 4 ಕೋಟಿ ರೂ. ಗಳಾಗುತ್ತದೆ. ಹೀಗೆ ಮಾಡಿದರೆ ಅಲ್ಲಿ ನಮ್ಮ ರೈತರ ಪರಿಸ್ಥಿತಿ ಕೂಡ ಉತ್ತಮವಾಗುವುದಕ್ಕೆ ಸಾಧ್ಯವಿದೆ. ಹೀಗೆ ಮೈಸೂರು ರಾಜ್ಯ ಸರ್ಕಾರ ಸಣ್ಣ ನೀರಾವರಿ ಕಾಂಗಾರಿಗಳ ಬಗ್ಗೆಯೂ ಆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಾರ್ಯಕ್ರಮಗಳನ್ನು ಕೈಗೊಳ್ಳುವುದಾದರೆ ನಿಜವಾಗಿಯೂ ಅಲ್ಲಿ ಆಹಾರೋತ್ಪನ್ನ ಜಾಸ್ತಿ ಆಗುತ್ತದೆ. ಸರ್ಕಾರದವರು ಈ ಕಾರ್ಯಗಳನ್ನೆಲ್ಲ ಅಗತ್ಯವಾಗಿ ಅಲ್ಲಿ ಕೈಗೊಳ್ಳುವುದು ಉಚಿತವಾಗಿದೆಯೆಂದು ನಾನು ಸರ್ಕಾರಕ್ಕೆ ಸಲಹೆಯನ್ನು ಕೊಡಬಯಸುತ್ತೇನೆ. ನಾವು ಈ ಆಹಾರ ಧಾನ್ಯವನ್ನು ಹೀಗೆ ಹೆಚ್ಚಾಗಿ ಉತ್ಪತ್ತಿ ಮಾಡಬೇಕೆಂದು ಹೇಳುತ್ತಿದ್ದೇವೋ ಹಾಗೇ ನಾವು ಹೆಚ್ಚು ಹೆಚ್ಚಾಗಿ ಕಾಯಿ ಪಲ್ಯಗಳನ್ನು ಬೆಳೆಯಬೇಕು. ಜನರ ಆರೋಗ್ಯದ ಕಡೆಗೆ ನಾವು ಹೆಚ್ಚಿನ ಗಮನ ಕೊಡಬೇಕಾಗಿದ್ದರೆ ನಾವು ಹೆಚ್ಚು ಕಾಯಿಪಲ್ಯಗಳನ್ನು ಬೆಳೆಯಬೇಕಾದದ್ದು ಅನಿವಾರ್ಯ. ಈಗಾಗಲೇ ಮೈಸೂರು ರಾಜ್ಯದಲ್ಲಿ ಅಲ್ಲಲ್ಲೇ ವೆಜಿಟೆಬಲ್ ಫಾರಂಗಳನ್ನು ಮಾಡುತ್ತಿದ್ದಾರೆ. ಸರ್ಕಾರದವರು ಈ ವಿಚಾರಕ್ಕೆ ಹೆಚ್ಚಿನ ಗಮನ ಕೊಡಬೇಕೆಂದು ಹೇಳುತ್ತೇನೆ. ಈ ಕಾಯಿಪಲ್ಯಗಳಿಗೆ ಈಗ ಮಂಗಳೂರಿನಲ್ಲಿ ತುಂಬಾ ಅಭಾವವಿದೆ. ಈಗ ಅಲ್ಲಿ ಒಂದು ನೂರು ಎಕರೆ ಜಮೀನನ್ನು ಅಕ್ವಾಯರ್ ಮಾಡಿಕೊಂಡು ಒಂದು ವೆಜಿಟೆಬಲ್ ಫಾರಂನ್ನು ಮಾಡಬೇಕೆಂದು ಸರ್ಕಾರದವರು ಆಲೋಚನೆ ಮಾಡುತ್ತಿದ್ದಾರೆ. ಈ ಕಾರ್ಯ ತ್ವರಿತವಾಗಿ ಮುಂದುವರಿಯಬೇಕು. ನಮ್ಮ ರಾಜ್ಯಕ್ಕೆ 200 ಮೈಲಿ ಕರಾವಳಿ ಪ್ರದೇಶವಿದೆ. ಇಲ್ಲಿ ಮೀನುಗಾರಿಕೆಯನ್ನು ಅಭಿವೃದ್ಧಿ ಮಾಡಿದರೆ ಇನ್ನೂ 200 ಟನ್ ಮೀನಿನ ಉತ್ಪತ್ತಿ ಜಾಸ್ತಿ ಆಗುತ್ತದೆ. ಇದರಿಂದ ಮೀನಿನ ಅಭಾವವನ್ನು ನೀಗಬಹುದು. ಹೀಗೆ ಮೀನಿನ ಅಭಾವವನ್ನು ನೀಗುವುದರ ಜೊತೆಗೆ ಜನರಿಗೆ ಒಳ್ಳೆಯ ಪೌಷ್ಟಿಕಾಹಾರವನ್ನು ಒದಗಿಸಿದ ಹಾಗೂ ಆಗುತ್ತದೆ. ಇದರ ಜೊತೆಗೆ ನಮ್ಮ ಸರ್ಕಾರ ಹಂದಿ

ಗಳನ್ನು ಸಾಕುವಿಕೆ, ಕೋಳಿಗಳನ್ನು ಸಾಕುವಿಕೆಗೆ ಸರ್ಕಾರ ನೇರವಾದ ಕಾರ್ಯಕ್ರಮ ಕೈಗೊಳ್ಳುವುದು ಅತ್ಯಗತ್ಯವೆಂದು ಹೇಳಬಯಸುತ್ತೇನೆ.

ಇನ್ನು ವ್ಯವಸಾಯದ ಉತ್ಪನ್ನಗಳನ್ನು ನಗರಗಳಿಗೂ ಪೇಟೆಗಳಿಗೂ ತಂದು ಮಾರಾಟ ಮಾಡಲು ರೂರಲ್ ಕಮ್ಯುನಿಕೇಷನ್ ವ್ಯವಸ್ಥೆ ಸರಿಯಾಗಿರಬೇಕು. ಇದು ಸರ್ಕಾರದವರ ಕರ್ತವ್ಯ. ಆದರೆ ನಮ್ಮಲ್ಲಿ ಕೆಲವು ಈ ರೂರಲ್ ರಸ್ತೆಗಳ ಕಲ್‌ವರ್ಟ್ ಇತ್ಯಾದಿಗಳು ಏನು ಅಗತ್ಯವಾಗಿ ಇರಬೇಕಾಗಿತ್ತೋ ಅವುಗಳಿಲ್ಲದೆ ಇರುವುದರಿಂದ ಆ ರಸ್ತೆಗಳನ್ನು ಏನೆಂದು ಉದ್ದೇಶಕ್ಕಾಗಿ ಮಾಡಲಾಗಿತ್ತೋ ಆ ಉದ್ದೇಶ ಸಾಧನೆಯಾಗದೆ ಅವು ನಿರರ್ಥಕವಾಗಿವೆ. ಯಾವ ರಸ್ತೆಯೂ ಸಫಲವಾಗದೆ ಹಳೆಯ ತೊಂದರೆಗಳು ಇದ್ದೇ ಇವೆ ಎಂಬ ವಿಚಾರವನ್ನು ನಾನೀಗ ಬಹಳ ವಿಷಾದದಿಂದ ತಿಳಿಸಬೇಕಾಗಿದೆ. ಸರ್ಕಾರದವರು ಆಹಾರೋತ್ಪನ್ನಕ್ಕೆ ಯಾವಾಗ ಹೆಚ್ಚಿನ ಕಾರ್ಯಗಳನ್ನು ಕೈಗೊಂಡರೋ ಆಗಲೇ ಆ ಆಹಾರ ಧಾನ್ಯಗಳನ್ನು ಪೇಟೆ ಪಟ್ಟಣಗಳಿಗೆ ತರಲು ಸಾಧನವಾಗಿರತಕ್ಕ ಈ ರಸ್ತೆಗಳ ಅಭಿವೃದ್ಧಿಗೆ ಹೆಚ್ಚಿನ ಗಮನ ಕೊಡಬೇಕು. ಇಲ್ಲವಾದರೆ ಈ ಧಾನ್ಯಗಳಿಗೆ ಓವರ್ ಹೆಡ್ ಛಾರ್ಜುಗಳು ಜಾಸ್ತಿಯಾಗಿ ಬೆಲೆ ಹೆಚ್ಚಾಗುತ್ತದೆ. ಆದುದರಿಂದ ಈ ರೂರಲ್ ಸೈಡಿನಲ್ಲಿರತಕ್ಕ ರಸ್ತೆಗಳನ್ನು ಸರಿಯಾದ ಸ್ಥಿತಿಯಲ್ಲಿಡಬೇಕಾದ್ದೂ ಸಹ ಅತ್ಯಗತ್ಯ ಎಂಬ ಅಂಶಕ್ಕೆ ಸರ್ಕಾರದವರ ಗಮನವನ್ನು ಸೆಳೆಯುತ್ತಿದ್ದೇನೆ.

ಇನ್ನು ರಾಜ್ಯಪಾಲರು ನಮ್ಮ ಬಂದರುಗಳನ್ನು ಅಭಿವೃದ್ಧಿ ಪಡಿಸುವ ವಿಚಾರದಲ್ಲಿ ಸಹ ಅಪ್ಪಣೆ ಕೊಡಿಸಿದ್ದಾರೆ. ಅದಕ್ಕೆ ತಕ್ಕ ಸಿಬ್ಬಂದಿಯನ್ನು ಬೇಗ ನೇಮಕ ಮಾಡಿ ಈ ಕಾರ್ಯ ಭರದಿಂದ ಸಾಗುವಂತೆ ಮಾಡಬೇಕು. ಕೇಂದ್ರ ಸರ್ಕಾರದ ಅಶ್ರದ್ಧೆಯಿಂದಲೋ ಅಥವಾ ಮತ್ತಾವ ಕಾರಣದಿಂದಲೋ ಈ ಕೆಲಸ ಹಿಂದೆ ಬೀಳುತ್ತಲೇ ಬಂದಿತ್ತು. ಈ ದೃಷ್ಟಿಯಿಂದ ಸರ್ಕಾರದವರು ಈ ವಿಚಾರದಲ್ಲಿ ತ್ವರಿತದಿಂದ ಕೆಲಸವನ್ನು ಪ್ರಾರಂಭಿಸಬೇಕಾದುದು ಅಗತ್ಯವೆಂದು ಹೇಳಬಯಸುತ್ತೇನೆ. ಈಗ ಕೇಂದ್ರ ಸರ್ಕಾರದ ಬಡ್ಜೆಟ್ಟಿನಲ್ಲಿ ನಮ್ಮ ಮಂಗಳೂರು ಬಂದರಿನ ಅಭಿವೃದ್ಧಿಗಾಗಿ 10 ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ. ಈ ವಿಚಾರದಲ್ಲಿ ನಮ್ಮ ಸರ್ಕಾರ ಕೇಂದ್ರ ಸರ್ಕಾರದ ಮೇಲೆ ಸಾಕಷ್ಟು ಒತ್ತಾಯವನ್ನು ಹೇರಿ ಈ ಕಾರ್ಯವನ್ನು ಅವರು ಬೇಗ ಕೈಗೊಳ್ಳುವಂತೆ ಒತ್ತಾಯ ಮಾಡಬೇಕೆಂಬುದಾಗಿ ನಾನು ನಮ್ಮ ಸರ್ಕಾರದವರಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ಈ ಬೃಹತ್ ಬಂದರಿನ ಕಾರ್ಯಕ್ರಮಗಳು ಯಶಸ್ವಿಯಾಗಿ ಸಾಗಬೇಕಾದರೆ ಇದಕ್ಕೆ ರಸ್ತೆಗಳ ಕಾಂಗಾರಿ ಕೂಡ ಜೊತೆಯಲ್ಲೇ ನಡೆಯಬೇಕು, ಹೆಚ್ಚು ನೀರಿನ ಸರಬರಾಯಿ ವ್ಯವಸ್ಥೆ ಆಗಬೇಕು. ಈಗ ಅಲ್ಲಿ ದಿನ ಒದಕ್ಕೆ ಒಂದು ಮಿಲಿಯನ್ ಗ್ಯಾಲನ್ ನೀರು ಬೇಕಾಗುತ್ತದೆ. ಈಗ ಅಲ್ಲಿ ಒಂದು ಸಾವಿರ ಮಿಲಿಯನ್ ಗ್ಯಾಲನ್ ನೀರನ್ನು ಉತ್ಪತ್ತಿ ಮಾಡುತ್ತಿದ್ದಾರೆ. ಇನ್ನು ಮುಂದಕ್ಕೆ ಅಲ್ಲಿ ಒಂದು ಮಿಲಿಯನ್ ಗ್ಯಾಲನ್ ನೀರನ್ನು ಒದಗಿಸಲು ಸಾಧ್ಯವಾಗುವುದಿಲ್ಲ. ಈಗ ಈ ನೀರು ಸರಬರಾಯಿಯನ್ನು ಹೆಚ್ಚಿಸಬೇಕಾಗಿದೆ. ಇದಕ್ಕಾಗಲೇ ಸರ್ಕಾರ ಅನುಮತಿ ನೀಡಿದೆ. ಈ ಹೆಚ್ಚು ನೀರು ಸರಬರಾಯಿಯ ಕೆಲಸ ಬಹಳ ಭರದಿಂದ ಸಾಗಬೇಕಾಗಿದೆ. ಇಲ್ಲವಾದರೆ ಎಲ್ಲಿ ಕೆಲಸಗಳೂ ಹಿಂದಕ್ಕೆ ಬೀಳುತ್ತವೆ. ಈಗ ಅಲ್ಲಿ ಉತ್ಪತ್ತಿ ಮಾಡುತ್ತಿರುವುದು ಬಂದು ಸಾವಿರ ಗ್ಯಾಲನ್ ನೀರಿಗೆ 4 ಆಣೆ ವೆಚ್ಚು ಬರುತ್ತಿದೆ ಎಂತ ಹೇಳುತ್ತಾರೆ. ಈ ಒಂದು ಕಾರಣದಿಂದಲೂ ಈಗ ಈ ಯೋಜನೆಗೆ ಸರ್ಕಾರದವರು ಹಾಕತಕ್ಕ ಹಣಕ್ಕೆ ಹೆಚ್ಚು ರಿಟರ್ನ್ ಸಹ ಒಂದು ಜನಗಳಿಗೂ ಕೂಡ ತುಂಬಾ ಅನುಕೂಲವಾಗುತ್ತದೆ ಎನ್ನತಕ್ಕ ಅಂಶವನ್ನು ಸರ್ಕಾರಕ್ಕೆ ಸೂಚನೆ ಮಾಡುತ್ತಿದ್ದೇನೆ.

ಇನ್ನು ನಮ್ಮ ರಾಜ್ಯಪಾಲರು ಅಲ್ಯೂಮಿನಂ ಫ್ಯಾಕ್ಟರಿಯ ಸ್ಥಾಪನೆ ವಿಚಾರ ಹೇಳಿದ್ದಾರೆ. ಈ ಕೈಗಾರಿಕೆಗೂ ಹೆಚ್ಚಿನ ನೀರಿನ ಸರಬರಾಯಿ ಬೇಕಾಗಿದೆ. ಇದಕ್ಕೂ ಸೂಕ್ತ ವ್ಯವಸ್ಥೆಗಳನ್ನು ಸರ್ಕಾರ ಮಾಡಬೇಕು. ಹೀಗೆ ಅವರು ಅಪ್ಪಣೆ ಕೊಡಿಸಿರತಕ್ಕ ಬಂದರಿನ ಸಂಬಂಧದಲ್ಲಿ ಈ ಮಂಗಳೂರು ಹಾಸನ ರೈಲ್ವೆ ಇದನ್ನೇ ಅವಲಂಬಿಸಿಕೊಂಡಿದೆ. ಈ ರೈಲ್ವೆ ಸಂಬಂಧವಾಗಿ ಕೇಂದ್ರದವರು 60 ಲಕ್ಷ ರೂ. ಗಳನ್ನು ಒದಗಿಸಿದ್ದಾರೆ. ಆದ ಕಾರಣ ಒಟ್ಟಿನಲ್ಲಿ ನಮ್ಮ ಬಂದರಿನ ಕೆಲಸ ಭರದಿಂದ ಸಾಗಬೇಕು ಎನ್ನತಕ್ಕ ವಿಚಾರಕ್ಕೆ ಸರ್ಕಾರದ ಗಮನವನ್ನು ಸೆಳೆಯುತ್ತಿದ್ದೇನೆ. ಆದರೆ ಸಧ್ಯದಲ್ಲೇ ಈ ವಿಚಾರದಲ್ಲಿ ಕೇಂದ್ರ ಸರ್ಕಾರದಿಂದ ಒಂದು ಹೇಳಿಕೆ ಕೊಡಲ್ಪಡುತ್ತದೆಂದು ನಾವೆಲ್ಲರೂ ನಿರೀಕ್ಷಣೆ ಮಾಡಿಕೊಂಡಿದ್ದೆವು. ಆದರೆ ಇಲ್ಲಿಯ ತನಕ ಯಾವ ಹೇಳಿಕೆಯನ್ನು ಕೊಟ್ಟಿಲ್ಲ. ಆದ ಕಾರಣ ಈ ವಿಚಾರದಲ್ಲಿ ನಮ್ಮ ಸರ್ಕಾರ ಅಗತ್ಯವಾದ ಎಲ್ಲ ಕಾರ್ಯಕ್ರಮಗಳನ್ನೂ ಕೈಗೊಳ್ಳಬೇಕಾದ್ದು ಅಗತ್ಯವೆಂಬುದಾಗಿ ಹೇಳಿದ್ದು ಸಮಂಜಸವಾಗೇ ಇರುತ್ತದೆ.

ಇನ್ನು ಈ ಮೂರನೆ ಪಂಚವಾರ್ಷಿಕ ಯೋಜನೆಯ ಕೆಲಸಗಳು ಮುಂದುವರಿಯಬೇಕೆಂದು ಹೇಳುತ್ತಿರುವ ಸಂದರ್ಭದಲ್ಲಿ ಮಂಗಳೂರಿನಲ್ಲಿರತಕ್ಕ 47 ಹೆಂಚಿನ ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿರುವ ಸುಮಾರು 10 ಸಾವಿರ ಕೂಲಿಗಾರರಿಗೆ ಒಂದು ಭೀತಿ ಉಂಟಾಗಿದೆ. ಆ ಹೆಂಚಿನ ಕಾರ್ಖಾನೆ

(ಶ್ರೀ ಎಂ. ಶ್ರೀನಿವಾಸ ನಾಯಕ್)

ಕೆಲಸ ಬಿಟ್ಟರೆ ಆ ಕೂಲಿಗಾರರಿಗೆ ಜೀವನಕ್ಕೆ ಬೇರೆ ಮಾರ್ಗವೇ ಇಲ್ಲ. ಆದುದರಿಂದ ಈ ಹೆಂಚುಗಳಿಗೆ ಒಂದು ಸರಿಯಾದ ಮಾರ್ಕೆಟ್ಟನ್ನು ಒದಗಿಸಬೇಕಾಗಿದೆ. ಇಲ್ಲವಾದರೆ, ಆ ಕಾರ್ಖಾನೆಗಳು ಉತ್ಪತ್ತಿಯನ್ನು ಮೊಟಕು ಮಾಡಬೇಕಾಗುತ್ತದೆ. ಇದರಿಂದ ಕೂಲಿಗಾರರಿಗೆ ತೊಂದರೆಯಾಗುತ್ತದೆ. ಆದ ಕಾರಣ ಈ ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಯಾವ ರೀತಿಯೂ ಈ ಹೆಂಚಿನ ಕಾರ್ಖಾನೆಗಳು ತಮ್ಮ ಕೆಲಸವನ್ನು ಹಿಂದಕ್ಕೆ ತಳ್ಳದಿರುವಂತೆ ಒಂದು ವ್ಯವಸ್ಥೆ ಮಾಡಿಕೊಡಬೇಕೆಂದು ನಾನು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

ಈಗ ರಾಷ್ಟ್ರದ ಲೆವಲ್‌ನಲ್ಲಿ ಕೆಲಸಮಾಡುತ್ತಿರುವ I.A.S., I.P.S. ಅಧಿಕಾರಿಗಳ ಸರ್ವೀಸ್ ಅವಧಿಯನ್ನು 58 ವರ್ಷಗಳಿಗೆ ಏರಿಸಲಾಗಿದೆ. ಅದೇ ಮಟ್ಟದಲ್ಲಿ ಇತರ ಎಲ್ಲ ಸಿಬ್ಬಂದಿಯ ಸರ್ವೀಸ್ ಅವಧಿಯನ್ನು 58 ವರ್ಷಗಳಿಗೇರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇಷ್ಟು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನು ಅರ್ಪಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಟಿ. ಎಚ್. ಮಾದಪ್ಪ ಗೌಡ (ನಾಗಮಂಗಲ).—ಸ್ವಾಮಿ, ರಾಜ್ಯಪಾಲರ ಭಾಷಣದ ಕೊನೆಯ ಪ್ಯಾರಾದಿಂದ ನಾನು ಪ್ರಾರಂಭ ಮಾಡಬೇಕೆಂದು ಮನಸ್ಸು ಮಾಡಿಕೊಂಡಿದ್ದೇನೆ. ಏನೇ ಸಣ್ಣಪುಟ್ಟ ಕಾರಣಗಳಿದ್ದರೂ ಕೂಡ ಅದನ್ನೆಲ್ಲ ಮರೆತು ಇವೊತ್ತು ದೇಶಕ್ಕೆ ಒದಗಿರತಕ್ಕ ಕಷ್ಟ ಪರಿಸ್ಥಿತಿಯಲ್ಲಿ ನಾವೆಲ್ಲ ಒಟ್ಟಿಗೆ ಕೆಲಸಮಾಡಬೇಕು ಎಂದು ಬಹಳ ಒಳ್ಳೆಯ ಮಾತನ್ನು ಇಲ್ಲಿ ಹೇಳುತ್ತಾರೆ. ಆದರೆ ವಾಸ್ತವವಾಗಿರುವ ಸಂಗತಿ ಏನು ಎನ್ನುವುದರ ಕಡೆಗೆ ನಾವು ಗಮನ ಕೊಡುವುದಾದರೆ ಇದಕ್ಕೆ ವಿರುದ್ಧವಾಗಿದೆ. ನಿಮ್ಮ ಸಹಕಾರಕೊಡಿ, ನಾವೆಲ್ಲ ಸಣ್ಣಪುಟ್ಟ ಭಿನ್ನಾಭಿಪ್ರಾಯಗಳನ್ನು ಮರೆಯೋಣ ಎಂದು ಹೇಳತಕ್ಕ ಎದುರು ಪಕ್ಷದಲ್ಲಿರುವ, ಆಡಳಿತ ನಡೆಸತಕ್ಕ ಪಕ್ಷದವರು ಏನಾದರೂ ಈ ವಿಚಾರದಲ್ಲಿ ಮಾತನಾಡಿದ್ದಾರೆಯೇ ? ಯೋಚನೆ ಮಾಡಿದ್ದಾರೆಯೇ ಎಂದು ನನಗೆ ಸಂಶಯ ಬರುತ್ತದೆ. ಅದರಲ್ಲಿಯೂ ನಾನು ಬರತಕ್ಕಂಥ ಜಿಲ್ಲೆಯ ವಿಚಾರವನ್ನು ನಾನು ಇಲ್ಲಿ ವಿಶದವಾಗಿ ಹೇಳಬೇಕೆನ್ನಿಸುತ್ತದೆ. ಜನರಿಂದ ಚುನಾಯಿತರಾಗಿ ಬಂದಿರುವ ಬಹುಮತ ಹೊಂದಿರುವ ಪಕ್ಷದವರು ಮಂತ್ರಿ ಮಂಡಲ ರಚಿಸಿರತಕ್ಕದ್ದು ಮತ್ತು ದೇಶದ ಆಡಳಿತವನ್ನು ನಡೆಸತಕ್ಕದ್ದೂ ಆಗಿದೆ. ಆದರೆ ಇವರ ಮೇಲೆ ಸೂಪರ್ ಮಂತ್ರಿಗಳು ಇದ್ದಾರೆನ್ನುವ ಸಂಶಯ ನನ್ನನ್ನು ಬಹುಮಟ್ಟಿಗೆ ಬಾಧಿಸುತ್ತಿದೆ. ಏಕೆಂದರೆ ಮಂಡ್ಯಜಿಲ್ಲೆಯ ಒಂದು ಭಾಗದಿಂದ ನಾನು ಬರುತ್ತಿದ್ದೇನೆ. ನಾವು ಕೂಡ ದೇಶಪ್ರೇಮದಲ್ಲಿ ನಮ್ಮ ಜನಗಳಿಗೆ ನಮ್ಮ ಕೈಲಾದಮಟ್ಟಿನ ಅನುಕೂಲ ಮಾಡಿಕೊಡಬೇಕು ಎನ್ನುವುದರಲ್ಲಿ ಕಾಂಗ್ರೆಸ್‌ನವರಿಗಿಂತ ಯಾವುದೇ ವಿಧದಲ್ಲಿಯೂ ಕೂಡ ಕಡಮೆ ಉತ್ಸಾಹದಿಂದ ಇಲ್ಲ. ಅವರಿಗಿಂತ ಸ್ವಲ್ಪಮಟ್ಟಿಗೆ ಜಾಸ್ತಿ ಇದೆ ಎಂದು ನಾನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಂಡ್ಯ ಜಿಲ್ಲೆಯಲ್ಲಿರುವ ಸೂಪರ್ ಮಂತ್ರಿಗಳು ಎಂದು ನಾನು ಏನು ಹೇಳಿದೆ, ಅದರ ಹೇಳಿಕೆಯಂತೆ ಇವೊತ್ತಿನ ದಿವಸ ಆಡಳಿತವೆಲ್ಲ ನಡೆಯುತ್ತಿದೆ ಎನ್ನುವುದಕ್ಕೆ ಒಂದಲ್ಲ, ಎರಡಲ್ಲ, ಹತ್ತಾರು ನಿದರ್ಶನಗಳನ್ನು ನಾನು ಕೊಡಬಲ್ಲೆ. ಈ ಜವಾಬ್ದಾರಿ ಸ್ಥಾನದಲ್ಲಿ ನಿಂತುಕೊಂಡು ಮಾತನಾಡುವಾಗ ಬೇಜವಾಬ್ದಾರಿಯಿಂದ ಮಾತನಾಡುವುದಕ್ಕೆ ನಾನು ಇಷ್ಟಪಡುವುದಿಲ್ಲ. ನಮ್ಮ ಮಾತಿನಲ್ಲಿರುವ ಸತ್ಯವನ್ನು ಅಧಿಕಾರವನ್ನು ವಹಿಸಿಕೊಂಡಿರುವ ಮಾನ್ಯ ಮುಖ್ಯಮಂತ್ರಿಗಳು ಪೂರ್ಣವಾಗಿ ವಿಮರ್ಶೆ ಮಾಡಬೇಕು. ನಾನು ಹೇಳುವ ಮಾತನ್ನು ಒರೆಗಲ್ಲಿಗೆ ಹಾಕಿ ತಿಕ್ಕಬೇಕು, ಅದರಲ್ಲಿರುವ ಸತ್ಯವನ್ನು ಶೋಧಿಸಬೇಕು ಎಂದು ಅತಿ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳಬೇಕಾಗಿದೆ.

ಇವೊತ್ತು ನಮ್ಮ ರೈತ ಹೊರಲಾರದಷ್ಟು ಕಂದಾಯ ಕವಣಿಕೆಗಳನ್ನು ಈಗಾಗಲೇ ಸರ್ಕಾರದವರು ಹಾಕಿದ್ದಾರೆ. ಶ್ರೀ ಮಾಚ್ ವೆಂಕಟೇಗೌಡರು ಹೇಳಿದಹಾಗೆ ಈ ಬಾಬನಲ್ಲಿ 29 ಕೋಟಿ ರೂಪಾಯಿ ಬರುತ್ತದೆ. ಇನ್ನು ಯೋಜನೆಗಳನ್ನು ಏನು ಮಾಡಿಕೊಂಡಿದ್ದಾರೆಯೋ ಅದಕ್ಕೆ ಹಣ ಸಾಲುವುದಿಲ್ಲವೆನ್ನುವ ಅಭಿಪ್ರಾಯವನ್ನು ಸೂಚಿಸಿದ್ದಾರೆ. ಯಾವುದೇ ತೆರಿಗೆಯನ್ನು ಹಾಕಿದರೂ ಅದರ ಹೊರೆ ಮೂಲತಃ ಬೀಳತಕ್ಕದ್ದು ಹಳ್ಳಿಯಲ್ಲಿರುವ ಮೂಕನಾದ ಏನೂ ಅನುಕೂಲತೆಯಿಲ್ಲದೆ ಇರುವ ಬಡ ರೈತನ ಮೇಲೆ ಎನ್ನುವುದನ್ನು ಸರ್ಕಾರ ಏಕೆ ಮರೆಯುತ್ತದೆ ಎನ್ನುವುದು ನನಗೆ ಗೊತ್ತಾಗುವುದಿಲ್ಲ. ಕಳೆದ ಸಾಲಿಗಿಂತ ಈ ಸಾಲಿನಲ್ಲಿ ಬತ್ತ ಮತ್ತು ರಾಗಿಯ ಬೆಲೆ ಒಂದು ಖಂಡುಗಕ್ಕೆ 20-25 ರೂಪಾಯಿ ಕಡಮೆ ಇದೆ. ಅದೂ ಅಲ್ಲದೆ ನಾನಾ ಕಾರಣಗಳಿಗಾಗಿ ಕೆಲವು ಕಡೆ ಬತ್ತಕ್ಕೆ ಬೆಂಕಿರೋಗಬಿತ್ತು. ವಿಪರೀತ ಮಳೆ ಬಂದು, ಮತ್ತು ಕೆಲವುಕಾಲ ಮಳೆಯಿಲ್ಲದೆ ರಾಗಿಬೆಳೆ ಸುತರಾಂ ಹೋಗಿದೆ. ಇಂಥ ಪರಿಸ್ಥಿತಿಯಲ್ಲಿ ನೂರಕ್ಕೆ ನೂರರಷ್ಟು ಕಂದಾಯವನ್ನು ಕೊಡುವುದರ ಜೊತೆಗೆ ಹೆಚ್ಚಿನ ಹೊರೆಯನ್ನು ಅವನು ಹೊರುವುದಕ್ಕೆ ಸಾಧ್ಯವಿಲ್ಲ. ಬೆಲೆ ನಿಯಂತ್ರಣವನ್ನು

ಮಾಡುವುದಿಲ್ಲ, ಬತ್ತ, ರಾಗಿ ಬೆಲೆ ಈಗ ಬಹಳ ಕಡಮೆಯಾಗಿದೆ ಎಂದು ಹೇಳತಕ್ಕ ನೀವು ರೈತನು ಕೊಂಡುಕೊಳ್ಳತಕ್ಕ ಇತರ ಪದಾರ್ಥಗಳ ಬೆಲೆಯು ಅದೇ ಮಟ್ಟದಲ್ಲಿದೆಯೋ ಇಲ್ಲವೇ ಎನ್ನುವ ಯೋಚನೆ ತಮಗೆ ಏಕೆ ಇಲ್ಲಿಯವರೆಗೂ ಬರಲಿಲ್ಲವೋ ನನಗೆ ಅರ್ಥವಾಗುವುದಿಲ್ಲ.

ಉಳಿತಾಯಮಾಡುತ್ತೇವೆ, ಇದಕ್ಕಾಗಿ ಎ. ಜಿ. ರಾಮಚಂದ್ರರಾಯರ ಸಮಿತಿ ಸಿಫಾರಸುಗಳನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದಂಥವರು ಇದುವರೆಗೂ ಏಕೆ ಆ ಕಡೆಗೆ ಗಮನ ಕೊಡಲಿಲ್ಲವೋ ತಿಳಿಯಲಿಲ್ಲ. ನಾನು ಒಂದು ಉದಾಹರಣೆಯನ್ನು ಯಾವ ರೀತಿ ಉಳಿತಾಯ ಮಾಡಬೇಕು ಎನ್ನುವುದಕ್ಕೆ ಕೊಡುತ್ತೇನೆ. ಸಮಾಜ ಕಲ್ಯಾಣ ಕೆಲಸಕ್ಕಾಗಿ, ಈವರ್ಷವೂ ಅಷ್ಟೇ ಹೋದವರ್ಷವೂ ಅಷ್ಟೇ, ನಮ್ಮ ತಾಲ್ಲೂಕಿಗೆ ಎರಡೂವರೆ ಸಾವಿರ ರೂಪಾಯಿ ಗ್ರಾಂಟನ್ನು ಕೊಟ್ಟಿದ್ದಾರೆ. ಈ ಗ್ರಾಂಟನ್ನು ಹಂಚುವುದಕ್ಕೆ ತಾಲ್ಲೂಕ್ ಬೋರ್ಡ್ ಇದೆ. ಅಲ್ಲಿರುವವರ ಜೊತೆಗೆ 4,400 ರೂಪಾಯಿ (ಸಂಬಳ, ಟಿ. ಎ. ಮತ್ತು ಡಿ. ಎ) ಖರ್ಚಿನಲ್ಲಿ ಇವನ್ನು ನೋಡಿಕೊಳ್ಳುವುದಕ್ಕೆ ಬೇರೆ ಸಿಬ್ಬಂದಿ ಇದೆ. 2,500 ರೂಪಾಯಿ ಕೊಡತಕ್ಕ ಬಾಬಿನ ಮೇಲ್ವಿಚಾರಣೆಗೆ 4,500 ರೂಪಾಯಿ ಖರ್ಚುಮಾಡತಕ್ಕ ಸಿಬ್ಬಂದಿ ಇಟ್ಟುಕೊಂಡು ನೀವು ಏನು ಉಳಿತಾಯ ಮಾಡುತ್ತಿದ್ದೀರಿ ಎಂದು ನಾನು ತಮ್ಮನ್ನು ಕೇಳಲು ಇಷ್ಟಪಡುತ್ತೇನೆ.

ಇದೇ ರೀತಿ ಜಿಲ್ಲಾಮಟ್ಟದಲ್ಲಿಯೂ ಕೂಡ District Developemt Officeಗೆ ವಿಪರೀತವಾದ ಸಿಬ್ಬಂದಿಯನ್ನು ಕೊಟ್ಟಿದ್ದೀರಿ. ಹೀಗೆ ಉಳಿತಾಯಕ್ಕೆ ಬದಲಾಗಿ ವಿಪರೀತವಾದ ಖರ್ಚನ್ನು ಮಾಡುತ್ತಿದ್ದೀರಿ. ಅಲ್ಲದೆ ರಾಷ್ಟ್ರೀಯ ವಿಸ್ತರಣಾ ಯೋಜನೆ ಏನಿದೆ, ಅದರಲ್ಲಿ ನಮ್ಮ ತಾಲ್ಲೂಕಿನಲ್ಲಿ 150 ರೂಪಾಯಿ, 200 ರೂಪಾಯಿ, 300 ರೂಪಾಯಿ ಸಂಬಳ ತೆಗೆದುಕೊಳ್ಳುವ 86 ಜನರಿದ್ದಾರೆ. ಇವರು ಮಾಡತಕ್ಕ ಕೆಲಸವೇನು ಎಂದರೆ 'fashion parade' ರವಿಕೆಬಟ್ಟೆತರಹ ಇರುವಂಥ ಬಟ್ಟೆಯಲ್ಲಿ ರವಿಕೆಯೂ ಅಲ್ಲ, ಅಂಗಿಯೂಅಲ್ಲ, ಅಂಥ ಬಟ್ಟೆಗಳನ್ನು ಹಾಕಿಕೊಂಡು ಅಲ್ಲಿ ಇಲ್ಲಿ ತಿರುಗತಕ್ಕದ್ದು, ಟೌನ್‌ಗಳಲ್ಲಿ ರೌಂಡುಹೊಡೆಯತಕ್ಕದ್ದು, ಇಷ್ಟು ಕೆಲಸ ವಿನಾ ಬೇರೆ ಕೆಲಸ ಮಾಡುತ್ತಿಲ್ಲ. ಆ ಯೋಜನೆಯಲ್ಲಿ ಅಳವಡಿಸಿಕೊಂಡಿರುವ ಕೆಲಸ ಯಾವುದೂ ಕೂಡ ಸುಸೂತ್ರವಾಗಿ ನಡೆಯುತ್ತಿಲ್ಲ. ಇದಕ್ಕೆ ಮಾನ್ಯಮಂತ್ರಿಗಳು ನಿಗಾಕೊಟ್ಟು ಆಗಿರುವ ಕೆಲಸವೆಷ್ಟು ಎನ್ನುವುದನ್ನು ಕೂಲಂಕಷವಾಗಿ ವಿಚಾರ ಮಾಡುವುದಾದರೆ, ತಮಗೆ ಈ ವಿಚಾರ ಮನದಟ್ಟಾಗುತ್ತದೆ.

ನಗರಗಳಿಗೆ ನೀರು ಸರಬರಾಜು ಎಂದು ಇದೆ. ಬೆಂಗಳೂರಿನಲ್ಲಿ ಬಹಳ ಜನರಿದ್ದಾರೆ, ವಿದ್ಯಾವಂತರಿದ್ದಾರೆ, ಬೇಕಾದಷ್ಟು ಕೂಗುಹಾಕುತ್ತಾರೆ. ಇವರಿಗೆ ಕಾವೇರಿ ಹೊಳೆಯಿಂದ ನೀರನ್ನು ತರುತ್ತೇವೆ, ಗಂಗಾನದಿಯಿಂದ ತರುತ್ತೇವೆ ಎಂದು ಹೇಳುತ್ತೀರಿ. ಇದೇ ರೀತಿಯಲ್ಲಿ ಐದು, ಹತ್ತು, ಹದಿನೈದು ಸಾವಿರ ಜನಸಂಖ್ಯೆಯುಳ್ಳ ಸಣ್ಣಪುಟ್ಟ ತಾಲ್ಲೂಕು ಹೆಡ್‌ಕ್ವಾರ್ಟರುಗಳಿಗೂ ನೀರನ್ನು ಒದಗಿಸಿಕೊಡತಕ್ಕದ್ದು ಆಡಳಿತ ಸೂತ್ರವನ್ನು ವಹಿಸಿಕೊಂಡ ಸರಕಾರದ ಜವಾಬುದಾರಿ ಎನ್ನುವುದನ್ನು ಏತಕ್ಕೆ ಈ ಸರಕಾರ ಮರೆತಿದೆಯೋ ನನಗಂತೂ ಅರ್ಥವಾಗುವುದಿಲ್ಲ. ಹಿಂದೆ ನಮ್ಮ ಮೈಸೂರು ಸಂಸ್ಥಾನದಲ್ಲಿ ಸಣ್ಣಪುಟ್ಟ ಮುನಿಸಿಪಾಲಟಿಗಳಿಗೆ ಮತ್ತು ದೊಡ್ಡ ಗ್ರಾಮಪಂಚಾಯತಿಗಳಿಗೆ ಸರಕಾರ ಇಂತಹ ಕೆಲಸಗಳನ್ನು ಮಾಡುವಾಗ ಗ್ರಾಂಟುಗಳನ್ನು ಕೊಡುತ್ತಿದ್ದರು. ಈಗ ಆ ಗ್ರಾಂಟುಗಳನ್ನು ನಿಲ್ಲಿಸಿಬಿಟ್ಟಿದ್ದಾರೆ. ಈಗಿರುವ ಸಣ್ಣಪುಟ್ಟ ಮುನಿಸಿಪಾಲಟಿಗಳು ಅವರ ಸಿಬ್ಬಂದಿ ಮತ್ತು ಸ್ವಲ್ಪಮಟ್ಟಿನ ಅನುಕೂಲಗಳನ್ನು ಮಾಡಿಕೊಳ್ಳುವುದಕ್ಕೆ ಅವರ ಹಣಕಾಸಿನ ಪರಿಸ್ಥಿತಿಯಿಂದ ಆಗುತ್ತಿಲ್ಲ. ಆದುದರಿಂದ ಹಿಂದೆ ಇದ್ದಂತೆ ಹಳೆಯ ಮೈಸೂರಿನಲ್ಲಿದ್ದ ಪೂರ್ವದ ಪದ್ಧತಿಯನ್ನು ಈಗ ಜಾರಿಗೆ ತರುವುದು ಒಳ್ಳೆಯದು ಎಂದು ಈ ಸಮಯದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಜನಾರೋಗ್ಯ ವಿಚಾರದಲ್ಲಿ ಹೇಳುವಾಗ ಈಗ ಹೊಸದಾಗಿ ಹೆಲ್ತ್‌ಯೂನಿಟ್ಟುಗಳೆಂದು ಇವೆ. ಇದರಲ್ಲಿ ಗವರ್ನಮೆಂಟ್ ಆಫ್ ಇಂಡಿಯಾದ ಪ್ಯಾಟರನ್, ಮೈಸೂರಿನ ಪ್ಯಾಟರನ್ ಎಂದು ಎರಡು ತರಹದ ಹೆಲ್ತ್‌ಯೂನಿಟ್ಟುಗಳಿವೆ. ಇವನ್ನು ಗ್ರಾಮಾಂತರ ಪ್ರದೇಶಗಳಿಗೆ ಕೊಡಬೇಕೆಂದು ಕೊಡುತ್ತಿದ್ದಾರೆ. ಅದರಲ್ಲೂ ಇಂಡಿಯಾ ಟೈಪು ಪ್ಯಾಟರನ್‌ಗಾಗಿ ತರಲು ಲಕ್ಷಾಂತರ ರೂಪಾಯಿಗಳಷ್ಟು ಖರ್ಚಾಗುತ್ತದೆ. ಇಂತಹುದನ್ನು ತಾಲ್ಲೂಕು ಹೆಡ್‌ಕ್ವಾರ್ಟರುಗಳಲ್ಲಿ ವ್ಯವಸ್ಥಿತವಾದ ರೀತಿಯಲ್ಲಿ ಆಸ್ಪತ್ರೆಗಳೂ ಇರುವಂತೆ ವ್ಯವಸ್ಥೆ ಮಾಡುವುದು ಬಹಳ ಸೂಕ್ತ. ಅಲ್ಲದೇ ಈಗಿರುವಂತೆ ಒಂದು ಮೂಲೆಯಲ್ಲಿ ಬ್ಲಾಕ್ ಏರಿಯಾ ಇರಬೇಕೆಂದು ಮಾಡುವ ಕಾರ್ಯಕ್ರಮವನ್ನು ಸರಕಾರ ಬಿಡಬೇಕೆಂದು ಸರಕಾರಕ್ಕೆ ಹೇಳಲು ಇಷ್ಟಪಡುತ್ತೇನೆ. ಇಂತಹ ಬ್ಲಾಕುಗಳಲ್ಲಿ ಆಸ್ಪತ್ರೆಗಳಿರುವುದೂ ಒಳ್ಳೆಯದು.

ಇಲ್ಲಿ ಹರಿಜನ ಗಿರಿಜನರಿಗಾಗಿ ನಾನಾ ಅನುಕೂಲಗಳನ್ನು ಮಾಡಿಕೊಡುತ್ತಿದ್ದಾರೆ. ಇವರಿಗಾಗಿ ಲಕ್ಷಾಂತರ ರೂಪಾಯಿಗಳಷ್ಟು ಖರ್ಚು ಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ಹರಿ

(ಶ್ರೀ ಟಿ. ಎಚ್. ಮಾದಪ್ಪ ಗೌಡ)

ಜನ ಗಿರಿಜನರು ಬಡವರಾಗಿ ವಿದ್ಯೆ ಇಲ್ಲದೆ ಆರ್ಥಿಕ ಸ್ಥಿತಿಯಲ್ಲಿ ಹಿಂದುಳಿದವರಂತೆ ನಮ್ಮ ದೇಶದಲ್ಲಿ ಎಲ್ಲಾ ಮತಗಳಲ್ಲೂ ಇದ್ದಾರೆ. ಇಂತಹವರಿಗೂ ಕೆಲವರಿಗೆ ಈ ಸೌಲಭ್ಯಗಳನ್ನು ಕೊಡತಕ್ಕದ್ದು ಎಂಬು ಮಾಡಿದರೆ ನಾವು ಈ ಸಮಾಜದಲ್ಲಿ ಬಹಳ ನ್ಯಾಯ ಮಾಡಿದಂತಾಗುತ್ತದೆ. ಇದೇ ರೀತಿ ಯಲ್ಲಿ ಒಬ್ಬ ಒಕ್ಕಲಿಗ, ಒಬ್ಬ ಬ್ರಾಹ್ಮಣ ಹೀಗೆ ಎಲ್ಲ ಮತಗಳಲ್ಲೂ ಇರುತ್ತಾರೆ. ಹೀಗೆ ಬಡತನ ದಲ್ಲಿದ್ದು ಚೈತನ್ಯವಿಲ್ಲದಿರುವವರಿಗೆ ಇಂತಹ ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕು. ಈ ವಿಚಾರ ವನ್ನು ಮುಂದಿನ ಸಾರಿ ರಾಜ್ಯಪಾಲರು ಭಾಷಣ ಮಾಡುವ ಸಮಯದಲ್ಲಿ ಈ ಮಾತನ್ನು ಈ ಮಾನ್ಯ ಸಭೆಗೆ ತಿಳಿಸುತ್ತಾರೆಂದು ನಾನು ಆಶಿಸುತ್ತೇನೆ.

ನದಿಯ ನೀರಿನ ವಿಚಾರವಾಗಿ ಅನೇಕ ಮಿತ್ರರು ಈಗಾಗಲೇ ಹೇಳಿದ್ದಾರೆ. ಈ ದಿನ ಬೆಳಗ್ಗೆ ನಮ್ಮ ಮುಖ್ಯಮಂತ್ರಿಗಳು ತಾವು ಮಾಡತಕ್ಕ ರೀತಿನೀತಿಗಳನ್ನು ಅವರಿಗೇ ಬಿಡತಕ್ಕದ್ದು. ಇತರರು ಹೇಳುವುದು ಅನಾವಶ್ಯಕ, ನಮ್ಮ ದೇಶದ ರಕ್ಷಣೆಯನ್ನು ಪೂರ್ಣವಾಗಿ ಮಾಡುತ್ತೇವೆ ಎನ್ನುವ ಆಶ್ವಾಸನೆಯನ್ನು ಈ ಸಭೆಯ ಮುಂದೆ ಇಟ್ಟರು. ನಮ್ಮ ದೇಶದ ಹಿತವನ್ನು ಹೊತ್ತಿರುವವರು ನಮಗೆ ಅನ್ಯಾಯವಾಗದ ರೀತಿಯಲ್ಲಿ ಈ ಕೃಷ್ಣ-ಗೋದಾವರಿ ನದಿಯ ನೀರಿನ ಹಂಚಿಕೆಯಿಂದ ನೀರನ್ನು ಪಡೆಯಲು ಪ್ರಯತ್ನ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಬಂದರು ಮತ್ತು ರೈಲುಗಳ ವಿಚಾರವನ್ನು ಹೇಳಿದ್ದಾರೆ. ರೈಲಿನ ವಿಚಾರವನ್ನು ಹೇಳುವುದಾದರೆ, ನಮ್ಮ ದೇಶದಲ್ಲಿ ಕಳೆದ ಮೂವ್ವತ್ತು ನಲವತ್ತು ವರ್ಷಗಳಿಂದಲೂ ಚಾಮರಾಜ ನಗರ-ಸತ್ಯಮಂಗಲದ ರೈಲ್ವೆ ಲೈನನ್ನು ಹಾಕಬೇಕೆಂದು ಕೇಳುತ್ತ ಬಂದಿದ್ದರೂ ಕೂಡ ಅದು ಇನ್ನೂ ಕಾರ್ಯಗತವಾಗಲಿಲ್ಲ. ಹಾಗೇ ಇನ್ನೂ ಅನೇಕ ರೈಲ್ವೆ ಲೈನನ್ನು ಕೇಳುತ್ತಿದ್ದರೂ ಕೂಡ ನಮ್ಮ ಮೈಸೂರಿನ ಮೇಲೆ ಕೇಂದ್ರಸರಕಾರದವರು ಮಲತಾಯಿಯಂತೆ ವರ್ತಿಸುವ ಮನೋಭಾವ ವುಳ್ಳವರಾಗಿದ್ದಾರೆ. ಇದನ್ನು ಆದಷ್ಟು ಬೇಗ ಪಡೆದು ನಮಗೆ ಎಲ್ಲಾ ಸೌಕರ್ಯಗಳೂ ಸಿಗುವಂತೆ ಏರ್ಪಾಡು ಮಾಡಬೇಕೆಂದು ಹೇಳಿ ಈ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಡಿ. ಪರಮೇಶ್ವರಪ್ಪ (ಹೊನ್ನಾಳಿ) – ಮಾನ್ಯ ಸಭಾಪತಿಗಳೇ, ನನ್ನ ಮಿತ್ರರು ಕನ್ನಡ ದಲ್ಲೇ ಭಾಷಣ ಮಾಡಬೇಕೆಂದು ಹೇಳುತ್ತಿರುವುದರಿಂದ, ಕನ್ನಡದಲ್ಲೇ ಮಾತನಾಡಲು ಪುನಃ ಅಪ್ಪಣೆ ಕೊಡಬೇಕೆಂದು ಅಧ್ಯಕ್ಷರಲ್ಲಿ ಪ್ರಾರ್ಥಿಸುತ್ತೇನೆ.

ಈ ದಿವಸ ನಮ್ಮ ರಾಜ್ಯಪಾಲರ ಭಾಷಣದ ಮೇಲೆ ತಂದಿರುವ ವಂದನಾ ನಿರ್ಣಯದ ಬಗ್ಗೆ ಮಾತನಾಡುತ್ತಾ ಈಗಾಗಲೇ ಅನೇಕರು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ರಾಜ್ಯಪಾಲರು ತಮ್ಮ ಭಾಷಣದಲ್ಲಿ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಮೊದಲನೆಯದಾಗಿ ನಮ್ಮ ದೇಶಕ್ಕೆ ಬಂದಿರತಕ್ಕ ಗಂಡಾಂತರದ ವಿಷಯದಲ್ಲಿ ಹೆಚ್ಚಾಗಿ ದೇಶದ ಜನರ ಗಮನವನ್ನು ಸೆಳೆದಿದ್ದಾರೆ. ಮೊದಲನೇ ಪ್ಯಾರಾದಲ್ಲಿ ಚೈನಾ ದೇಶದ ಆಕ್ರಮಣದ ವಿಚಾರವಾಗಿ ನಮ್ಮ ದೇಶದ ಮತ್ತು ಈ ಸಭೆಯ ಗಮನವನ್ನು ಸಹ ಸೆಳೆದು ಇಂತಹ ಒಂದು ಪರಿಸ್ಥಿತಿಯಲ್ಲಿ ಜನ ತಾವಾಗಿಯೇ ದೇಶದ ಗಂಡಾಂತರವನ್ನು ಎದುರಿಸುವುದಕ್ಕೆ ಮುಂದೆ ಬಂದಿರುವುದಕ್ಕಾಗಿ ಅವರು ದೇಶದ ಜನತೆಯನ್ನು ಕೂಡ ಅಭಿನಂದಿಸಿದ್ದಾರೆ.

ಇನ್ನು ಕೆಲವು ವಿಷಯಗಳ ಬಗ್ಗೆ ಮಾನ್ಯ ರಾಜ್ಯಪಾಲರು ಹೇಳಿರುವ ಸಂಗತಿಗಳನ್ನು ನೋಡಿ ದರೆ, ನಿಜವಾಗಿಯೂ ಈಗಾಗಲೇ ಹೇಳಿದ ಹಾಗೆ, ಕೆಲವು ವಿಷಯಗಳು ಸತ್ಯಕ್ಕೆ ದೂರವಾದವು ಎಂದು ಹೇಳಲು ಯಾವ ಅಭ್ಯಂತರವೂ ಇಲ್ಲ.

ಎರಡನೇ ಪ್ಯಾರಾದಲ್ಲಿ ರಾಜ್ಯಪಾಲರು ತುರ್ತಿನ ಪರಿಸ್ಥಿತಿಯ ಬಗ್ಗೆ ಮುಖ್ಯವಾಗಿ ಹೇಗಿರ ಬೇಕು ಎನ್ನುವ ವಿವರಗಳನ್ನೆಲ್ಲಾ ಕೊಟ್ಟಿದ್ದಾರೆ. ಇದೂ ಅಲ್ಲದೆ, consumer goods ವಿಚಾರ ದಲ್ಲಿಯೂ ಕೂಡ ಹೇಳಿ ಬೆಲೆಗಳನ್ನು ಹೇಗೆ ತಡೆಗಟ್ಟುತ್ತಿದ್ದೇವೆಂದು ಹೇಳಿ ಗೋಲ್ಡ್ ಕಂಟ್ರೋಲಿನ ವಿಷಯವಾಗಿಯೂ ಮೂರನೇ ಪ್ಯಾರಾದಲ್ಲಿ ಹೇಳಿದ್ದಾರೆ. ಇದನ್ನು ವಿಮರ್ಶೆ ಮಾಡುವುದಾದರೆ, ಸಾಮಾನ್ಯವಾಗಿ ವ್ಯವಸಾಯದಿಂದ ಜೀವನ ಮಾಡಿಕೊಂಡಿರುವ ಜನಕ್ಕೆ ಇದರಿಂದ ತೊಂದರೆಯಾಗಿದೆ ಎಂದು ಈಗಾಗಲೇ ಅನೇಕ ಮಾನ್ಯ ಸದಸ್ಯರು ಹೇಳಿದರು. ರೈತರು ಅವರು ಬೆಳೆದ ದವಸಗಳಿಗೆ ಸರಿಯಾದ ಬೆಲೆ ಸಿಗದೆ, ಅವರು ಕೊಂಡುಕೊಳ್ಳತಕ್ಕ ಪದಾರ್ಥಗಳ ಬೆಲೆಯೂ ಕೂಡ ಕಡಿಮೆಯಾ ಗದೇ ಇರುವುದರಿಂದ ರೈತನ ಆರ್ಥಿಕ ಸ್ಥಿತಿ ಉತ್ತಮವಾಗುವುದಕ್ಕೆ ಅವಕಾಶವಿರುವುದಿಲ್ಲ, ಎಂದು ಮಾನ್ಯ ಸದಸ್ಯರು ಆಗಲೇ ಇಲ್ಲಿ ವಿಶದವಾಗಿ ತಿಳಿಸಿದ್ದಾರೆ. ಈ ಬಗ್ಗೆ ಹೇಳುವುದಾದರೆ, ರೈತರಿಗೆ ಸರಿಯಾಗಿ ಸಹಾಯ ಮಾಡುತ್ತಿಲ್ಲ. ಇವರಿಗೆ ನಿಜವಾಗಿಯೂ ಸಹಾಯ ಮಾಡುವ ಯೋಚನೆ ಇದ್ದಿ ದ್ದರೆ ಈಗ ಆಹಾರ ಪದಾರ್ಥಗಳು ಎಷ್ಟು ಸಿಗುತ್ತಿತ್ತೋ ಅದಕ್ಕಿಂತ ಹೆಚ್ಚಾಗಿ ಶೇಖರಣೆ ಮಾಡಲು

ಅನುಕೂಲವಾಗಿ ಅವರು ಹೆಚ್ಚಿನ ಬೆಳೆಯನ್ನು ಉತ್ತಮವಾಗಿ ಮಾಡುತ್ತಿದ್ದರು ಎಂದು ಹೇಳಬಹುದಾಗಿತ್ತು, ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಪಂಚಾಯತಿ ರಾಜ್ಯದ ವಿಚಾರವಾಗಿ ರಾಜ್ಯಪಾಲರು ಸಮರ್ಪಕವಾಗಿ ಕೆಲಸ ಮಾಡುತ್ತಿದೆ ಎಂದು ಹೇಳಿದ್ದಾರೆ. ಪಂಚಾಯತಿ ರಾಜ್ಯ ಸಂಸ್ಥೆಗಳ ವಿಷಯದಲ್ಲಿ ಅಂಕಿಅಂಶಗಳನ್ನು ಗಮನಿಸಿದಲ್ಲಿ ನಿಜವಾಗಿಯೂ ಕೂಡ ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲ ಎಂದು ನಾವು ಮನಗಂಡಿದ್ದೇವೆ. ಪ್ರತಿಯೊಂದು ತಾಲ್ಲೂಕಿನಲ್ಲಿ ವಿಮರ್ಶೆಮಾಡಿ ನೋಡಿದರೆ ನಿಷ್ಪ್ರಯೋಜನವಾಗಿ ಹಣ ವ್ಯಯವಾಗುತ್ತಿದೆ. ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೋಗಲು ಜೀಪ್, ಪೆಟ್ರೋಲ್ ಬಗ್ಗೆ ಹಣ ಖರ್ಚಾಗುತ್ತಿದೆ. ಶೇಕಡ 60ರಷ್ಟು ಭಾಗ ಎಸ್ಟಾಬ್ಲಿಷ್‌ಮೆಂಟಿಗೆ ಖರ್ಚಾಗುತ್ತಿದೆ. ಉಳಿದಂಥ ಶೇಕಡ 40 ರಷ್ಟು ಭಾಗ ಸಹ ಸರಿಯಾಗಿ ಅಭಿವೃದ್ಧಿ ಕಾರ್ಯಗಳಿಗೋಸ್ಕರ ವಿನಿಯೋಗವಾಗುತ್ತಿಲ್ಲ ಎನ್ನುವದನ್ನು ಮನಗಂಡಿದ್ದೇವೆ. ಶ್ರೀ ಎಸ್. ಕೆ. ಡೇ ಅವರು ಕೂಡ ಪೇಪರಿನಲ್ಲಿ ಒಂದು ಸ್ಟೇಟ್‌ಮೆಂಟ್ ಕೊಟ್ಟು ಪಂಚಾಯಿತಿ ಸಂಸ್ಥೆಗಳು ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲವೆಂದು ಅಭಿಪ್ರಾಯ ಪಟ್ಟಿದ್ದಾರೆ. ಅಮಲ್ದಾರರಿಗೆ ಈ ಕೆಲಸ ವಹಿಸಿಕೊಟ್ಟು ತಾಲ್ಲೂಕು ಡೆವಲಪ್‌ಮೆಂಟ್ ಕೆಲಸ ನೋಡಿಕೊಳ್ಳುವುದು ಬಹಳ ಸೂಕ್ತವಾದುದು ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

5-00 P.M.

ಇನ್ನು ಸೀಜನಲ್ ಕಂಡೀಷನ್ಸ್ ವಿಚಾರದಲ್ಲಿ ಹೇಳುವದಾದರೆ ಕೆಲವು ಪ್ರದೇಶಗಳಲ್ಲಿ ಮಳೆಯು ದೆಶೆಯಿಂದ ಬಹಳ ಲುಕ್ಸಾನವಾಗಿದೆ. ರಿಲೀಫ್ ಮೆಜರ್ಸ್ ಹೆಚ್ಚಾಗಿ ತೆಗೆದುಕೊಂಡಿದ್ದೇವೆಂದು 5ನೇ ಪ್ಯಾರಾದಲ್ಲಿ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ಇದಕ್ಕೆ ಯಾವ ಆಧಾರವಿಲ್ಲ ಎಂದು ಕಾಣುತ್ತದೆ. ಅದಕ್ಕೆ ನಮ್ಮ ತಾಲ್ಲೂಕಿನ ನಿದರ್ಶನವಿದೆ. ಈ ವರ್ಷ ನಾಲ್ಕು ಆಣೆ ಫಸಲು ಬಂದಿದೆ ಎಂದು ಹೇಳಿದರೆ ಅದು ತಪ್ಪಾಗಲಾರದು. ಶೇಂಗ, ಜೋಳ, ಮೆಣಸಿನಕಾಯಿ ಮೊದಲಾದ ಬೆಳೆಗಳಿಗೆ ರೋಗ ತಗಲಿ ಹೆಚ್ಚಿನ ಲುಕ್ಸಾನ ಆಗಿದೆ. ಆದ್ದರಿಂದ ನಾಲ್ಕು ಆಣೆ ಫಸಲು ಬರಬಹುದೆಂದು ನಿರೀಕ್ಷಣೆಯಿದೆ. ಆದ್ದರಿಂದ ಯಾವ ಆಧಾರವಿಲ್ಲದೆ ಈ ವಿಚಾರವನ್ನು ಉತ್ಪ್ರೇಕ್ಷೆಮಾಡಿ ಹೇಳಿದಹಾಗೆ ಇದೆ.

ಇನ್ನು ಲ್ಯಾಂಡ್ ರಿಫಾರ್ಮ್ಸ್ ಬಗ್ಗೆ ಅನೇಕ ಮಿತ್ರರು ಮಾತನಾಡಿದ್ದಾರೆ. ಇದನ್ನು ಕಾರ್ಯಗತ ಮಾಡಲು ಕಾನ್‌ಸ್ಟಿಟ್ಯೂಷನಲ್ ಡಿಫಿಕಲ್ಟೀಸ್ ಬಂದಿದೆ ಎಂದು ಭಾಷಣದಲ್ಲಿ ಹೇಳಿಸಿದ್ದಾರೆ. ಈ ಕಾನ್‌ಸ್ಟಿಟ್ಯೂಷನಲ್ ಅಡಚಣೆಯನ್ನು ಆದಷ್ಟು ಬೇಗ ತೆಗೆದುಹಾಕಿ ಲ್ಯಾಂಡ್ ರಿಫಾರ್ಮ್ಸ್ ಜಾರಿ ಮಾಡುವುದು ಸೂಕ್ತ. ಸರಕಾರ ಹೆಚ್ಚು ಪ್ರಯತ್ನಪಟ್ಟು ಆದಷ್ಟು ಬೇಗ ಕಾರ್ಯಗತ ಮಾಡುವುದು ಸೂಕ್ತ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಸೋಷಿಯಲ್ ವೆಲ್‌ಫೇರ್ ವಿಚಾರ ಹೇಳುವದಾದರೆ, ಇದು ಅಷ್ಟು ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲವೆಂದು ಹೇಳಬೇಕಾಗಿದೆ. ಈಗತಾನೆ ಸಂಬಂಧಪಟ್ಟ ಮಂತ್ರಿಗಳು ಹೇಳಿದರು. ಹಣ ಸಾಲದು, ಏನೂ ಮಾಡುವುದಕ್ಕಾಗುವುದಿಲ್ಲ, ಸಾಕಷ್ಟು ಹಣ ಇಲ್ಲ ಎಂದು ಹೇಳಿದರು. ಈ ಬಾಬಿಗೆ ಸಾಕಷ್ಟು ಹಣ ಒದಗಿಸಲು ಪ್ರಯತ್ನ ಮಾಡಬೇಕು. ಸೋಷಿಯಲ್ ವೆಲ್‌ಫೇರ್ ಆಕ್ಟಿವಿಟೀಸ್ ಹೆಚ್ಚಾಗಿ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಸೋಷಿಯಲ್ ವೆಲ್‌ಫೇರ್ ಆಕ್ಟಿವಿಟೀಸ್ ವಿಚಾರದಲ್ಲಿ ಒಂದು ನಿದರ್ಶನವನ್ನು ಸಭೆಯ ಗಮನಕ್ಕೂ ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೂ ಈ ಸಂದರ್ಭದಲ್ಲಿ ತರಬೇಕೆಂದಿದ್ದೇನೆ. ಹಿಂದುಳಿದ ಜನಾಂಗಕ್ಕೋಸ್ಕರ ಮಾಡಿರತಕ್ಕಂಥ ಇದೊಂದು ಏರ್ಪಾಡು. ಬೋವಿ ಜನಾಂಗದವರು ಹಿಂದುಳಿದವರು ಆಗಿದ್ದಾರೆ. ಅವರ ಏಳಿಗೆಯ ಬಗ್ಗೆ ನಿಗಾ ವಹಿಸಿ ನೋಡಿಕೊಳ್ಳುತ್ತಿಲ್ಲ ಎಂದು ಹೇಳಬೇಕಾಗಿದೆ. ನಮ್ಮ ತಾಲ್ಲೂಕಿನಲ್ಲಿ ಐದಾರು ವರ್ಷಗಳ ಹಿಂದೆ ಬೋವಿ ಮತ್ತು ಹರಿಜನರ ಸಲುವಾಗಿ ಫಾರೆಸ್ಟ್ ಡಿಪಾರ್ಟ್‌ಮೆಂಟಿನವರು 104 ಎಕರೆ ಜಮೀನು ರಿಲೀಸ್ ಮಾಡಿದರು. ಆದರೆ 4 ಎಕರೆ ಜಮೀನು ಮಾತ್ರ ಹಂಚಿದ್ದಾರೆ. ಗ್ರಾಮದಲ್ಲಿರತಕ್ಕಂಥ ಕೆಲವು ಪುಂಡರು ಅಲ್ಲಿಂದ ಅವರನ್ನು ಓಡಿಸಿ ಅವರ ಮನೆಗೆ ಬೆಂಕಿ ಹಚ್ಚಿ ಲುಕ್ಸಾನ ಮಾಡಿದ್ದಾರೆ ಮತ್ತು ಆ ಜಮೀನನ್ನು ಅಕ್ರಮವಾಗಿ ಪ್ರವೇಶ ಮಾಡಿದ್ದಾರೆ. ಇದರ ಬಗ್ಗೆ ಪೋಲಿಸಿನವರಿಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ದೂರು ಕೊಟ್ಟರೂ ಸಹ ಯಾವ ಕ್ರಮ ತೆಗೆದುಕೊಂಡಿಲ್ಲ. ಅಪೀಲು ಮಾಡಿದರೂ ಸಹ ಡಿವಿಜನಲ್ ಕಮೀಷನರ್ ಅವರ ಆಫೀಸಿನಲ್ಲಿ ಅದನ್ನು ತಡೆಗಟ್ಟುತ್ತಿದ್ದಾರೆ. ಐದಾರು ವರ್ಷಗಳಿಂದ ಯಾವ ತೀರ್ಮಾನವಾಗದೇ ಇರುವದನ್ನು ನೋಡಿದರೆ ಹಿಂದುಳಿದವರ ಬಗ್ಗೆ ಎಷ್ಟರಮಟ್ಟಿಗೆ ಸರಕಾರ ಆಸಕ್ತಿ ವಹಿಸಿದೆ ಎಂಬುದು ವ್ಯಕ್ತವಾಗುತ್ತದೆ.

ಕೊನೆಯದಾಗಿ, ಮಿನರಲ್ ಡೆವಲಪ್‌ಮೆಂಟ್ ವಿಚಾರದಲ್ಲಿ ಒಂದು ಮಾತು ಹೇಳಲು ಬಯಸುತ್ತೇನೆ. ಕೋಲಾರದ ಚಿನ್ನದ ಗಣಿಯನ್ನು ಕೇಂದ್ರ ಸರಕಾರಕ್ಕೆ ವಹಿಸಿಕೊಟ್ಟಿದ್ದೇವೆ. ಇನ್ನೂ ಅನೇಕ

(ಶ್ರೀ ಡಿ. ಪರಮೇಶ್ವರಪ್ಪ)

ಗಣಿಗಳು ನಮ್ಮ ದೇಶದಲ್ಲಿದ್ದಾಗ್ಯೂ ಕೂಡ ಅದರ ಬಗ್ಗೆ ಸರ್ವೆ ಕೆಲಸ ನಡೆದಿಲ್ಲ. ನಮ್ಮ ತಾಲ್ಲೂಕಿನಲ್ಲಿ ಕುದುರೆಕೊಂಡ ಚಿನ್ನದ ಗಣಿಯಿದೆ. ಹಿಂದಕ್ಕೆ ಯಂಗ ಅಂಡ್ ಕಂಪನಿಯು ಒಬ್ಬ ಯೂರೋಪಿಯನ್ ಅಲ್ಲಿ ನೆಲಸಿ, ಸರ್ವೆ ಮಾಡಿ ಹೆಚ್ಚಿನ ಪ್ರಮಾಣದಲ್ಲಿ ಬಂಗಾರ ಪಡೆಯಬಹುದೆಂದು ತೋರಿಸಿ ಕೊಟ್ಟಿದ್ದಾರೆ. ಈ ಬಗ್ಗೆ ನಮ್ಮ ಸರಕಾರ ಕೂಡಲೇ ಸರ್ವೆ ನಡೆಸಿ ಅಲ್ಲಿ ಹೆಚ್ಚಾಗಿ ಬಂಗಾರ ದೊರೆಯುವದರಿಂದ ಗಣಿ ಕೆಲಸ ಪ್ರಾರಂಭಿಸಬೇಕು. ಚಿನ್ನದ ಗಣಿ ಕೆಲಸ ಮಾಡುವ ವಿಚಾರದಲ್ಲಿ ನಮ್ಮ ಸರಕಾರ ಯಾವ ಒಂದು ಕಾರ್ಯಕ್ರಮ ಹಾಕಿಕೊಂಡಿಲ್ಲ. ಒಂದು ಕಾರ್ಯಕ್ರಮ ಹಾಕಿಕೊಂಡು ದೇಶದಲ್ಲಿರತಕ್ಕಂಥ ನಿರುದ್ಯೋಗ ಸಮಸ್ಯೆಯನ್ನು ಪರಿಹಾರ ಮಾಡುವ ಮಾರ್ಗವನ್ನು ಕಲ್ಪಿಸಿಕೊಡಬೇಕೆಂದು ಸರಕಾರಕ್ಕೆ ಸೂಚನೆ ಮಾಡುತ್ತೇನೆ.

ಸರ್ಕಾರ ತೋರಿಸತಕ್ಕಂಥ ತಾರತಮ್ಯದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಸಾಮಾನ್ಯವಾಗಿ education ವಿಚಾರದಲ್ಲಿ ಮಾತನಾಡುತ್ತಾ, ಎಜುಕೇಷನ ಮಂತ್ರಿಗಳು ಹುಡುಗರಿಗೆ ಸ್ಕಾಲರ್‌ಶಿಪ್ ಕೊಡುವುದಕ್ಕೋಸ್ಕರವಾಗಿ ತಾಲ್ಲೂಕುವಾರ್ ಕಮಿಟಿಗಳನ್ನು ಮಾಡಿದ್ದೇವೆಂದು ಹೇಳಿದರು. ಒಂದೊಂದು ಕಮಿಟಿಯಲ್ಲಿ 17-18 ಜನ ಸದಸ್ಯರನ್ನು ಹಾಕಿದ್ದಾರೆ. ಹಾಗೆ ಸದಸ್ಯರನ್ನು ನೇಮಿಸುವಾಗ ಯಾವ principle adopt ಮಾಡಿದ್ದಾರೆಂದು ನೋಡಿದರೆ ವ್ಯಸನವಾಗುತ್ತದೆ. ಎಲ್ಲೆಲ್ಲಿ ಕಾಂಗ್ರೆಸ್ M.L.A.ಗಳು ಇದ್ದಾರೆಯೋ ಅಲ್ಲಿ ಅವರನ್ನು ಕಮಿಟಿಯ ಚೇರ್ಮನ್ನಾಗಿ ಮಾಡಿದ್ದಾರೆ; ಎಲ್ಲಿ non-Congressmen ಇದ್ದಾರೆಯೋ ಅಲ್ಲಿ ಅವರನ್ನೆಲ್ಲಾ ordinary members ಆಗಿ ಮಾಡಿದ್ದಾರೆ. ಇದು ಬಹಳ ವಿಷಾದದ ಸಂಗತಿಯೆಂದು ನಾನು ಈ ಸಂದರ್ಭದಲ್ಲಿ ಸಭೆಯ ಗಮನಕ್ಕೆ ತರುತ್ತೇನೆ. ಯಾವುದಾದರೂ ಒಂದು ಪ್ರಿನ್ಸಿಪಲ್ ಅಡಾಪ್ಟ್ ಮಾಡುವುದಿದ್ದರೆ ಅದನ್ನು ಸಮಂಜಸವಾಗಿ ತಾರತಮ್ಯವಿಲ್ಲದೆ ಅನುಸರಿಸಬೇಕು. ತಾರತಮ್ಯ ದೃಷ್ಟಿಯಿಟ್ಟುಕೊಂಡು ವಿದ್ಯಾ ಇಲಾಖೆಯಲ್ಲಿ ತಾರತಮ್ಯ ತರುವುದು ಬಹಳ ಅವಹೇಳನ ಸಂಗತಿಯಾಗಿದೆ. ಆದ್ದರಿಂದ ಈ ಒಂದು ವಿಚಾರವನ್ನು ಕೂಡ ಸಭೆಯ ಗಮನಕ್ಕೆ ತರುತ್ತಿದ್ದೇನೆ.

ಕೊನೆಯದಾಗಿ Economy Measures and Resources ಎಂಬುದರಲ್ಲಿ 10 ಪರ್ಸೆಂಟ್ ರಿಟ್ರೆಂಚ್ ಮಾಡಿಕೊಳ್ಳುತ್ತಾ ಬರುತ್ತೇವೆಂದು ಹೇಳಿದ್ದಾರೆ. ಈ ಶೇಕಡ 10 ರಷ್ಟು ರಿಟ್ರೆಂಚ್‌ಮೆಂಟ್ ಬಹುಶಃ ಪೀವನ್ಸ್ ವಗೈರೆ ಕೆಳದರ್ಜೆಯಲ್ಲಿ ನಡೆಯುತ್ತದೇನೋ. ದೊಡ್ಡ ದೊಡ್ಡ ಪೋಸ್ಟುಗಳನ್ನು ನಿರ್ಮಿಸುವುದು ಸರ್ಕಾರದ ಒಂದು ನೀತಿಯಾಗಿದೆ. ಈಗ ತಂದಿರತಕ್ಕಂಥ ಪೋಲೀಸ್ ಬಿಲ್ ಮತ್ತು ಲ್ಯಾಂಡ್ ರೆವಿನ್ಯೂ ಕೋಡ್ ಬಿಲ್ ನಾನು ಹೇಳಿದ್ದಕ್ಕೆ ಸಾಕ್ಷಿ. ಇವುಗಳಲ್ಲಿ ಅನೇಕ ಪೋಸ್ಟುಗಳನ್ನು ಕ್ರಿಯೇಟ್ ಮಾಡುವುದಕ್ಕೆ ಪ್ರಾವಿಷನ ಮಾಡಿದ್ದಾರೆ. ಆದ್ದರಿಂದ ಈ ಒಂದು Economy Measures ಜಾರಿಗೆ ಬರದೆ ಬಹಳ ಹಣ ದುರ್ವ್ಯಯವಾಗುತ್ತದೆ. ಸರ್ಕಾರದವರು ತಮ್ಮ ಆಡಳಿತದಲ್ಲಿ Economy Measures ಜಾರಿಗೆ ತಂದು ಆಡಳಿತವನ್ನು ದಕ್ಷತೆಯಿಂದ ನಡೆಸಿಕೊಂಡು ಹೋಗುವುದು ಅತಿ ಮುಖ್ಯವಾದುದು.

ರಾಜ್ಯಪಾಲರ ಭಾಷಣದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಲು ಅವಕಾಶಕೊಟ್ಟಿದ್ದಕ್ಕೋಸ್ಕರ ನಾನು ಸಭಾಪತಿಗಳನ್ನು ವಂದಿಸುತ್ತೇನೆ.

†ಶ್ರೀ ಅಣ್ಣಾರಾವ್ ಗಣಮುಖಿ(ಅಫಜಲ್‌ಪುರ).—ಸಭಾಪತಿಗಳೇ, ನನ್ನ ಮಿತ್ರರಾದ ಶ್ರೀಕೃಷ್ಣ ಅವರು ಮಾತನಾಡದೆ ಹೋಗಿದ್ದರೆ, ನಾನು ಮಾತನಾಡಬೇಕೋ ಇಲ್ಲವೋ ಎನ್ನುವುದನ್ನು ವಿಚಾರ ಮಾಡುತ್ತಿದ್ದೆ. ಆದರೆ ಅವರು ಕೃಷ್ಣಾ ಗೋದಾವರಿ ನೀರಿನ ಹಂಚಿಕೆ ಸಂಬಂಧವಾಗಿ ಆ ಭಾಗದಲ್ಲಿರತಕ್ಕಂಥ ಸದಸ್ಯರೇ ಇದ್ದಾರೆ; ಅವರಿಗೆ ಈ ನೀರು ಬೇಕಾಗಿಲ್ಲ, ಆದ್ದರಿಂದ ಮಾತನಾಡುವುದಿಲ್ಲ ಎಂದು ಊಹೆ ಮಾಡಿಕೊಂಡು ಮಾತನಾಡಿದರು.

ಇದರ ಹಿನ್ನೆಲೆ ಏನಿದೆ? ಕೃಷ್ಣ ಮತ್ತು ಭೀಮ ಇವೆರಡು ಪ್ರಾಜೆಕ್ಟುಗಳಿಗೆ ಒಂದು ದೊಡ್ಡ ಹಿನ್ನೆಲೆ ಇದೆ ಅಂತ ಹೇಳಬಹುದು. ಏಕೆಂದರೆ ಹಿಂದಿನ ಹೈದರಾಬಾದ್ ಸರ್ಕಾರದಲ್ಲಿ ನಾವು ಕನ್ನಡಿಗರು ಬಹಳ ಅಲ್ಪ ಸಂಖ್ಯಾತರಾಗಿದ್ದೆವು. ಆದರೂ ಅಲ್ಲಿ ಪ್ರಶ್ನೋತ್ತರ ಕಾಲದಲ್ಲಿಯಾಗಲಿ, ಅಥವಾ ಭಾಷಣದ ಮೂಲಕವಾಗಿಯಾಗಲಿ ಅಪ್ಪರ್ ಕೃಷ್ಣ ಪ್ರಾಜೆಕ್ಟ್ ಮತ್ತು ಭೀಮ ಪ್ರಾಜೆಕ್ಟ್—ಈ ಎರಡೂ ಪ್ರಾಜೆಕ್ಟ್ ಬಗ್ಗೆ ಒತ್ತಿ ಒತ್ತಿ ಎಲ್ಲ ಸದಸ್ಯರೂ ಹೈದರಾಬಾದ್ ಸರ್ಕಾರದ ಮುಂದೆ ಇಟ್ಟಿದ್ದೇವೆ. ಅಷ್ಟೇ ಅಲ್ಲ. ಬೊಂಬಾಯಿನಲ್ಲಿ ಕೂಡ ಅಲ್ಲಿ ಸ್ನೇಹಿತರುಗಳಿಂದ ಮಲಪ್ರಭಾ ಮತ್ತು Bijapur Lift Irrigation ವಿಷಯವಾಗಿ ಸಾಕಷ್ಟು ಚರ್ಚೆಯಾಗಿರಬೇಕು. ಇಷ್ಟು ಹೇಳಿದ ಮೇಲೆ, ಆನೆಗೆ ಗಂಟೆ ಕಟ್ಟುವ ಅವಶ್ಯಕತೆಯಿಲ್ಲ. ಅಂದರೆ ಇವು ಅಷ್ಟು ದೊಡ್ಡ ಪ್ರಶ್ನೆಯಾದ್ದರಿಂದ ಆನೆಗೆ ಘಂಟೆ ಬೇಕಾಗಿಲ್ಲ. ಈ ಪ್ರಶ್ನೆ ಆ ಕಾಲಕ್ಕೆ ಕೂಡ ಹೈದರಾಬಾದಿನಲ್ಲಿ ಚರ್ಚೆಯಾಯಿತು.

ಆದರೆ ಆಗಿನ ಸರ್ಕಾರ ಈ ಕಡೆಗೆ ವಿಶೇಷ ಗಮನ ಕೊಡಲಿಲ್ಲ. ಆಗಿನ ಹೈದರಾಬಾದ್ ಸರ್ಕಾರವಾಗಲಿ ಅಥವ ಹಿಂದಿನ ಮುಂಬೈ ಸರ್ಕಾರವಾಗಲಿ ಆ ವಿಷಯದ ಕಡೆಗೆ ಅಷ್ಟು ಗಮನ ಕೊಡಲಿಲ್ಲ. ಪ್ಲಾನಿನಲ್ಲಿ ಕೂಡ ಈ ಪ್ರಾಜೆಕ್ಟ್ ವಿಷಯ ಉಲ್ಲೇಖ ಮಾಡಿಲ್ಲ. ಅದರಿಂದಾಗಿ ಈಗ ಒಂದು ತೀವ್ರ ಸಮಸ್ಯೆ ಬಂದು ಒದಗಿದೆ. ನನಗನಿಸುತ್ತದೆ—ಮೈಸೂರಿಗೆ ಕೃಷ್ಣ ಮತ್ತು ಗೋದಾವರಿ ಈ ಎರಡು ನದಿಗಳೂ ಜೀವನಾಡಿಯಂತೆ ಇವೆ. ಒಂದು ವೇಳೆ ಈ ನದಿಗಳ ಮುಖಾಂತರ ಆಗತಕ್ಕಂಥ ಪ್ರಾಜೆಕ್ಟುಗಳು ಆಗದೆ ಹೋದರೆ, ನಮ್ಮ ಕರ್ಣಾಟಕ ಪ್ರಾಣವಿಲ್ಲದ ಪ್ರೇತದಂತೆ ಆಗುತ್ತದೆ. ಅದರಿಂದಾಗಿ 1960 ರಲ್ಲಿ ಕೂಡ ಸೆಂಟ್ರಲ್ ಗವರ್ನಮೆಂಟಿನವರು ಒಂದು ಕಾನ್ಫರೆನ್ಸ್ ಕರೆದಿದ್ದರು. ಆಗ ಆ ಕಾನ್ಫರೆನ್ಸಿನಲ್ಲಿ ಮೈಸೂರಿನ ಯೋಗ್ಯವಾದ, ನ್ಯಾಯವಾದ ಭಾಗವನ್ನು ಮಂಡಿಸಿದ ನಂತರ ಕಾನ್ಫರೆನ್ಸ್ ಸಂಪೂರ್ಣ ಫೇಲ್ಯೂರ್ ಆಯಿತು ಎಂದು ಹೇಳಬಹುದು, ಏಕೆಂದರೆ ಆಂಧ್ರ ಸರ್ಕಾರದವರು ತಮ್ಮ ಜಿದ್ದು ಅಥವ ಈರ್ಷ್ಯೆ ಸಾಧಿಸುವುದಕ್ಕೆ ಪ್ರಯತ್ನ ಮಾಡಿದರು. ಅದರ ಪರಿಣಾಮವಾಗಿ ಈ ಗುಲ್ಹಾಟಿ ಕಮಿಷನ್ ನೇಮಕವಾಯಿತು. ಗುಲ್ಹಾಟಿ ಕಮಿಷನ್ನಿನವರು ಈಗ ತಮ್ಮ ರಿಪೋರ್ಟನ್ನು ಕೇಂದ್ರ ಸರ್ಕಾರಕ್ಕೆ ಒಪ್ಪಿಸಿದ್ದಾರೆ.

ಈಗ ನಮ್ಮ ಎದುರು ಇರುವ ಬಹು ಮುಖ್ಯವಾದ ಪ್ರಶ್ನೆಯೆಂದರೆ, ಈ ನೀರಿನ ಒಂದು ಹಂಚಿಕೆ ಏನಿದೆ, ಅದು ಯೋಗ್ಯವಾಗಿ ಆಗದೆ ಹೋದರೆ ಈ ರಾಜ್ಯಕ್ಕೆ ಬಹಳ ದೊಡ್ಡ ಹಾನಿಯಾಗುತ್ತದೆ. ಅದರಿಂದಾಗಿ ಹಿಂದಿನ ಮಂತ್ರಿ ಮಂಡಲದಲ್ಲಿ ಕೂಡ ಇದು ಬಹಳ ಚರ್ಚೆಯಾಗಿ, ಡ್ಯಾಟಾ ಕಲೆಕ್ಟ್ ಮಾಡಿ ಮೆಮೊರ್ಯಾಂಡಂ ತಯಾರುಮಾಡಿ ಹಂಚಿರುವುದು ತಮಗೆ ಗೊತ್ತಿರುವ ವಿಷಯ. ಅದನ್ನು ನಾನು ಪುನಃ ಹೇಳಬೇಕಾಗಿಲ್ಲ. ಆದರೆ ಗುಲ್ಹಾಟಿ ಕಮಿಷನ್ ರಿಪೋರ್ಟ್ ಬಂದ ನಂತರ ನಮಗೆ ಆಂಧ್ರ ಸರ್ಕಾರದವರು ಈ ಎಮರ್ಜನ್ಸಿಯಲ್ಲಿ ಅದನ್ನು ಶೆಲ್ಫ್ ಮಾಡಿಸಿಬಿಟ್ಟು, ಹೇಗಾದರೂ Nagarjunasagar second phase ಮತ್ತು Srishailam development ಮುಂದುವರಿಸಬೇಕೆಂದು ಪ್ರಯತ್ನ ನಡೆಸಿದ್ದಾರೆ ಮತ್ತು ಇದರಲ್ಲಿ ಕೇಂದ್ರ ಸರ್ಕಾರದ ಮಂತ್ರಿಗಳು ಕೂಡ ಇಲ್ಲಿಯವರೆಗೆ ಬಂದು fact-finding ಆಯಿತು. ನಮ್ಮ ಕೃಷ್ಣ ಬೇಸಿನ್ ಸ್ಕೀಮುಗಳೇನಿವೆ, ಅವುಗಳ ಪ್ರಕಾರ ಈ 43 ಲಕ್ಷ ಎಕರೆ ಭೂಮಿಯನ್ನು ಈ 3–4 ಪ್ರಾಜೆಕ್ಟಿನಲ್ಲಿ ತೆಗೆದುಕೊಂಡರೆ ನಮಗೆ ಆಪ್ಟಾಗಿ ಪ್ರಾಜೆಕ್ಟ್ ಆಗುತ್ತದೆ. ಅದನ್ನು ನಿಲ್ಲಿಸಿ ತಾವು ಆ ನೀರನ್ನು ಹೇಗಾದರೂ ಮಾಡಿ ಪಡೆಯಬೇಕೆಂಬ ಪ್ರಯತ್ನವನ್ನು ಅವರು ಮಾಡುತ್ತಾ ಇದ್ದಾರೆ. ಅಲ್ಲಿಯ ಸರ್ಕಾರವೇ ಅಲ್ಲದೆ, ಅಲ್ಲಿಯ ಪಬ್ಲಿಕ್ ಕೂಡ All-party conference ಕರೆದು, ಕೇಂದ್ರ ಸರ್ಕಾರದ ಮಂತ್ರಿಗಳು ಬಂದರೆ ಅವರ ಹತ್ತಿರ ಒತ್ತಿ ಒತ್ತಿ ಈ ಪ್ರಶ್ನೆಯನ್ನು ಹೇಳುತ್ತಾ ಇದ್ದಾರೆ.

ನನಗೆ ಅನಿಸುತ್ತದೆ ಯಾರಿಗೆ ಆದರೂ ಕೂಡ ಸರಳವಾಗಿ ನೋಡಿದರೆ ಅರ್ಥವಾಗತಕ್ಕ ಪ್ರಶ್ನೆ ಇದ್ದರೂ ಕೂಡ ಇಷ್ಟು ದೊಡ್ಡ ದೊಡ್ಡ ಮಹಾಶಯರು ಈ ವಿಷಯನ್ನು ಮಾತನಾಡುವುದು ಎಂದರೆ ನನಗೆ ಅಷ್ಟು ದೊಡ್ಡದು ಕಾಣಿಸುವುದಿಲ್ಲ. ಈ ಹಂಚಿಕೆಯನ್ನು ಸರಳವಾಗಿ ಕ್ಯಾಚ್‌ಮೆಂಟ್ ಏರಿಯಾ ಎಷ್ಟಿದೆ, ಸಾಗುವಳಿಯಾಗತಕ್ಕ ಜಮೀನು ಎಷ್ಟಿದೆ, ಜನಸಂಖ್ಯೆ ಎಷ್ಟಿದೆ, famine stricken area ಎಷ್ಟಿದೆ ಎಂಬುದನ್ನೆಲ್ಲಾ ನೋಡಿದ ನಂತರ ಇದರಲ್ಲಿ ಪುನಃ ಪರಿಶೀಲನೆ ಮಾಡತಕ್ಕ ಪ್ರಸಂಗವೇ ಇಲ್ಲ. ಅದರಿಂದಾಗಿ ನನಗೆ ಅನಿಸುತ್ತದೆ, ಮೈಸೂರು ಸರ್ಕಾರ ಈಗ ಬಹಳ ಜಾಗರೂಕತೆ ವಹಿಸಬೇಕಾಗಿದೆ. ಆಂಧ್ರದ ಪ್ರತಿನಿಧಿಯಾಗಲೀ, ಯಾರೇ ಅವರ ಕಡೆಯವರಾಗಲೀ ಏನಾದರೂ ಒಂದು ನೆಪ ಮಾಡಿ ಎಂ. ಪಿ. ಅವರನ್ನು ಅವರ ಕಡೆ ಸೇರಿಸಿಕೊಂಡು ಈ ವಿಚಾರ ತೆಗೆದುಕೊಳ್ಳಬೇಕು ಅಥವಾ ಏನಾದರೂ ಅಗ್ರಿಮೆಂಟ್ ಇರಬೇಕೆಂದು ವಿಚಾರ ಮಾಡತಕ್ಕ ಸಂಭವವೇ ಇಲ್ಲ. ಏಕೆಂದರೆ, ನಿಶ್ಚಿತವಾದ ಫ್ಯಾಕ್ಟ್ ಫೈಂಡಿಂಗ್ ಕಮಿಟಿ ಆಗಲೀ ಅಥವಾ ಮೈಸೂರು ಸರ್ಕಾರದ ಮೆಮೋರ್ಯಾಂಡಂನಲ್ಲಾಗಲೀ ಏನು ಹೇಳಿದ್ದಾರೆ ಅದರಲ್ಲಿ ಎಷ್ಟೆಷ್ಟು ಷೇರು ಬರುತ್ತದೆ ಎಂಬ ಪ್ರಶ್ನೆ ಮತ್ತೇ ತಿರುಗಿ ತೆಗೆದುಕೊಂಡು ಏನಾದರೂ ಮಾಡಿ ಸೂಜಿಯಾಗಿ ಹೋಗಿ ದಬ್ಬಣವಾಗಿ ಬರಬೇಕೆಂದು ಪ್ರಯತ್ನ ನಡೆಸಿದ್ದಾರೆ. ನಮ್ಮ ಮೈಸೂರು ಸರ್ಕಾರದವರು ಅವರು ಖಬರ್‌ದಾರ್ ಅಂದಾಗ ಮಾತುಕತೆಯಲ್ಲಿ ಸ್ವಲ್ಪ ತಪ್ಪಿದರೂ, ಸ್ವಲ್ಪ ಹೆಜ್ಜೆ slip ಆದರೂ ಸದ್ಯಕ್ಕಲ್ಲ ಮುಂದೂ ಕೂಡ ಹಾನಿಯಾಗುತ್ತದೆ. ಅದರಿಂದಾಗಿ ನಮಗೆ ಸಿಕ್ಕತಕ್ಕ ನೀರಿಗೂ ಈಗ ಹಾನಿಯನ್ನು ಮಾಡಬಾರದು ಎಂದು ಸರ್ಕಾರದವರಿಗೆ ಕೇಳಿಕೊಳ್ಳುತ್ತೇನೆ. ಅಷ್ಟೇ. ಅಲ್ಲ ನಮಗೆ ಸಿಕ್ಕತಕ್ಕ 1,200 ಟಿ. ಎಂ. ಸಿ. ಎಫ್. ಟಿ. ನೀರನ್ನು ಮೈಸೂರು ಸರ್ಕಾರದವರು 1,000 ಟಿ. ಎಂ. ಸಿ. ಎಫ್. ಟಿ. ಕೊಟ್ಟರೆ ಸಾಕು ಅದು ಮಿನಿಮಂ ಡಿಮಾಂಡು ಎಂದು ಒಪ್ಪಿಕೊಂಡಿದ್ದಾರೆಂದು ವರದಿಯಾಗಿದೆ. ಪೇಪರ್‌ನಲ್ಲಿ ಬರುತ್ತಾ ಇದೆ. ಈ ಪ್ರಕಾರ water down ಮಾಡಬಾರದು ಎಂದು ನನಗೆ ಅನಿಸುತ್ತದೆ. ಏಕೆಂದರೆ ಕೇಂದ್ರದ ಮೇಲೆ ಅಥವಾ ಕೇಂದ್ರ ಸರ್ಕಾರದ ಮಂತ್ರಿಗಳ ಮೇಲೆ ತಮ್ಮ ದೊಡ್ಡ ಪ್ರಭಾವ ಬೀರಿ ಮದರಾಸ್ ಸರ್ಕಾರದವರು ಆಗಲೀ, ಆಂಧ್ರದ ಮಂತ್ರಿಗಳಾಗಲೀ ತಮ್ಮ ಪ್ರಭಾವಕ್ಕೆ ಒಳಪಡಿಸಿಕೊಂಡದ್ದೇ ಆದರೆ, ಸ್ವಲ್ಪ ಹೆಜ್ಜೆ ತಪ್ಪಿದರೆ ಆ ರೀತಿ

(ಶ್ರೀ ಅಣ್ಣಾರಾವ್ ಗಣಮುಖಿ)

ಆಗಬಹುದು. ಈ ಒಂದು ದೊಡ್ಡ ತಪ್ಪಿಗಾಗಿ ಈಗಲ್ಲದೇ ಮುಂದೆ ಬರತಕ್ಕ ಪೀಳಿಗೆಯೂ ಕೂಡ ನಿಮ್ಮನ್ನು ಶಪಿಸಬಹುದು ಎಂದು ಅನಿಸುತ್ತದೆ. ಆ ಕಾರಣದಿಂದ ಬಹಳ ಜಾಗ್ರತೆಯಿಂದ ನಡೆದು ಕೊಳ್ಳಬೇಕು. ಅಷ್ಟೇ ಅಲ್ಲ, ಪೇಪರ್‌ನಲ್ಲಿ ಬಂದಿರುವಂತೆ ಟಿ. ಟಿ. ಕೃಷ್ಣಮಾಚಾರಿಯವರ ಭಾಷಣ ವನ್ನು ಓದಿದ ಮೇಲೆ ನನಗೆ ಏನು ಅನ್ನಿಸುತ್ತದೆ ಎಂದರೆ ಅವರು ಈ ರೀತಿ ಹೇಳಿದ್ದಾರೆ. "The States should not be narrow-minded. If they behave like that, then they will be committing a sin not only against God but also against humanity" ಎಂದರೆ ಇದು ಅವರಿಗೆ ಅನ್ವಯಿಸುತ್ತದೆಯೇ ವಿನಾ ನಮಗೆ ಅನ್ವಯಿಸುವುದಿಲ್ಲ. ಆಂಧ್ರದವರು ಹೇಳುವುದೇನೆಂದರೆ ನಾವು ಎಷ್ಟೋ ಅಕ್ಕಿ ಬೆಳೆದು ಇಡೀ ದೇಶಕ್ಕೆ ಒದಗಿಸುತ್ತೇವೆ ಹಾಗಿರುವಾಗ ನೀರಿಗೇಕೆ ಅಡ್ಡಿ ಮಾಡುತ್ತೀರಿ ಎಂದು ಕೇಳಬಹುದು. ಒಂದು ವೇಳೆ ಅವರು ವಿಶೇಷವಾಗಿ ಹೆಚ್ಚು ವರೆ ಅಕ್ಕಿ ಬೆಳೆದರೂ ಕೂಡ ಭೀಮಾ ಮತ್ತು ಕೃಷ್ಣಾ ತೀರದಲ್ಲಿರತಕ್ಕ ಜನರು ಬಡವರು. ರೊಕ್ಕ ಕೊಟ್ಟು ಅಕ್ಕಿ ಕೊಡಬೇಕೇ ಅಥವಾ ಏನು ಕೊಟ್ಟು ಅಕ್ಕಿ ಕೊಂಡುಕೊಳ್ಳಬೇಕು ? ನಮ್ಮ ಅಂಗಳದಲ್ಲಿ ಹರಿಯುವ ನೀರಿಗೆ ಮತ್ತಿಬ್ಬರು ಬಂದು ಕೈ ಹಚ್ಚಬೇಡಿ ಅಂತ ಅನ್ನುವ ವಾದ ಎಲ್ಲಿಯದು ? ಈಗಾ ಗಲೇ ಅವರಲ್ಲಿ 4% ನಿಂದ 40 ಪರ್ಸೆಂಟಿನವರೆಗೂ ನೀರಾವರಿ ಇದೆ. ನಮ್ಮಲ್ಲಿ 6% ಎಂದರೆ 1ರಿಂದ 7% ಅಂತ ಹೇಳಬೇಕಾಗಿದೆ. ಇಂದು ಯಾವನು ಹಸಿದಿದ್ದಾನೆ ಅವನು ಇನ್ನಷ್ಟು ಉಪವಾಸಕ್ಕೆ ತುತ್ತಾಗುವ ಕಾರ್ಯ ನಡೆದಿದೆ. ಅದನ್ನು ಆದಷ್ಟುಮಟ್ಟಿಗೆ ಪರಿಶೀಲನೆ ಮಾಡಿ ನೀವು ಈ ಕೆಲಸ ವನ್ನು ಉತ್ತಮರೀತಿಯಿಂದ ಮಾಡಬೇಕೆಂದು ಹೇಳಿ ಸರ್ಕಾರದವರಿಗೆ ಸೂಚನೆ ಕೊಡುತ್ತೇನೆ.

ನಮ್ಮ ಬೀದರ್ ಮತ್ತು ರಾಯಚೂರು ಜಿಲ್ಲೆ ಯಾವತ್ತೂ ಬರಗಾಲಕ್ಕೆ ತುತ್ತಾದ ಪ್ರದೇಶ ವಾಗಿದೆ. ಈ ಪ್ರದೇಶಕ್ಕೆ ನೀರನ್ನು ಒದಗಿಸದಿದ್ದರೆ ಅವರ ಗತಿ ಏನಾಗುತ್ತದೆ? 1951ರಲ್ಲಿ ನಮ್ಮನ್ನು ಯಾರೂ ಕೇಳುವವರೇ ಇರಲಿಲ್ಲ. ಆಗ ಒಪ್ಪಂದವಾದಾಗಲೂ ಕೂಡ 1951ನೇ ಇಸವಿ ಯಲ್ಲಿ ಏನು ಅಗ್ರಿಮೆಂಟ್ ಆಗಿದೆಯೋ ಗೊತ್ತಿಲ್ಲ. ಆದರೂ ಒಂದು ಅಗ್ರಿಮೆಂಟಿಗೆ ಇಬ್ಬರು ಪಾರ್ಟಿ ಗಳು ಬೇಕಾಗುತ್ತದೆ. ಆಗ ಸಹಿ ಹಾಕುವವರೇ ಇರಲಿಲ್ಲ. ಅಗ್ರಿಮೆಂಟ್ ಆಯಿತು ಎಂದರೂ ಅದರಲ್ಲಿ ಎಷ್ಟು ತಪ್ಪು ಇದೆ ಎಂಬುದನ್ನು ನಾವು ಇವತ್ತು ಹೇಳಬೇಕಾಗಿದೆ. ಅದರಿಂದಾಗಿ ಕೇಂದ್ರ ಸರ್ಕಾರದವರಿಗೆ ನಾವು ನಮ್ಮ ಮಿನಿಮಂ ಡಿಮ್ಯಾಂಡ್ ಹೇಳಿದ ನಂತರ ಒಂದು ವೇಳೆ ಒಪ್ಪದಿದ್ದರೆ ನಮ್ಮ ಕೇಸನ್ನು ಅಡ್ಜುಡಿಕೇಷನ್‌ಗೆ ಒಯ್ಯಬೇಕು ಎಂದು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ. ಯಾರಾದರೂ ಪ್ರೆಷರ್ ತಂದು ಸ್ವಲ್ಪ ಕಾಂಪ್ರೊಮೈಸ್ ಮಾಡಿಕೊಳ್ಳೋಣ ಎಂದರೆ ಅದಕ್ಕೆ ಒಪ್ಪಿದ ಪಕ್ಷದಲ್ಲಿ ಮುಂದೆ ನಾವು ಈ ಭಾಗದವರನ್ನು ಬರಕ್ಕೆ ತುತ್ತು ಮಾಡಿದಂತಾಗುತ್ತದೆ. ಆ ಕಾರಣದಿಂದ ಈ ದಿವಸ ಸರ್ಕಾರದವರನ್ನು ಬೇಡಿಕೊಳ್ಳುವುದೇನೆಂದರೆ ನಮಗೆ ಬರತಕ್ಕ ನೀರು ಏನಿದೆ ಅದರಲ್ಲಿ ಒಂದು ತೊಟ್ಟಾದರೂ ಕೂಡ ಯಾರಿಗೂ ಕೊಡಬಾರದು. ಇದೇ ವಿಷಯದಲ್ಲಿ ಮದರಾಸ್ ಪಟ್ಟಣಕ್ಕೆ ನೀರು ಒದಗಿಸತಕ್ಕ ಒಂದು ಪ್ರಶ್ನೆಯೂ ಕೂಡ ಇದೆ. ಅದಕ್ಕೆ ಪೆನ್ನಾರ್ ನದಿ ಸಮೀಪವಿದ್ದರೂ ಅದರಿಂದ ತೆಗೆದುಕೊಳ್ಳದೇ ಕೃಷ್ಣಾ ನೀರನ್ನು ಪೆನ್ನಾರಿಗೆ ತೆಗೆದುಕೊಂಡು ಪೆನ್ನಾರ್‌ನಿಂದ ಮದರಾಸಿಗೆ ಒಯ್ಯುವ ಯೋಚನೆ ಮಾಡುತ್ತಾ ಇದ್ದಾರೆ. ಕೃಷ್ಣಾ-ಪೆನ್ನಾರ್ ಪ್ರಾಜೆಕ್ಟ್ ಏನಿದೆ ಅದನ್ನು ಪುನರುಜ್ಜೀವನಗೊಳಿಸುವ ಆಲೋಚನೆಯಲ್ಲಿ ಮದರಾಸ್ ಸರ್ಕಾರ ಇದೆ ಎಂದು ಪೇಪರ್‌ನಲ್ಲಿ ಓದುತ್ತಾ ಇದ್ದೇವೆ. ಒಂದು ವೇಳೆ ಆ ರೀತಿ ಇದ್ದರೆ ನನಗೆ ಅನಿಸುತ್ತದೆ, ನಾವು ಮುಂದೆ ಕುಡಿಯುವ ನೀರಿನ ವಿಷಯದಲ್ಲಿ ಯಾವುದೇ ಮಾಡುವುದಕ್ಕೆ ಹೋದರೂ ಬಹಳ ದೊಡ್ಡ ಹಾನಿಯಾಗುತ್ತದೆ. ಅದ ರಿಂದಾಗಿ ನಾನು ನಮ್ಮ ಸರ್ಕಾರದವರನ್ನು ಕೇಳಿಕೊಳ್ಳುವುದೇನೆಂದರೆ ಬಹಳ ಜಾಗರೂಕರಾಗಿರ ಬೇಕು. ಇದರಲ್ಲಿ ಸ್ವಲ್ಪ slip ಆಯಿತು ಎಂದರೂ ಬಹಳ ದೊಡ್ಡ ಹಾನಿಯಾಗುತ್ತದೆ. ಈಗ ನಾವು ಕೇಳುತ್ತಿರುವ ವಿಷಯ ಏನೆಂದರೆ ನಮ್ಮಲ್ಲಿ ಕೇಂದ್ರ ಸರ್ಕಾರದ ಮಂತ್ರಿಗಳು ಬಂದಿದ್ದಾಗ ಪ್ರೊಸೀ ಡಿಂಗ್ಸ್ ಬರೆದಿದ್ದಾರೆ. ಅದನ್ನು ಕೂಡ ನಮ್ಮ ಕೆಲವು ಆಫೀಸರುಗಳು ತಪ್ಪು ತಪ್ಪಾಗಿ ಬರೆದುಕೊಟ್ಟಿ ದ್ದಾರೆ ಎಂದು ಸುದ್ದಿ ಬಂದಿದೆ. ಅದು ಎಷ್ಟು ಮಟ್ಟಿಗೆ ನಿಜವಿದೆಯೋ ಗೊತ್ತಿಲ್ಲ. ಅದಕ್ಕೇ ಈ ವಿಷಯದಲ್ಲಿ ಬಹಳ ಜಾಗರೂಕತೆಯಿಂದ ಇದ್ದು ನಮ್ಮ ಕಾರ್ಯಕಲಾಪಗಳನ್ನು ನಡೆಸಬೇಕು ಎಂದು ಹೇಳುತ್ತೇನೆ.

ಇನ್ನು ಕೆಲವು ವಿಷಯಗಳನ್ನು ಪ್ರತಿಪಾದಿಸಬೇಕೆಂದು ಇಚ್ಛಿಸಿದ್ದೇನೆ. ನಮ್ಮ ಗುಲ್ಬರ್ಗಾದಲ್ಲಿ ಎಂ. ಎಸ್. ಕೆ. ಟೆಕ್ಸ್‌ಟೈಲ್ ಮಿಲ್ ಅಂತ ಇದೆ. ಆ ಮಿಲ್ಲು ಈಗ ಮೂರು ತಿಂಗಳಾಯಿತು, ಬಂದ್ ಆಗಿದೆ. ದುಡ್ಡು ಕೊಟ್ಟಿದ್ದೀರಿ ಮತ್ತು 4 ಜನ ಸರ್ಕಾರದ ಡೈರೆಕ್ಟರ್ಸ್‌ನ್ನು ಹಾಕಿದ್ದೀರಿ. 25 ಲಕ್ಷರೂಪಾಯಿ ಕೇಳಿದ್ದಕ್ಕೆ 4 ಲಕ್ಷ ರೂಪಾಯಿ ಬಂತು ಎಂದು ಹೇಳುತ್ತಾರೆ. ಈಗ 75 ಲಕ್ಷ ರೂಪಾಯಿ ಆದರೆ ಚೆನ್ನಾಗಿ ನಡೆಯುತ್ತದೆ ಎಂದು ಹೇಳುತ್ತಾರೆ. ಸರ್ಕಾರದವರು ಯಾವುದಾದರೂ

ತೀರ್ಮಾನ ತೆಗೆದುಕೊಂಡು ಅದನ್ನು ಪುನರುಜ್ಜೀವನಗೊಳಿಸಬೇಕು. ದೊಡ್ಡ ಇಂಡಸ್ಟ್ರೀ, ಹಣ ಕೊಡುವುದರಲ್ಲಿ ಸ್ವಲ್ಪ ಹೆಚ್ಚು ಕಡಿಮೆಯಾದರೆ, ತಡವಾದರೆ ತಿಂಗಳಿಗೆ 3 ಲಕ್ಷರೂಪಾಯಿ ಹೋಗುತ್ತದೆ. ಅದರ ಬುಕ್ ವ್ಯಾಲ್ಯು 8 ಲಕ್ಷ ರೂಪಾಯಿ ಇದೆ. ಮಾರ್ಕೆಟ್ ವ್ಯಾಲ್ಯು ಎಷ್ಟಾಗುತ್ತದೆಯೋ ಗೊತ್ತಿಲ್ಲ, ಇಂಥಾ ಹೊಸ ಮಿಲ್ ಹಾಕಬೇಕಾದರೆ $1\frac{1}{2}$—2 ಕೋಟಿರೂಪಾಯಿ ಆಗಬಹುದು ಎಂದು ಹೇಳುತ್ತಾರೆ. ಅದ್ದರಿಂದ ಇದನ್ನು ತೀವ್ರ ಪರಿಶೀಲನೆ ಮಾಡಬೇಕು. 14 ಲಕ್ಷರೂಪಾಯಿ ಇದುವರೆಗೂ ಕೊಟ್ಟಿದ್ದಾರೆ. ಅದರಲ್ಲಿ 4 ಲಕ್ಷ ರೂಪಾಯಿ ಸರ್ಕಾರದ್ದು. 10 ಲಕ್ಷ ರೂಪಾಯಿ ಫೈನಾನ್ಷಿಯಲ್ ಕಾರ್ಪೊರೇಷನವರದು.

ಈ ಹದಿನಾಲ್ಕು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರೂ ಕೂಡ ಅಲ್ಲಿ ಅದರ ಬಾಗಿಲನ್ನು ಇಲ್ಲಿಯವರೆಗೆ ತೆರೆದಿಲ್ಲ, ಅಲ್ಲಿ ಯಾರೊಬ್ಬ ಕೂಲಿಕಾರನೂ ಕೆಲಸಮಾಡುತ್ತಿಲ್ಲ. ಹೀಗೆ ಈ 14 ಲಕ್ಷ ರೂಪಾಯಿ ಕೈಬಿಟ್ಟು ಹೋಗುವುದರ ಜೊತೆಗೆ ಪ್ರತಿ ವರ್ಷವೂ ಸರ್ಕಾರ 3 ಲಕ್ಷ ರೂಪಾಯಿಗಳನ್ನು ಕೊಡಬೇಕಾಗಿ ಬರುತ್ತದೆ. ಈಗಲಾದರೂ ಸರ್ಕಾರದವರು ನೇರವಾಗಿ ಈ ಕಾರ್ಖಾನೆಯನ್ನು ತಾವೇ ತೆಗದುಕೊಂಡು ನಡೆಸುವುದು ಒಳ್ಳೆಯದೆಂದು ಹೇಳುತ್ತೇನೆ. ಇಲ್ಲವಾದರೆ ಈ ದುಡ್ಡೆಲ್ಲ ನಷ್ಟವಾಗಿ ಹೋಗುತ್ತದೆ. ಈ ದಿವಸ ಈ ಕಾರ್ಖಾನೆಯ ಮೇಲೆ ನಿಗಾ ನೋಡಿಕೊಳ್ಳಲು ಅಲ್ಲಿಯ ಡೆಪ್ಯುಟಿ ಕಮಿಷನರನ್ನೋ, ಡಿವಿಜನಲ್ ಕಮಿಷನರನ್ನೋ ನೇಮಕಮಾಡಿರಬಹುದು. ಇದಕ್ಕೆ ಬದಲಾಗಿ ಸರ್ಕಾರ ಒಬ್ಬ ಪಕ್ಕಾ ಅಧಿಕಾರಿಗಳನ್ನು ಪ್ರತ್ಯೇಕವಾಗಿ ಮ್ಯಾನೇಜಿಂಗ್ ಡೈರೆಕ್ಟರೆಂತ ನೇಮಕ ಮಾಡಿದರೆ ಆಗ ಮಿಲ್ಲು ಉದ್ಧಾರವಾಗುವುದು. ಈ ದಿವಸ ಈ ಮಿಲ್ಲಿನಲ್ಲಿ ಕೆಲಸ ನಡೆಯುತ್ತಿಲ್ಲ. ಆದರೂ ಪ್ರತಿ ತಿಂಗಳೂ 3-4 ಸಾವಿರ ಮಿಲ್ ಕೆಲಸಗಾರರಿಗೆ ಸಂಬಳವನ್ನು ಕೊಡಬೇಕಾಗಿರುತ್ತದೆ.

5-30 P.M.

[MR. SPEAKER in the Chair].

ಈ ದಿವಸ ಆ ಪಂಜಾಬ್ ನ್ಯಾಷನಲ್ ಬ್ಯಾಂಕಿನವರ ಡಿಬೆಂಚರ್ಸ್ ಬಾಂಡುಗಳನ್ನೆಲ್ಲ ಕೊಂಡುಕೊಂಡು ಅವುಗಳನ್ನು ಫೈನಾನ್ಷಿಯಲ್ ಕಾರ್ಪೊರೇಷನ್ನಿಗೊಪ್ಪಿಸಬೇಕೆಂದು ತೀರ್ಮಾನವಾಗಿದೆ. ಆದರೆ ಆ ಕಾರ್ಯವಿನ್ನೂ ಆಗಿಲ್ಲ. ಹೀಗೆ ಅಲ್ಲಿ ಕೆಲಸಗಳೆಲ್ಲ ಯಾವುದೂ ನಡೆಯುತ್ತಿಲ್ಲ. ಅದಕ್ಕಾಗಿ ಅಲ್ಲಿಗೆ ಒಬ್ಬ ದಕ್ಷರಾದ ಹಾಗೂ ಚತುರರಾದ ಡೈರೆಕ್ಟರನ್ನು ಹಾಕಬೇಕಾಗಿದೆ. ಹೀಗೇನಾದರೂ ಒಂದು ವ್ಯವಸ್ಥೆ ಮಾಡಿದರೇನೇ ಆ ಲಕ್ಷಾಂತರ ರೂಪಾಯಿಗಳನ್ನು ಹಾಕಿರತಕ್ಕ ಉದ್ಯಮ ಹಾಳಾಗುವುದಕ್ಕೆ ಬದಲಾಗಿ ಮುಂದೆ ನಮಗೆ ಅದರಿಂದ ಸರಿಯಾದ ರಿಟರ್ನ್ ಬರುವ ಹಾಗೆ ಸರ್ಕಾರದವರು ಪ್ರಯತ್ನ ಮಾಡಬೇಕು. ಈಗ ಅಲ್ಲಿಯ ಕೂಲಿಗಾರರಿಗೆಲ್ಲ ಬಹಳ ತೊಂದರೆಯಾಗಿದೆ. ಇನ್ನೂ ಒಂದು ವಿಚಾರವೇನಿದೆ ಎಂದರೆ, ಈಗ ಅಲ್ಲಿರತಕ್ಕ ಅಪರ್ಚೇಜ್ ಪಾಲಿಸಿಯನ್ನೂ ಸಂಪೂರ್ಣವಾಗಿ ಬದಲಾಯಿಸಿದರೆ ಇದರಿಂದ ಒಂದು ಹೆಚ್ಚಿನ ಅನುಕೂಲವಾಗುತ್ತದೆ. ಇಲ್ಲವಾದರೆ ನಾವು ಮುಂದೆ ಆ ಕೂಲಿಗಾರರಿಗೆ ಸಂಬಳ ಕೊಡಲು ತುಂಬ ಅನಾನುಕೂಲವಾಗುತ್ತದೆ. ಆದುದರಿಂದ ಸರ್ಕಾರದವರು ಈ ವಿಚಾರದಲ್ಲಿ ಕೂಡಲೇ ನಿಗಾ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಈ ತಾಲ್ಲೂಕ್ ಬೋರ್ಡ್ ಆಕ್ಟಿಗೆ "If necessary" ಅಮೆಂಡ್‌ಮೆಂಟನ್ನು ತರುತ್ತೇವೆಂದು ಹೇಳಿದ್ದಾರೆ. ಡೆಪ್ಯುಟಿ ಮಿನಿಷ್ಟರಾಗಿರತಕ್ಕ ಶ್ರೀ ಕೊಂಡಜ್ಜಿಬಸಪ್ಪನವರೇನೋ ಒಳ್ಳೆಯ ಕೆಲಸಗಾರರು ಮತ್ತು ದಕ್ಷರು. ಈ ವಿಚಾರದಲ್ಲಿ ಅವರು ಬಹಳ ಮುತವರ್ಜಿಯಿಂದ ಕೆಲಸ ಮಾಡುತ್ತಿದ್ದಾರೆ. ಆದರೆ ಅವರು If necessary, ಅಮೆಂಡ್‌ಮೆಂಟನ್ನು ತರುತ್ತೇವೆಂದು ಏನು ಹೇಳಿದ್ದಾರೆ, ಅವರು ಈ ವಿಚಾರದಲ್ಲಿ ಏನು ಒಂದು ತಮ್ಮ ನೀತಿಯನ್ನು ತೋರಿಸಿದ್ದಾರೆ, ಅದರಿಂದ ಖಂಡಿತ ಏನೂ ಆಗುವುದಿಲ್ಲ. ಫ್ರೇಂವರ್ಕ್ ಅದೇ ಇರುತ್ತದೆ. ಅದಕ್ಕೆ ಏನೋ ಒಂದು ಅಮೆಂಡ್‌ಮೆಂಟನ್ನು ತಂದರೆ ಆಕ್ಟೆಲ್ಲ ನೆಟ್ಟಗಾಯಿತು ಎಂದು ಹೇಳುವುದು ಸರಿಯಾದ್ದಲ್ಲ. ಈ ದಿವಸ ಬೊಂಬಾಯಿನಲ್ಲಿ ಈ ಕಮಿಟಿಗಳಿಗೆಲ್ಲ ನಾನ್‌ಅಫಿಷಿಯಲ್ ಅಧ್ಯಕ್ಷರುಗಳಿದ್ದಾರೆ. ಡಿ. ಸಿ. ಅವರಿಗೆ ಕಾರ್ಯದರ್ಶಿ ನಮ್ಮಲ್ಲಿ ಸರ್ಕಾರಿ ಕೆಲಸದಲ್ಲಿರತಕ್ಕವರೇ ಈ ಸಂಸ್ಥೆಗಳಿಗೆಲ್ಲ ಮುಖ್ಯಸ್ಥರಾಗಿರುತ್ತಾರೆ. ಮೊನ್ನೆ ತಾನೆ ಈ ಸಭೆಯಲ್ಲಿ ಪಾಸಾದ ಆ ಲ್ಯಾಂಡ್ ರೆವಿನ್ಯೂ ಕೋಡಿನಲ್ಲಿ ಡೆಪ್ಯುಟಿ ಕಮಿಷನರಿಗೆ ಪ್ರತಿಯೊಂದು ಬಾಬಿಗೂ ಒಬ್ಬೊಬ್ಬ ಗೆಜೆಟೆಡ್ ಅಧಿಕಾರಿಗಳನ್ನು ಅಸಿಸ್ಟೆಂಟ್ ಆಗಿ ಕೊಟ್ಟಿರತಕ್ಕದ್ದನ್ನು ನೋಡಿದರೆ ಈ ಡೆವಲಪ್‌ಮೆಂಟ್ ಕೆಲಸಕಾರ್ಯಗಳನ್ನೆಲ್ಲ ಈ ಸರ್ಕಾರಿ ಅಧಿಕಾರಗಳ ಮೂಲಕವೇ ಮಾಡಿಸಬೇಕೆಂಬ ಮನೋಭಾವ ಸರ್ಕಾರಕ್ಕಿರುವಂತೆ ಅರ್ಥವಾಗುತ್ತದೆ. ಆದರೆ ಸರ್ಕಾರದವರು ಎಲ್ಲಿಯವರೆಗೆ ಈ ಖಾಸಗೀ ಜನರಿಗೆ-ಸಂಸ್ಥೆಗಳಿಗೆ ಹೆಚ್ಚಿನ ಒಂದು ಅಧಿಕಾರವನ್ನು

(ಶ್ರೀ ಅಣ್ಣಾರಾವ್ ಗಣಮುಖಿ)

ಕೊಡುವುದಿಲ್ಲವೋ ಅಲ್ಲಿಯವರೆಗೂ ಈ ಕೆಲಸಗಳೊಂದೂ ಆಗುವುದಿಲ್ಲ. ಇದೇ ವಿಚಾರವನ್ನು ಮೊನ್ನೆ ತಾನೆ ಕೇಂದ್ರದ ಮಂತ್ರಿಗಳಾದ ಶ್ರೀ ಎಸ್. ಕೆ. ಡೇಯವರೂ ಕೂಡ ಇದನ್ನೇ ಹೇಳಿದ್ದಾರೆ. ಅವರು ನಮ್ಮ ರಾಜ್ಯದಲ್ಲಿ ಕೆಲವು ಭಾಗದಲ್ಲಿ ಸಂಚಾರಮಾಡಿ ಈ ಸ್ಥಳೀಯ ಸಂಸ್ಥೆಗಳೊಂದೂ ಇಲ್ಲಿ ಜೀವಂತವಾಗಿರುವಂತೆ ಕಾಣುವುದಿಲ್ಲ ಎಂತ ಹೇಳಿದ್ದಾರೆ. ಆದಕಾರಣ ಈ ವಿಚಾರಕ್ಕೆ ಸರ್ಕಾರದವರು ಕೂಡಲೆ ಗಮನ ಕೊಡಬೇಕಾಗಿದೆ. ಆದರೆ ಈ ಬಸಪ್ಪ ಸಮಿತಿಯವರು ಎಲ್ಲ ಕಡೆಗಳಲ್ಲೂ ಈಗಿರತಕ್ಕ ಆಕ್ಟಿಗೆ ತಿದ್ದುಪಡಿ ತಂದು ಜನರಿಗೆ ಅನುಕೂಲ ಕಲ್ಪಿಸುವುದಾಗಿ ಹೇಳುತ್ತಿದ್ದಾರೆ. ಆ ರೀತಿ ಮಾಡುವುದಕ್ಕೆ ಬದಲು ಒಂದು ಹೊಸ ಬಿಲ್ಲನ್ನೆ ತರತಕ್ಕದ್ದು ಯೋಗ್ಯವಾಗಿದೆ ಎಂತ ಹೇಳುತ್ತೇನೆ. ಈಗ ಈ ತಾಲ್ಲೂಕ್ ಬೋರ್ಡ್‌ಗಳೂ, ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕಮಿಟಿಗಳೂ, ವಿಲೇಜ್ ಪಂಚಾಯಿತಿ ಆಕ್ಟಿನಲ್ಲಿ ಬರತಕ್ಕ ಅಗ್ರಿಕಲ್‌ಚರಲ್, ಬಾವಿ ಕೆಲಸ, ತಕಾವಿಸಾಲ-ಇತ್ಯಾದಿ ಎಲ್ಲ ವಿಚಾರಗಳಲ್ಲೂ ಸೂಪರ್‌ವೈಸ್ ಮಾಡುತ್ತೇವೆ, ಗೈಡ್ ಮಾಡುತ್ತೇವೆ ಎಂತ ಇಲ್ಲಿ ಬರೆದಿದ್ದಾರೆ. ಇದನ್ನು ನೋಡಿದರೆ ಸರ್ಕಾರ ಎಡಗೈಲಿ ಮಾಡುವ ಕೆಲಸ ಬಲಗೈಗೆ ಗೊತ್ತಿಲ್ಲವೆಂದು ಕಾಣುತ್ತದೆ. ಈ ಬಾಬಿನಲ್ಲಿ ಎಷ್ಟೇ ಸಬ್ ಕಮಿಟಿಗಳನ್ನು ಮಾಡಿದರೂ ಅವುಗಳ ಶಿಫಾರ್ಸನ್ನು ಅಂಗೀಕರಿಸತಕ್ಕ ಅಧಿಕಾರಿ ಒಬ್ಬನೇ. ಹಾಗಿರುವಾಗ ಎಷ್ಟೇ ಸಬ್ ಕಮಿಟಿಗಳನ್ನು ಮಾಡಲಿ ಅವು ಏನು ಕೆಲಸ ಮಾಡಬಲ್ಲವು ? ಅವುಗಳಿಗೆ ಏನು ಅಧಿಕಾರವಿದೆ ? ಮೇಲಿನವರು ಹೇಳಿದ ಕೆಲಸವನ್ನು ಅವು ಮಾಡಬೇಕಾಗಿದೆ. ಹೀಗೆ ಈ ದಿವಸ P. W. D. ಬಾಬಿನಲ್ಲಿ ಯಾವ ಯಾವ ರಸ್ತೆಗಳನ್ನು ಸರ್ಕಾರಕ್ಕೆ ತೆಗೆದುಕೊಳ್ಳಬೇಕು ಎಂಬುದನ್ನು ಎಗ್ಸಿಕ್ಯೂಟೀವ್ ಇಂಜನಿಯರ್ ಪ್ಲಾನನ್ನು ತಯಾರಿಸ ಬೇಕಾಗಿದೆ. ಅಂದಮೇಲೆ ಡಿಸ್ಟ್ರಿಕ್ಟ್ ಡೆವಲಪ್ ಮೆಂಟ್ ಬೋರ್ಡ್ ಏನು ಕೆಲಸ ಮಾಡಬೇಕು ? ನಾವೂ ಎಷ್ಟೇ ತತ್ವ ಹೇಳಲಿ, ನಾವು ಎಲ್ಲಿಯವರೆಗೆ ಈ ಸಬ್ ಕಮಿಟಿಗಳಿಗೆ ಸಾಕಷ್ಟು ಅಧಿಕಾರವನ್ನು ಕೊಡುವುದಿಲ್ಲವೋ ಅಲ್ಲಿಯವರೆಗೆ ಈ ಕೆಲಸಗಳು ಸುಸೂತ್ರವಾಗಿ ಆಗುವುದಿಲ್ಲ. ಈ ಸಬ್ ಕಮಿಟಿಗಳಿಗೆ ಆರಿಯಲ್ ಪವರ್ ಏನಿದೆ ಅದನ್ನು ಕೊಟ್ಟಿದ್ದೇನೆ. ಈ ಅಧಿಕಾರವಿಕೇಂದ್ರೀಕರಣವಾಯಿತು, ಹೇಗೆ ಮಾಡಬೇಕು ಎಂತ ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

Mr. SPEAKER.—Now, I find that there are a large number of members who desire to participate. I agree with them. The Assembly will meet tomorrow at 8-30 A. M. and after the question hour, the replies will begin.

Sri S. NIJALINGAPPA (Chief Minister).—Sir, I want to suggest one thing. 8-30 is found to be a little inconvenient by several members and they find it difficult to come at that time. So, we can meet at 9 A. M.

Sri S. M. KRISHNA (Maddur).—Sir, we can as well meet at 1 P. M. We shall have the usual Question Hour and at 2, the Ministers can reply to the debate ; the Budget could be presented at 4 P. M.

Sri S. NIJALINGAPPA.—I think there will be no other speeches by the Members and that time would be reserved for the replies of Minister. After Question Hour, in the other House, I will come here at 3 P. M. and will reply. These matters will come up again twice over and therefore, I will reply to the entire debate. I will be here at 3 and from 3 to 4, it would be for reply to the debate. I think, this is all right.

Mr. SPEAKER.—There will be no Teabreak tomorrow.

Sri S. NIJALINGAPPA.—It is all right, Sir.

Mr. SPEAKER.—So, after the Question Hour, reply to the debate will go on till 4 o'clock tomorrow.

† ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ಅಧ್ಯಕ್ಷರೇ, ಈ ಸಾರಿ ರಾಜ್ಯಪಾಲರು ದಯಪಾಲಿಸಿರತಕ್ಕ ಸಂದೇಶವನ್ನು ನಾವು ನೋಡಿದರೆ ಅದು ನಿರ್ವೀರ್ಯವಾಗಿದೆ. ರಾಜ್ಯಪಾಲರ ಭಾಷಣದ ಮೇಲೆ ಬಹಳ ಕಾಲ ಚರ್ಚೆಯಾಗಿದೆ. ಇದರಲ್ಲಿ ಅವರು ಬಹಳ ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ. ನಾನು ನೋಡಿದಂತೆ ಸುಮಾರು ಐದಾರು ವರ್ಷಗಳಿಂದ ರಾಜ್ಯಪಾಲರೂ ಕೂಡ ಬಲ

ವಂತಕ್ಕೋ ಏನೋ ಇಲ್ಲ ಒಂದು ಘಂಟೆ ಕಾಲ ಭಾಷಣ ಮಾಡಬೇಕು ಎಂದು ನಮ್ಮ ಹಿಂದಿನ ಪ್ರತೀತಿಯ ಪ್ರಕಾರ, duty ಪ್ರಕಾರ ಮಾಡುತ್ತಾರೆ. ನಾನು ಏನು ಹೇಳುತ್ತಿದ್ದೇನೆ, ಏತಕ್ಕೋಸ್ಕರ ಹೇಳುತ್ತಿದ್ದೇನೆ, ಇದರಿಂದ ಯಾರಿಗಾದರೂ ಉಪಯೋಗವಾಗುತ್ತದೆಯೇ, ದೇಶದ ಜನಕ್ಕೆ ಉಪಯೋಗವಾಗುತ್ತದೆಯೇ ಎಂದು ಸ್ವಲ್ಪ ಯೋಚನೆಮಾಡಿ ಅವರ ಹಿಂದಿನ ಭಾಷಣಗಳ ಪ್ರತಿಗಳನ್ನು ತೆಗೆದು ಓದಿದ್ದರೆ ನಿಜವಾಗಿಯೂ ಈ ಸಾರಿ ಈ ತರಹ ಭಾಷಣವನ್ನು ಅವರು ಮಾಡುತ್ತಿರಲಿಲ್ಲವೆಂದು ನಾನು ಭಾವಿಸಬೇಕಾಗಿದೆ.

ಈ ಸಂದರ್ಭದಲ್ಲಿ ಅವರು ತುರ್ತು ಪರಿಸ್ಥಿತಿಯ ವಿಷಯವನ್ನು ಹೆಚ್ಚಾಗಿ ಒತ್ತಿ ಹೇಳಿದ್ದಾರೆ. ನಾವೆಲ್ಲ ಒಂದಾಗಿರಬೇಕು, ಈಗಿನ ಪರಿಸ್ಥಿತಿಯಿಂದ ದೇಶಕ್ಕೆ ವಿಪತ್ತು ಒದಗಿದೆ ಎಂದು ಹೇಳಿದ್ದಾರೆ. ದೇಶದ ಜನರೆಲ್ಲ ಈಗಿನ ಪರಿಸ್ಥಿತಿಗೆ ಹೊಂದಿಕೊಂಡು ಒಂದಾಗಿ ನಿಲ್ಲಬೇಕು ಎಂದು ಬಹಳ ಜನ ಪ್ರೋತ್ಸಾಹ ಕೊಟ್ಟಿದ್ದಾರೆ. ಆದರೆ ಸರ್ಕಾರ ಅಥವಾ ಆಡಳಿತ ಪಕ್ಷ ಇದಕ್ಕೆ ಎಷ್ಟರಮಟ್ಟಿಗೆ ಗಮನ ಕೊಟ್ಟಿದೆ ಎಂದು ನಾವು ಯೋಚನೆ ಮಾಡುವುದಾದರೆ ಕೆಲವೇ sheet of papers, ಕೆಲವು ಗುಂಡು ಸೂಜಿಗಳು ಮತ್ತು ಹಳೆಯ ಕಾಗದಗಳನ್ನು ಬಳಸುವುದು ಇಷ್ಟನ್ನು ಬಿಟ್ಟರೆ ಇನ್ನೇನೂ ಹೆಚ್ಚಿಗೆ ಕಾಣಲಿಲ್ಲವೆಂದು ಹೇಳಬಹುದು. ಮಿತವ್ಯಯವಾಗುವಂಥ ಅನೇಕ ಬಾಬುಗಳು ತಮ್ಮ ಕಣ್ಣಿದುರಿಗೆ ಕಂಡರೂ ಕೂಡ ಅವುಗಳಲ್ಲಿ ಉಳಿತಾಯ ಮಾಡುವುದಕ್ಕೆ ಯಾರೂ ಸಹ ಇವೊತ್ತಿನವರೆಗೂ ಗಮನ ಕೊಟ್ಟಿಲ್ಲ. ಆದರೆ ಅನೇಕ ಹುದ್ದೆಗಳನ್ನು ಹೊಸದಾಗಿ ನಿರ್ಮಿಸುವುದಕ್ಕೆ ಕೂಡ ಹೊರಟಿದ್ದಾರೆ. ನಿಜವಾಗಿಯೂ ನಾವು ಹೇಳುತ್ತಿರುವ ವಿಷಯ ಕಾರ್ಯಗತವಾಗಿ ದೇಶಕ್ಕೆ ಒಳ್ಳೆಯದಾಗಬೇಕಾದರೆ ನಾವು ಮಾದರಿಯಾಗಿರಬೇಕು ಎಂದು ನಾನು ಸರ್ಕಾರದಲ್ಲಿ ಸವಿನಯವಾಗಿ ಪ್ರಾರ್ಥಿಸುತ್ತೇನೆ. ಅನೇಕ ಬಾಬುಗಳನ್ನು ಮುಂದೆ ಹೇಳುತ್ತೇನೆ. ಅವುಗಳನ್ನು ದಯವಿಟ್ಟು ಸರ್ಕಾರದವರು ಸ್ವಲ್ಪ ಯೋಚನೆ ಮಾಡಬೇಕು.

Special Darkhast Assistant Commissioner ಇವರ ಕೆಲಸ ಮುಗಿದುಹೋಗಿ ಸುಮಾರು ನಾಲ್ಕೈದು ತಿಂಗಳು ಆಯಿತು. ಇವರನ್ನು ಯಾವ ಊರಿಗೆ ಹಾಕಿದ್ದಾರೆ, ಇವರು ಎಲ್ಲಿಗೆ ಹೋಗಬೇಕು ಎಂದು ತಿಳಿಸಿಲ್ಲ. ಅವರು ಅಲ್ಲಿಯೇ ಸಂಬಳ ತೆಗೆದುಕೊಳ್ಳುತ್ತಿದ್ದಾರೆ.

In am Abolition Tahsildar, Tiptur, ಇವರ ಕೆಲಸ ಮುಗಿದು ಹೋಗಿದ್ದು ಇವರೂ ಸಂಬಳ ತೆಗೆದುಕೊಳ್ಳುತ್ತಿದ್ದಾರೆ. ಇವರಿಗೆ ಕೂಡ ಏನೂ ಕೆಲಸವಿಲ್ಲ.

ಅರಣ್ಯ ಇಲಾಖೆಗೆ ಸಂಬಂಧಪಟ್ಟಂತೆ ಚಿಕ್ಕಮಗಳೂರು ಜಿಲ್ಲೆಯಲ್ಲಿ Forest range officers ನಾಲ್ಕೈದು ಜನ ಎಲ್ಲಿಗೆ ಹೋಗಬೇಕು ಎಂದು ನಿರ್ದಿಷ್ಟವಾದ ವ್ಯವಸ್ಥೆ ಇಲ್ಲದೆ ಆಫೀಸಿನಲ್ಲಿದ್ದಾರೆ. ದಯವಿಟ್ಟು ಇದನ್ನು ನೋಡಬೇಕು.

ಬೆಟರ್‌ಮೆಂಟ್ ಲೆವಿ ಹಾಕಬೇಕೆಂದು ಅಸಿಸ್ಟೆಂಟ್ ಕಮಿಷನರ್‌ಗಳನ್ನು ಕಳಿಸಿ ಒಂದೂವರೆ ವರ್ಷವಾಯಿತು. ಮೂರು ಕಾಸಿನ ಕೆಲಸವಿಲ್ಲದೆ ಇದ್ದು ಅವರನ್ನು ಈಗ ಬೇರೆ ಕಡೆಗೆ ನೇಮಕ ಮಾಡುವುದಕ್ಕೆ ಶುರು ಮಾಡಿದ್ದಾರೆ.

ಮೈಸೂರು ದೇಶದಲ್ಲಿ 32 ಕಡೆ A. E. O. ಆಫೀಸ್‌ಗಳನ್ನು ತೆರೆಯಲು ಮಂಜೂರ್ಮಾಡಿ 18 ಕಡೆ ಆಫೀಸ್‌ಗಳನ್ನು ತೆರೆದಿರುತ್ತಾರೆ. ಇವರಿಗೂ ಮೂರು ಕಾಸಿನ ಕೆಲಸವಿಲ್ಲ. ಇನ್ನುಳಿದ ಕಡೆ ಆಫೀಸುಗಳೇ ಇಲ್ಲ. ಅವರು D. E. O. ಆಫೀಸಿಗೆ ಬರುತ್ತಿದ್ದಾರೆ. ತಿಂಗಳಿಗೆ 1,750 ರೂಪಾಯಿ ಪ್ರಕಾರ ಸಿಬ್ಬಂದಿ ಖರ್ಚು ಇದೆ. ದಯವಿಟ್ಟು ಇವನ್ನೆಲ್ಲ ನೋಡಿ ಸರಿಯಾದ ವ್ಯವಸ್ಥೆ ಮಾಡುತ್ತಾರೆಂದು ನಾನು ನಂಬಿದ್ದೇನೆ.

ಈಗಿನ ತುರ್ತು ಪರಿಸ್ಥಿತಿಯಲ್ಲಿ ಕೂಡ ರೆವಿನ್ಯೂ ಮಂತ್ರಿಗಳು ಈ ಸಭೆಯ ಮುಂದೆ ತಂದಿರುವ ಮಸೂದೆಯಲ್ಲಿ Additional Tahsildar, Additional Deputy Commissioner ಹೀಗೆ ನೇಮಕ ಮಾಡಬೇಕೆಂದು ತಿಳಿಸಿದ್ದಾರೆ. ಇವರೇನಾದರೂ ಅಧಿಕಾರಿಗಳು ಎಲ್ಲಿದ್ದಾರೆ, ಏನು ಕೆಲಸ ಮಾಡುತ್ತಾರೆ, ಏತಕ್ಕೋಸ್ಕರ ನೇಮಿಸಿದ್ದೇವೆ ಎಂದು ಕಣ್ಣುಬಿಟ್ಟು ನೋಡಿದರೆ ಅಂಥ ಮಸೂದೆಯನ್ನು ನಮ್ಮ ಮುಂದೆ ತಂದು ಈ ಮಹಾಸಭೆಯ ಕಾಲವನ್ನು ಅಪಹರಣ ಮಾಡುತ್ತಿರಲಿಲ್ಲವೆಂದು ನಾನು ಭಾವಿಸುತ್ತೇನೆ.

ನೀರಾವರಿ ವಿಷಯವನ್ನು ತೆಗೆದುಕೊಂಡರೆ ಈಗಿನ ನಮ್ಮ ಮುಖ್ಯ ಮಂತ್ರಿಗಳು ಹಿಂದೆ ಒಂದು ನಿರ್ಣಯದಮೇಲೆ ಮಾತನಾಡುತ್ತ—ಆಗ ಅವರು ಮುಖ್ಯ ಮಂತ್ರಿಗಳಾಗಿರಲಿಲ್ಲ—ಕೃಷ್ಣ ಗೋದಾವರಿ ನದಿಗಳಿಂದ ನಮ್ಮ ಹಕ್ಕಿನ ಪಾಲನ್ನು ನಾವು ಪಡೆಯಬೇಕು. ಕೆಲವು ಕಡೆ ನೀರಿಗೆ ಬಹಳ ಕಷ್ಟವಿದೆ. ಎಗದು ಕೊಡ ನೀರನ್ನು ತಂದು ಸ್ನಾನಮಾಡಿ, ಅದೇ ನೀರನ್ನು ಉಪಯೋಗಿಸಿ ಬಟ್ಟೆ ಒಗೆಯುತ್ತಾರೆಂದು ಬಹಳ ಸಂಕಟದಿಂದ ನೊಂದು ಹೇಳಿದರು. ಅಲ್ಲಿಯ ಜನರಿಗೆ ಆದಷ್ಟು ಜಾಗ್ರತೆ ನೀರನ್ನೊದಗಿಸಬೇಕು. ದೇಶದ ಎಲ್ಲ ಜನರಿಗೂ ಒಳ್ಳೆಯದಾಗಲಿ, ಎಲ್ಲರೂ ಸೌಖ್ಯದಿಂದ ಇರಲ

(ಶ್ರೀ ಕೆ. ಪಿ. ರೇವಣ್ಣಸಿದ್ಧಪ್ಪ)

ಎನ್ನುವುದೊಂದೇ ದೃಷ್ಟಿ. ಕೃಷ್ಣ ಗೋದಾವರಿ ನೀರು ಬರುತ್ತದೆ, ಮಂಗಳೂರು ಬಂದರು ಆಗುತ್ತದೆ ಎಂದು ಹೇಳುತ್ತಿದ್ದಾರೆಯೇ ಹೊರತು ಇದುವರೆಗೂ ಏನೂ ಆಗಿಲ್ಲ, ಹತ್ತಿಪ್ಪತ್ತು ವರ್ಷಗಳಿಂದಲೂ ಕೂಡ ನಮ್ಮಲ್ಲಿ ಏನೇನೂ ಆಗಿಲ್ಲ. ಒಂದೇ ಸಮನಾಗಿ ನಮ್ಮಲ್ಲಿ ಆಗಬೇಕಾದ ಕೆಲಸಗಳ ವಿಷಯದಲ್ಲಿ ಅನೇಕ ಪ್ಲಾಟ್‌ಫಾರಂಗಳ ಮೇಲಿನಿಂದ ಹೇಳುತ್ತಿದ್ದಾರೆಯೇ ವಿನಾ ಯಾವುದೂ ಕಾರ್ಯಗತವಾಗಲಿಲ್ಲ. ಏನಾದರೂ ಒಂದು ಹೇಳಿಕೆಯನ್ನು ಕೊಡಬೇಕಾದರೆ ಮುಂದೆ ಈ ರೀತಿ ಮಾಡುತ್ತೇವೆಂದು ಹೇಳಬೇಕಾದರೆ, ಒಂದೆರಡು ವರ್ಷಕಾಲ ಹೆಚ್ಚು ಕಡಮೆಯಾದರೂ ಚಿಂತೆ ಇಲ್ಲ, ಆ ಕೆಲಸವಾಗಬೇಕು. ಹಾಗಿಲ್ಲದೆ ಹತ್ತಿಪ್ಪತ್ತು ವರ್ಷವಾದರೂ ಕೆಲಸವಾಗದೆ ಇದ್ದರೆ ಅಂಥ ಭಾಷಣಗಳನ್ನು ಕೇಳುವುದಕ್ಕಿಂತ ಸುಮ್ಮನೆ ಇರುವುದು ಮೇಲು. ಇನ್ನು ಮುಂದೆಯಾದರೂ ಆದಷ್ಟು ದಿಟ್ಟಹೆಜ್ಜೆ ಇಡಬೇಕು. ಆಂಧ್ರದವರು ನಾಗಾರ್ಜುನಸಾಗರವನ್ನು ಕಟ್ಟಿಕೊಳ್ಳಲಿ, ಮದ್ರಾಸ್‌ನವರು ನೀರನ್ನು ಉಪಯೋಗಿಸಿಕೊಳ್ಳಲಿ ಎಂದು ಕುಳಿತುಕೊಂಡರೆ, ನಮ್ಮ ಯೋಜನೆಗಳನ್ನು ಕಾರ್ಯಗತ ಮಾಡುವುದಕ್ಕೆ ಸಾಧ್ಯವಿಲ್ಲ. ಇಂಡಿಯಾ ದೇಶವೆಲ್ಲ ಒಂದೇ, ನಾವೆಲ್ಲ ಒಂದೇ ದೇಶದಲ್ಲಿ ಎಲ್ಲರೂ ಒಂದೇ ಎಂದು ಹೇಳುವಾಗ ಕೋಟ್ಯಂತರ ರೂಪಾಯಿ ಖರ್ಚುಮಾಡಿ ನಮಗೆ ನೀರು ಇಲ್ಲದೆ ಹೋದರೆ ನಾಳೆಯ ದಿವಸ ನಮ್ಮ ರಾಜ್ಯಕ್ಕೆ ನಷ್ಟವಲ್ಲವೆ ? ಕೇಂದ್ರದಲ್ಲಿ ನಮ್ಮ ಪ್ರಭಾವವನ್ನು ಸರಿಯಾಗಿ ಬೀರಿ ನಮ್ಮ ಪ್ರಾಜೆಕ್ಟುಗಳನ್ನು ತೆಗೆದುಕೊಂಡು ಪೂರ್ತಿ ಮಾಡುವುದಕ್ಕೆ priority ಕೊಡಬೇಕು. ನಮ್ಮ ಸ್ಥಿತಿ ಹುಟ್ಟುವವರಿಗೆಲ್ಲ ಮುಂದು, ಬೆಳೆಯುವವರಿಗೆಲ್ಲ ಹಿಂದು ಎಂದಾಗಬಾರದು. ಹಿಂದೆ ನಮ್ಮ ಮೈಸೂರು "ಮಾದರಿ ಮೈಸೂರು" ಎಂಬ ಹೆಸರನ್ನು ಗಳಿಸಿ ನೀರಾವರಿ ಮತ್ತು ವಿದ್ಯುತ್ತಿನ ಉತ್ಪಾದನೆಯಲ್ಲಿ ಮತ್ತು ಇತರ ವಿಷಯಗಳಲ್ಲಿ ಎಲ್ಲ ಭಾಗಗಳಿಗಿಂತಲೂ ಬಹಳ ಮುಂದೆ ಇತ್ತು. ಇವೊತ್ತು ನೋಡಿದರೆ ಆಂಧ್ರ, ಮದ್ರಾಸ್ ಮೊದಲಾದ ಎಲ್ಲ ಭಾಗಗಳಿಗಿಂತಲೂ ಬಹಳ ಹಿಂದೆ ಇದ್ದೇವೆ. ಈ ಬಗ್ಗೆ ನಾನು ಹೆಚ್ಚು ಹೇಳಬೇಕಾಗಿಲ್ಲ. ಭಾಷಣ ಮಾಡಬೇಕು ಎಂದು ನಾನು ಮಾತನಾಡುವುದಿಲ್ಲ. ಹೀಗಿರುವಾಗ ನಮ್ಮ ಸರ್ವಶಕ್ತಿಯನ್ನೂ ಉಪಯೋಗಿಸಿ ಕೇಂದ್ರದಲ್ಲಿ ನಮ್ಮ ಪ್ರಭಾವವನ್ನು ಹೆಚ್ಚು ಮಾಡಿಕೊಳ್ಳಬೇಕು. ಸಣ್ಣ ಸಣ್ಣ ಭಿನ್ನಾಭಿಪ್ರಾಯಗಳನ್ನೂ, ರಾಜಕೀಯವನ್ನೂ ಪ್ರಬಲಮಾಡಿಕೊಂಡು ನಮ್ಮ ಪ್ರಭಾವವನ್ನು ಕಡಮೆ ಮಾಡಿಕೊಳ್ಳಬಾರದೆಂದು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ತುರ್ತು ಪರಿಸ್ಥಿತಿ ದೇಶದಲ್ಲಿ ಉಂಟಾಗಿದೆ. ಈ ತುರ್ತು ಪರಿಸ್ಥಿತಿ ಯಾರಿಗೆ ಬಂತು ಎಂದರೆ ಸಾಮಾನ್ಯ ರೈತನಿಗೆ ಮತ್ತು ಬಡವನಿಗೆ ಮಾತ್ರ. ನಮ್ಮ ದೇಶದಲ್ಲಿರುವ ಶ್ರೀಮಂತರಿಗೆ ಆ ಪರಿಸ್ಥಿತಿ ಬಂದಿದೆಯೇ ಎಂದರೆ ಖಂಡಿತವಾಗಿಯೂ ಇಲ್ಲ. ರಕ್ಷಣಾನಿಧಿಗೆ ಹಣವನ್ನು ವಸೂಲ್ಮಾಡುವಾಗ ಕಡ್ಡಾಯವಾಗಿ, ಪೋಲೀಸಿನವರು ಬಂದೂಕನ್ನು ಹಿಡಿದುಕೊಂಡು ಹೆದರಿಸಿ ವಸೂಲ್ಮಾಡಿದ್ದಾರೆಂದು ಹೇಳುವುದಿಲ್ಲ. ರೆವಿನ್ಯೂ ಇನ್ಸ್‌ಪೆಕ್ಟರುಗಳು, ತಹಸೀಲ್ದಾರರು ಹೆದರಿಕೊಳ್ಳುವ ಜನರ ಹತ್ತಿರ ದುಡ್ಡನ್ನು ವಸೂಲ್ಮಾಡಿದ್ದಾರೆಯೇ ವಿನಾ ದೊಡ್ಡ ದೊಡ್ಡ ಬಂಗಲೆ ಕಟ್ಟಿರುವ ಬೇಕಾದಷ್ಟು ಲೇವಾದೇವಿ ಮಾಡತಕ್ಕವರಿಂದ ಏನೂ ವಸೂಲ್ಮಾಡಿಲ್ಲವೆಂದು ನಾನು ಹೇಳಬೇಕಾಗಿದೆ. ಇಂಥವರು ಯಾರಾದರೂ 301 ರೂಪಾಯಿಗಳನ್ನು ಕೊಟ್ಟರೆ, ಶ್ರೀಮಾನ್ ಇಂಥವರು ಮಾನ್ಯ ಮಂತ್ರಿಗಳಿಗೆ 301 ರೂಪಾಯಿಗಳನ್ನು ಅರ್ಪಿಸಿದರು ಎಂದು ಪತ್ರಿಕೆಗಳಲ್ಲಿ ಬರುತ್ತದೆ. ಅದೇ ರೈತರು ಅಥವಾ ಸಾಧಾರಣ ಜನರು ಒಂದೆರಡು ಸಾವಿರ ರೂಪಾಯಿಗಳನ್ನು ಕೊಟ್ಟರೂ ಅದರ ಬಗ್ಗೆ ಏನೂ ಬರುವುದಿಲ್ಲ. ಮಹಿಳೆಯರು ಬಂಗಾರವನ್ನು ರಕ್ಷಣಾನಿಧಿಗೆ ತಂದು ಒಪ್ಪಿಸಿದರು ಎಂದು ಪತ್ರಿಕೆಗಳಲ್ಲಿ ಬರುತ್ತದೆ. ಆ ಬಂಗಾರ ಎಷ್ಟು ರೂಪಾಯಿ ಬಾಳುತ್ತದೆ, ಎನ್ನುವ ತಾರತಮ್ಯವಾದರೂ ಬೇಡವೇ ? Development surcharge, ಕಂದಾಯ ಮತ್ತು ಇದರ ಜೊತೆಗೆ war tax ಇವೆಲ್ಲವನ್ನೂ ಕೊಡತಕ್ಕ ರೈತನಬಗ್ಗೆ ಅಭಿಮಾನ ಬೇಡವೇ ? ಬತ್ತ, ರಾಗಿ, ಹುರುಳಿ ಇಂಥ ಧಾನ್ಯಗಳ ಧಾರಣೆಯೂ ಕಡಮೆಯಾಗಿದೆ. ಇಂಥ ಬಡರೈತನಿಗೆ ತುರ್ತು ಪರಿಸ್ಥಿತಿ ಅನ್ವಯಿಸುತ್ತದೆ. ದೊಡ್ಡ ದೊಡ್ಡ ಶ್ರೀಮಂತರಿಗೆ, ಶ್ರೀಮಂತವರ್ಗಕ್ಕೆ ಏನಾದರೂ ಈ ತುರ್ತು ಪರಿಸ್ಥಿತಿ ಬಂದಿದೆಯೇ ಎನ್ನುವುದನ್ನು ಸರ್ಕಾರ ಮನಗಾಣಬೇಕು.

ತುರ್ತಿನ ಪರಿಸ್ಥಿತಿ ಬಡವರಿಗೊಬ್ಬರಿಗೇ ಅಲ್ಲ, ಶ್ರೀಮಂತರಿಗೂ ಬಂದಿದೆ. ತುರ್ತಿನ ಪರಿಸ್ಥಿತಿಗೆಂದು ಯಾರು ದೊಡ್ಡ ಶ್ರೀಮಂತರಾಗಿದ್ದಾರೋ ಅಂತಹವರಲ್ಲಿರತಕ್ಕ ಹಣವನ್ನು ಕಡ್ಡಾಯವಾದ ರೀತಿಯಲ್ಲಿ ವಸೂಲು ಮಾಡುವ ದಾರಿಯನ್ನು ತೋರಬೇಕು. ಸಾಮಾನ್ಯವಾಗಿ ಬಡ ಬಗ್ಗರಾಗಿರುವವರಿಂದ ಒತ್ತಾಯದಿಂದ ಹಣ ತೆಗೆದುಕೊಳ್ಳುವ ಪದ್ಧತಿಯನ್ನು ಬಿಡಬೇಕೆಂದು ಇಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ರೈತರಿಗಾಗಿ ನೀರಾವರಿ ಕೆಲಸ ಮಾಡಲು ಬಾವಿಗಳನ್ನು ತೋಡಿಸಿಕೊಳ್ಳುವುದಕ್ಕಾಗಿ ಹಿಂದೆ ಗ್ರಾಂಟುಗಳನ್ನು ಕೊಡುತ್ತಿದ್ದ ಪದ್ಧತಿಯನ್ನು ಈಗ ಐದಾರು ತಿಂಗಳಿಂದೀಚೆಗೆ ಸಡಿಲ ಗೊಳಿಸಿದ್ದಾರೆ ಎಂದು ರೇಡಿಯೋದಲ್ಲಿ ವಾರ್ತಾ ಪ್ರಚಾರದಲ್ಲಿ ಭಾಷಣಗಳನ್ನು ಕೇಳುತ್ತಿದ್ದೇವೆ ಹಾಗೂ ಪೇಪರುಗಳಲ್ಲಿಯೂ ನೋಡಿದೆವು. ಇದನ್ನು ಸರಿಯಾಗಿ ತಿಳಿಸಿ ಎಂದು ನಮ್ಮ ಭಾಗದಲ್ಲಿ ರೈತರು ಬಂದು ನಮ್ಮನ್ನು ಕೇಳಿದಾಗ ನನಗೇನೂ ತಿಳಿಯದು ಎಂದು ಹೇಳಿ, ಇದರ ವಿವರಗಳನ್ನು ತಿಳಿಯುವುದಕ್ಕೋಸ್ಕರ ನಾನು ಅನಿವಾರ್ಯವಾಗಿ ಕಂದಾಯ ಮಂತ್ರಿಗಳಿಗೆ ಒಂದು ಕಾಗದವನ್ನು ಬರೆದು ಈ ಪಂಪು ಸೆಟ್ಟುಗಳನ್ನು ಎಲ್ಲಿ ಕೊಡುತ್ತಾರೆ, ಯಾರಿಗೆ ಅರ್ಜಿ ಕೊಡಬೇಕು ಎನ್ನುವ ವಿವರಗಳನ್ನು ತಿಳಿಸಿ ಎಂದು ಕೇಳಿದ್ದಕ್ಕೆ ನನಗೆ ಉತ್ತರವಾಗಿ "The matter is under consideration" ಎಂದು ಕಾಗದ ಕಳಿಸಿದ್ದಾರೆ. ತಮಗೆ ಬೇಕಾದರೆ ಈ ಕಾಗದವನ್ನು ತಮ್ಮ ಕಡೆಗೆ ಕಳುಹಿಸುತ್ತೇನೆ. ಸರಕಾರ ರೈತರಿಗೆ ಸಹಾಯ ಮಾಡಬೇಕೆಂದು ಈ ನೀರಾವರಿ ಪಂಪು ಸೆಟ್ಟುಗಳನ್ನು ಕೊಡುತ್ತಿದ್ದಾರೆ, ಇದನ್ನು ಸಾಮಾನ್ಯ ರೈತನು ತೆಗೆದುಕೊಳ್ಳಲು ದಾರಿ ಗೊತ್ತಿಲ್ಲ ಎಂದು ಕಂದಾಯ ಮಂತ್ರಿಗಳಿಗೆ ಕಾಗದ ಬರೆದರೂ ಕೂಡ ಉತ್ತರ ಬಾರದೆಹೋದರೆ ಸಾಮಾನ್ಯ ಜನ ಏನು ಮಾಡಬೇಕು ! ಏನೋ ಈ ಜನಕ್ಕೆ ಅನುಕೂಲ ಮಾಡೋಣ ಎಂದು ಒಂದಿಪ್ಪತ್ತು ರೂಪಾಯಿಗಳಷ್ಟು ಖರ್ಚು ಮಾಡಿಕೊಂಡು ಬೆಂಗಳೂರಿಗೆ ಬಂದು ಕೇಳೋಣ ಎಂದರೆ, "The matter is under consideration" ಎಂದು ಕಾಗದ ಬರೆದಿದ್ದೇವೆಂದು ಹೇಳುತ್ತಾರೆ. ಇಂಥಿಂಥ ಭಾಗದಲ್ಲಿ ಅರ್ಜಿ ಕೊಟ್ಟರೆ ಇಂತಹ ಅಧಿಕಾರಿಗಳು ರೈತರಿಗೆ ಪಂಪು ಸೆಟ್ಟುಗಳನ್ನು ಕೊಡುತ್ತಾರೆ ಎಂದು ನಿರ್ದಿಷ್ಟವಾಗಿ ತಿಳಿಸಿ ಅದಕ್ಕೆ ತಕ್ಕ ವ್ಯವಸ್ಥೆಯನ್ನು ಮಾಡಬೇಕು ಹಾಗೆ ಮಾಡದೆ ಸುಮ್ಮನೆ ಪ್ರಚಾರಕ್ಕಾಗಿ ಸ್ಟೇಟ್‌ಮೆಂಟನ್ನು ಕೊಟ್ಟರೆ, ರೈತರಿಗೆ ಏನೂ ಉಪಯೋಗವಾಗುವುದಿಲ್ಲ. ಈ ಬಗ್ಗೆ ಸರಿಯಾದ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ನಾನು ಇಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಅರಣ್ಯ ಖಾತೆಯ ಮಂತ್ರಿಗಳ ಗಮನಕ್ಕೆ ಒಂದೆರಡು ವಿಚಾರಗಳನ್ನು ತರಬೇಕಾಗಿದೆ. ಅರಣ್ಯ ಇಲಾಖೆಗೆ ಸೇರಿದ ಮೂರು-ನಾಲ್ಕು ಅಧಿಕಾರಿಗಳು ಚಿಕ್ಕಮಗಳೂರು ಜಿಲ್ಲೆಯಲ್ಲಿ ಇದ್ದಾರೆ. ಆದರೆ ಅವರಿಗಿನ್ನೂ ಸರಿಯಾದ ಸ್ಥಳಗಳೆಲ್ಲಿ (places) ಎನ್ನುವುದನ್ನೂ ತಿಳಿಸಿಲ್ಲದೆ ಅವರು ತೊಂದರೆ ಪಡುತ್ತಿದ್ದಾರೆ. ಇನ್ನೊಂದು ವಿಷಯ ಇಲ್ಲಿ ಹೇಳಬೇಕಾಗಿದೆ. ಇಲ್ಲಿಗೆ ಸೇರಿದ ಒಬ್ಬ ರೇಂಜು ಫಾರೆಸ್ಟು ಆಫೀಸರು ತಮ್ಮ ಮುಂದೆ ಮರಗಳನ್ನು ತುಂಬಿದ್ದ ಒಂದು ಲಾರಿಯನ್ನು seize ಮಾಡಿ ಹಿಡಿದಿದ್ದರು. ಆ ಸಮಯಕ್ಕೆ ಸರಿಯಾಗಿ ಅಲ್ಲಿಗೆ ಸೇರಿದ ತಾಲ್ಲೂಕು ಬೋರ್ಡು ಪ್ರೆಸಿಡೆಂಟರು ಮತ್ತು ಇನ್ನೂ ಕೆಲವು ಅಧಿಕಾರಿಗಳು ಅವರೊಡನೆ ಇದ್ದವರು ಇದನ್ನೆಲ್ಲಾ ನೋಡಿದ್ದರು. ತಕ್ಷಣ ಏನೂ ಮಾಡಲಿಲ್ಲ. ಇಂತಹ ವ್ಯವಹಾರಗಳನ್ನು ಮಾಡಬಾರದು ಎಂದು ಅಧಿಕಾರಿಗಳಿಗೆ ಪರಿಶೀಲನೆ ಮಾಡಬೇಕೆಂದು ಒತ್ತಾಯ ಬಂದನಂತರ ಇಪ್ಪತ್ತು ದಿವಸಗಳಾದ ಮೇಲೆ ಈ ಲಾರಿ ನಂಬರು ಏನು, ಇದರ ವಿವರ ತಿಳಿಸಿ ಎಂದು ಕೇಳಿದರೆ ಈ ಕಳ್ಳ ಸಾಗಾಣಿಕೆಯ ವಿವರ ತಿಳಿಯುತ್ತದೆಯೇ ? ಇದರ ಮೇಲೆ ಫೋನುಮಾಡಿ ತಿಳಿಸಿದರೂ ಈ ಅಧಿಕಾರಿಗಳ ಮೇಲೆ ಏನೂ ಕ್ರಮ ತೆಗೆದುಕೊಳ್ಳಲಿಲ್ಲ. ಇಂತಹ ಅಧಿಕಾರಿಗಳಿಂದ ಸರಕಾರಕ್ಕೆ ಬರುವ ಆದಾಯವೂ ಹೋಗುತ್ತಿದೆ. ಇಂತಹ ಸನ್ನಿವೇಶಗಳು ಅನೇಕವಿವೆ. ಜನತೆಗೆ ಒಳ್ಳೆಯ ಕೆಲಸ ಮಾಡಬೇಕು ಎನ್ನುವ ಆಸೆ ಆಕಾಂಕ್ಷೆಗಳಿದ್ದರೆ, ತಾವು ಕೇಳಿದಾಗ ಕೆಲವು ವಿವರಗಳನ್ನು ಒದಗಿಸುತ್ತೇನೆ, ಅದರಂತೆ ಆಗ ಸಾಧ್ಯವಾದಷ್ಟು ಕೆಲಸ ಮಾಡುವಿರಂತೆ.

ಈ ಪರಿಸ್ಥಿತಿಯಲ್ಲಿ ರೈತರಿಗೆ ಹಣ ಸಹಾಯ ಮಾಡಲು ಬ್ಯಾಂಕುಗಳಿಂದ ಕೊಡುವಾಗ, ರೈತರು ಅದನ್ನು ವಸೂಲು ಮಾಡಲು ಹೋದರೆ ಬ್ಯಾಂಕುಗಳಲ್ಲಿ ಹಣವಿರುವುದಿಲ್ಲ ಎನ್ನುತ್ತಾರೆ. ಅವರು ತಮ್ಮ ಜಮೀನನ್ನು ಅಡವಿಟ್ಟು ಉಪಯೋಗ ಮಾಡಿಕೊಳ್ಳಬೇಕೆಂದು ಈ ಲ್ಯಾಂಡುಮಾರ್ಟುಗೇಜು ಬ್ಯಾಂಕುಗಳಿಗೆ ಹಣಕ್ಕಾಗಿ ಬಂದರೆ, ಸುಮಾರು ನಾಲ್ಕಾರು ತಿಂಗಳುಗಳಿಂದಲೂ ಹಣವಿಲ್ಲ ಎಂದು ಹೇಳುತ್ತಾರೆ. ಹೀಗಾದರೆ ರೈತರನ್ನೂ ಉದ್ಧಾರಮಾಡಿದ ಹಾಗಾಯಿತೇ ! ಎಲ್ಲರೂ ದೇಶದ ಉದ್ಧಾರ ಮಾಡಬೇಕು, ರೈತನನ್ನು ಮುಂದಕ್ಕೆ ತರಬೇಕೆಂದು ಹೇಳಿ, ಈಗ ಸಾಲ ಕೊಡುವಾಗ ಅನ್ಯಾಯಗಳಾಗುತ್ತಿವೆ ಎಂದು ಇದನ್ನು ತಪ್ಪಿಸುವುದಕ್ಕಾಗಿ Grants Code ಎನ್ನುವುದನ್ನು ಸ್ವಲ್ಪ ಸಡಿಲಗೊಳಿಸಿ, ಹತ್ತು, ಇಪ್ಪತ್ತು, ಮೂವತ್ತು ಎಕರೆಗಳಷ್ಟು ಭೂಮಿ ಇರುವವರಿಗೇ ಅಲ್ಲದೆ, ಸಾಮಾನ್ಯ ರೈತರಿಗೂ ಸಹಾಯವನ್ನು ಕೊಡುವಂತೆ ಮಾಡಿದೆ ಎಂದು ಹೇಳುತ್ತಾರೆ, ಇದರಲ್ಲಿ ಯಾವ ರೀತಿಯಾಗಿದೆ ಎಂದರೆ, ಕಂದಾಯದ ಜೊತೆಯಲ್ಲಿ ಸರ್‌ಚಾರ್ಜನ್ನೂ ಹಾಕಿರುವುದರಿಂದ ರೈತನು ಬೆಳೆದು ತಂದ ಆಹಾರ ಪದಾರ್ಥಗಳಿಗೆ, ಧಾರಣೆ ವಿಪರೀತ ಏರುತ್ತ ಬಂದಿರುವುದರಿಂದ ತೊಂದರೆಯಾಗಿದೆ. ಅದೂ ಅಲ್ಲದೆ ಈಗ ಅಗ್ರಿಕಲ್‌ಚರ್ ಇನ್‌ಕಂಟ್ಯಾಕ್ಸು, ಲ್ಯಾಂಡ್‌ಟ್ಯಾಕ್ಸು ಎಂದು ಬೇರೆ ಕೊಡುತ್ತಿದ್ದಾರೆ ಇದಲ್ಲದೆ ಈಗ ತುರ್ತುಪರಿಸ್ಥಿತಿ ಎಂದು ಬೇರೆ ತರದ ಸರ್ ಚಾರ್ಜು ಹಾಕು

(ಶ್ರೀ ಕೆ. ಪಿ. ರೇವಣ್ಣ ಸಿದ್ದಪ್ಪ)

ತ್ತಿದ್ದಾರೆ. ಹೀಗೆ ಇವೆಲ್ಲದರ ಬಗ್ಗೆ ಸರಿಯಾದ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಟಿ. ಡಿ. ದೇವೇಂದ್ರಪ್ಪ (ಭದ್ರಾವತಿ).—ಮಾನ್ಯ ಸಭಾಪತಿಗಳೇ, ರಾಜ್ಯಪಾಲರು ದಯಪಾಲಿಸಿರತಕ್ಕ ಭಾಷಣವನ್ನು ನಾನು ಸಮರ್ಥಿಸುತ್ತೇನೆ. ಹಾಗೂ ಅವರು ಅಪ್ಪಣೆ ಕೊಡಿಸಿರತಕ್ಕ ಭಾಷಣವನ್ನು ಅನೇಕ ಸದಸ್ಯರು ಹಾಗೂ ಪ್ರತಿಪಕ್ಷದ ಶಿವಪ್ಪನವರೂ ಸಹ ಇದು ಸಪ್ಪೆಯ ಭಾಷಣವೆಂದು ಹೇಳಿದ್ದಾರೆ. ನಾನಾದರೂ ಹೇಳುತ್ತೇನೆ, ಈ ಸಪ್ಪೆಯ ಭಾಷಣಕ್ಕೆ ಸ್ವಲ್ಪ ನಿಂಬೆ ಹುಳಿ, ಉಪ್ಪನ್ನು ಸೇರಿಸಿಕೊಂಡರೆ ಎಷ್ಟು ಮಟ್ಟಿನ ರುಚಿ ಬರುತ್ತದೆಯೋ ಹಾಗೆ ಈ ರಾಜ್ಯಪಾಲರ ಭಾಷಣ ರಸಭರಿತವಾದ ಭಾಷಣವೆಂದು ನಾನು ಹೇಳುವುದಕ್ಕೆ ಸಂತೋಷ ಪಡುತ್ತೇನೆ.

ಈ ಭಾಷಣದಲ್ಲಿ ಅವರು ಅವಶ್ಯಕ ವಸ್ತುಗಳ ಮೇಲೆ ಪ್ರಸ್ತಾಪ ಮಾಡಿರುತ್ತಾರೆ. ಆಹಾರದ ವಸ್ತುಗಳ ಬೆಲೆ ದಿನ ದಿನಕ್ಕೂ ಕಡಿಮೆಯಾಗುತ್ತಿರುವುದರಿಂದ ಇವೊತ್ತಿನ ದಿವಸ ರೈತನ ಆರ್ಥಿಕ ಸ್ಥಿತಿಯೂ ಕುಂಠಿತವಾಗುತ್ತಿದೆ. ಮೊನ್ನೆ ತಾನೇ ಮಾನ್ಯ ಮಂತ್ರಿಗಳು ಪೇಪರಿನಲ್ಲಿ ಆಹಾರ ಧಾನ್ಯಗಳನ್ನು ಸಹಕಾರ ಸಂಘಗಳ ಮೂಲಕ ತರಿಸಿ ಸರಬರಾಜು ಮಾಡುತ್ತೇವೆಂದು ಹೇಳಿದುದನ್ನು ಇಲ್ಲಿ ಪ್ರಸ್ತಾಪ ಮಾಡಬೇಕಾಗಿದೆ. ಇದರ ಬಗ್ಗೆ ಸಹಕಾರ ಖಾತೆಯ ಮಂತ್ರಿಗಳು, ರಾಜ್ಯಕ್ಕೆ ಸಂಬಂಧಪಟ್ಟ ಸೊಸೈಟಿಗಳ ಅಧ್ಯಕ್ಷರುಗಳು ಒಂದು ತೀರ್ಮಾನವನ್ನು ಕೈಗೊಂಡಿದ್ದಾರೆಂದು ಕೂಡ ನಾವು ಪತ್ರಿಕೆಯಲ್ಲಿ ಓದಿದೆವು. ಆದರೆ ಇದರ ಬಗ್ಗೆ ಸರಿಯಾದ ಪ್ರಚಾರವಾಗದೆ, ಇದುವರೆಗೂ ಸಹಕಾರ ಸಂಘಗಳಾವುವೂ ಆಹಾರ ಧಾನ್ಯಗಳನ್ನು ಕೊಂಡು ಕೊಂಡು ದಾಸ್ತಾನು ಮಾಡಿಕೊಂಡಿಲ್ಲ. ಇದಕ್ಕೆ ಸಂಬಂಧಪಟ್ಟ ಮಂತ್ರಿಗಳು ಮತ್ತು ಮುಖ್ಯ ಮಂತ್ರಿಗಳು ಈ ತಕ್ಷಣದಿಂದಲಾದರೂ ಆಹಾರ ಧಾನ್ಯಗಳನ್ನು ಸಹಕಾರ ಸಂಘಗಳು ಕೊಂಡುಕೊಳ್ಳುವ ವ್ಯವಸ್ಥೆಯನ್ನು ಸಂಪೂರ್ಣ ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಹಾಗೂ ಅನೇಕ ಕಡೆಗಳಲ್ಲಿ ಕಬ್ಬಿಣ ಮತ್ತು ಅದರ ಸಾಮಾನುಗಳಿಗೆ ಫ್ಯಾಕ್ಟರಿಯವರು ರೇಟುಗಳನ್ನು ನಿಗದಿ ಮಾಡಿರುವಂತೆ ರೈತನು ಬೆಳೆದು ತಂದು ಕೊಡುವ ಆಹಾರ ಧಾನ್ಯಗಳಿಗೂ ಬೆಲೆಗಳನ್ನು ನಿಗದಿ ಮಾಡಿ ಸಹಕಾರ ಸಂಘಗಳ ಮೂಲಕ ಕೊಡತಕ್ಕ ಯೋಜನೆಯನ್ನು ಸರಕಾರ ಕೈಗೊಳ್ಳಬೇಕು ಎಂದು ಸರಕಾರಕ್ಕೆ ಈ ಸಂದರ್ಭದಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಸ್ವಾಮಿ ಬಂಗಾರ ನಿಯಂತ್ರಣ ವಿಚಾರವಾಗಿ ಹೇಳಬೇಕಾಗಿದೆ. ದೇಶಕ್ಕೆ ಕಷ್ಟ ಬಂದಾಗ್ಗೆ ದೇಶ ರಕ್ಷಣೆಯ ಸಲುವಾಗಿ ಬಂಗಾರ ವಶಪಡಿಸಿಕೊಳ್ಳುವುದು ಅವಶ್ಯಕ. ಆದರೆ ಬಂಗಾರದ ಒಡವೆಗಳನ್ನು ಮಾಡಿ ಉಪಜೀವನ ಸಾಗಿಸುತ್ತಿದ್ದ ಸಣ್ಣ ಸಣ್ಣ ಅಕ್ಕಸಾಲಿಗರು ನಿರುದ್ಯೋಗಿಗಳಾಗಿ ಬಹಳ ಕಷ್ಟಕ್ಕೆ ಸಿಲುಕಿ ಇಂದು ಬೀದಿ ಪಾಲು ಆಗಿದ್ದಾರೆ. ಯಾವದೇ ಕಾರ್ಖಾನೆಯಲ್ಲಿಯಾಗಲಿ ಅವರಿಗೆ ಮೊದಲು ಉದ್ಯೋಗ ಕಲ್ಪಿಸಿಕೊಡಬೇಕಾದುದು ಅಗತ್ಯ. ಈ ಸೂಚನೆಯನ್ನು ಆದಷ್ಟು ಜಾಗ್ರತೆ ಕಾರ್ಯಗತಮಾಡಲು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಬೇಕೆಂದು ನಾನು ಮುಖ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

6-00 P.M.

ಸಮಾಜ ವಿಕಾಸ ಮತ್ತು ಪಂಚಾಯತಿ ರಾಜ್ಯದ ಬಗ್ಗೆ ರಾಜ್ಯಪಾಲರು ಭಾಷಣದಲ್ಲಿ ನಾಲ್ಕು ಮಾತು ಆಡಿದ್ದಾರೆ. ಈ ವಿಚಾರ ಮಾನ್ಯ ಸದಸ್ಯರಾದ ಶ್ರೀ ಗೋಪಾಲಗೌಡರು ಮಾತನಾಡಿದ್ದಾರೆ. ಇದೊಂದು ಬೃಹದಾಕಾರದ ಯೋಜನೆಯಾಗಿದೆ. ಆದರೆ ಸ್ಥಳದಲ್ಲಿ ಪಂಚಾಯಿತಿ ರಾಜ್ಯದ ಕೆಲಸ ಕಾರ್ಯಗಳು ಸರಿಯಾಗಿ ನಡೆಯುತ್ತಿಲ್ಲ. ಈ ಸಂಸ್ಥೆಗಳಿಗೆ ಸರಿಯಾದ ಕಾರ್ಯದರ್ಶಿಗಳ ನೇಮಕ ಮಾಡಿಲ್ಲ. ಈ ಪಂಚಾಯತಿ ರಾಜ್ಯದ ಬಗ್ಗೆ ಸರಕಾರ ದೀರ್ಘವಾಗಿ ಯೋಚನೆ ಮಾಡಬೇಕು ಅಂದರೆ ಯಶಸ್ವಿಯಾಗುತ್ತದೆ. ನಾವೆಲ್ಲರೂ ದೇಶದಲ್ಲಿ ರಾಮರಾಜ್ಯ ಸ್ಥಾಪನೆಯಾಗಬೇಕೆಂದು ಕೂಗುತ್ತಿದ್ದೇವೆ. ಯಾವ ದಿವಸ ಪಂಚಾಯತಿ ರಾಜ್ಯ ಅಭಿವೃದ್ಧಿಯಾಗುತ್ತದೆಯೋ ಅಂದು ರಾಮರಾಜ್ಯವಾಗುತ್ತದೆ. ಆದಕಾರಣ ಪಂಚಾಯತಿಗಳು ಯಶಸ್ವಿಯಾಗಿ ಕಾರ್ಯಗತವಾಗುವದಕ್ಕೆ ಹೆಚ್ಚಾಗಿ ಗಮನ ಕೊಡಬೇಕಾದುದು ಅಗತ್ಯ. ಈ ಪಂಚಾಯತಿ ಆಡಳಿತಕ್ಕೆ ರೆವೆನ್ಯೂ ಉತ್ಪತ್ತಿಯಲ್ಲಿಯ ಶೇಕಡ 70ರಷ್ಟು ಹಣ ದೊರಕಬೇಕು. ಅರಣ್ಯ ಸಂಪತ್ತಿನಲ್ಲಿ ಶೇಕಡ 75ರಷ್ಟು ಭಾಗ ದೊರೆಯಬೇಕು. ಈ ರೀತಿ ಪಂಚಾಯತಿಗಳಿಗೆ ಕೊಡತಕ್ಕಂಥಾದ್ದು ಸೂಕ್ತ. ಈ ರೀತಿ ಹಣ ಒದಗಿಸಿ ಅಭಿವೃದ್ಧಿಪಡಿಸಿದರೆ ಗ್ರಾಮಗಳು ಅಭಿವೃದ್ಧಿಯಾಗುತ್ತವೆಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

ಇನ್ನು ವ್ಯವಸಾಯದ ಬಗ್ಗೆ ನಾಲ್ಕು ಮಾತು ಹೇಳುತ್ತೇನೆ. ಇಡೀ ರಾಜ್ಯದಲ್ಲಿ ವ್ಯವಸಾಯದ ಉತ್ಪತ್ತಿ ಹೆಚ್ಚಿಸಬೇಕು. ಈಗಾಗಲೇ ಭದ್ರಾ ತುಂಗಾ ಯೋಜನೆಗಳು ತಯಾರಾಗಿವೆ. ಈ ಯೋಜನೆಯ ಕೆಳಗೆ 2½ ಲಕ್ಷ ಎಕರೆ ಭೂಮಿ ಸಾಗುವಳಿಗೆ ಬರತಕ್ಕ ಪ್ರದೇಶವಿದೆ. ಹೆಚ್ಚು ಆಹಾರ ಧಾನ್ಯ ಬೆಳೆಯುವುದಕ್ಕೆ ಅನುಕೂಲವಾಗುತ್ತದೆ. ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ಅಮಳಗೋಳ ಪ್ರಾಜೆಕ್ಟು ಇದೆ. ಅನೇಕ ದೊಡ್ಡ ದೊಡ್ಡ ಕೆರೆಗಳಿವೆ. ಆದರೆ ವ್ಯವಸಾಯದಲ್ಲಿ ಅಂಟು ಜಾಡ್ಯ ಹಿಡಿದ ಹಾಗೆ ಹಳೇ ಪದ್ಧತಿಯನ್ನು ಅನುಸರಿಸಿಕೊಂಡು ಬರುತ್ತಿದ್ದಾರೆ. ನೀರಿನ ಸೌಲಭ್ಯವಿರ ತಕ್ಕಂಥ ಶಿವಮೊಗ್ಗ ಜಿಲ್ಲೆಗೆ ಒಂದು ಪ್ಯಾಕೇಜ್ ಯೋಜನೆ ಕೊಟ್ಟಿದ್ದಾದರೆ ವ್ಯವಸಾಯ ಉತ್ಪತ್ತಿ ಹೆಚ್ಚಿಸಬಹುದು. ಭದ್ರಾವತಿ ತಾಲ್ಲೂಕಿಗೆ ಪ್ಯಾಕೇಜ್ ಯೋಜನೆ ಕೊಡಬೇಕು. ಜಲಾಶಯಗಳಿಂದ ನೀರನ್ನು ಉಪಯೋಗಿಸಿಕೊಂಡು ಆಹಾರ ಉತ್ಪತ್ತಿ ಹೆಚ್ಚುಮಾಡಲು ಸಾಧ್ಯವಾಗುತ್ತದೆ. ಒಂದು ಪ್ಯಾಕೇಜ್ ಸ್ಕೀಮನ್ನು ಶಿವಮೊಗ್ಗ ಜಿಲ್ಲೆಗೆ ದಯಪಾಲಿಸಬೇಕೆಂದು ಸರಕಾರಕ್ಕೆ ಪ್ರಾರ್ಥನೆಮಾಡಿ ಕೊಳ್ಳುತ್ತೇನೆ.

ರಾಜ್ಯಪಾಲರು ನೀರಾವರಿ ಪಂಪುಸೆಟ್ಟು ವಿಚಾರದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಒಂದು ಕೋಟಿ ರೂಪಾಯಿ ಇರಿಗೇಷನ್ ಪಂಪುಸೆಟ್ಟುಗೋಸ್ಕರ ಖರ್ಚು ಮಾಡಲಾಗುತ್ತಿದೆ ಎಂದು ಹೇಳಿದ್ದಾರೆ ಬಹಳ ಸಂತೋಷ. ಅದನ್ನು ಸ್ವಾಗತಿಸುತ್ತೇನೆ. ಬಡರೈತರಿಗೆ ಪಂಪುಸೆಟ್ಟು ದೊರೆಯುವುದಕ್ಕೆ ಕಷ್ಟವಾಗುತ್ತದೆ. ನನ್ನ ಅನುಭವದಿಂದ ಹೇಳುವುದಾದರೆ ಪಂಪುಸೆಟ್ಟು ಹಾಕ ಬೇಕೆಂದು 15-20 ದಿವಸ ಅಧಿಕಾರಿಗಳ ಹತ್ತಿರ ಹೋಗಿ ಬರಬೇಕಾಗುತ್ತದೆ. ರಿಕಾರ್ಡು ಸರಿ ಯಾಗಿಲ್ಲವೆಂದು ತಿರುಗಿ ಕಳಿಸುತ್ತಾರೆ. ಅಶಿಕ್ಷಿತ ಬಡ ರೈತರಿಗೆ ಬಹಳ ತೊಂದರೆಯಾಗುತ್ತದೆ. ಪಂಪುಸೆಟ್ಟುಗಳ ಅನುಕೂಲತೆಯಿಂದ ಆಹಾರ ಉತ್ಪತ್ತಿ ಹೆಚ್ಚಿಸಬಹುದು. ಆದುದರಿಂದ ಅಧಿಕಾರಿ ಗಳು ಪಂಪುಸೆಟ್ಟು ಕೊಡತಕ್ಕ ಕಾರ್ಯದಲ್ಲಿ ವಿಳಂಬ ಮಾಡದೆ, ಮುತವರ್ಜಿ ವಹಿಸಬೇಕೆಂದು ಅಧಿಕಾರಿಗಳಿಗೆ ಸೂಚನೆ ಕೊಡಬೇಕು ಎಂದು ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ರಸ್ತೆ ಕಾಮಗಾರಿಗಳ ವಿಚಾರ. ಈ ವಿಚಾರದಲ್ಲಿ "ಸದ್ಯದಲ್ಲಿ ಸುಮಾರು 107 ಸೇತುವೆಗಳ ಕೆಲಸವು ಮುಂದುವರಿಯುತ್ತಿದೆ ಮತ್ತು ಈ ಪೈಕಿ 30 ಭಾರಿ ಪ್ರಮಾಣದ ಸೇತುವೆಗಳ ಕೆಲಸವು ಪೂರ್ತಿಯಾಗಿ ಅವುಗಳನ್ನು ಜನರ ಮತ್ತು ವಾಹನಗಳ ಸಂಚಾರಕ್ಕೆ ಸಿದ್ಧಗೊಳಿಸಲಾಗುವ ದೆಂದು ನಿರೀಕ್ಷಿಸಲಾಗಿದೆ" ಎಂದು ರಾಜ್ಯಪಾಲರ ಭಾಷಣದಲ್ಲಿ ತಿಳಿಸಲಾಗಿದೆ. ಇನ್ನ ಉಳಿದ ಸೇತುವೆಗಳ ಬಗ್ಗೆ ಏನು ಮಾಡುತ್ತಾರೆ ಎನ್ನುವುದನ್ನು ಪಿ.ಡಬ್ಲ್ಯೂ.ಡಿ. ಮಂತ್ರಿಗಳು ತಿಳಿಸಬೇಕು. ಭದ್ರಾ, ತುಂಗಾ ನದಿಗೆ ಅತಿ ಮುಖ್ಯವಾಗಿ ಸೇತುವೆ ಆಗಬೇಕಾಗಿದೆ. ಶರಾವತಿ ಪ್ರಾಜೆಕ್ಟು ಗೋಸ್ಕರ ದೊಡ್ಡ ದೊಡ್ಡ ಸಾಮಾನುಗಳನ್ನು ಕಬ್ಬಿಣ ಎಂಜಿನ್ ಮುಂತಾದ ಭಾರವಾದ ಪದಾರ್ಥ ಗಳನ್ನು ಹೇರಿರತಕ್ಕಂಥ ಟ್ರಕ್ಕುಗಳು ಸೇತುವೆ ಮೇಲೆ ಓಡಾಡುತ್ತವೆ. ಆದ್ದರಿಂದ ಸೇತುವೆಗೆ ಅಪಾಯವಾಗಬಹುದು, ಹೊಸ ಸೇತುವೆಯನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಶಿಕ್ಷಣ ವಿಚಾರದಲ್ಲಿ ಒಂದು ವಿಷಯ ಮಾನ್ಯ ಮಂತ್ರಿಗಳ ಗಮನಕ್ಕೆ ತರಬಚ್ಛಿಸುತ್ತೇನೆ. ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ಭದ್ರಾವತಿ ಕಬ್ಬಿಣ ಕಾರ್ಖಾನೆ ಸ್ಥಾಪನೆಯಾಗಿದೆ. ಇಡೀ ಭಾರತ ದಲ್ಲಿಯೇ ಇದೊಂದು ದೊಡ್ಡ ಕಾರ್ಖಾನೆಯಾಗಿ ಬೆಳೆಯುತ್ತಿದೆ. ಸರ್ ವಿಶ್ವೇಶ್ವರ ಅಯ್ಯರ್ ಅವರು ಈ ಕಬ್ಬಿಣ ಕಾರ್ಖಾನೆ ಪ್ರಾರಂಭಿಸಿದರು. ಈಗ ಸುಮಾರು 60-80 ಲಕ್ಷ ಪ್ರಜೆಗಳು ಭದ್ರಾವತಿ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಾರೆ. ಭದ್ರಾವತಿ ಪ್ರಜಾ ಸಂಖ್ಯೆ ಹೆಚ್ಚಾಗುತ್ತಲೇ ಇದೆ. ಭದ್ರಾವತಿಯಲ್ಲಿ ಸರ್ ವಿಶ್ವೇಶ್ವರಯ್ಯ ಅವರ ಜ್ಞಾಪಕಾರ್ಥವಾಗಿ ಸರ್ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜ್ ಕೊಡಬೇಕೆಂದು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಎಂಜಿನಿಯರಿಂಗ್ ಕಾಲೇಜ್ ಅತಿ ಮುಖ್ಯವಾಗಿ ಆಗ ಬೇಕಾಗಿದೆ. ಕಾರ್ಖಾನೆ ಆಡಳಿತವು ಕೂಡ ಎಂಜಿನಿಯರಿಂಗ್ ಕಾಲೇಜ್ ಸ್ಥಾಪನೆಗೆ ಸಹಾನುಭೂತಿ ತೋರಿಸಿ ಸಹಾಯಮಾಡುವ ಭರವಸೆ ನನಗಿದೆ. ಸರ್ ವಿಶ್ವೇಶ್ವರ ಅಯ್ಯರ್ ಅವರ ಜ್ಞಾಪಕಾರ್ಥವಾಗಿ ಭದ್ರಾವತಿಯಲ್ಲಿ ಎಂಜಿನಿಯರಿಂಗ್ ಕಾಲೇಜ್ ಮಾಡತಕ್ಕಂಥ ಯೋಜನೆಯನ್ನು ಮಾನ್ಯ ಮಂತ್ರಿಗಳು ಮಾಡಬೇಕೆಂದು ಈ ಸಂದರ್ಭದಲ್ಲಿ ಪ್ರಾರ್ಥಿಸುತ್ತೇನೆ.

†ಶ್ರೀ ಎಚ್. ಆರ್. ಕೇಶವಮೂರ್ತಿ (ಗಂಡಸಿ).—ಮಾನ್ಯ ಸಭಾಪತಿಗಳೇ, ರಾಜ್ಯಪಾಲರ ಭಾಷಣದಲ್ಲಿ ಚೈನಾ ಯುದ್ಧದ ವಿಷಯದಲ್ಲಿ ನಮ್ಮ ಮೈಸೂರು ದೇಶದ ಪಾತ್ರ ಏನು ಎನ್ನುವುದನ್ನು ತಿಳಿಸಿದ್ದಾರೆ. ಸಾವಿರಾರು ವರ್ಷಗಳಿಂದ ಇದ್ದ ಮಧುರ ಬಾಂಧವ್ಯ ಹೋಗಿ ಯುದ್ಧ ಪರಿಸ್ಥಿತಿ ಉಂಟಾಗಿದೆ. ಪುನಃ ಇಂಥ ಬಾಂಧವ್ಯ ಉಂಟಾಗಬಹುದೇ ಎಂಬುದಕ್ಕೆ ಸಂಶಯ ಬರುತ್ತದೆ, ಇದಕ್ಕೆ ಒಂದು ಗಾದೆ ಮಾತು ಇದೆ. To believe is good and not to believe is better. ಈಗ ಯುದ್ಧ ನಿಲ್ಲಿಸಿದ್ದು ಈ ಮಧುರ ಬಾಂಧವ್ಯ ತಾತ್ಕಾಲಿಕವಾಗಬಹುದು, ಚೈನಾ

(ಶ್ರೀ ಎಚ್. ಆರ್. ಕೇಶವಮೂರ್ತಿ)

ದೇಶ ನಂಬುವದಕ್ಕಾಗುವದಿಲ್ಲ. ಯಾವಾಗಲೂ ನಮ್ಮ ದೇಶ ಯುದ್ಧಕ್ಕಾಗಿ ತಯಾರಾಗಿರಬೇಕು. ಸರಕಾರ ಯುದ್ಧಕ್ಕಾಗಿ ಪ್ರಯತ್ನ ಮಾಡುತ್ತಿದ್ದಾರೆ. ನಮ್ಮ ದೇಶದ ಪ್ರತಿಯೊಬ್ಬ ಪ್ರಜೆಯೂ ಕೂಡ ಯುದ್ಧಕ್ಕಾಗಿ ಬೇಕಾದ ಹಣ ಚಿನ್ನ ಸರ್ಕಾರಕ್ಕೆ ಒದಗಿಸಬೇಕಾದುದು ನಮ್ಮ ಕರ್ತವ್ಯವಾಗಿದೆ. ಯಾವಾಗಲೂ ಚಿನ್ನ ಮತ್ತು ಹಣ, ಹೇಗೆ ಗಂಗಾನದಿ ಹಿಮಾಲಯಾ ಪರ್ವತದಿಂದ ಹುಟ್ಟಿ ಬೇರೆ ಬೇರೆ ಪ್ರದೇಶಗಳಲ್ಲಿ ಹರಿದು ಸಮುದ್ರವನ್ನು ಸೇರುತ್ತದೆಯೋ ಹಾಗೆ ಪ್ರತಿಯೊಂದು ಮನೆಯ ಚಿನ್ನ ಮತ್ತು ದುಡ್ಡು ಪ್ರವಾಹದ ರೂಪದಲ್ಲಿ ಹರಿದು ದೆಹಲಿ ಸೇರಬೇಕು. ಹಾಗೆ ಹರಿದದ್ದೇ ಆದರೆ ಮಾತ್ರ ಅನೇಕ ವರ್ಷಗಳು ಭಾರತ ಸರ್ಕಾರ ಯುದ್ಧ ನಡೆಸಬಹುದು. ಈ ವಿಷಯದಲ್ಲಿ ಅಪೋಸಿಷನ್ ಪಾರ್ಟಿಗಳು ಮತ್ತು ಸರ್ಕಾರದ ಪಾರ್ಟಿ ಒಮ್ಮತದ ಭಾವನೆ ತಾಳಬೇಕು ಮತ್ತು ವಾರ್ ಎಫರ್ಟಿಗೆ ಸಾಧ್ಯವಾದಷ್ಟು ಗಮನ ಕೊಡಬೇಕು.

ಈ ಡಿಫೆನ್ಸ್ ಕಮಿಟಿಗಳಲ್ಲಿ ಅನೇಕ ಲೋಪದೋಷಗಳಿವೆ. ಈ ಕಮಿಟಿಗಳಲ್ಲಿ, ನೀವು ಲೆಫ್ಟಿಸ್ಟು ಗಳನ್ನೂ, ಎದುರು ಪಾರ್ಟಿಯವರನ್ನು ನಂಬಿ ನಿಮ್ಮ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಮೈನಾರಿಟಿ ಯಲ್ಲಿರತಕ್ಕಂಥ ಎದುರು ಪಕ್ಷದ ಸದಸ್ಯರನ್ನು ಡಿಫೆನ್ಸ್ ಕಮಿಟಿಗಳ ಚೇರ್ಮನ್ನಾಗಿ ಮಾಡಬೇಕು. ನೀವು ಅವರನ್ನು ನಂಬಲಿಲ್ಲ; ನಂಬಿ ಅವರನ್ನು ಚೇರ್ಮನ್ ಮಾಡದೆ ಡೆಪ್ಯುಟಿ ಕಮಿಷನ್ನರುಗಳನ್ನು ಈ ಕಮಿಟಿಗಳ ಚೇರ್ಮನ್ ಮಾಡಿದ್ದೀರಿ. ನೀವು ಎದುರು ಪಕ್ಷಗಳಲ್ಲಿ ನಂಬಿಕೆ ಇಟ್ಟಿದ್ದರೆ ಈಗ ಆಗಿರತಕ್ಕಂಥ ಕಲೆಕ್ಷನ್ನಿನ 3.4 ರಷ್ಟು ಕಲೆಕ್ಷನ್ ಡಿಫೆನ್ಸ್ ಫಂಡಿಗೆ ನಾವು ಮಾಡಬಹುದಾಗಿತ್ತು. ಈಗ ರಕ್ಷಣಾನಿಧಿಗೆ 2.5 ಅಥವಾ 2.75 ಕೋಟಿ ರೂಪಾಯಿ ವಸೂಲಾಗಿದೆ; ಇದು ಒಂದು ದೊಡ್ಡ ಕಲೆಕ್ಷನ್ ಅಲ್ಲ. ಇದನ್ನು ನೋಡಿದರೆ ಪ್ರತಿಯೊಬ್ಬ ಪ್ರಜೆಯೂ ಒಂದು ರೂಪಾಯಿನಂತೆ ಕೂಡ ಕೊಟ್ಟಿಲ್ಲವೆಂದು ಅನಿಸುತ್ತದೆ. ಡೆಪ್ಯುಟಿ ಕಮಿಷನರುಗಳು ಎಲ್ಲೆಲ್ಲಿ ಯಾವ ಯಾವ ತರಹದಿಂದ ವಸೂಲು ಮಾಡುವುದಕ್ಕಾಗುತ್ತದೆಯೋ ಹಿಂಸೆ ಮಾಡುತ್ತಿದಾರೆಯೋ ಇಲ್ಲವೋ ಗೊತ್ತಿಲ್ಲ, ಆ ತರಹ ವೆಲ್ಲಾ ಮಾಡಿ, ಹಣ ತೆಗೆದುಕೊಂಡು ಯುದ್ಧ ನಿಧಿಗೆ ಶೇಖರಣೆ ಮಾಡುತ್ತಿದ್ದಾರೆ. ರಕ್ಷಣಾನಿಧಿಗೆ ಹಣ ಸಂಗ್ರಹ ಮಾಡುವ ವಿಚಾರದಲ್ಲಿ ಸರಿಯಾದ ಮಾರ್ಗವನ್ನು ಅನುಸರಿಸಿಲ್ಲ, ಜನಗಳ ಮತ್ತು ಎದುರು ಪಕ್ಷದವರ ಸಹಕಾರ ತೆಗೆದುಕೊಂಡಿದ್ದರೆ, ಈಗಾಗಿರುವ ಸಂಗ್ರಹಣೆಯ ಎರಡರಷ್ಟು ಹಣವನ್ನು ವಸೂಲು ಮಾಡಬಹುದಾಗಿತ್ತು. ಡೆಪ್ಯುಟಿ ಕಮಿಷನರುಗಳನ್ನು ಈ ರಕ್ಷಣಾ ಸಮಿತಿಗಳ ಅಧ್ಯಕ್ಷರನ್ನಾಗಿ ಮಾಡುವ ಬದಲು, ಅಪೋಸಿಷನ್ ಪಾರ್ಟಿಯವರನ್ನೋ, ಇಂಡಿಪೆಂಡೆಂಟರನ್ನೊ ಪ್ರೆಸಿಡೆಂಟರಾಗಿ ಮಾಡಿದರೆ ಖಂಡಿತವಾಗಿಯೂ ಯುದ್ಧ ನಿಧಿಗೆ ಈಗಿನ ಎರಡರಷ್ಟು ಹಣ ಶೇಖರಣೆ ಯಾಗುತ್ತಿತ್ತು ಮತ್ತೆ ಒತ್ತಿ ಹೇಳಲು ಬಯಸುತ್ತೇನೆ.

ಶ್ರೀ ಎಸ್. ನಿಜಲಿಂಗಪ್ಪ.—ತಾವೂ ಕಮಿಟಿಯಲ್ಲಿ ಇದ್ದೀರಿ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಆದರೆ ಚೇರ್ಮನ್ನಾಗಿ ಅಲ್ಲ. ಕಾಂಗ್ರೆಸೇತರರನ್ನು ಸಮಿತಿಗಳ ಅಧ್ಯಕ್ಷರಾಗಿ ಮಾಡಿರಬೇಕಾಗಿತ್ತು ಎಂದು ಹೇಳುತ್ತಿದ್ದೆನು. ಇದೂ ಅಲ್ಲದೆ, ವಿಲೇಜ್ ಆಫೀಸರುಗಳನ್ನೂ, ಬೇರೆ ಖಾಸಗೀ ಜನರನ್ನೂ ನೀವು ನಂಬುತ್ತಾ ಇಲ್ಲ. ರಕ್ಷಣಾನಿಧಿ ರಸೀತಿ ಗಳನ್ನು ತಹಸೀಲ್‌ದಾರರು, ಡೆಪ್ಯುಟಿ ಕಮಿಷನರು ಮತ್ತು ಅಧಿಕಾರಿಗಳಿಂದ ಕೊಡಿಸುತ್ತಾ ಇದ್ದೀರಿ. ಜನಗಳನ್ನು ಏಕೆ ನಂಬುತ್ತಾ ಇಲ್ಲ ನೀವು? ಆಯಾ ಗ್ರಾಮದ ಪಟೇಲರಿಂದಲೇ ರಸೀತಿ ಕೊಡಿಸುವ ಏರ್ಪಾಡು ಏಕೆ ಮಾಡಿಲ್ಲ? ಪಟೇಲರುಗಳು ಕಂದಾಯ ವಸೂಲು ಮಾಡುವ ಕಾಲದಲ್ಲಿ ಮಾಡಿದಂತೆ ಪಟೇಲರು ಡಿಫೆನ್ಸ್ ಫಂಡಿಗೂ ವಸೂಲು ಮಾಡಿ ರಸೀತಿ ಕೊಟ್ಟರೆ ಬೇಕಾದಷ್ಟು ಹಣ ಟ್ರೆಷರಿಗೆ ಬರುತ್ತದೆಂದು ಘಂಟಾಘೋಷವಾಗಿ ಹೇಳುತ್ತೇನೆ. ಈಗಲೇ ಈ ನಿಧಿಗೆ ಸಂಗ್ರಹವಾದ ಹಣವನ್ನು ದೆಹಲಿಗೆ ಕಳುಹಿಸಬೇಕಾಗಿಲ್ಲ, ಕೇಂದ್ರ ಸರ್ಕಾರದವರು ಕೇಳಿದಾಗ ಕಳುಹಿಸಿ. ಇಷ್ಟು ನನ್ನ ಸಲಹೆ.

ರಕ್ಷಣಾ ಪ್ರಯತ್ನದಲ್ಲಿ ಬಿಜಾಪುರದಲ್ಲಿ 35 ಲಕ್ಷ ರೂಪಾಯಿ ನಾನ್‌ರಿಕರಿಂಗ್ ಮತ್ತು 3.8 ರಿಕರಿಂಗ್ ಖರ್ಚಿನಲ್ಲಿ ಒಂದು ಮಿಲಿಟರಿ ಕಾಲೇಜನ್ನು ಸ್ಥಾಪನೆ ಮಾಡಿದ್ದೀರಿ. ಇಂಥ ಸೈನಿಕ ಶಿಕ್ಷಣ ಪ್ರತಿಯೊಂದು ಡಿಸ್ಟ್ರಿಕ್ಟಿನಲ್ಲಿಯೂ ದೊರೆಯುವಂತಾಗಬೇಕು, ಇಲ್ಲದಿದ್ದರೆ ಅಂಥ ಘೋರವಾದ ಚೈನಾ ವನ್ನು ಗೆಲ್ಲುವುದಕ್ಕೆ ಅಸಾಧ್ಯ. ಇಂಥ ಮಿಲಿಟರಿ ಕಾಲೇಜನ್ನು ಪ್ರತಿಯೊಂದು ಡಿವಿಜನ್ನಿನಲ್ಲಿಯೂ ಸ್ಥಾಪನೆ ಮಾಡಿ ಹೆಚ್ಚು ಹೆಚ್ಚು ಯೋಧರು ಸೈನಿಕ ಶಿಕ್ಷಣ ಪಡೆಯುವುದಕ್ಕೆ ಅವಕಾಶ ಮಾಡಿಕೊಡ ಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ದೇಶದಲ್ಲಿ ಆಹಾರ ದಿನಸಿಗಳ ಬೆಲೆ, ವ್ಯವಸಾಯೋತ್ಪನ್ನಗಳ ಬೆಲೆ ಏರದೆ, ಹತೋಟಿಯಲ್ಲಿದೆ ಯೆಂದು ತಿಳಿದುಕೊಂಡು ಬಿಟ್ಟಿದ್ದೀರಿ. ಈವಾಗ ಸುಗ್ಗಿಯ ಕಾಲ, ಆದ್ದರಿಂದ ಸಾಮಾನ್ಯವಾಗಿ ಧಾರಣೆ ವಾಸಿಗಳು ಏರುವುದಿಲ್ಲ. ಈ ಸಾರಿ ಮಳೆ ಕೂಡ ಕಡಿಮೆಯಾಗಿ ಭತ್ತದ ಬೆಳೆ ಮತ್ತು

ರಾಗಿಯ ಬೆಳೆ ಕಡಿಮೆಯಾಗಿದೆ. ಇನ್ನು ಮೂರು ತಿಂಗಳಲ್ಲಿ ಧಾರಣೆ ವಾಸಿಗಳು ಏರಿಹೋಗುತ್ತವೆ, ಆಮೇಲೆ ಕಂಟ್ರೋಲ್ ಮಾಡುವುದಕ್ಕೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಈಗಿನಿಂದಲೇ ಕಂಟ್ರೋಲ್ ಮಾಡಲು ಪ್ರಯತ್ನ ಮಾಡಬೇಕು.

ಚಿನ್ನದ ವಿಚಾರದಲ್ಲಿ ಹೇಳಬೇಕಾದರೆ, ಚಿನ್ನದ ನಿಯಂತ್ರಣದಿಂದ ವಿಶ್ವಕರ್ಮರು (goldsmiths) ತುಂಬ ತೊಂದರೆಗೆ ಒಳಗಾಗಿದ್ದಾರೆ. ಅವರ ಕೂಗು ದೇಶಾದ್ಯಂತ ಕೇಳಿ ಬರುತ್ತಿದೆ. ಚಿನ್ನ ಕಂಟ್ರೋಲ್ ಮಾಡಿದ ಮೇಲೆ ಹೊರಗಡೆ, ಚಿನ್ನದ International Control rate 66 ರೂಪಾಯಿ ಚಿಲ್ಲರೆ ಇದ್ದರೆ, ಬ್ಲಾಕ್‌ಮಾರ್ಕೆಟ್ಟಿನಲ್ಲಿ 150 ರೂಪಾಯಿನಂತೆ ವ್ಯಾಪಾರ ನಡೆಯುತ್ತಾ ಇದೆ. ಗ್ರಾಮಾಂತರ ಪ್ರದೇಶಗಳಲ್ಲಿ ಇವತ್ತು ಕೂಡ ಚಿನ್ನದಲ್ಲಿ ಬ್ಲಾಕ್‌ಮಾರ್ಕೆಟ್ ನಡೆಯುತ್ತಾ ಇದೆ; ಈ ಕಡೆ ಸರ್ಕಾರದವರು ನಿಗಾ ತೆಗೆದುಕೊಂಡು ಅದನ್ನು ನಿಲ್ಲಿಸಬೇಕು; ಇಲ್ಲದಿದ್ದರೆ ಕಂಟ್ರೋಲಿನ ಉದ್ದೇಶವೇ ವಿಫಲವಾಗುತ್ತದೆ. ವಿಶ್ವಕರ್ಮರು 14 ಕ್ಯಾರೆಟ್ಟಿನಲ್ಲಿಯೇ ಒಡವೆಗಳನ್ನು ಮಾಡಬೇಕು, ಜಾಸ್ತಿಯದರಲ್ಲಿ ಮಾಡಕೂಡದೆಂದು ನಿರ್ಬಂಧ ಹಾಕಿದ್ದಾರೆ; ಅದು ಸಾಧುವಾದುದಲ್ಲ. ಅದನ್ನು ತೆಗೆದುಹಾಕಬೇಕು.

Mr. SPEAKER.—Is the Hon'ble Member suggesting this to the State Government ?

Sri H. R. KESHAVAMURTHY.—If it is a Central Government matter, I do not interfere.

ಕೆರೆಗಳ ಬಾಬಿನಲ್ಲಿ ನಮ್ಮ ರಾಜ್ಯಪಾಲರು ದೊಡ್ಡ ದೊಡ್ಡ major irrigation ಪ್ರಾಜೆಕ್ಟು ಗಳ ಪ್ರಸ್ತಾಪ ಮಾಡಿದ್ದಾರೆ. Major irrigation project ಗಳಿಗಿಂತ, minor irrigation project ಗಳು ಬಹಳ ಮುಖ್ಯವಾದುವು. ನಮ್ಮ ಸಂಸ್ಥಾನದಲ್ಲಿ ಸಾವಿರಾರು ಕೆರೆಗಳಿವೆ. ಕೆರೆ ಗಳನ್ನು ದುರಸ್ತು ಮಾಡಬೇಕಾಗಿದ್ದರೆ ಯಾವ foreign exchange ಬೇಕಾಗಿಲ್ಲ, ಯಾವ ಮೆಟೀರಿ ಯಲ್ಲನ್ನೂ ಹೊರಗಿನಿಂದ ತರಬೇಕಾಗಿಲ್ಲ, ಎಲ್ಲಾ ಲೋಕಲ್ ಲೇಬರ್‌ನಿಂದಲೇ ಕಾಂಗಾರಿ ಮಾಡ ಬಹುದು. ಆಗ ಲಕ್ಷಾಂತರ ಎಕರೆ ಭೂಮಿ ಸಾಗುವಳಿಗೆ ಬರುತ್ತದೆ; ಬೇಕಾದಷ್ಟು ಆಹಾರ ಉತ್ಪತ್ತಿಯಾಗುತ್ತದೆ. ನಿಜವಾಗಿ ಯುದ್ಧ ನಡೆಯುವಾಗ ವ್ಯವಸಾಯೋತ್ಪನ್ನ ಮಾಡುವುದಕ್ಕೆ ಅವಕಾಶವಿರುವುದಿಲ್ಲ, ಏಕೆಂದರೆ ಯೋಧರು ಯುದ್ಧ ಭೂಮಿಯಲ್ಲಿರುತ್ತಾರೆ. ಅಂಥ ಪರಿಸ್ಥಿತಿ ಯನ್ನು ಎದುರಿಸುವುದಕ್ಕೆ ಲಕ್ಷಾಂತರ ಟನ್ ಆಹಾರ ಧಾನ್ಯಗಳನ್ನು ಈಗಿನಿಂದಲೇ ಸ್ಟಾಕ್ ಮಾಡ ಬೇಕಾದ್ದು ಸರ್ಕಾರದ ಆದ್ಯ ಕರ್ತವ್ಯ. ಈಗಿನಿಂದಲೇ ಯೋಜನೆ ಹಾಕಿಕೊಂಡು, ಕೆರೆಗಳ ದುರಸ್ತಿ ಮಾಡಿಕೊಂಡು, ಆಹಾರ ಧಾನ್ಯಗಳನ್ನು ಜಾಸ್ತಿ ಬೆಳೆದು ಸ್ಟಾಕ್ ಮಾಡಿದರೆ ಮುಂದೆ ಅದು ದೇಶಕ್ಕೆ ಒಂದು ಅಸೆಟ್ ಆಗಿರುತ್ತದೆ. ನಾನು ಹೇಳುವುದನ್ನು ಗಂಭೀರವಾಗಿ ಆಲೋಚನೆ ಮಾಡಬೇಕು.

ಇದುವರೆಗೆ 27,200 ಬಾವಿಗಳನ್ನು ಸ್ಯಾಂಕ್ಷನ್ ಮಾಡಿದ್ದಾರೆ. ಅವುಗಳಲ್ಲಿ 8,000 ಬಾವಿಗಳು ಪೂರ್ತಿಯಾಗಿವೆಯೆಂದು ಹೇಳಿದ್ದಾರೆ; ಆದ್ದರಿಂದ ತಮ್ಮ ಉದ್ದೇಶ ಏನು ಸಾಧ್ಯವಾಗಿದೆ ? ಫಿಸಿಕಲ್ ಟಾರ್ಜೆಟ್ ಮುಲ್ಕ, ವ್ಯವಸಾಯಕ್ಕೆ ಬೇಕಾದ ಅನುಕೂಲತೆಗಳನ್ನು ಕೊಟ್ಟು, ವ್ಯವಸಾಯೋತ್ಪನ್ನ ಗಳು ಜಾಸ್ತಿ ಮಾಡಬೇಕು. 8 ಸಾವಿರ ಬಾವಿಯಲ್ಲಿ 8 ಸಾವಿರ ಎಕರೆ ಸಾಗುವಳಿಯಾಗಿಲ್ಲ, 800 ಎಕರೆಯಾಗಿಲ್ಲ, 80 ಎಕರೆಯಲ್ಲಿ ಬೆಳೆಯಾಗಿಲ್ಲವೆಂದು ಘಂಟಾಘೋಷವಾಗಿ ಹೇಳುತ್ತೇನೆ. 27 ಸಾವಿರ ಬಾವಿಗೆ ಸಾಮಾನ್ಯವಾಗಿ 90 ಲಕ್ಷ ರೂಪಾಯಿ ಖರ್ಚಾಗುತ್ತದೆ. ಸೆಂಟ್ರಲ್ ಗವರ್ನ್ ಮೆಂಟಿನಿಂದ ಇದಕ್ಕೆ 2 ಕೋಟಿ ರೂಪಾಯಿ ಬಂದಿದೆ; ಅದರಲ್ಲಿಯೂ ಚಳಿಕಾಸಿ ಮಾಡಿ ಮಿಗಿಸಿ ಕೊಂಡಿದ್ದಾರೆ. ಹೆಚ್ಚಿಗೆ ಬಾವಿಗಳನ್ನು ತೋಡಿ ಹೆಚ್ಚಿಗೆ ಆಹಾರ ಧಾನ್ಯಗಳನ್ನು ಬೆಳೆಯಬೇಕು; ಹೆಚ್ಚಿಗೆ ಪ್ರದೇಶವನ್ನು ಸಾಗುವಳಿಗೆ ತರಬೇಕು.

ಈ agricultural production ವಿಷಯದಲ್ಲಿ ಆಗಲೇ ಹೇಳಿದ್ದೇನೆ. ರಾಮಚಂದ್ರರಾವ್ ಕಮಿಟಿಯವರು ದುಡ್ಡು ಹೆಚ್ಚು ಖರ್ಚು ಮಾಡಿದರೆ, ಫುಡ್ ಪ್ರೊಡಕ್ಷನ್ ಜಾಸ್ತಿಯಾಗುತ್ತಾ ಹೋಗ ಬೇಕೆಂದು ಹೇಳಿದ್ದಾರೆ. ಇರಿಗೇಷನ್ ಪ್ರಾಜೆಕ್ಟುಗಳ ಮೇಲೆ 57 ಕೋಟಿ ರೂಪಾಯಿ ಹಾಕಿದ್ದರೂ, food production ಇನ್ನೂ ತೀರ ತಳಗಡೆಗೆ ಹೋಗಿದೆ. ದುಡ್ಡು ಹೆಚ್ಚು ಖರ್ಚು ಮಾಡುತ್ತಾ ಹೋದಹಾಗೆ, ಪ್ರೊಡಕ್ಷನ್ ಜಾಸ್ತಿಯಾಗುತ್ತಿದ್ದರೆ ದೇಶದ ಜನಗಳಿಗೆ ಸಂತೋಷವಾಗುತ್ತಾ ಇರುತ್ತದೆ.

ನೀರಾವರಿ ಪಂಪು ಸೆಟ್ಟುಗಳು ಸಕಾಲದಲ್ಲಿ ಜನಗಳಿಗೆ ಹಾಸನ ಡಿಸ್ಟ್ರಿಕ್ಟಿನಲ್ಲಿ ಸರಬರಾಯಿ ಯಾಗದೆ ತುಂಬ ತೊಂದರೆಯಾಗಿದೆ. ಆ ತೊಂದರೆ ತಪ್ಪಿಸಬೇಕು.

ಗ್ರಾಮಾಂತರ ಪ್ರದೇಶದಲ್ಲಿ ವಿದ್ಯುಚ್ಛಕ್ತಿಯನ್ನು ಕಟ್ ಮಾಡಿರುವುದರಿಂದ ಜನಗಳಿಗೆ ತುಂಬ ತೊಂದರೆಯಾಗಿದೆ. ಗ್ರಾಮಾಂತರ ಪ್ರದೇಶದಲ್ಲಿ ಕೂಡ ವಿದ್ಯುಚ್ಛಕ್ತಿ ಅನುಕೂಲವನ್ನು ಹೊಂದು

(SRI H. R. KESHAVAMURTHY)

ವುದಕ್ಕೆ ಏರ್ಪಾಡು ಮಾಡಿಕೊಡಬೇಕು. Equality of opportunities ಮತ್ತು democratic principles ಪ್ರತಿಯೊಬ್ಬರೂ ಅನುಭವಿಸುವ ಹಕ್ಕು ಇರಬೇಕು; ಹಾಗೆ ಅನುಭವಿಸುವುದಕ್ಕೆ ಗ್ರಾಮಾಂತರ ಪ್ರದೇಶದ ಜನಗಳಿಗೂ ಅವಕಾಶ ಮಾಡಿಕೊಡಬೇಕು ಎಂದು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಗ್ರಾಮಾಧಿಕಾರಿಗಳ ಪರಿಸ್ಥಿತಿ ತ್ರಿಶಂಕು ಸ್ವರ್ಗದಲ್ಲಿದ್ದ ಹಾಗಿದೆ; mutual negotiation ನಿಂದ ಅವರ question solve ಮಾಡಿ, ಕಷ್ಟ ತಪ್ಪಿಸಬೇಕು.

ಹಾಸನ-ಮಂಗಳೂರು ರೈಲ್ವೆ ಮಾರ್ಗವನ್ನು ಸಾಧ್ಯವಾದಷ್ಟು ಬೇಗನೆ ಕಾರ್ಯಗತ ಮಾಡಲು ಪ್ರಯತ್ನ ಮಾಡಬೇಕು.

ಶ್ರೀ ಜಿ. ಎ. ತಿಮ್ಮಪ್ಪಗೌಡ (ಅರಕಲಗೂಡು).—ಮಾನ್ಯ ಸಭಾಪತಿಗಳೇ, ರಾಜ್ಯಪಾಲರ ಭಾಷಣವನ್ನು ಪುಷ್ಟೀಕರಿಸುತ್ತಾ ಎರಡು ಮಾತಗಳನ್ನಾಡಬೇಕೆಂದಿದ್ದೇನೆ. ಪ್ರಥಮವಾಗಿ ತುರ್ತು ಪರಿಸ್ಥಿತಿಯನ್ನು ಕುರಿತು ನಮ್ಮ ಸರ್ಕಾರದವರು ಏನೇನು ಕೆಲಸಕಾರ್ಯಗಳನ್ನು ಕೈಕೊಂಡಿದ್ದಾರೆ ಎಂಬುದನ್ನು ರಾಜ್ಯಪಾಲರು ತಮ್ಮ ಭಾಷಣದಲ್ಲಿ ವಿಶದವಾಗಿ ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಎದುರು ಪಕ್ಷದ ನಾಯಕರು ಮತ್ತು ಇನ್ನೂ ಕೆಲವು ಸ್ನೇಹಿತರು ಅದರಲ್ಲೂ ಶ್ರೀಮಾನ್ ಸುಂಠನಕರ್‌ರವರು ರಕ್ಷಣಾನಿಧಿ ವಸೂಲಿ ವಿಚಾರವಾಗಿ ಬಲಾತ್ಕಾರ ನಡೆದಿದೆ ಎಂದು ಹೇಳಿದರು. ಬಹಳ ಉತ್ಪ್ರೇಕ್ಷೆಯಿಂದ ಬಹಳ ಒತ್ತಾಯವಾಗಿ ಪದೇಪದೇ ಇದನ್ನು ಕೆಲವು ಸದಸ್ಯರು ಈ ಸಭೆಯಲ್ಲಿ ತಿಳಿಸಿದ್ದಾರೆ. ಇದು ಅಷ್ಟು ಯುಕ್ತವಾದುದಲ್ಲ ಎಂದು ನಾನು ನನ್ನ ಸ್ನೇಹಿತರಿಗೆ ತಿಳಿಸುತ್ತೇನೆ. ಇದು ಎಲ್ಲರಿಗೂ ಗೊತ್ತಿದೆ ನಮ್ಮ ದೇಶಕ್ಕೆ ಒದಗಿದ ಒಂದು ಗಂಡಾಂತರ ಪರಿಸ್ಥಿತಿ ಇದು. ಇಂದೋ ನಾಳೆಯೋ ಚೀಣೀಯರು ನಮ್ಮ ಮೇಲೆ ಧಾಳಿ ನಡೆಸಿ, ಇಡೀ ದೇಶವೇ ಆಕ್ರಮಣಕ್ಕೆ ತುತ್ತಾಗತಕ್ಕ ಸಂದರ್ಭವಿರುವಾಗ, ಜನತೆ ತಮ್ಮ ಸರ್ವಸ್ವವನ್ನು ತ್ಯಾಗಮಾಡುವುದಕ್ಕೆ ಸಿದ್ಧರಾಗಿರತಕ್ಕ ಕಾಲದಲ್ಲಿ ಈಗಾಗಲೇ ನಡೆದಿರತಕ್ಕಂಥ ಘಟನೆಗಳನ್ನು ಇಷ್ಟು ದಿವಸದಮೇಲೆ ಉತ್ಪ್ರೇಕ್ಷಿಸಿ ಮಾತನಾಡುವುದು ಜವಾಬ್ದಾರಿಯುತವಾದುದಲ್ಲ ಎಂದು ತಿಳಿಸದೇ ವಿಧಿಯಿಲ್ಲ. ರೈತರು, ಬಡವರು, ಹಳ್ಳಿಯವರು, ಕಾರ್ಮಿಕರು ಮೊದಲ್ಗೊಂಡು ತಾವೇ ತಾವಾಗಿ ಬಹಳ ಪ್ರೀತಿಯಿಂದ ದೇಶಾಭಿಮಾನದಿಂದ ಅವರ ಶಕ್ತಿಮೀರಿ ಕಾಣಿಕೆಗಳನ್ನು ಕೊಟ್ಟಿದ್ದಾರೆ. ನಮ್ಮ ಸ್ನೇಹಿತರಿಗೆ ತಿಳಿಯದು, ಸಮಾಜದಲ್ಲಿ ಎಂಥೆಂಥ ವ್ಯಕ್ತಿಗಳಿದ್ದಾರೆ ಎನ್ನುವುದು. ಸಮಾಜದಲ್ಲಿ ಸ್ವಾರ್ಥಿಗಳು, ಲೋಭಿಗಳು ಅವರು ಎಂಥವರು ಶ್ರೀಮಂತರಾಗಿರುವವರು, ಭಾರಿ ಭಾರಿ ವರ್ತಕರು, ಭಾರಿ ಭಾರಿ ಕೈಗಾರಿಕೆಗಳನ್ನು ನಡೆಸತಕ್ಕ ಇಂಡಸ್ಟ್ರಿಯಲಿಸ್ಟ್ಸ್ ಇಂಥಾ ಜನ ನಮ್ಮ ದೇಶಕ್ಕೆ ಗಂಡಾಂತರ ಒದಗಿ ದೇಶವು ಪರಕೀಯರ ಧಾಳಿಗೆ ತುತ್ತಾಗಿರತಕ್ಕ ಕಾಲದಲ್ಲೂ ಕೂಡ ಅವರ ಹತ್ತಿರ ಹೋಗಿ ಸಹಾಯ ಮಾಡಬೇಕೆಂದು ಕೇಳಿದಾಗ ಏನು ಹೇಳಿದರು ಎಂಬುದರ ಅನುಭವವನ್ನು ನಮ್ಮ ಮಿತ್ರರಾದ ಗೋಪಾಲಗೌಡರು ಪಡೆದಿದ್ದರೆ ಆ ರೀತಿ ಟೀಕೆ ಮಾಡುತ್ತಾ ಇರಲಿಲ್ಲ; ಆರೀತಿ ಭಾಷಣ ಮಾಡುತ್ತಾ ಇರಲಿಲ್ಲ. ಅವರಿಗೆ ಅಂಥ ಅನುಭವವಿಲ್ಲ. ಶ್ರೀಮಾನ್ ಸುಂಠನಕರ್‌ರವರು ಕೂಡ ಬಹಳ ಉತ್ಪ್ರೇಕ್ಷೆಯಿಂದ ಮಾತನಾಡಿದರು. ನಿಮ್ಮ ಪಕ್ಕದ ಮನೆಗೆ ಬೆಂಕಿ ಬಿದ್ದು ಹತ್ತಿಕೊಂಡು ಉರಿಯುತ್ತಿದೆ ಆರಿಸುವುದಕ್ಕೆ ನೀರು ತರಲು ಬಿಂದಿಗೆಕೊಡಿ ಎಂದು ಕೇಳಿದರೆ ಇಲ್ಲ ಎಂದು ಹೇಳುವವರಿಗೆ ಬಲಾತ್ಕಾರ ಮಾಡಲೇ ಬೇಕಾಗುತ್ತದೆ. ಬಲಾತ್ಕಾರ ಮಾಡದಿದ್ದರೆ, ಕೊಡ ತೆಗೆದುಕೊಂಡು ಹೋಗಿ ನೀರು ಹಾಕದಿದ್ದರೆ ಹತ್ತಿಕೊಂಡು ಉರಿಯುತ್ತಿರುವ ಮನೆ ನಾಶವಾಗುವುದೂ ಅಲ್ಲದೆ ಅವರ ಪಕ್ಕದಲ್ಲಿದ್ದ ಅವನ ಮನೆಯೂ ನಾಶವಾಗುತ್ತದೆ ಎಂಬುದನ್ನು ಅವನು ಯೋಚನೆ ಮಾಡುವುದಿಲ್ಲ. ಸಹಾಯ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಹಾಗೆಯೇ ದೇಶಕ್ಕೆ ವಿಪತ್ತು ಒದಗಿರುವಾಗ ಬಲಾತ್ಕಾರ ಮಾಡಬೇಕಾಗುತ್ತದೆ. ನಾನು ಅನೇಕ ಕಡೆ ಹೋಗಿದ್ದೇನೆ ಅನೇಕ ವಿಷಯಗಳನ್ನು ತಿಳಿದುಕೊಂಡಿದ್ದೇನೆ. ವಸೂಲಿಗೆ ಹೋಗಿದ್ದ ಕಡೆ ಕೆಲವು ವೇಳೆ ಬಿರುಸು ಮಾತಾನಾಡಿರಬಹುದು. ಅದಕ್ಕಿಂತ ಹೆಚ್ಚಿಗೆ ಬಲಾತ್ಕಾರವನ್ನು ಈ ಕಾಲದಲ್ಲಿ ಯಾವ ಅಧಿಕಾರಿಯೂ ಕೂಡ ಮಾಡುವುದಕ್ಕೆ ಅವಕಾಶವಿಲ್ಲ. ಪ್ರಜಾಪ್ರಭುತ್ವದ ಸೋಗಿನಲ್ಲಿ ಸ್ವಾತಂತ್ರ್ಯದ ಸೋಗಿನಲ್ಲಿ ದೇಶಕ್ಕೆ ವಿಪತ್ತು ಬಂದಾಗಲೂ ಕೂಡ ಅದನ್ನು ಅರಿತುಕೊಳ್ಳದೆ ಇರತಕ್ಕ ಜನರಿಗೆ ಅಲ್ಪಸ್ವಲ್ಪ ಒತ್ತಾಯ ಮಾಡಲೇಬೇಕೆಂಬುದು ನನ್ನ ಅಭಿಪ್ರಾಯವಾಗಿದೆ. ಮಾನ್ಯ ಮುಖ್ಯ ಮಂತ್ರಿಗಳೂ ಕೂಡ ಶ್ರೀಮಂತರು ಅದರಲ್ಲೂ ಪಟ್ಟಣದಲ್ಲಿರತಕ್ಕ ಧನಿಕರು ಸಹಾಯ ಮಾಡುವುದಕ್ಕೆ ಮುಂದೆ ಬರುತ್ತಾ ಇಲ್ಲ, ಅವರಿಂದ ಕಡ್ಡಾಯವಾದ ರೀತಿಯಲ್ಲಿ ವಸೂಲ ಮಾಡುವುದಕ್ಕೆ ಏನಾದರೂ ಒಂದು ಕಾನೂನು ಮಾಡಬೇಕು. ಅದರ ಅಗತ್ಯ ಇದೆ. ಇದನ್ನು ಆಲೋಚನೆ ಮಾಡುತ್ತಾ ಇದ್ದೇವೆ ಎಂಬುದನ್ನು ಕೂಡ ಹೇಳಿದ್ದನ್ನು ಒಂದು ಸಾರಿ ಪತ್ರಿಕೆಯಲ್ಲಿ ಓದಿದ್ದೇನೆ. ಆ ರೀತಿ ಅಂತಹವರಿಗೆ ಸ್ವಲ್ಪ ಒತ್ತಾಯಮಾಡದಿದ್ದರೆ ಹಣ ಬರುವು

ದಿಲ್ಲ. ಬಡವರು, ರೈತರು, ಮತ್ತು ಕಾರ್ಮಿಕರಿಂದ ತಾನೇ ತಾನಾಗಿ ಹಣ ಬಂದಿದೆ; ಒತ್ತಾಯ ಮಾಡಿ, ಯಾರಿಗೂ ಯಾವ ತೊಂದರೆಯನ್ನು ಕೊಟ್ಟಿಲ್ಲ. ತುರ್ತು ಪರಿಸ್ಥಿತಿ ಇಲ್ಲಿಗೇ ಮುಗಿಯುತ್ತದೆ ಎಂಬ ಭಾವನೆಯಿಂದಲೂ ಕೂಡ ಈಗ ನಾವು ಮಾತನಾಡಬಾರದು ಎಂದು ಅನಿಸುತ್ತದೆ. ಇನ್ನೂ ನಮ್ಮ ದೇಶವನ್ನು ಬಲಗೊಳಿಸಬೇಕಾಗಿದೆ. ನಮ್ಮ ಜನತೆಯನ್ನು ಸಿದ್ಧಗೊಳಿಸಬೇಕಾಗಿದೆ. ಸಾಮಗ್ರಿಗಳನ್ನು ತಯಾರು ಮಾಡಿಕೊಳ್ಳಬೇಕಾಗಿದೆ. ಇದಕ್ಕೆ ಕೋಟ್ಯಾಂತರ ರೂಪಾಯಿ ಬೇಕಾಗಿದೆ. ಇಂಥಾ ಸಂದರ್ಭದಲ್ಲಿ ನಮ್ಮ ಸ್ನೇಹಿತರು ಇದಕ್ಕೆ ಹೆಚ್ಚಿನ ಬೆಂಬಲ ಕೊಡದೇ ಬಲಾತ್ಕಾರ ನಡೆಯುತ್ತಾ ಇದೆ; ಹಾಗೆ ಹೀಗೆ ಎನ್ನತಕ್ಕ ರೀತಿಯಲ್ಲಿ ಮಾತನಾಡಬಾರದು. ಇದು ನಿಜವಾಗಿಯೂ ಕೂಡ ಅಂಥಾ ಒಂದು ಸಿದ್ಧತೆ ಮಾಡಿಕೊಳ್ಳುವುದಕ್ಕೆ ಆತಂಕವನ್ನುಂಟು ಮಾಡಿದಂತಾಗುತ್ತದೆ ಎಂದು ಭಾವಿಸುತ್ತೇನೆ.

ಇನ್ನು ಎರಡನೆಯದಾಗಿ ರಾಜ್ಯಪಾಲರು ನೀರಾವರಿ ವಿಚಾರವನ್ನು ಪ್ರಸ್ತಾಪಿಸಿದ್ದಾರೆ. ಸಣ್ಣ ನೀರಾವರಿ ಖಾತೆಯ ಉಪಮಂತ್ರಿಗಳಾದ ಅಲೂರು ಹನುಮಂತಪ್ಪನವರು ಸಣ್ಣ ನೀರಾವರಿ ವಿಚಾರದಲ್ಲಿ ಹೆಚ್ಚಿನ ಮಟ್ಟಿಗೆ ಸಹಾಯ ರೈತರಿಗೆ ದೊರಕುತ್ತದೆ, ರೈತರು ಎಷ್ಟು ಕೇಳುತ್ತಾರೆಯೋ ಎಷ್ಟು ಅಗತ್ಯವಿದೆಯೋ ಅಷ್ಟು ಪಂಪುಗಳನ್ನೂ ಕೂಡ ನಾವು ಒದಗಿಸುತ್ತೇವೆ, ಎಷ್ಟು ಬಾವಿಗಳನ್ನು ರೈತರು ತೋಡುವುದಕ್ಕೆ ಸಿದ್ಧವಾಗಿದ್ದಾರೋ ಅಷ್ಟು ಬಾವಿಗಳಿಗೂ ಕೂಡ ಸಹಾಯ ಮಾಡುವುದಕ್ಕೆ ಸಿದ್ಧವಾಗಿದ್ದೇವೆ. ಮೈನರ್ ಕೆರೆಗಳ ರೆಸ್ಟೋರೇಷನ್ ಮತ್ತು ರಿಪೇರಿ ವಿಚಾರದಲ್ಲೂ ಕೂಡ ಅಗತ್ಯತೆ ಇರುವಷ್ಟು ಹಣವನ್ನು ಒದಗಿಸುತ್ತೇವೆ. ಎಂದು ಹೇಳಿ ಪದೇ ಪದೇ ಸ್ಪಷ್ಟವಾಗಿ ತಿಳಿಸಿದ್ದಾರೆ. ಪತ್ರಿಕೆಗಳಲ್ಲೂ ಹೇಳಿಕೆ ಕೊಟ್ಟಿದ್ದಾರೆ, ಮತ್ತು ನಮಗೆಲ್ಲರಿಗೂ ಕೂಡ ಭರವಸೆ ಕೊಟ್ಟಿದ್ದಾರೆ. ತುರ್ತು ಪರಿಸ್ಥಿತಿಯಲ್ಲಿ ಸಣ್ಣ ನೀರಾವರಿ ಕೆಲಸಗಳನ್ನು ನಡೆಸುವುದಕ್ಕೆ ಸರ್ಕಾರದವರು ಮುಂದೆ ಬಂದಿರುವುದು ನಿಜವಾಗಿಯೂ ಕೂಡ ಅಭಿನಂದನೀಯವಾದುದು. ಎಷ್ಟು ಹಣಬೇಕೊ ಅಷ್ಟು ಹಣವನ್ನು ಒದಗಿಸಿಕೊಂಡು ಪ್ರೋಗ್ರಾಂ ಪ್ರಕಾರ ಆ ಕೆಲಸಕಾರ್ಯಗಳನ್ನೂ ನೆರವೇರಿಸಬೇಕೆಂದು ನಿವೇದಿಸುತ್ತೇನೆ.

ಕೃಷ್ಣಾ-ಗೋದಾವರಿ ನೀರಿನ ವಿವಾದದ ವಿಚಾರದಲ್ಲಿ ಸ್ನೇಹಿತರು ಸಾಕಷ್ಟು ಮಟ್ಟಿಗೆ ತಿಳಿಸಿದ್ದಾರೆ. ಮಹಾರಾಷ್ಟ್ರದವರು, ಗುಜರಾತಿನವರು ನಮ್ಮ ಸರ್ಕಾರಕ್ಕಿಂತಲೂ ಕೂಡ ಒಳ್ಳೆಯ ಉತ್ತಮವಾದ ಸನ್ನಿವೇಶದಲ್ಲಿ ಇರಬಹುದು.

6-30 P.M.

ಇವರ ಪ್ರಭಾವ ಕೇಂದ್ರದಲ್ಲಿ ಹೆಚ್ಚಿನ ಮಟ್ಟದಲ್ಲಿ ನಡೆಯುತ್ತದೆಂಬ ಸಂಶಯಗಳು ಇರುತ್ತವೆ. ಆದುದರಿಂದ ನಮ್ಮ ಮುಖ್ಯಮಂತ್ರಿಗಳು ಇತರರ ಸಣ್ಣಪುಟ್ಟ ಒತ್ತಾಯಗಳ ಕಡೆಗೆ ಲಕ್ಷ್ಯವಿಡದೆ ಈ ಕಾರ್ಯವನ್ನು ಬಹಳ ದಿಟ್ಟತನದಿಂದ ವರ್ತಿಸಿ ಸಾಧಿಸುತ್ತಾರೆಂಬ ನಂಬಿಕೆ ನಮಗಿದೆ. ಅವರಿಗೆ ಈ ವಿಚಾರದಲ್ಲಿ ದೇಶದ ಇಡೀ ಜನತೆಯ ಬೆಂಬಲವಿದೆ. ಮೇಲಾಗಿ ಅವರು ಇಡೀ ದೇಶದ ಜನಾನುರಾಗಿಗಳಾಗಿದ್ದಾರೆ. ಈಗಾಗಲೇ ಶ್ರೀ ಅಣ್ಣಾರಾಯರು ಹೇಳಿದ ಹಾಗೆ ಈ ಕಾರ್ಯದಲ್ಲಿ ಅವರು ಒಂದು ಹೆಜ್ಜೆಯನ್ನು ಹಿಂದಕ್ಕೆ ಇಟ್ಟರೆ ದೇಶಕ್ಕೆ ಬಹಳ ಅನ್ಯಾಯವಾಗುತ್ತದೆ. ಆದುದರಿಂದ ನಮ್ಮ ಸರ್ಕಾರ ಈ ಕಾರ್ಯವನ್ನು ಬಹಳ ದಿಟ್ಟತನದಿಂದ ಸಾಧಿಸುವರೆಂದು ನಂಬಿದ್ದೇನೆ. ಕೊನೆಯದಾಗಿ ನಾನು ಪದೇಪದೇ ಹೇಳುತ್ತಿರುವ ಆ ಕಾವೇರಿ ನ್ಯಾಲಿಗೆ ಸಂಬಂಧಪಟ್ಟ ಹಾಗೆ ಹಾರಂಗಿ-ಕಂಬದಕಡಗಳ ಯೋಜನೆಯನ್ನೂ ಕೂಡ ಸರ್ಕಾರ ತ್ವರಿತದಿಂದ ಕಾರ್ಯಾರಂಭ ಮಾಡಬೇಕು. ಆದರೆ ಈ ಯೋಜನೆಗೆ ಸಂಬಂಧಪಟ್ಟ ಮಾನ್ಯ ಮಂತ್ರಿಗಳು ಹಾಲಿ ಸಭೆಯಲ್ಲಿರುವುದಿಲ್ಲ. ಹಾರಂಗಿ ಪ್ರಾಜೆಕ್ಟ್ ಇಡೀ ಭಾರತದಲ್ಲೇ ಬಹಳ ಯೋಗ್ಯವಾಗಿದ್ದು ಇವುಗಳಿಗೆ ಸರಿಸಮಾನಾಗತಕ್ಕ ಮತ್ತೊಂದು ಲಾಭದಾಯಕವಾದ ಯೋಜನೆ ಇರುವುದಿಲ್ಲವೆಂಬುದು ಸರ್ವರಿಗೂ ಗೊತ್ತೇ ಇದೆ. ಇಂಥ ಉಪಯುಕ್ತವಾದ ಹಾರಂಗಿ ಯೋಜನೆಯನ್ನು ಯಾರದೋ ಒತ್ತಾಯಕ್ಕೂ, ದಾಕ್ಷಿಣ್ಯಗಳಿಗೂ ಒಳಗಾಗಿ ಮುಂದಕ್ಕೆ ತಳ್ಳಿಕೊಂಡು ಬರುತ್ತಿದ್ದಾರೆ. ಈ ಯೋಜನೆಯನ್ನು ಕಾಲಕ್ಕೆ ಸರಿಯಾಗಿ ಕೈಗೊಳ್ಳದಿರುವುದು ಬಹಳ ದುರದೃಷ್ಟಕರವಾದ ಸಂಗತಿ! ಹೀಗೆ ಯೋಗ್ಯವಾದ ಕಾರ್ಯಗಳನ್ನು ಇವರು ಉದಾಸೀನ ಮಾಡುತ್ತಿರುವುದರಿಂದಲೇನೆ ಇವರ ಮಾತುಗಳಿಗೆ ಕೇಂದ್ರದಲ್ಲಿ ಯಾವ ಮಾನ್ಯತೆಯೂ ದೊರೆಯದಿರುವುದಕ್ಕೆ ಕಾರಣವಾಗಿರಬಹುದೋ ಏನೋ ಎಂದೆನಿಸುತ್ತದೆ. ಈ ಪ್ರಾಜೆಕ್ಟಿನಿಂದ ಸುಮಾರು ಒಂದು ಲಕ್ಷ ಐದು ಸಾವಿರ ಎಕರೆಗೆ ನೀರು ಸರಬರಾಯಿ ಆಗುತ್ತದೆ. ಕೇವಲ ಒಂದೇ ಒಂದೂರು ಮತ್ತು 2,000 ಎಕ್ರೆ ಜಮೀನು ಮಾತ್ರ ಮುಳುಗಡೆ ಆಗುತ್ತದೆ. ಇಂಥ ಅತಿ ಕಡಮೆ ವೆಚ್ಚದಲ್ಲಿ ಇಷ್ಟು ಅಧಿಕ ಲಾಭದಾಯಕವಾದ ಪ್ರಾಜೆಕ್ಟ್ ಇಡೀ ಭಾರತದಲ್ಲೇ ಇನ್ನೊಂದಿಲ್ಲ. ಆದರೆ ಈ ಯೋಜನೆಯ ಬಗ್ಗೆ ಕೊಡಗಿನಲ್ಲಿ ಕೆಲವರ ವಿರೋಧವಿರಬಹುದು. ಆದಾಗ್ಯೂ ಅಲ್ಲಿ ಇರತಕ್ಕ ತೊಂದರೆ ಕೇವಲ ಒಬ್ಬ ಕಾಫಿ ಪ್ಲಾಂಟರಿಗೆ ಮಾತ್ರ. ಆ ಕೊಡಗಿನವರು

(ಶ್ರೀ ಜಿ. ಎ. ತಿಮ್ಮಪ್ಪಗೌಡ)

ಕಳೆದುಕೊಳ್ಳುವುದೆಲ್ಲ ಒಂದು ಸಾವಿರ ಎಕರೆ ಭೂಮಿ ಮಾತ್ರ. ಆದರೆ ಆ ಜನರೇನು ಈ ದಿವಸ ಆ ಕಾಫಿ ಎಸ್ಟೇಟನ್ನು ಕಳೆದುಕೊಳ್ಳುತ್ತಾರೋ ಅಂಥವರಿಗೆ ನಾನು ಭರವಸೆ ಕೊಡುತ್ತೇನೆ. ಏನೆಂದರೆ ಆ ಒಂದು ಸಾವಿರ ಎಕರೆ ಎಸ್ಟೇಟಿಗೆ ಬದಲು 2 ಸಾವಿರ ಎಕರೆ ಕಾಫಿ ಎಸ್ಟೇಟನ್ನು ಮಾಡಿಸಿ ಕೊಡುತ್ತೇನೆ ಎಂದು. ಈ ಹಿಂದೆ ಈ ಯೋಜನೆ ಇನ್ನೇನು ಪ್ರಾರಂಭವಾಗುವುದರಲ್ಲಿದೆ ಎನ್ನುವಾಗ ಇದನ್ನು ಹಿಂದಕ್ಕೆ ತಳ್ಳಿಬಿಟ್ಟರು. ಹಿಂದೆ ಮಂತ್ರಿಗಳಾಗಿದ್ದ ಶ್ರೀ ಎಚ್. ಎಂ. ಚನ್ನಬಸಪ್ಪನವರು ಆ ಕಡೆ ಪ್ರವಾಸ ಬಂದಿದ್ದಾಗ ಈ ಯೋಜನೆಯನ್ನು ಸಧ್ಯದಲ್ಲೇ ಜಾರಿಗೆ ಕೊಡುತ್ತೇವೆ, ಇಂಥಿಂಥಾ ಊರಿಗೆ ಇಷ್ಟೇ ಜಮೀನು ನೀರು ಸಾಗುವಳಿಗೆ ಬರುತ್ತೆಂಬ ಭರವಸೆಯನ್ನು ಸಹ ಕೊಟ್ಟು ನೀವೆಲ್ಲರೂ ಸಿದ್ಧರಾಗಿರಿ ಎಂತ ಹೇಳಿ ಬಂದಿದ್ದರು. ಆರೀತಿ ಕೂಡಲೆ ಕೈಗೊಳ್ಳಬೇಕಾಗಿದ್ದ ಕಾರ್ಯವನ್ನು ಹೀಗೆ ಹಿಂದಕ್ಕೆ ನೂಕಿದ್ದು ದೇಶಕ್ಕೆ ಅನ್ಯಾಯ ಮಾಡಿದಂತಾಗಿದೆ. ಈ ಕಾರ್‍ಯವನ್ನು ಕೊಡಗಿನ ಕೆಲವು ಮಂದಿ ಒಪ್ಪದಿರಬಹುದು. ಅದಕ್ಕೆ ಪ್ರಾಯಶಃ ಕಾರಣ ಸರ್ಕಾರದವರು ಹಾರಂಗಿ, ಕಂಬದಕಡ ಮತ್ತು ಹೇಮಾವತಿ ಈ ಪ್ರಾಜೆಕ್ಟ್‌ಗಳನ್ನೂ ಒಂದೇ ಸಾರ್ತಿಗೆ ತೆಗೆದುಕೊಳ್ಳುತ್ತೇವೆಂದು ಹೇಳಿದ್ದು. ಆದರೆ ಈ ಮೂರರಲ್ಲಿ ಯಾವುದು ಅತ್ಯಂತ ಸುಲಭ ಖರ್ಚಿನಲ್ಲಿ ಹೆಚ್ಚು ಲಾಭದಾಯಕವಾಗಿದೆಯೋ ಅಂಥ ಈ ಹಾರಂಗಿ ಪ್ರಾಜೆಕ್ಟಿಗೆ ಪ್ರಯಾರ್ಟಿ ಕೊಟ್ಟು, ಕೆಲಸ ಪ್ರಾರಂಭಿಸಿದ್ದರೆ ಕೊಡಗಿನವರ ವಿರೋಧವಿರುತ್ತಿರಲಿಲ್ಲ. ಆರೀತಿ ಮಾಡಿದ್ದರೆ ಈ ದಿವಸ ನಮ್ಮ ರಾಜ್ಯದಲ್ಲಿ ಸಾವಿರಾರು ಎಕರೆ ನೀರಾವರಿಯಾಗುತ್ತಿತ್ತು. ಅಂಥ ಉಪಯುಕ್ತ ಯೋಜನೆಯನ್ನು ಹಿಂದಕ್ಕೆ ತಳ್ಳಿ ಈ ಬಗ್ಗೆ ಸರ್ಕಾರ ಆಲ್ಟರ್‌ನೇಟೀವ್ ಯೋಜನೆಗಳನ್ನು ಆಲೋಚಿಸುತ್ತಿದ್ದಾರೆಂದು ಕೇಳುತ್ತಿದ್ದೇನೆ. ಅಂತಹ ಆಲ್ಟರ್‌ನೇಟೀವ್ ಯೋಜನೆಗಳನ್ನು ಈಗ ಯೋಚಿಸುವುದು ಸರಿಯಾದ್ದಲ್ಲ. ಕಾರಣವೂ ಇಲ್ಲ. ಈ ಹಿಂದೆ ಸರ್ಕಾರದವರೇನು ತೀರ್ಮಾನ ಮಾಡಿದ್ದರೋ ಆ ಯೋಜನೆಯನ್ನೇ ಕಾರ್ಯರೂಪಕ್ಕೆ ತರಬೇಕೆಂದು ನಾನು ಈ ಸರ್ಕಾರದವರಲ್ಲಿ ಪ್ರಾರ್ಥನೆ ಮಾಡುತ್ತಿದ್ದೇನೆ. ಇಷ್ಟು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. SPEAKER.—Now Sri G. Marulappa will speak. But the Hon'ble Member is not here. Sri Venkatagiriyappa will therefore speak now.

ಶ್ರೀ ವಿ. ವೆಂಕಟಗಿರಿಯಪ್ಪ (ಕೋಲಾರ).—ಮಾನ್ಯ ಸಭಾಧ್ಯಕ್ಷರೇ, ನಾನು ಈಗ ರಾಜ್ಯಪಾಲರ ಭಾಷಣವನ್ನು ಓದಿದ ಮೇಲೆ ನನಗನಿಸುತ್ತದೆ. ಇದು ನಮ್ಮ ಮುಖ್ಯಮಂತ್ರಿಗಳಾದ ಶ್ರೀ ನಿಜಲಿಂಗಪ್ಪನವರ ಮಂತ್ರಿಮಂಡಲಕ್ಕೆ ಕೊಟ್ಟರತಕ್ಕ ಒಂದು ದೊಡ್ಡ ಸರ್ಟಿಫಿಕೇಟಿದ್ದಂತೆ ಎಂದು ನನಗೆ ಅನಿಸುತ್ತದೆ. ಹೋದ ವರ್ಷದ ರಾಜ್ಯಪಾಲರ ಭಾಷಣದಲ್ಲಿ ಅವರು ರಾಜ್ಯಕ್ಕೆ ಏನೊಂದು ಕರೆಯನ್ನಿತ್ತಿದ್ದರೋ ಅದನ್ನು ಗಮನಿಸಿ ನಮ್ಮ ಘನ ಸರ್ಕಾರದವರು ಈವರೆಗೆ ಏನೇನು ಮಹತ್ಕಾರ್ಯಗಳನ್ನು ಸಾಧಿಸಿದ್ದಾರೆ, ಅವರ ಆಡಳಿತದಲ್ಲಿರತಕ್ಕ ಲೋಪದೋಷಗಳೇನು ಎಂಬುದನ್ನು ತೋರಿಸದೆ ''ನಮ್ಮ ಸರ್ಕಾರ ಮುಂದೆ ಇಂತಿಂಥ ಕೆಲಸಗಳನ್ನು ಮಾಡತಕ್ಕದ್ದಾಗಿದೆ'' ಎಂದು ಹೇಳಿ ಆ ಬಗ್ಗೆ ಈ ಸರ್ಕಾರಕ್ಕೆ ಒಂದು ಸರ್ಟಿಫಿಕೇಟನ್ನು ಕೊಟ್ಟು ಆ ಸಂದರ್ಭದಲ್ಲಿ ಈ ಒಂದು ಪಟ್ಟಿಯನ್ನು ತಯಾರಿಸಿ ನಮ್ಮ ಮುಂದಿಟ್ಟಿದ್ದಾರೆ.

ಆದರೆ ನಮ್ಮ ರಾಜ್ಯಪಾಲರು ರಾಷ್ಟ್ರದ ಜರೂರು ಪರಿಸ್ಥಿತಿಯ ಬಗ್ಗೆ ಹೆಚ್ಚು ವಿಷಯಗಳನ್ನೇನೋ ತಿಳಿಸಿದ್ದಾರೆ. ದೇಶದ ರಕ್ಷಣೆಗಾಗಿ ಜನರು ಅಧಿಕ ಸಂಖ್ಯೆಯಲ್ಲಿ ಸೈನ್ಯಕ್ಕೆ ಸೇರಬೇಕು, ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ N.C.C. ಇತ್ಯಾದಿ ಟ್ರೈನಿಂಗುಗಳನ್ನು ಪಡೆಯಬೇಕು, ರಕ್ಷಣಾ ನಿಧಿಗೆ ಜನರು ಹೆಚ್ಚಿನ ಧನಕನಕಗಳ ಸಹಾಯ ನೀಡಬೇಕು—ಇತ್ಯಾದಿ ಅನೇಕ ವಿಷಯಗಳನ್ನು ತಿಳಿಸಿದ್ದಾರೆ. ಆದರೆ ನಮ್ಮ ರಾಜ್ಯಪಾಲರ ಕರೆ ಏನಿದೆ ಇದು ನಮ್ಮ ರಾಷ್ಟ್ರದ ಪ್ರಧಾನ ಮಂತ್ರಿಗಳಾದ ನೆಹರೂರವರು ಇತ್ತಿರುವ ಕರೆಗೆ ಅನುಸರಿಸಿದುದಾಗಿರುತ್ತದೆ. ಇದರ ಬಗ್ಗೆ ಭಿನ್ನಾಭಿಪ್ರಾಯ ಯಾರಿಗೂ ಇಲ್ಲ. ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ನಾನಾ ರಾಜಕೀಯ ಗೊಂದಲಗಳಿರುವ ಇಂಥಾ ಸಮಯದಲ್ಲಿ ನಮ್ಮ ಪ್ರಧಾನ ಮಂತ್ರಿಗಳು ಇತ್ತಿರುವ ಆದೇಶಾನುಸಾರ ನಮ್ಮ ರಾಷ್ಟ್ರದಲ್ಲಿ ಬಲವಾದ ಸೈನ್ಯವನ್ನು ಕಟ್ಟಬೇಕು. ಬರೀ ಶಾಂತಿದೂತರಿಂದಲೇ ರಾಷ್ಟ್ರದ ಶಾಂತಿಯನ್ನು ರಕ್ಷಣೆ ಮಾಡುವುದಕ್ಕಾಗುವುದಿಲ್ಲ. ಯುದ್ಧಕ್ಕೆ ಸಿದ್ಧರಾಗತಕ್ಕ ಜನಾಂಗ ಸರ್ವತ್ಯಾಗಕ್ಕೂ ಸಿದ್ಧರಾಗಲೇ ಬೇಕು. ಆದರೆ ಈ ಮಾತುಗಳೆಲ್ಲ ಕೇವಲ ಜನಸಾಮಾನ್ಯರೇನಿದ್ದಾರೆ ಅವರಿಗೆ ಮಾತ್ರವೇ ಅನ್ವಯಿಸದೆ ಇದು ಸರ್ವರಿಗೂ ಅನ್ವಯಿಸತಕ್ಕವುಗಳಾಗಿರಬೇಕು. ಈ ಕರೆಯಲ್ಲಿ ಕೇವಲ ಜನಸಾಮಾನ್ಯರೇನಿದ್ದಾರೆ ಅವರಿಗೆ ಮಾತ್ರ ಮಾಡಿದ ಕರೆಯಾಗಿರುತ್ತೆಂಬ ಮನೋಭಾವವನ್ನು ಕಾಂಗ್ರೆಸ್ ಪಕ್ಷದವರು ಬದಲಾವಣೆ ಮಾಡಿಕೊಳ್ಳಬೇಕು. ನಮ್ಮನಮ್ಮ ಸಣ್ಣಪುಟ್ಟ ಭಿನ್ನಾಭಿಪ್ರಾಯಗಳೇನೇ ಇರಲಿ ಅವುಗಳನ್ನು ಎಲ್ಲರೂ ಬದಿಗೊತ್ತಿ ನಾವೆ

ಲ್ಲರೂ ಒಂದೇ ದೇಶದ ಪ್ರಜೆಗಳೆಂದು ಕೆಲಸ ಮಾಡಬೇಕಾದ ಕಾಲ ಸನ್ನಿಹಿತವಾಗಿದೆ ಎಂಬುದಾಗಿ ಹೇಳಿದ್ದಾರೆ. ಈ ಮಾತನ್ನು ಹೇಳಿರುವುದಕ್ಕನುಗುಣವಾಗಿ ಮೊದಲು ನಮ್ಮ ಮುಖ್ಯ ಮಂತ್ರಿಗಳ ಮನೋಭಾವ ಬದಲಾವಣೆಯಾಗಬೇಕು. ಅವರಲ್ಲಿ ಹೆಚ್ಚು ಹೆಚ್ಚು ರಾಷ್ಟ್ರೀಯ ಮನೋಭಾವನೆ ಬೆಳೆಯ ಬೇಕು. ಈ ದಿವಸ ನಮ್ಮ ಪಾರ್ಲಿಯಮೆಂಟು ಎಲ್ಲ ಪಕ್ಷ ಪಂಗಡಗಳ ಭಿನ್ನ ಭೇದಗಳನ್ನು ತೊರೆದು ಜನತೆಗಿರಬೇಕಾದ ರಾಜ್ಯಾಂಗಬದ್ಧವಾದ ಹಕ್ಕುಗಳನ್ನೂ ಕೂಡ ಮೊಟಕು ಮಾಡಿಕೊಳ್ಳಲು ಒಪ್ಪಿದ್ದಾರೆ. ಈ ಸಂದರ್ಭದಲ್ಲಿ ನಮ್ಮ ಸರ್ಕಾರದ ಮೇಲೆ ದೇಶದ ಸಮಗ್ರ ಯೋಗಕ್ಷೇಮದ ಹೊಣೆಗಾರಿಕೆ ಮತ್ತಷ್ಟು ಹೆಚ್ಚಾಗಿರುತ್ತದೆ. ಹೀಗೆ ಇಡೀ ದೇಶದ ಕ್ಷೇಮ ಲಾಭಗಳ ಜವಾಬ್ದಾರಿಯನ್ನು ಹೊತ್ತಿರತಕ್ಕ ಪಕ್ಷ ಈ ಮಾತುಗಳನ್ನು ಕೇವಲ ಯಾವುದೋ ಒಂದು ರಾಜಕೀಯ ದೃಷ್ಟಿಯಿಂದ, ಪಾಕ್ಷೀಕ ದೃಷ್ಟಿಯಿಂದ ಹೇಳಿದ್ದೇ ಆದರೆ ಇದರಿಂದ ದೇಶಕ್ಕೆ ಬಹಳ ಅನ್ಯಾಯವಾಗುತ್ತದೆ. ಆದ್ದರಿಂದ ಎಲ್ಲರೂ ಪಕ್ಷಗಳ ದೃಷ್ಟಿಯನ್ನು ಬಿಟ್ಟು ರಾಷ್ಟ್ರೀಯ ದೃಷ್ಟಿಯಿಂದ ದೇಶದ ರಕ್ಷಣೆ ಮತ್ತು ದೇಶಾಭಿವೃದ್ಧಿಯ ಎಲ್ಲ ಕೆಲಸಕಾರ್ಯಗಳಲ್ಲೂ ಎಲ್ಲರಿಗೂ ಸಮಾನಾವಕಾಶವಿರುವ ರೀತಿಯಲ್ಲಿ ನಡೆದರೆ ಎಲ್ಲರೂ ತಮಗೆ ಎಲ್ಲ ರೀತಿಯಲ್ಲೂ ಸಹಕಾರ ಮಾಡೇ ಮಾಡುತ್ತಾರೆ. ಆದರೆ ವಾಸ್ತವಾಂಶಗಳು ಹಾಗಿಲ್ಲ. ಆದರೆ ಬೇರೆಬೇರೆ ಜಿಲ್ಲೆಗಳಲ್ಲಿ ಯಾವರೀತಿ ಇದೆಯೋ ಅದು ನನಗೆ ಗೊತ್ತಿಲ್ಲ. ಆದರೆ ನಮ್ಮ ಕೋಲಾರ ಜಿಲ್ಲೆಯಲ್ಲಿ ಸರ್ಕಾರದವರ ರೀತಿ ನೀತಿಗಳು ಬಹಳ ವಿಚಿತ್ರವಾಗಿವೆ. ಡೆಪ್ಯುಟಿ ಕಮಿಷನರೂ ಇತ್ಯಾದಿ ಯಾವ ಒಬ್ಬ ಅಧಿಕಾರಿಯೇ ಆಗಲಿ ರಕ್ಷಣಾನಿಧಿ ಇತ್ಯಾದಿ ಯಾವುದಾದರೂ ಮೀಟಿಂಗಿಗೆ ಹೋಗತಕ್ಕ ಕಾಲದಲ್ಲಿ ಅವರು ಕೇವಲ ಕಾಂಗ್ರೆಸ್ ಜನಗಳ ಜೊತೆಯಲ್ಲೇ ಹೋಗಬೇಕು, ಬೇರೆ ಯಾವ ಪಕ್ಷದ ಸದಸ್ಯರ ಜೊತೆಯಲ್ಲೂ ಅವರು ಹೋಗಬಾರದಂತೆ ! ನನಗೆ ಗೊತ್ತಿರುವಂತೆ ಮೊನ್ನೆತಾನೆ ಮಾಲೂರಿನ ಅಮಲ್ದಾರರು ಕಾಂಗ್ರೆಸ್ ಪಕ್ಷಕ್ಕೆ ಸೇರದಿದ್ದ ಯಾವುದೋ ಬೇರೆ ಸ್ವತಂತ್ರ ಪಕ್ಷದ ಜನರನ್ನು ಜೊತೆಯಲ್ಲಿ ಕರೆದುಕೊಂಡು ರಕ್ಷಣಾ ನಿಧಿಯ ಮೀಟಿಂಗಿಗೆ ಹೋಗಿದ್ದರೆಂಬ ಈ ಒಂದು ಕಾರಣದ ಮೇಲೆ ಅವರನ್ನು ಅಲ್ಲಿಂದ ವರ್ಗ ಮಾಡಿದ್ದಾರೆ. ಈ ತೆರನಾದ ಮನೋಭಾವ ತುರ್ತುಪರಿಸ್ಥಿತಿಯಲ್ಲಿ ದೇಶದ ಜವಾಬ್ದಾರಿಯನ್ನು ಹೊತ್ತಿರತಕ್ಕ ಸರ್ಕಾರದವರು ಸೂಚಿಸುತ್ತಿರುವ ಮನೋಭಾವಕ್ಕೆ ಸರಿಹೊಂದುವುದಿಲ್ಲ, ಇದು ಬಹಳ ವ್ಯತ್ಯಾಸವಾಗಿದೆಯೆಂದು ಹೇಳುತ್ತೇನೆ. ಇದರಿಂದ ದೇಶಕ್ಕೆ ದೊಡ್ಡ ಹಾನಿಯಾಗುತ್ತದೆ. ಆದುದರಿಂದ ಕಾಂಗ್ರೆಸ್ ಪಕ್ಷದವರು ತಮ್ಮ ಪಕ್ಷ ಮನೋಭಾವವನ್ನು ಈಗಲಾದರೂ ಕೂಡಲೆ ತ್ಯಾಜ್ಯಮಾಡಿ ಅವರು ರಾಷ್ಟ್ರೀಯ ದೃಷ್ಟಿಯಿಂದ, ರಾಷ್ಟ್ರೀಯ ಮನೋಭಾವದಿಂದ ಕೆಲಸ ಮಾಡಬೇಕೆಂದು ನಾನು ಅವರನ್ನು ಕೇಳಿಕೊಳ್ಳುತ್ತೇನೆ.

ಈ ದಿವಸ ನಮ್ಮ ರಾಷ್ಟ್ರದ ನಾಯಕರಾದ ಪಂಡಿತ ಜವಹರಲಾಲ್ ನೆಹರೂ ಅವರ ಕರೆಗೆ ದೇಶಕ್ಕೆ ದೇಶವೇ ಓಗೊಟ್ಟಿದೆ ಎನ್ನುವುದಕ್ಕೆ ಯಾರೂ ಕೂಡ ರುಜುವಾತು ಕೊಡಬೇಕಾಗಿಲ್ಲ. ಹಿಂದೆ ಇದೇ ಶಾಸನಸಭೆಯಲ್ಲಿ ಮೈಸೂರು ದೇಶಕ್ಕೆ ಕರ್ಣಾಟಕವೆಂದು ಹೆಸರಿಡಬೇಕೆಂಬ ವಿಷಯ ಚರ್ಚೆಗೆ ಬಂದಾಗ ಭಿನ್ನಾಭಿಪ್ರಾಯಗಳು ತಲೆದೋರಿದವು. ಈಗಿನ ತುರ್ತುಪರಿಸ್ಥಿತಿಯಲ್ಲಿ ಆ ಭಿನ್ನಾಭಿಪ್ರಾಯಗಳೆಲ್ಲ ಮಾಯವಾಗಿ ದೇಶದ ಜನರೆಲ್ಲ ತಮ್ಮ ವೈಷಮ್ಯಗಳನ್ನು ಬಿಟ್ಟು, ಸಣ್ಣ ಪುಟ್ಟ ಜಗಳಗಳನ್ನು ಮರೆತು ಮಹತ್ತರ ಜವಾಬ್ದಾರಿಯನ್ನು ನಿರ್ವಹಿಸುವುದಕ್ಕೆ ತಯಾರಾಗಿದ್ದಾರೆ. ಸರ್ಕಾರ ಕೂಡ ಅದೇ ಮನೋಭಾವದಿಂದ ವರ್ತಿಸಬೇಕೆಂದು ನಾನು ಅವರನ್ನು ಕೇಳಿಕೊಳ್ಳುತ್ತೇನೆ. ಅದನ್ನು ಬಿಟ್ಟು ರಕ್ಷಣಾ ಪ್ರಯತ್ನ ಎಂದರೆ, ದೇಶಭಕ್ತಿ ಎಂದರೆ ಅದೆಲ್ಲ ಕಾಂಗ್ರೆಸ್‌ನವರ ಸರ್ವಸ್ವಾಮ್ಯ (monopoly) ಬೇರೆಯವರೆಲ್ಲ ದೇಶಭಕ್ತರಲ್ಲ, ತಾವೇ ದೇಶಭಕ್ತರು ಎನ್ನುವ ಮನೋಭಾವ ಅವರಲ್ಲಿರಬಾರದೆಂದು ನಾನು ಅವರನ್ನು ಕೇಳಿಕೊಳ್ಳುತ್ತೇನೆ.

ಇನ್ನೊಂದು ಮುಖ್ಯವಾದ ವಿಷಯವೆಂದರೆ ಈಗಾಗಲೇ ಅನೇಕ ಸ್ನೇಹಿತರು ಅದನ್ನು ಹೇಳಿದ್ದಾರೆ. ಭೂಸುಧಾರಣೆ ಜಾರಿಗೆ ಬರಲು ತಡವಾಗುತ್ತಿದೆ. ಇದಕ್ಕೆ ಹಿಂದಿನ ವರ್ಷದಲ್ಲಿ ರಾಜ್ಯಪಾಲರು ಏನು ಕಾರಣವನ್ನು ಕೊಟ್ಟಿದ್ದಾರೆಯೋ ಅದೇ ಕಾರಣವನ್ನು ಈ ವರ್ಷವೂ ಕೊಟ್ಟಿದ್ದಾರೆ. 'ಹಾಡಿದ್ದೇ ಹಾಡೋ ದಾಸಯ್ಯ' ಎನ್ನುವಂತೆ ಹಿಂದೆ ಹೇಳಿದುದನ್ನೇ ಈ ಸಲವೂ ಹೇಳಿದ್ದಾರೆ! Constitutional objection ಇರುವುದರಿಂದ ನಿಧಾನವಾಗಿದೆ ಎಂದು ಹೇಳಿದ್ದಾರೆ. ಎರಡು ಮೂರು ವರ್ಷಗಳಿಂದ Constitutional objection ಇದೆ ಎಂದು ಹೇಳುತ್ತಿದ್ದೀರಿ; ನೀವು ಯಾರನ್ನು ವಿಚಾರ ಮಾಡಿದ್ದೀರಿ, ನೀವು Constitutional experts ಆಗಿದ್ದೀರಾ? ಅಡ್ವೋಕೇಟ್ ಜನರಲ್ ಅವರನ್ನೇನಾದರೂ ಕೇಳಿದಿರಾ? ಕೇಂದ್ರ ಸರ್ಕಾರದಲ್ಲಿರುವ ಅಟಾರ್ನಿ ಜನರಲ್ ಅವರ ಸಲಹೆಯನ್ನೇನಾದರೂ ಕೇಳಿದ್ದೀರಾ ಎಂದು ಮುಖ್ಯ ಮಂತ್ರಿಗಳನ್ನೂ, ರೆವಿನ್ಯೂ ಮಂತ್ರಿಗಳನ್ನೂ ಕೇಳುವ ಅಧಿಕಾರ ನಮಗಿದೆ. ಯಾವ Constitutional objection ಇದೆ ಎಂದು ಹೇಳುತ್ತಾರೆಯೋ ಅದನ್ನು ಪರಿಹಾರ ಮಾಡಿಕೊಳ್ಳಬೇಕೆಂಬ ನಿಜವಾದ ಮನಸ್ಸಿದ್ದರೆ ಇದುವರೆಗೆ ಮಾಡಬಹುದಾಗಿತ್ತು. ಕಾಂಗ್ರೆಸ್ ಪಕ್ಷದಲ್ಲಿರುವ ದೊಡ್ಡ ದೊಡ್ಡ ಭೂಸ್ವಾಮಿಗಳ ಪ್ರಭಾವಕ್ಕೆ ರೆವಿನ್ಯೂ

(ಶ್ರೀ ಎ. ವೆಂಕಟಗಿರಿಯಪ್ಪ)

ಮಂತ್ರಿಗಳು ಸಿಕ್ಕಿ ಭೂಸುಧಾರಣೆಗಳು ಜಾರಿಗೆ ಬರುವುದಕ್ಕೆ ತಡವಾಗುತ್ತಿದೆ ಮತ್ತು ಇದೇರೀತಿ ಇನ್ನೂ ಬಹಳ ವರ್ಷ ತಡವಾಗುತ್ತದೆ, ಒಂದಲ್ಲ ಒಂದು ನೆಪಹೂಡಿ ಇದನ್ನು ಜಾರಿಗೆ ತರುವುದರಲ್ಲಿ ನಿಧಾನ ಮಾಡುತ್ತಾರೆ, ಮತ್ತು ಇದನ್ನು ಜಾರಿಗೆ ತರುವುದಕ್ಕೆ ಅವರು ತಯಾರಿಲ್ಲವೆಂದು ನನಗಾದರೂ ಅನ್ನಿಸುತ್ತದೆ. ಭೂಸುಧಾರಣೆಗಳನ್ನು ಜಾರಿಗೆ ತರುವುದರ ಬಗ್ಗೆ ಕಾಂಗ್ರೆಸ್ ಪಕ್ಷದ ವರು ನಾಗಪುರ ಅಧಿವೇಶನದಲ್ಲಿ ಅವರು ಮಾಡಿದ ನಿರೂಪಣೆ, ಅವರು ಜನತೆಗೆ ಕೊಟ್ಟ ಆಶ್ವಾಸನೆ ಇವುಗಳನ್ನು ನೆರವೇರಿಸತಕ್ಕ ಜವಾಬ್ದಾರಿ ಅವರ ಮೇಲಿದೆ. ಸರ್ಕಾರದವರು ಕುಂಟುನೆಪ ಹೇಳುವು ದನ್ನು ಬಿಟ್ಟು, ಅರೆಮನಸ್ಸಿನ ಧೋರಣೆಯನ್ನು ಬಿಟ್ಟು ಭೂಸುಧಾರಣೆ ಕಾಯಿದೆಯನ್ನು ಜಾರಿಗೆ ತರಲು ಮನಃಪೂರ್ವಕವಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಸರ್ಕಾರವನ್ನು ಒತ್ತಾಯ ಪಡಿಸುತ್ತೇನೆ.

ಈ ದಿವಸ ನಮ್ಮ ಮಾನ್ಯ ಸ್ನೇಹಿತರು ಕೆಲವರೆಲ್ಲ ಐದು ಕೋಟಿ ರೂಪಾಯಿ, ಹತ್ತು ಕೋಟಿ ರೂಪಾಯಿ ವೆಚ್ಚದ ಭಾರಿ ಜಲಾಶಯಗಳನ್ನು ತೆಗೆದುಕೊಳ್ಳಲಿಲ್ಲವೆಂದು ಹೇಳಿದರು. ನಮ್ಮ ದೌರ್ಭಾಗ್ಯವೋ ಏನೋ ಕೋಲಾರ ಜಿಲ್ಲೆಯಲ್ಲಿ ಅಂಥ ಭಾರಿ ಜಲಾಶಯಗಳನ್ನು ನಿರ್ಮಾಣ ಮಾಡು ವುದಕ್ಕೆ ಅವಕಾಶವಿಲ್ಲ. ನಮ್ಮಲ್ಲಿರುವ ಸಣ್ಣ ಸಣ್ಣ ಕೆರೆ ಕುಂಟೆಗಳು ದುರಸ್ತಾಗಿಲ್ಲ. ಒಂದು ಜಿಲ್ಲೆ ಯಲ್ಲಿ ಐದು ಕೋಟಿ, ಹತ್ತು ಕೋಟಿ ರೂಪಾಯಿ ಖರ್ಚುಮಾಡಿ ಭಾರಿ ಜಲಾಶಯಗಳನ್ನು ನಿರ್ಮಾಣ ಮಾಡುತ್ತೇವೆಂದು ಹೇಳುವ ಸರ್ಕಾರ ಅದೇರೀತಿ ಹಣವನ್ನು ಖರ್ಚುಮಾಡಿ ಕೋಲಾರ ಜಿಲ್ಲೆಯಲ್ಲಿರುವ ಕೆರೆ ಕುಂಟೆಗಳ ಕಾಮಗಾರಿ ಮಾಡಿಸುವುದಕ್ಕೆ ತಯಾರಾಗಿಲ್ಲ. ಹತ್ತು ವರ್ಷಗಳಿಂದ ಕೋಲಾರ ತಾಲ್ಲೂಕಿನಲ್ಲಿ ರಿಪೇರಿ, restoration ವಗೈರೆ ಆಗದೆ ಕೆಟ್ಟ ಸ್ಥಿತಿಯಲ್ಲಿರುವ ಕೆರೆಗಳ ಪಟ್ಟಿಯನ್ನು ನಾನು ಕೇಳಿದೆ. ಸುಮಾರು 150 ಕೆರೆಗಳು ಆರೀತಿ ಇವೆ, ಇವುಗಳಲ್ಲಿ 20–30 ಕೆರೆಗಳು ಒಡೆದು ಹೋಗಿ restore ಆಗದೆ ಇದೆ ಎಂದು ಹೇಳಿದರು, ಇಂಥ ಪರಿಸ್ಥಿತಿ ಕೋಲಾರ ಜಿಲ್ಲೆಯಲ್ಲಿದೆ. ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳಿಗೆ ಕೋಟ್ಯಾಂತರ ರೂಪಾಯಿ ಖರ್ಚುಮಾಡುವ ಸರ್ಕಾರ ಕೋಲಾರ ಜಿಲ್ಲೆಯ ಬಗ್ಗೆ ಮಲತಾಯಿ ಧೋರಣೆಯನ್ನನುಸರಿಸಬಾರದು, ಕೆರೆ ಕುಂಟೆಗಳನ್ನು ದುರಸ್ತುಮಾಡಿ ಹೆಚ್ಚಿನ ಸೌಕರ್ಯವನ್ನು ಒದಗಿಸಬೇಕೆಂದು ಸರ್ಕಾರವನ್ನು ಒತ್ತಾಯಪಡಿಸುತ್ತೇನೆ.

ಕೊನೆಯದಾಗಿ ಕೋಲಾರ ಜಿಲ್ಲೆಯಲ್ಲಿ ತಲೆದೋರಿರುವ ವಿಶೇಷ ಪರಿಸ್ಥಿತಿಯಬಗ್ಗೆ ಹೇಳುತ್ತೇನೆ. ಹಿಂದೆ ನಮ್ಮ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಕೆಲವು ನಾಯಕರು ಭಾಷಣಮಾಡು ವಾಗ ಹೇಳುತ್ತಿದ್ದರು; ಕೋಲಾರ ಜಿಲ್ಲೆಯಲ್ಲಿ ಹಿಂದೆ ಒಳ್ಳೆಯ ಪಾಳೇಗಾರರು ಹುಟ್ಟಿದ್ದು, ಧೀರರಿರ ತಕ್ಕ ಜಿಲ್ಲೆ, ವೀರರಿರುವ ಭೂಮಿ ಎಂದು. ಇತ್ತೀಚೆಗಂತೂ ಕೋಲಾರ ಜಿಲ್ಲೆಯಲ್ಲಿ ಹಿಂದೆ ಹೇಳುತ್ತಿದ್ದ ಹಿಂದಿನ ಪಾಳೇಗಾರರಿಲ್ಲದೇ ಇದ್ದರೂ, ಹೊಸದಾಗಿ ಪಾಳೇಗಾರರು ತಯಾರಾಗುತ್ತಿದ್ದಾರೆ. ನಮ್ಮ ಜಿಲ್ಲೆಗೆ ಹಿಂದೆ ಒಬ್ಬ ಉಪಮಂತ್ರಿ ಮಾತ್ರ ಇದ್ದರು. ಈಸಲ ಇಬ್ಬರು ಮಂತ್ರಿಗಳಾದ್ದರಿಂದ ನಮ್ಮ ಜಿಲ್ಲೆಗೆ ಒಳ್ಳೆಯದಾಗಬಹುದು. ಜಿಲ್ಲೆಯ ಪರಿಸ್ಥಿತಿ ಸುಧಾರಿಸಬಹುದು ಎಂದು ಎಷ್ಟೋ ಸಂತೋಷ ವಾಯಿತು. ಈದಿವಸ ನಮ್ಮ ಜಿಲ್ಲೆಯಲ್ಲಿ ಅದರ ಪರಿಣಾಮ ಏನಾಗಿದೆ ಎಂದರೆ ಕೋ-ಆಪರೇಟಿವ್ ಸೊಸೈಟಿಗಳಲ್ಲಿ ಬೇರೆಯವರು ನಾಲ್ಕೈದು ಜನರಿದ್ದರೆ. ಸಹಕಾರ ತತ್ವದ ಗಂಧವೇ ತಿಳಿಯದೇ ಇರುವವರನ್ನು ಮಂಡಲ ಕಾಂಗ್ರೆಸ್ ಸದಸ್ಯರನ್ನು ನಾಮಕರಣ ಮಾಡಿಕಳಿಸುತ್ತಿದ್ದಾರೆ. ಇದಕ್ಕೆ ಕೋಲಾರದಿಂದ ಬೆಂಗಳೂರಿಗೆ ಕಾರುಗಳ ಓಡಾಟವೇ ಓಡಾಟವಾಗುತ್ತಿದೆ. ಹಾಗೆಯೇ ಸ್ಕಾಲರ್ ಷಿಪ್ ಕಮಿಟಿಯಲ್ಲಿ ಯಾರಾದರೂ ಒಬ್ಬರಿದ್ದರೆ, ಅವರನ್ನು ತೆಗೆಯಿಸಿ ಮಂಡಲ ಕಾಂಗ್ರೆಸ್ ಅಧ್ಯಕ್ಷ ರನ್ನು ಇನ್ನೊಬ್ಬರನ್ನು ಸೇರಿಸುತ್ತಾರೆ. ಇದಕ್ಕೆ ಹತ್ತಾರು ಕಾರುಗಳು ಕೋಲಾರದಿಂದ ಬೆಂಗಳೂರಿಗೆ ಓಡಾಡುತ್ತವೆ. ಈ ವಿಚಿತ್ರ ಪರಿಸ್ಥಿತಿ ಕೋಲಾರ ಜಿಲ್ಲೆಯಲ್ಲಿದೆ. ಹೀಗಾಗಬಾರದು ಮಾನ್ಯ ಮುಖ್ಯಮಂತ್ರಿಗಳು ಈಬಗ್ಗೆ ಗಮನಕೊಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಸುಬ್ಬಯ್ಯ ನಾಯಕ್ (ಸೂಳ್ಯ).—ಮಾನ್ಯ ಅಧ್ಯಕ್ಷರೇ, ಶ್ರೀಮಾರ್ಕ ಹುಲ್ಕೋಟಿಯವರು ತಂದಿರುವಂಥ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ತಂದಿರುವ ಅಭಿನಂದನಾ ಸೂಚನೆಯನ್ನು ನಾನು ಸಮರ್ಥಿಸುತ್ತ ಒಂದೆರಡು ವಿಚಾರಗಳನ್ನು ಹೇಳುತ್ತೇನೆ. ಈ ವರ್ಷದ ರಾಜ್ಯಪಾಲರ ಭಾಷಣದಲ್ಲಿ ಕೆಲವೊಂದು ವಿಶೇಷವಾದ ಮತ್ತು ಮಹತ್ತಾದ ಯೋಜನೆ ಅಥವಾ ಕಾರ್ಯಗಳನ್ನು ಕೈಗೊಂಡಿ ರುವ ಬಗ್ಗೆ ತಿಳಿಸಿರುವುದನ್ನು ಹೇಳಲಿಕ್ಕೆ ನನಗೆ ಬಹಳ ಸಂತೋಷವಾಗುತ್ತದೆ. ಅವುಗಳಲ್ಲಿ ಒಂದು ದಕ್ಷಿಣ ರಾಜ್ಯಗಳಾದ ಮೈಸೂರು, ಮದ್ರಾಸ್, ಆಂಧ್ರ ಪ್ರದೇಶ ಮತ್ತು ಕೇರಳ ಈ ನಾಲ್ಕು ರಾಜ್ಯ ಗಳಿಗೆ ಸಂಬಂಧಪಟ್ಟ Scheduled Castes ಮತ್ತು Scheduled Tribes ಗಳಿಗಾಗಿ ಐ.ಎ.ಎಸ್. ಮತ್ತು ಐ. ಪಿ. ಎಸ್. ಕೆಲಸಗಳ ತರಪೇತಿ ಶಿಕ್ಷಣ ಮತ್ತು ಇತರ ಕೇಂದ್ರ ಸರ್ಕಾರದ ನೌಕರರಿಗೆ, ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಏರ್ಪಡಿಸುವ ಟ್ರೈನಿಂಗ್ ಸೆಂಟರ್ ಒಂದನ್ನೂ ಬಹಳ ಪರಿಶ್ರಮ ಪಟ್ಟು ಬೆಂಗಳೂರಿನಲ್ಲೇ ಆಗುವಂತೆ ಮಾಡಿದ್ದು ಬಹಳ ಸ್ತುತ್ಯವಾದ ಕೆಲಸವೆಂದು ಹೇಳಬೇಕು.

ಮತ್ತೊಂದೇನೆಂದರೆ ಎಲ್ಲ ಕೋಮಿನ ವಿದ್ಯಾರ್ಥಿಗಳಿಗೂ ಒಟ್ಟಿಗೆ ಇರುವ ವಿದ್ಯಾರ್ಥಿ ನಿಲಯ ವನ್ನು ಮಾಡುತ್ತಿದ್ದೇವೆ ಎಂದು ಹೇಳಿದ್ದಾರೆ. ಇದು ಸ್ವಾಗತಾರ್ಹವಾದುದು. ದಿನ ದಿನಕ್ಕೆ ನಾವು ಬೇರೆ ಬೇರೆ ಜಾತಿಯವರು ಬೇರೆ ಬೇರೆಯಾಗದೆ ದೂರ ದೂರವಾಗದಂತೆ ಆದಷ್ಟು ಹತ್ತಿರ ತಂದು ಸಮ್ಮಿಳನ ಗೊಳ್ಳುವಂಥ ಪ್ರಥಮ ಹೆಜ್ಜೆಯಾಗಿ ಮಾಡಿರುವುದು ಬಹಳ ಒಳ್ಳೆಯದು.

ಶ್ರೀಮರ್ಾ ಗೋಪಾಲ ಸಾರೆನ್ನ ಅವರು ಮಾತನಾಡುವಾಗ ಒಂದು ವಿಷಯವನ್ನು ಹೇಳಿದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹರಿಜನ ಸ್ಕೂಲುಗಳು ಎಂದು ಪ್ರತ್ಯೇಕ ಇವೆ. ಮದ್ರಾಸ್ ಸರ್ಕಾರದಲ್ಲಿರು ವಾಗ ಇವುಗಳನ್ನು ಪ್ರಾರಂಭ ಮಾಡಿದ್ದರು. ಈ ಶಾಲೆಗಳಿಗೆ ಹರಿಜನರ ಮಕ್ಕಳೂ ಇತರ ಮಕ್ಕಳೂ ಬರುತ್ತಾರೆ. ಆದರೆ ಈಗ ಹರಿಜನರಿಗೆ ಪ್ರತ್ಯೇಕ ಶಾಲೆಗಳು ಬೇಕು ಎನ್ನುವ ಅವಶ್ಯಕತೆ ಇಲ್ಲ. ಆದುದರಿಂದ ಸರ್ಕಾರದವರು ಮಿತವ್ಯಯದ ದೃಷ್ಟಿಯಿಂದ ಈ ಸ್ಕೂಲುಗಳನ್ನು ತೆಗೆದುಹಾಕ ಬಹುದು. ಒಂದೇ ಊರಿನಲ್ಲಿ ಒಂದೇ ಕಡೆ ಒಂದು ಜನರಲ್ ಸ್ಕೂಲು ಮತ್ತು ಒಂದು ಹರಿಜನ ಸ್ಕೂಲು ಇರುತ್ತದೆ. ಇದರಿಂದ ಸರ್ಕಾರಕ್ಕೆ ನಷ್ಟವಾಗುತ್ತದೆ. ಇಂಥ ಕಡೆಗಳಲ್ಲಿ ಪ್ರತ್ಯೇಕ ಹರಿ ಜನ ಸ್ಕೂಲುಗಳ ಅಗತ್ಯವಿಲ್ಲ. ಆದರೆ ಈ ಹರಿಜನ ಸ್ಕೂಲುಗಳಲ್ಲಿ ಮಧ್ಯಾಹ್ನದ ಊಟ, ಪುಸ್ತಕ, ಸ್ಲೇಟು ಮುಂತಾದ ಸೌಕರ್ಯಗಳನ್ನು ವಿದ್ಯಾರ್ಥಿಗಳಿಗೆ ಒದಗಿಸುತ್ತಿದ್ದಾರೆ. ಹರಿಜನ ಸ್ಕೂಲು ಗಳನ್ನು ತೆಗೆದು ಹಾಕಿ ಜನರಲ್ ಸ್ಕೂಲುಗಳಿಗೆ ಸೇರಿಸಿದರೂ ಸಹ ಈ ಸೌಲಭ್ಯಗಳನ್ನು ಕೊಡುವಂತೆ ಮಾಡಬೇಕು. ಹರಿಜನ ಗಿರಿಜನ ಮಕ್ಕಳಿಗೆ ಇರುವಂಥ ಸವಲತ್ತುಗಳನ್ನು ಒದಗಿಸಿದರೆ ಜನರಲ್ ಸ್ಕೂಲಗೆ ಹರಿಜನ ಸ್ಕೂಲುಗಳನ್ನು shift ಮಾಡಬಹುದು. ಅದರಿಂದ ಸರ್ಕಾರಕ್ಕೆ ಉಳಿತಾಯ ವಾಗುತ್ತದೆ ಮತ್ತು ಆಡಳಿತ ನಡೆಸಲಿಕ್ಕೆ ಸುಗಮವಾದೀತು ಎಂದು ಸೂಚಿಸಬಯಸುತ್ತೇನೆ,

ಇನ್ನು ನಾಗರ ಹೊಳೆ ಮತ್ತು ಹೆಗ್ಗಡದೇವನ ಕೋಟೆ ಇಲ್ಲಿರುವ ಆದಿಮ ಜಾತಿ ಪಂಗಡದ (ಗಿರಿಜನರಿಗಾಗಿ) 'ಅಡ್ ಹಾಕ್' ಬ್ಲಾಕುಗಳನ್ನು ಸಮಾಜ ಕಲ್ಯಾಣ ಖಾತೆಯ ಸಚಿವೆಯವರು ಕೊಟ್ಟಿ ದ್ದಾರೆ. ಇದು ಸಂತೋಷವಾಗುವುದೆ. ನಮ್ಮ ಸ್ಟೇಟಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಷೆಡ್ಯೂಲ್ಡು ಟ್ರೈಬ್ಸ್‌ಗಳಿಗೆ ಸೇರಿದಂತಹ ಜನರು ಹೆಚ್ಚಾಗಿದ್ದಾರೆ. 1951ರ ಜನಗಣತಿಯ ಪ್ರಕಾರ ನೋಡು ವುದಾದರೆ, 34 ಸಾವಿರ ಗಿರಿಜನರು ಸೌತ್ ಕ್ಯಾನರಾದಲ್ಲಿದ್ದಾರೆ. ಮೈಸೂರಿನಲ್ಲ 12,000 ಜನರಿದ್ದಾರೆ, ಹಾಗೂ ಕೊಡಗಿನಲ್ಲ 22,000 ಗಿರಿಜನರಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಲೆಕ್ಕ ಸರಿಯಿಲ್ಲ. ಇಲ್ಲಿ ಈ ಲೆಕ್ಕಕ್ಕಿಂತಲೂ ಗಿರಿಜನರು ಹೆಚ್ಚಾಗಿದ್ದಾರೆ, ಅಂದರೆ ಸುಮಾರು 77 ಸಾವಿರ ಗಿರಿಜನರಿದ್ದಾರೆ. ಆದರೂ ಇಲ್ಲಿ ಷೆಡ್ಯೂಲ್ಡ್ ಟ್ರೈಬ್ಸ್ ಏರಿಯ ಎನ್ನುವುದನ್ನು ಗಣನೆಗೆ ತೆಗೆದು ಕೊಂಡಿಲ್ಲ. ಅಲ್ಲದೆ ಈ ಜಿಲ್ಲೆಯ ಬಂಟವಾಳ, ಬೆಳ್ತಂಗಡಿ, ಪುತ್ತೂರು ಕಾರ್ಕಳ ಈ ನಾಲ್ಕು ತಾಲ್ಲೂಕುಗಳಲ್ಲಿ ಷೆಡ್ಯೂಲ್ಡ್ ಟ್ರೈಬ್ಸ್ ಜನರ ಸಂಖ್ಯೆ ಜಾಸ್ತಿಯಾಗಿದೆ, ಇದನ್ನು ಷೆಡ್ಯೂಲು ಟ್ರೈಬ್ ಏರಿಯಾ ಎಂದು ಪರಿಗಣಿಸಬೇಕು. ಅಲ್ಲದೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗಿರಿಜನರಿಗಾಗಿ ಒಂದು ಪ್ರಾತಿನಿಧ್ಯ ವನ್ನೂ ಕೊಟ್ಟಿದ್ದಾರೆ. ಇಲ್ಲಿನ ಕಾರ್ಕಳ, ಬೆಳ್ತಂಗಡಿ, ಪುತ್ತೂರು ಮತ್ತು ಬಂಟವಾಳ ಈ ನಾಲ್ಕು ತಾಲ್ಲೂಕುಗಳು ಷೆಡ್ಯೂಲು ಟ್ರೈಬ್ಸ್ ಸಂಖ್ಯೆ ಹೆಚ್ಚು ಇರುವ ಪ್ರದೇಶವಾದುದರಿಂದ ಈ ತಾಲ್ಲೂಕುಗಳಿಗೇ ಪ್ರತ್ಯೇಕವಾದ ಎರಡು "ಅಡ್ ಹಾಕ್" ಕಮಿಟಿಗಳನ್ನು ತೆಗೆಯಬೇಕೆಂದು ಕೇಳಿಕೊಳ್ಳುತ್ತೇನೆ. ಷೆಡ್ಯೂಲ್ಡ್ ಕ್ಯಾಸ್ಟು ಮತ್ತು ಟ್ರೈಬ್ಸ್‌ಗಳಿಗಾಗಿ ಸ್ಟೇಟು ಗವರ್ನಮೆಂಟಿನವರು ಈ ಹಿಂದೆ ಸ್ಟೇಟು ಅಡ್ವೈಸರಿ ಕಮಿಟಿ ಎಂದು ಮಾಡಿದ್ದರು. ಅದನ್ನೀಗ ಮಾನ್ಯ ಸಚಿವೆಯರು ವಿಶೇಷ ಗಮನದಿಂದ ಕೆಲಸ ಮಾಡಬೇಕೆಂದು ಪ್ರತ್ಯೇಕ ಪ್ರತ್ಯೇಕವಾಗಿ ಗಿರಿಜನರು ಮತ್ತು ಹರಿಜನರಿಗಾಗಿ ಕಮಿಟಿಗಳನ್ನು ರಚಿಸಿ ದ್ದಾರೆ. ಈ ಕಮಿಟಿಯಲ್ಲಿ ಷೆಡ್ಯೂಲ್ಡ್ ಟ್ರೈಬ್ಸ್ ಜನರ ನಿವಾಸಿಗಳು ಹೆಚ್ಚಾಗಿರುವ ದಕ್ಷಿಣ ಕನ್ನಡ ಜಿಲ್ಲೆಯ ಗಿರಿಜನರಿಗೆ ಹೆಚ್ಚಿನ ಪ್ರಾತಿನಿಧ್ಯ ಕೊಡುವುದು ಅಗತ್ಯ. ಇಲ್ಲದಿದ್ದರೆ ಸರಿಯಾದ ನ್ಯಾಯ ಮಾಡಿ ದಂತಾಗುವುದಿಲ್ಲ. ಇನ್ನಾದರೂ ಹೆಚ್ಚು ಜನ ಗಿರಿಜನರನ್ನು ಈ ಕಮಿಟಿಗೆ ಸೇರಿಸಬೇಕು. ಪ್ಯಾಕೇಜು ಸ್ಕೀಮಿನ ಯೋಜನೆಯನ್ನು ಈಗ ಮಂಡ್ಯ ಜಿಲ್ಲೆಯಲ್ಲಿ ತರಲಾಗಿದೆ ಎಂದೂ ಹೇಳಿದ್ದಾರೆ. ಇಂತಹ ಯೋಜನೆಯನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಾರಂಭಿಸುವುದಾಗಿ ಕೇಳಿ ಸಂತೋಷಪಡುತ್ತೇನೆ. ಆದರೆ ಮಂಡ್ಯದಲ್ಲಿ ವ್ಯವಸಾಯಕ್ಕೆ ಸಂಬಂಧಪಟ್ಟ ಉಪಕರಣಗಳ ವರ್ಕ್‌ಷಾಪನ್ನು ಸ್ಥಾಪಿಸುವ ಬಗ್ಗೆ ಒಂದು ಮಾತನ್ನು ಸೂಚಿಸಬೇಕಾಗಿದೆ. ವರ್ಕ್‌ಷಾಪನ್ನು ಸ್ಥಾಪಿಸುವುದು ಬಹಳ ಪ್ರಾಮುಖ್ಯವಾಗಿದೆ. ಕೃಷಿಗೆ ಬೇಕಾದಂತಹ ಉಪಕರಣಗಳನ್ನು ತಯಾರುಮಾಡುವುದು ಮುಖ್ಯವಾದುದು. ಕೃಷಿಯ ಉತ್ಪನ್ನಗಳನ್ನು ಮಾಡುವ ಕಾರ್ಯಕ್ರಮಗಳಲ್ಲಿ ಉಪಯೋಗವಾಗಬೇಕೆಂದು ಹೇಳಿದರೆ ಈ ಪ್ಯಾಕೇಜು ಸ್ಕೀಮು ಚೆನ್ನಾಗಿ ನಡೆಯಲು ಸಹಾಯವಾಗುತ್ತದೆ. ಅದರಲ್ಲೂ ನಮ್ಮ ಮಲೆನಾಡಿನ ಭಾಗಗಳಲ್ಲಿ ಭತ್ತ ಹೇರಳವಾಗಿ ಬೆಳೆಯುತ್ತದೆ. ಈ ಸ್ಕೀಮನ್ನು ದಕ್ಷಿಣ ಕನ್ನಡ ಜಿಲ್ಲೆಗೂ ತರುತ್ತೇವೆಂದು ಹೇಳು ತ್ತಿದ್ದಾರೆ. ಒಳ್ಳೆಯದು. ಈಚೆಗೆ ಏನೋ ನಮ್ಮ ಜಿಲ್ಲೆಗೂ ಕೂಡ ಈ ಯೋಜನೆಯನ್ನು ಕೊಟ್ಟಿದ್ದಾ ರೆಂದು ದಟ್ಟವಾದ ಸುದ್ದಿ ಕೇಳುತ್ತೇವೆ. ಆದರೆ ಆ ಬಗೆಗೆ ಈ ರಾಜ್ಯಪಾಲರ ಭಾಷಣದಲ್ಲಿ ನಮೂದಿ

(ಶ್ರೀ ಎಸ್. ಸುಬ್ಬಯ್ಯ ನಾಯಕ್)

ಸಿಲ್ಲ. ಈಗ ದೇಶದಲ್ಲಿ ಆಹಾರ ವಸ್ತುಗಳನ್ನು ಹೆಚ್ಚಿಗೆ ಬೆಳೆಸುವುದು ಅಗತ್ಯ ಮತ್ತು ಅನುಕೂಲವಾದೀತು ಎಂದು ನಾನು ಇಲ್ಲಿ ಹೇಳುವುದಾಗಿದೆ.

ಇನ್ನು ಸಾರಿಗೆ ಸೌಕರ್ಯದ ವಿಚಾರವಾಗಿ ಹೇಳುತ್ತ ಮುಖ್ಯ ಖನಿಜದ ಅದುರನ್ನು ಒಯ್ಯುವ ರಸ್ತೆಗಳಿಗೆ ಸಂಬಂಧಪಟ್ಟ ಕಾಮಗಾರಿಯೂ ಸಹ ತೃಪ್ತಿಕರವಾಗಿ ಮತ್ತು ಸಮರ್ಪಕವಾಗಿ ಆಗುತ್ತಿದೆ ಎಂದು ಗೊತ್ತಾಗಿದೆ. ಆದರೆ ಎಲ್ಲ ಪ್ರದೇಶಗಳಲ್ಲಿಯೂ ಇತರ ರಸ್ತೆಗಳೂ ಸರಿಯಾಗಿರಬೇಕು. ಮಲೆನಾಡಿನಲ್ಲಿ ವರ್ಷದಲ್ಲಿ ನಾಲ್ಕರಿಂದ ಆರುತಿಂಗಳಕಾಲ ಸತತವಾಗಿ ಧಾರಾಕಾರವಾಗಿ ಮಳೆ ಬೀಳುತ್ತಿರುವುದರಿಂದ, ಅಲ್ಲಿ ಒಂದುಕಡೆಯಿಂದ ಇನ್ನೊಂದು ಭಾಗಕ್ಕೆ ಹೋಗಲು ಸರಿಯಾದ ರಸ್ತೆ ಇರುವುದಿಲ್ಲ. ಅಂತಹ ರಸ್ತೆಗಳನ್ನು ನಿರ್ಮಿಸಲಿಕ್ಕೆ ತಕ್ಕ ಕ್ರಮ ಕೈಗೊಳ್ಳಬೇಕು. ಬೆಳ್ತಂಗಡಿ ಮತ್ತು ಪುತ್ತೂರು ತಾಲ್ಲೂಕಿನ ಮಲೆನಾಡಿನಲ್ಲಿ ಸರಿಯಾದ ಒಳ್ಳೆಯ ಮಾರ್ಗವಾಗಲೀ ರಸ್ತೆಯಾಗಲೀ ಇಲ್ಲ. ಅಲ್ಲದೆ ನಮ್ಮಲ್ಲಿ ಕೆಲವುಕಡೆ ಎಷ್ಟೋ ರಸ್ತೆಯ ಕೆಲಸಗಳಾಗಿ ಅರ್ಧದಲ್ಲಿ ನಿಂತಿವೆ. ಅಲ್ಲಿ ಚರಂಡಿ ಇನ್ನಿತರ ಕೆಲಸ ಮಾಡಿ ಕೇವಲ ಒಂದು ಯಾ ಎರಡು ಮೈಲುಗಳಷ್ಟು ಕೆಲಸವನ್ನು ಮಾಡದೇ ಉಳಿಸಿರುತ್ತಾರೆ. ಇದರಿಂದೇನಾಗುತ್ತದೆ ಎಂದರೆ ಮಳೆ ಬಂದಾಗ ಮಾಡಿರುವ ರಸ್ತೆಗಳೂ ಹಾಳಾಗಿ ಹೆಚ್ಚು ಭಾಗ ನಷ್ಟವಾಗುತ್ತದೆ. ಇದರಿಂದ ಜನಕ್ಕೂ ನಷ್ಟ, ಸರಕಾರಕ್ಕೂ ನಷ್ಟ, ಅಲ್ಲದೆ ಇದಕ್ಕಾಗಿ ಸರಕಾರ ಅಪಕೀರ್ತಿಗೆ ಗುರಿಯಾಗಬೇಕಾಗುತ್ತದೆ. ಈ ವಿಚಾರದಲ್ಲಿ ಸರಕಾರ ಹೆಚ್ಚಿನ ಗಮನ ಕೊಡಬೇಕು. ಇದೂ ಅಲ್ಲದೆ ಹತ್ತಾರು ಕಡೆ ಸೇತುವೆಗಳು ಇಲ್ಲದೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗಲೂ ಆಗುತ್ತಿಲ್ಲ. ಕೆಲವುಕಡೆ ನೂರಾರು ವೆಹಿಕಲ್ಲುಗಳು ಮತ್ತು ಭಾರವಾದ ಲಾರಿಗಳ ಓಡಾಟದಿಂದ ಹಳೆಯ ಸೇತುವೆಗಳು ಹಾಳಾಗಿರುತ್ತವೆ. ಅಂತಹ ಸೇತುವೆಗಳನ್ನು ಇನ್ನೂ ಸರಿಪಡಿಸಿ ಪೂರ್ತಿಮಾಡಿಲ್ಲ. ಹಾಗೆ ನಮ್ಮ ಭಾಗದಲ್ಲಿರುವ ಬಂಟ್ವಾಳ ತಾಲ್ಲೂಕಿನ ಒಕ್ಕೆತ್ತೂರು ಸೇತುವೆ ಬಹಳ ಹಳೆಯದಾಗಿರುವುದರಿಂದ ಇಲ್ಲಿ ಹೆಚ್ಚಿನ ಭಾರವಿರುವ ವಾಹನಗಳು ಓಡಾಡಲು ಸಾಧ್ಯವಾಗುತ್ತಿಲ್ಲ. ಇದರ ಬಗ್ಗೆ ಹೆಚ್ಚಿನ ಗಮನ ಕೊಡುವುದು ಅಗತ್ಯ.

ಇನ್ನು ನೀರಾವರಿಗಾಗಿ ಪಂಪು ಸೆಟ್ಟುಗಳನ್ನು ಒದಗಿಸುತ್ತಿದ್ದೇವೆಂದು ಇಲ್ಲಿ ಹೇಳಿರುವುದು ಶ್ಲಾಘನೀಯವಾದುದು. ಇದಕ್ಕಾಗಿ ನಿಜವಾಗಿಯೂ ದಕ್ಷಿಣ ಕನ್ನಡ ಜಿಲ್ಲೆಯ ರೈತರು ಬಹಳ ಸಂತೋಷಗೊಂಡಿದ್ದಾರೆ. ಇದನ್ನು ಪಡೆಯುವುದು ಕಷ್ಟವಾಗಿದೆ. ಅದಕ್ಕಾಗಿ ಇದನ್ನು ಕೊಡುವ ನಿಯಮಗಳನ್ನು ಈಗ ಸಡಿಲಗೊಳಿಸಿದ್ದಾರೆಂದು ಕೇಳುತ್ತೇನೆ. ನಮ್ಮ ಜಿಲ್ಲೆಯಲ್ಲಿ ಆಹಾರ ದವಸಗಳನ್ನು ಬೆಳೆಯುವ ಜನರು ಕೇವಲ ಚಾಲಗೇಣಿ ಒಕ್ಕಲುಗಳಾಗಿದ್ದಾರೆ. ಅವರಿಗೆ ಭೂಮಿಯ ಒಡೆತನವಿಲ್ಲ. ಆದರಿಂದಾಗಿ ಈ ಪಂಪು ಸೆಟ್ಟುಗಳನ್ನು ಅವರಿಗೆ ಕೊಡಲಿಕ್ಕೆ ಸಾಧ್ಯವಿಲ್ಲ ಎಂದು ಹಿಂದೆ ಹೇಳುತ್ತಿದ್ದರು. ಇತ್ತೀಚೆಗೆ ಈ ಬಗ್ಗೆ ನಿಯಮಗಳನ್ನು ಸಡಿಲಗೊಳಿಸಿ ಇವರಿಗೂ ಕೂಡ ಕೊಡಬಹುದು ಎಂದು ಮಾಡಿರುವುದಕ್ಕಾಗಿ ಸಂತೋಷಪಡುತ್ತೇನೆ. ಆದರೆ ರೈತರಿಗೆ ಕೊಡುವ ಪಂಪು ಸೆಟ್ಟುಗಳಿಗಾಗಿ ಅಧಿಕಾರಿಗಳು ರಿಕಾರ್ಡುಮಾಡಿ, ಮೊದಲು 'ಬಿ. ಡಿ. ಓ.' ಅನಂತರ ತಹಶೀಲುದಾರರ ಬಳಿಗೆ ಹೋಗಿ ಆ ನಂತರ ಡಿಸ್ಟ್ರಿಕ್ಟ್ ಅಗ್ರಿಕಲ್ಚರಲ್ ಆಫೀಸರ ಕಡೆಗೆ ಹೋಗಿ ಬಂದನಂತರ ಈ ಪಂಪುಗಳನ್ನು ಕೊಡಬೇಕೆಂದಿದೆ. ಇದನ್ನು ಆದಷ್ಟು ಇನ್ನೂ ಸರಳರೀತಿಯಲ್ಲಿ ಮಾಡಿ ಜನಕ್ಕೆ ಸುಲಭವಾಗಿ ಸಿಗುವಂತೆ ಮಾಡಬೇಕೆಂದು ಸೂಚಿಸುತ್ತೇನೆ.

ರಾಜ್ಯಪಾಲರ ಭಾಷಣದಲ್ಲಿ ಅರಣ್ಯದ ಸಂಬಂಧವಾಗಿ ಹೇಳಿದ್ದಾರೆ. ಅಲ್ಲದೆ ಅರಣ್ಯಗಳಿಂದ ಹೆಚ್ಚು ಹೆಚ್ಚು ಉತ್ಪನ್ನ ಮಾಡುತ್ತಿದ್ದೇವೆಂದು ಹೇಳಿದ್ದಾರೆ. ನಾನು ಹೇಳುವುದು, ಮಲೆನಾಡು ಪ್ರದೇಶಗಳಾದ ನಮ್ಮ ಸೌತ್ ಕೆನರಾದಂತಹ ಕಾಡಿನ ಭಾಗಗಳಲ್ಲಿ ನಾಟಾಗಳನ್ನು ಕಡಿದು ವಾರಲಿಕ್ಕೆ ಹೋಗಬಾರದು ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ನಾಡನ್ನು ಕಾಡಾಗಿ ಮಾಡಬಾರದು. ಕಾಡಿನಲ್ಲಿ ಮರಗಳು ಬೆಳೆಯಬೇಕು. ಆದರೆ ಜನರು ಇದರಿಂದ ಹೆಚ್ಚಿನ ಉತ್ಪನ್ನ ಮಾಡಲು ಸಾಧ್ಯವಿಲ್ಲ. ವನ್ಯ ಮೃಗಗಳು ರೈತನ ಬೆಳೆಯನ್ನು ನಾಶ ಮಾಡುತ್ತವೆ. ಇದು ಸ್ವಲ್ಪ ಶ್ರಮದ ಕೆಲಸ.

7-00 P.M.

ಶ್ರೀ ಬಿ. ರಾಚಯ್ಯ (ಅರಣ್ಯ ಶಾಖೆ ಮತ್ತು ಮೀನುಗಾರಿಕೆ ಮಂತ್ರಿಗಳು).—ಮಾನ್ಯ ಸದಸ್ಯರು ರಬ್ಬರ್ ಪ್ಲಾಂಟೇಷನ್ನು ಮಾಡಲು ಸುಳ್ಯದ ಬಳಿ ಅವಕಾಶ ಬೇಕೆಂದು ಕೇಳಿದ್ದರು.

ಶ್ರೀ ಎಸ್. ಸುಬ್ಬಯ್ಯ ನಾಯಕ್.—ರಬ್ಬರ್ ಪ್ಲಾಂಟೇಷನ್ನು ಬೇಕು. ನಾಡನ್ನು ನಾಶ ಮಾಡಿ ಕಾಡನ್ನು ಬೆಳೆಯಿಸುವುದು ಬೇಡ. ಕಾಡುಗಳು ಇದ್ದ ಕಡೆಯಲ್ಲಿರಲಿ, ರೆವಿನ್ಯೂ ಕಾಡುಗಳನ್ನು ರಿಸರ್ವ್ ಕಾಡುಗಳಾಗಿ ಮಾಡುವ ಅಗತ್ಯವಿಲ್ಲ. ಈ ಹಿಂದೆ ರೆವಿನ್ಯೂ ಕಾಡಿನಲ್ಲಿ ಎಪ್ಪತ್ತು ಸಾವಿರ ರೂಪಾಯಿಗಳಷ್ಟು ಬೆಲೆ ಬಾಳುವ ಮರಗಳೂ ಇದ್ದವು ಇದನ್ನು ಬೆಳೆಯಿಸಿ ಕಾಪಾಡಿದವರು ಯಾರು ಇದನ್ನು ರಿಸರ್ವ್ ಫಾರೆಸ್ಟಾಗಿ ಮಾಡುವ ಅಗತ್ಯವಿಲ್ಲ. ಇಂತಹ ಉತ್ತಮವಾದ ಮರಗಳನ್ನು ಈಗಲೂ ರೆವಿನ್ಯೂ ಕಾಡಿನಲ್ಲಿ ಬೆಳೆಸಬಹುದು.

ಆದರೆ ಈಗ ವ್ಯಾಪಾರಸ್ಥರು ಮಾತ್ರ ಮುಂದೆ ಬಂದು ಕಾಡಿನ ಮರಗಳನ್ನು ದೋಚಿಕೊಂಡು ಹೋಗುತ್ತಾರೆಂಬುದರಿಂದ ಬಡ ಕಾಡುವಾಸಿಗಳಾದ ಗಿರಿ ಜನರಿಗೆ ಮರವಿದ್ದಲ್ಲಿ ಸ್ಥಳ ದರಕಾಸ್ತಿಗೆ ಕೊಡಬಾರದೆಂಬುದು ಸರಿಯಲ್ಲ. ಷೆಡ್ಯೂಲ್ ಟ್ರೈಬ್ಸ್ ವಿಚಾರದಲ್ಲಿ ಕಾಡನ್ನು ಬೆಳೆಸುವುದಕ್ಕೆ ಲೀಜ್ ಕೊಡುವುದರಲ್ಲಿ ರೂಲ್ಸು ಸಡಿಲಗೊಳಿಸಬೇಕೆಂದು ಹೇಳುತ್ತೇನೆ.

ಇನ್ನೊಂದು ವಿಚಾರ ಹೇಳಬೇಕಾಗಿದೆ. 100 ರಿಂದ 200 ರೂಪಾಯಿಗಳವರೆಗೆ ಇರುವ ಮರದ ಬೆಲೆಯನ್ನು ದರಖಾಸ್ತು ಮಾಡುವಾಗ್ಗೆ ಫಾರೆಸ್ಟ್ ಡಿಪಾರ್ಟ್‌ಮೆಂಟಿನವರು ಮೊದಲು ಹರಿಜನ-ಗಿರಿಜನರಿಗೆ ಮಾಫಿಯಾಗಿದೆ. ಆದರೆ ಈಗ ಬಿಡುವುದಿಲ್ಲವೆಂದು ಹೇಳುತ್ತಿದ್ದಾರೆ. ಅದು ಅಷ್ಟು ಒಳ್ಳೆಯದಲ್ಲ. ಅವರಿಗೆ ಅನುಕೂಲ ಮಾಡಿಕೊಡಬೇಕೆಂದು ಹೇಳಬಯಸುತ್ತೇನೆ. ಸಮಯವಾಗಿರುವುದರಿಂದ ನನ್ನ ಭಾಷಣ ಇಲ್ಲಿಗೆ ಮುಗಿಸುತ್ತೇನೆ.

Mr. SPEAKER.—The House will now rise and meet tomorrow again at 1 P.M.

The House adjourned at Ten Minutes past Seven of the Clock to meet again at One of the Clock on Friday, the 1st March 1963.